TIGHT BINDING BOOK

# TEXT FLY WITHIN THE BOOK ONLY

ಪುಸ್ತಕ ಭಂಡಾರ ಮಾಲೆ—೧೩

# ಭೂದಾನ ಯಜ್ಞ ಯಾತ್ರೆ

ಸಿದ್ಧವನಹಳ್ಳಿ ಕೃಷ್ಣಶರ್ಮ



ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು
೧೯೫೫

K361.7
K94B
K 4862

UNIVERSAL LIBRARY
OU_200543
UNIVERSAL LIBRARY

OSMANIA UNIVERSITY LIBRARY

Call No. K361.7 K94B  Accession No K 4862

Author [illegible]

Title [illegible] 1955

This book should be returned on or before the date last marked below

# ಭೂದಾನ ಯಜ್ಞ ಯಾತ್ರೆ

ಸಿದ್ದವನಹಳ್ಳಿ ಕೃಷ್ಣಶರ್ಮ

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು
೧೯೫೫

ಮೊದಲನೆಯ ಮುದ್ರಣ ೧೯೫೫

೨,೦೦೦ ಪ್ರತಿಗಳು

ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

ಬೆಲೆ : ರೂ. ೧—೮—೦

ಮುದ್ರಣ :

ಇಂಡಿಯಾ ಪ್ರೆಸ್, ಮೈಸೂರು.

# ನಮ್ಮ ಮಾತು

ಮಹಾತ್ಮ ಗಾಂಧೀಜಿಯವರ ಪಟ್ಟಶಿಷ್ಯರಾದ ಶ್ರೀ ವಿನೋಬಾ ಭಾವೆಯವರ ಹೆಸರನ್ನು ಕೇಳದವರಾರು? ಅದರಲ್ಲೂ ಈಗ ಅವರ ಹೆಸರು ಮನೆ ಮಾತಾಗಿದೆ. ಅದಕ್ಕೆ ಕಾರಣ ಅವರು ಕೈಗೊಂಡಿರುವ ಭೂದಾನ ಯಜ್ಞ ಚಳುವಳಿ

ಭಾರತದಲ್ಲಿ ಭೂಮಿಯ ಹಂಚಿಕೆ ಸರಿಯಾಗಿಲ್ಲ ಎಂಬ ಕರೆ ಕೇಳಿಬರುತ್ತಿದೆ. ಭೂಮಿಯ ಹಂಚಿಕೆ ಸಮರ್ಪಕವಾಗಿ ನಡೆಯಲು ಭೂದಾನ ಯಜ್ಞ ಚಳುವಳಿಯೇ ಸರಿಯಾದ ಮಾರ್ಗ. ಅದನ್ನು ತೋರಿಸಿಕೊಟ್ಟಿರುವವರು ಶ್ರೀ ವಿನೋಬಾ ಭಾವೆಯವರು.

ಪ್ರಸಿದ್ಧ ಸಾಹಿತಿಗಳಾದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರು ಶ್ರೀ ವಿನೋಬಾಜೀಯವರ ಭೂದಾನ ಯಜ್ಞದ ಯಾತ್ರೆಯ ವಿಷಯವನ್ನು ಸರಳವಾಗಿ, ಸ್ವಾರಸ್ಯವಾಗಿ ಬರೆದಿದ್ದಾರೆ. ಈ ಕೃತಿಯನ್ನು ಪುಸ್ತಕ ಭಂಡಾರ ಮಾಲೆಯಲ್ಲಿ ಪ್ರಕಟಿಸಲು ಅನುಮತಿ ಕೊಟ್ಟು, ಇದಕ್ಕೆ ಅಗತ್ಯವಾದ ಕೆಲವು ಚಿತ್ರಗಳನ್ನು ಒದಗಿಸಿದ್ದಕ್ಕಾಗಿ ಅವರಿಗೆ ಸಮಿತಿ ಚಿರಋಣಿಯಾಗಿದೆ.

**ಟಿ. ಮಾದಯ್ಯಗೌಡ,**
**ಅಧ್ಯಕ್ಷ,**
**ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ.**

# ಲೇಖಕರ ಮಾತು

ಆಚಾರ್ಯ ವಿನೋಬಾ ಅವರ ಭೂದಾನ ಯಜ್ಞ ಯಾತ್ರೆ ಈಗ ಎಲ್ಲರಿಗೂ ಪರಿಚಯುವಾದ ಸಂಗತಿ. ಉತ್ತರ ಪ್ರದೇಶದಲ್ಲಿ ಅವರು ೧–೨ ವರುಷಗಳ ಹಿಂದೆ ಯಾತ್ರೆ ಮಾಡಿದಾಗ ನನ್ನ ಗೆಳೆಯ ಶ್ರೀ ದಾಮೋದರ ದಾಸರು ವಿನೋಬಾಗೆ ಕಾರ್ಯದರ್ಶಿಯಾಗಿ ಜೊತೆ ಯಲ್ಲಿ ಯಾತ್ರೆ ಮಾಡಿದರು. ಅವರು ಬರೆದ ಆ ಯಾತ್ರೆಯ ಟಿಪ್ಪಣಿ ಗಳಿಂದ ಈ ಇತಿವೃತ್ತದನ್ನು ಎತ್ತಿಕೊಂಡು ಪ್ರೋಣಿಸಲಾಗಿದೆ. ಇದರ ಸ್ವಾರಸ್ಯ–ಏನಿದ್ದರೂ ಅವರ ಕಥನ ಕೌಶಲದ್ದು.

ಈ ಪುಸ್ತಕ ನಮ್ಮ ಹಳ್ಳಿಗಳಲ್ಲಿ ಭೂದಾನ ಯಜ್ಞ ಚಳುವಳಿ ಚೆನ್ನಾಗಿ ಅರ್ಥವಾಗಲು ಸಹಕಾರಿಯಾದೀತೆಂದು ನಾನು ತಿಳಿದಿ ದ್ದೇನೆ. ಅದೇ, ವಯುಸ್ಕರ ಶಿಕ್ಷಣ ಸಮಿತಿಯ ಮಾಲೆಯಲ್ಲಿ ಇದು ಪ್ರಕಟವಾಗುವುದರ ಔಚಿತ್ಯ.

**ಸಿದ್ದವನಹಳ್ಳಿ ಕೃಷ್ಣಶರ್ಮ**

# ವಿಷಯ ಸೂಚಿಕೆ


| | | ಪುಟ |
|---|---|---|
| I | ನಮ್ಮ ಮಾತು | II |
| II | ಲೇಖಕರ ಮಾತು | IV |
| ೧ | ಪ್ರಾರಂಭ | ೧ |
| ೨ | ಗೋಂಡರನಾಡು | ೧೪ |
| ೩ | ವಿಂಧ್ಯಾಚಲ .... | ೨೬ |
| ೪ | ನಾಹಂ ಬಿಭೇಮಿ | ೩೭ |
| ೫ | ನೀವೇ ನನ್ನ ಕೃಷ್ಣ ... | ೪೩ |
| ೬. | ಕವಿಗಳ ನಡುವೆ | ೫೫ |
| ೭ | ವಿಂಧ್ಯ ಪ್ರದೇಶದಲ್ಲಿ | ೬೩ |
| ೮ | ದೀಕ್ಷೆ ಕೊಡಲು ಬಂದಿದೇನೆ | ೬೬ |
| ೯. | ಗ್ರಾಮ ಗೋಕುಲ | ೮೩ |
| ೧೦ | ಪ್ರಜಾಸೂಯ ಯಜ್ಞ .. | ೯೦ |
| ೧೧ | ಸಮನ್ವಯಗಳ ಸಂತೆ . . | ೧೦೧ |
| ೧೨. | ದಿಲ್ಲಿ–ರಾಜಘಾಟ್ | ೧೧೦ |
| ೧೩ | ಹುಚ್ಚರ ಪಂಥ .... .... | ೧೧೯ |
| ೧೪ | ಸರ್ವತೋ ಭದ್ರ ... | ೧೨೬ |
| ೧೫. | ಮಂತ್ರದಿಂದ ಕ್ರಾಂತಿ . | ೧೪೪ |
| ೧೬ | ಬುಂದೇಲ ಖಂಡದ ವೀರಭೂಮಿಯಲ್ಲಿ | ೧೫೪ |
| ೧೭ | ವಾರಣಾಸಿಗೆ ಮೊದಲ ಪ್ರವೇಶ | ೧೬೭ |
| ೧೮ | ಪವರ್ ಹೌಸುಗಳು .... | ೧೮೦ |
| ೧೯ | ಸರ್ವೋದಯ ರಾಮ—ಸೀತೆ | ೧೯೫ |
| ೨೦. | ಧನ್ಯ ಕಾನ್ಪುರ . ... | ೨೦೫ |
| ೨೧. | ಫತೇಪುರದಿಂದ ರಾಯಬರ್ಲೈಲೀ | ೨೧೬ |

| | | |
|---|---|---|
| | | ಪುಟ |
| ೨೨. | ಸುಲ್ತಾನಪುರದಿಂದ ಪ್ರತಾಪಗಡ .... | ೨೨೬ |
| ೨೩. | ಪ್ರಯಾಗದ ನೆನಪು .... .... | ೨೩೧ |
| ೨೪. | ಸಾಹಿತಿಗಳ ನಡುವೆ ... .... | ೨೪೫ |

## ಚಿತ್ರಗಳು

---

೧. ಪಾದಯಾತ್ರೆ ಹೊರಟ ವಿನೋಬಾ ಅವರನ್ನು ಹಿಂಬಾಲಿಸಿದ ಭೂದಾನ ಕೆಲಸಗಾರರ ಸೇನೆ.

೨. ಹಳ್ಳಿಯ ಬಡವನೊಬ್ಬನ ಗುಡಿಸಲಿನಲ್ಲಿ ವಿನೋಬಾ ಯೋಗಕ್ಷೇಮ ವಿಚಾರಣೆ.

೩. ಹಳ್ಳಿಯಲ್ಲಿ ಒಂದು ಸಭೆ–ವಿನೋಬಾ ಭೂದಾನವಿಚಾರವನ್ನು ವಿವರಿಸುತ್ತಿದ್ದಾರೆ.

೪. ಒಂದು ಏರಿಯನ್ನು ಏರುತ್ತಿದ್ದಾರೆ.

# ಭೂದಾನ ಯಜ್ಞ ಯಾತ್ರೆ



ಪಾದಯಾತ್ರೆ ಹೊರಟ ವಿನೋಬಾ ಅವರನ್ನು ಹಿಂಬಾಲಿಸಿದ
ಭೂದಾನ ಕೆಲಸಗಾರರ ಸೇನೆ.

# ಭೂದಾನ ಯಜ್ಞ ಯಾತ್ರೆ

## ೧ ಪ್ರಾರಂಭ

೧೯೫೧ ಜೂನ್ ೨೩ ಕ್ಕೆ ತಮ್ಮ ತೆಲಂಗಾಣದ ಐತಿಹಾಸಿಕ ಯಾತ್ರೆಯನ್ನು ಮುಗಿಸಿ ವಿನೋಬಾಜಿ ತಮ್ಮ 'ಪರಂಧಾಮ' ಕ್ಕೆ ಹಿಂದಿರುಗಿದಾಗ ಇಷ್ಟು ಬೇಗ ಮತ್ತೊಂದು ಪ್ರವಾಸ ಕೈಗೊಳ್ಳುವ ಯೋಚನೆ ಅವರಿಗೆ ಇರಲಿಲ್ಲ. ಕಡೆಗೆ ಚಾತುರ್ಮಾಸ್ಯವನ್ನಾದರೂ 'ಪರಂಧಾಮ'ದಲ್ಲಿ ಕಳೆವ ಆಲೋಚನೆಯಿತ್ತು. ಮಳೆಗಾಲದಲ್ಲಿ ಪ್ರಯಾಣ ಕಷ್ಟ ಎಂದಲ್ಲ; ಪರಂಧಾಮದಲ್ಲಿ ನಡೆಯುತ್ತಿರುವ ಪ್ರಯೋಗವನ್ನು ಸಫಲಗೊಳಿಸೋಣ ಎಂದು ಹಿಂದಿರುಗಿ ಬಂದಾಗ ವಿನೋಬಾ ಹೇಳಿದ್ದರು- 'ಪರಂಧಾಮದ ಪ್ರಯೋಗ ಸಫಲವಾದರೆ, ಭಾರತದ್ದೇ ಅಲ್ಲ, ಇಡೀ ಲೋಕದ್ದೇ ಭೂಮಿಯ ಪ್ರಶ್ನೆಯನ್ನು ಬಿಡಿಸಬಹುದು.' ಈ ದೃಷ್ಟಿಯಿಂದ, ಹಿಂದಿರುಗಿ ಬಂದಮೇಲೆ ಆಶ್ರಮದಲ್ಲಿ ಎಷ್ಟೋ ಮಹತ್ತರ ಪರಿವರ್ತನೆ ಮಾಡಿದರು. ಈಗ ಆಶ್ರಮವಾಸಿಗಳು ತಮ್ಮ ಕಾಯಕದಿಂದಲೇ ಉದರಪೋಷಣೆ ಮಾಡುತ್ತಿದ್ದಾರೆ. ಆದರೂ ವಿಕಾಸದ ಯೋಜನೆಗಳಿಗೆ ಹೊರಗಿನಿಂದ ಹಣದ ನೆರವು ಪಡೆಯಲು ನಿಷೇಧವಿರಲಿಲ್ಲ. ಈ ಸಲ ಅಕ್ಟೋಬರ್ ತರುವಾಯ ಅದನ್ನೂ ನಿಲ್ಲಿಸಿಬಿಟ್ಟರು. ಇನ್ನೂ ಒಂದು ಮಹತ್ವಪೂರ್ಣ ಪರಿವರ್ತನವಾಯಿತು. ಸ್ವಾವಲಂಬಿ ಸಾಮ್ಯಯೋಗದ ಸಾಧನೆಗಾಗಿ ಸರ್ವಸ್ವ ಸಮರ್ಪಣೆ ಮಾಡುವ ಶಪಥ ತೊಟ್ಟಿದ್ದರು ಸಂಗಡಿಗರು. ಆ ನಿರ್ಧಾರಕ್ಕೆ ಆಜೀವ ಬ್ರಹ್ಮಚರ್ಯಪಾಲನೆಯ ಸಂಕಲ್ಪದ ಕವಚವನ್ನು ಈಗ ತೊಡಿಸಿದರು ಕಾಂಚನಮುಕ್ತಿಯ ಸಾಧನೆಯ ದೃಷ್ಟಿಯಿಂದ ಇವೆಲ್ಲ ಪರಿವರ್ತನೆಗಳೂ ಮಹತ್ವದವು, ಮೂಲಭೂತವಾದುವು ಇದೇ ರೀತಿ ಗೋಪುರಿ

ಯಲ್ಲಿಯೂ ಸೇವಾಗ್ರಾಮದಲ್ಲಿಯೂ* ಸಾಕಷ್ಟು ಪರಿವರ್ತನೆ ಮಾಡಲಾಯಿತು

ಎಷ್ಟು ಸ್ವಲ್ಪ ತಡವಾದರೂ ಅವರಿಗೆ ಅಸಹ್ಯವೆನಿಸುತ್ತಿತ್ತು. ತೆಲಂಗಾಣದಲ್ಲಿ ಆದ ಆ ಕೆಲಸ, ಅಲ್ಲಿ ವಿನೋಬಾ ಆಡಿದ ಮಾತು, ಅದರ ಹಿನ್ನೆಲೆಯಲ್ಲಿ ಅವರು ಅನುಭವಿಸಿದ ಶಕ್ತಿಯು ತಲೆಮೂಡು- ಸೇವಾಗ್ರಾಮ, ಗೋಪುರಿ, ಪರಂಧಾಮಗಳಲ್ಲಿ ನಡೆದ ಪ್ರಯೋಗಗಳಲ್ಲಿದೆ. ಹಾಗೆ ಅವರೇ ಹಲವು ಸಲ ಹೇಳಿದ್ದಾರೆ. ಈಗ ನಡೆಯಲಿರುವ ಈ ಹೊಸ ಪರಿವರ್ತನವೂ ಮುಂದೆ ಬರಲಿರುವ ಯಾವುದೋ ಮಹತ್ತರ ಘಟನೆಯ ಮುನ್ಸೂಚನ '

ಅಕ್ಟೋಬರ್ ೨೭ ಕ್ಕೆ ನಾಲ್ಕು ತಿಂಗಳು ಮುಗಿಯುತ್ತಿತ್ತು. ಬಹಳ ಬೇಗ ಎಂದರೆ ಅಕ್ಟೋಬರ್ ೨೭ ಕ್ಕೆ ವಿನೋಬಾಜಿ ಮತ್ತೆ ಪಾದಯಾತ್ರೆ ಹೊರಡಬಹುದು ಎಂದು ನಾವು ಯೋಚಿಸಿದ್ದೆವು ಯಾವ ದಿಕ್ಕೋ ಗೊತ್ತಿರಲಿಲ್ಲ ಮಹಾರಾಷ್ಟ್ರದ ಠಾಣಾ ಜಿಲ್ಲೆಯ ಆದಿವಾಸಿಗಳ ನಡುವೆ ಕೆಲಸ ಮಾಡುತ್ತಿರುವ ಕೆಲಸಗಾರರು ಒತ್ತಾಯ ಮಾಡಿ ಬರಹೇಳಿದ್ದರು. ಹಿಮಾಚಲ ಪ್ರದೇಶದ ಒಳನಾಡಿನಲ್ಲಿ ರೈತರ ಆಂದೋಳನ ಮೊದಲಾಗಿತ್ತು ಅಲ್ಲಿ ಪಂಡಿತ ಧರ್ಮದೇವ ಶಾಸ್ತ್ರಿ ಕೆಲಸ ಮಾಡುತ್ತಿದಾರೆ ಅವರದೂ ಪತ್ರ ಬಂದಿತ್ತು ಉಸ್ಮಾನಾಬಾದ್ ಜಿಲ್ಲೆಯಲ್ಲಿ ಮುಸ್ಲಿಂ ಅನಾಥರ ನೆರವಿಗಾಗಿ ಹೋಗಬೇಕಾಗಿತ್ತು ಮೇವಾತ್‌ನಲ್ಲಿ ಕೆಲಸ ಕಾದಿತ್ತು ಒಂದು ಸಲ ಅಲ್ಲಿಗೆ ಹೋಗಿಬರಬೇಕಾದ ಅಗತ್ಯವೂ ಇತ್ತು ಹೀಗೆ ನಾಲ್ಕೈದು ಕಡೆಯ ಒತ್ತಾಯ. ಆದರೂ ಯಾವ ದಿಕ್ಕು, ಎಷ್ಟು ದಿನ ಎಂಬುದು ನಿಶ್ಚಯವಾಗಿರಲಿಲ್ಲ ಹೀಗಿದ್ದಾಗ ಏಕಾಏಕಿ ಸೆಪ್ಟೆಂಬರ್ ೧೨ ಕ್ಕೆ ಉತ್ತರ ಭಾರತ ಯಾತ್ರೆ ಮಾಡುವ ಸಂಕಲ್ಪ ಹೇಗೆ ಬಂತು ?

* ಗೋಪುರಿ—ಸೇವಾಗ್ರಾಮ—ಗಾಂಧೀಜಿಯ ಕಾರ್ಯಕ್ಷೇತ್ರಗಳು

ಕೆಲಸಗಾರರ ಸಭೆಯಲ್ಲಿ ನ್ಯಾಷನಲ್ ಪ್ಲಾನಿಂಗ್ ಕಮಿಷನ್ನಿನ ಬಗ್ಗೆ ಚರ್ಚಿಸಲು ಪಂಡಿತ ನೆಹರೂ ತಮಗೆ ಕೊಟ್ಟ ಆಹ್ವಾನದ ಪ್ರಸ್ತಾಪ ಮಾಡಿದರು ವಿನೋಬಾ. 'ನಮ್ಮ ವಿಚಾರಕ್ಕೂ ಕಮಿಷನ್ನಿನ ಯೋಜನೆಗೂ ಇರುವ ಮತಭೇದ ಬರೀ ಹತ್ತಿಪ್ಪತ್ತು ಗೆರೆ ಅತ್ತ ಇತ್ತ ಮಾಡಿದ ಮಾತ್ರದಿಂದ ಪರಿಹಾರವಾಗುವಂಥದಲ್ಲ ನಮ್ಮ ವಿಚಾರ ವನ್ನು ಒಪ್ಪಿದರೆ ಅವರ ಇಡೀ ಯೋಜನೆಯನ್ನೆ ಬದಲಿಸಬೇಕಾ ದೀತು.' ಹೀಗೂ ಹೇಳಿದರು—'ಹೋಗಬೇಕೋ ಬಿಡಬೇಕೋ ನಾನಿನ್ನೂ ನಿರ್ಧರಿಸಿಲ್ಲ ಹೋದರೂ ಹೋದೇನು. ದಿಲ್ಲಿಗೆ ಹೋಗು ವುದರಿಂದ ಹೆಚ್ಚೇನೂ ಲಾಭವಾಗದಿದ್ದರೂ ನಮ್ಮ ದೃಷ್ಟಿಯೇನು ಎಂಬುದಾದರೂ ಯೋಜನಾ ಸಮಿತಿಗೆ ತಿಳಿದೀತು. ನಾವಿನ್ನೂ ನಮ್ಮ ಮಾತನ್ನು ತಿಳಿಸಿಯ ಇಲ್ಲ ಎಂಬ ದೋಷವಾದರೂ ತಪ್ಪೀತಲ್ಲ.' ಕಮಿಷನ್ನಿನ ಸದಸ್ಯ ಶ್ರೀ ಪಾಟೀಲರು ಪರಂಧಾಮಕ್ಕೆ ಬಂದಿದ್ದಾಗ ಬೇಕಾದಷ್ಟು ಗಂಭೀರ ಚರ್ಚೆ ನಡೆಯಿತು ಅದಾದಮೇಲೆ ಪಂಡಿತ ನೆಹರು, ಅವರ ಸಂಗಾತಿಗಳು ವಿಶೇಷ ರೂಪದಲ್ಲಿ ಮಾತಾಡಬೇಕೆಂ ದರೆ, ಹೋಗದಿರುವುದೂ ಒಳಿತಲ್ಲ. ಆದ್ದರಿಂದಲೇ ವಿನೋಬಾಜಿ ಹೋಗಲು ನಿರ್ಧರಿಸಿರಬಹುದು.

ನೆಹರೂ ಭೇಟಿಗಾಗಿ ದಿಲ್ಲಿಗೆ ಹೋಗುವುದು ಅಗತ್ಯವಾದರೆ ವಾಹನಬೇಡ ಎಂದು ವಿನೋಬಾಜಿ ಹಟ ಹಿಡಿಯಲಾರರು. ಹೋಗು ವಾಗ ರೈಲಿನಲ್ಲಿ ಹೋಗಿ ಬರುವಾಗ ನಡೆದು ಬಂದಾರು ಎನಿಸಿತ್ತು ನಮಗೆ.

ಆವೊತ್ತು ವಿನೋಬಾಜಿ ಸೇವಾಗ್ರಾಮದಲ್ಲೇ ಇದ್ದರು. ೬-೭, ಎರಡೂ ದಿನ ಅಲ್ಲೇ ಇರಬೇಕಾಗಿತ್ತು. ವರ್ಧಾದ ಅಕ್ಕಪಕ್ಕದ ಹಳ್ಳಿ ಗಳಲ್ಲಿ ಏನಾದರೂ ನಿಶ್ಚಿತಕಾರ್ಯವನ್ನು ಮಾಡುವ ಚರ್ಚೆ ನಡೆದಿತ್ತು. ನಮ್ಮ ವಿಚಾರದಂತೆ ಎಲ್ಲಾದರೂ ಒಂದು ಕಡೆ ಕೆಲಸಮಾಡಿ ತೋರಿ

ಸುವವರೆಗೆ ನಮ್ಮ ವಿಚಾರಕ್ಕೆ ಶಕ್ತಿ ಪ್ರಾಪ್ತವಾಗದು. ಆದ್ದರಿಂದ ೨೦-೩೦ ಹಳ್ಳಿಗಳಲ್ಲಿ ನಮ್ಮ ಸರ್ವಶಕ್ತಿಯನ್ನೂ ಪ್ರಯೋಗಿಸಿ ನಮ್ಮ ವಿಚಾರವನ್ನು ರೂಪಿಗೆ ಇಳಿಸುವ ಆಲೋಚನೆ ನಡೆಯಿತು. ವಿನೋಬಾಜಿ ಚರ್ಚೆಯಲ್ಲಿ ಸಾಕಷ್ಟು ಭಾಗ ವಹಿಸಿದರು. ಈ ಮಹತ್ವಪೂರ್ಣವಾದ ಹೊಸ ಕೆಲಸಕ್ಕೆ ದಾರಿ ತೋರಿಸಲು ಒಪ್ಪಿಕೊಂಡರು. ಈ ಕೆಲಸದಲ್ಲಿ ತೊಡಗಿಹೋಗಲು ಯಾರು ಯಾರು ಸಿದ್ಧ ಎಂದು ಕೇಳಿದಾಗ ಕೈಯೆತ್ತಿದವರಲ್ಲಿ ಶ್ರೀ ಕಿಶೋರಲಾಲ ಮಶರೂವಾಲಾ, ಶ್ರೀಧರ ಹರಿ ಧತ್ರೇ, ಮನೋಹರ ದಿವಾಣ, ಶ್ರೀಮನ್ನಾರಾಯಣ ಅಗರವಾಲ, ಶರಯೂ ತಾಯಿ ಧೋತ್ರೆ—ಇತ್ಯಾದಿಗಳು ಇದ್ದರು. ಅಂತೂ ಕನಿಷ್ಠ ಒಂದು ವರುಷವಾದರೂ ವಿನೋಬಾಜಿ ಇಲ್ಲೇ ಇದ್ದಾರು ಅನಿಸಿತು, ಜನರಿಗೆ.

ಎಲ್ಲರಿಗೂ ಬಹಳ ಹುರುಪು. ಕೆಲಸದ ರೂಪರೇಷೆ ಚಿತ್ರಿತವಾಗುತ್ತಿತ್ತು. ಹಳ್ಳಿಗಳ ಪಟ್ಟಿ ಸಿದ್ಧವಾಯಿತು. ೬ ರ ಸಂಜೆಗೆ ಚರ್ಚೆ. ಮತ್ತೆ ಮರುದಿನ ಬೆಳಗ್ಗೆ ಸೇರುವ ನಿರ್ಧರವಾಯಿತು.

ಸಭೆ ಮುಗಿದ ಮೇಲೆ ಸಂಜೆಗೆ ವಿನೋಬಾಜಿ ದಿಲ್ಲಿಗೆ ಹೋಗುವ ತೀರ್ಮಾನ ಮಾಡಿದರು ಆದರೆ ರೈಲಿನಲ್ಲೋ ನಡೆದೋ, ಹೇಗೆ ಹೋಗುವುದು ಎಂಬುದು ತೀರ್ಮಾನವಾಗಿರಲಿಲ್ಲ. ವಿನೋಬಾಜಿ ಗಾಡಿ ಹತ್ತುವುದಿಲ್ಲ ಎಂಬ ವ್ರತವನ್ನೇನು ಹಿಡಿದಿಲ್ಲ. ಆದ್ದರಿಂದ ಎಲ್ಲರೂ ರೈಲೇ ಸರಿ ಎಂದು ಒತ್ತಿ ಹೇಳಿದರು. ಅವಶ್ಯಕತೆಯಿದ್ದಾಗ ವಿನೋಬಾಜಿ ಗಾಡಿ ಬೇಡ ಎಂದಾರು ಎಂದು ಯಾರೂ ಯೋಚಿಸಲಿಲ್ಲ. ಆದರೆ ಮರುದಿನ ಬೆಳಗ್ಗೆ ಪ್ರಾರ್ಥನೆಯ ತರುವಾಯ ವಿನೋಬಾಜಿ ವಲ್ಲಭಸ್ವಾಮಿಯನ್ನು ಕರೆದು ನಾನು ನಡೆದೇ ಹೋಗಲು ನಿರ್ಧರಿಸಿದ್ದೇನೆ ಎಂದು - ಹೇಳಿದರು. ೧೨ ನೆಯ ತಾರೀಕು ಹೊರಡುತ್ತೇನೆ ಎಂದರು.

ಸಂಗಡಿಗರು ಬೇಕಾದಷ್ಟು ಚರ್ಚೆ ಮಾಡಿದರು ಎಲ್ಲವೂ ವ್ಯರ್ಥವಾಯಿತು. 'ಇವೊತ್ತು ಜವಾಹರಲಾಲರು ಕರೆಯುತ್ತಾರೆ. ಅದಕ್ಕಾಗಿ ವಾಹನ. ನಾಳೆ ಇನ್ನೊಬ್ಬರು ಕರೆಯುತ್ತಾರೆ ಅವರ ಕೆಲಸವೂ ಅವರ ದೃಷ್ಟಿಗೆ ಬಹಳ ಅವಸರದ್ದು. ಅವರಿಗೆ, ಹೇಗೆ ಇಲ್ಲ ಎನ್ನಲಿ.'' ಗಾಡಿಯಲ್ಲಿ ಕೂಡಲೇ ಬಾರದು ಎಂಬ ಶಪಥವೇನಿಲ್ಲ ವಿನೋಬಾಗೆ. ಆದರೆ ಕಾಂಚನಮುಕ್ತಿಯ ಪ್ರಯೋಗ ಸಫಲವಾಗುವವರೆಗೆ ವಾಹನ ಬಳಸಬಾರದು ಎಂಬ ತಮ್ಮ ನಿರ್ಧಾರವನ್ನು ಅಳಕಮಾಡುವ ಅಗತ್ಯ ವಿನೋಬಾಗೆ ಕಾಣಲಿಲ್ಲ. ಆ ನಿರ್ಧಾರದ ಬಲವನ್ನು ಕುಂದಿಸುತ್ತದೆ ಇದು ಎಂದು ಅವರ ಅಭಿಪ್ರಾಯ.

ಆದ್ದರಿಂದ ೭ ನೇ ತಾ. ಬೆಳಗ್ಗೆ ಕೆಲಸಗಾರರ ಸಭೆಯಲ್ಲಿ ಈ ಹೊಸ ತೀರ್ಮಾನವನ್ನು ಅವರು ಹೇಳಿದಾಗ ಕೆಲಸಗಾರರಿಗೆ ಅಚ್ಚರಿಯಾಯಿತು. ತಮ್ಮ ದೃಷ್ಟಿಯನ್ನು ತಿಳಿಸುತ್ತ ವಿನೋಬಾ 'ನನಗಂತೂ ಪ್ರವಾಸ ಹೊರಡಬೇಕಾಗಿತ್ತು. ನೆಹರೂ ಪತ್ರದಿಂದ ದಿಕ್ಕು ನಿರ್ಧರವಾಯಿತು' ಎಂದರು.

೧೨ ನೇ ತಾ. ವಿನೋಬಾ ಉತ್ತರ ಭಾರತ ಯಾತ್ರೆ ಹೊರಡುತ್ತಾರೆಂದು ಕೇಳಿದಾಗ, ಹೊಸದಾಗಿ ಕೈಗೊಂಡ ಕೆಲಸಕ್ಕೆ ಭದ್ರವಾದ ತಳಹದಿ ಹಾಕಲು ೧೦-೧೫ ದಿನ ಇದ್ದು ಹೋಗಿ ಎಂದರು ಕೆಲಸಗಾರರು. ಆದರೆ ಸೆಪ್ಟೆಂಬರ್ ೧೧ ನೇ ತಾರೀಕಿಗೆ ವಿನೋಬಾಜಿಗೆ ೫೬ ವರ್ಷ ಮುಗಿದು ೫೭ ಮೊದಲು. ಬಾಳಿನ ಕ್ಷಣಭಂಗುರತೆಯನ್ನು ತಿಳಿಸುತ್ತ ವಿನೋಬಾ ಹೇಳಿದರು—'ಹೊಸ ವರುಷ ಬರುತ್ತಿದೆ. ಹೊಸ ವರ್ಷದಲ್ಲಿ ಹೊಸ ಸಂಕಲ್ಪ ಮಾಡಬೇಕು.'

ಮಾರ್ಚಿ ೬ ರ ಸಂಜೆ ಸರ್ವೋದಯ ಯಾತ್ರೆಯ ಸಂಕಲ್ಪವಾಗಿತ್ತು. ತೆಲಂಗಾಣದಿಂದ ಹಿಂದಿರುಗಿ, ತಮ್ಮ ಸರ್ವಶಕ್ತಿಯನ್ನೂ ಶೇಖರಿಸಿಟ್ಟಿರುವ ಬಾಪೂ ಕುಟೀರವನ್ನು ಮತ್ತೆ ಹೊಕ್ಕರು. ಬಹುಶಃ ಮತ್ತೆ ಬಲ ಪಡೆಯಲೆಂದೇ ಇರಬೇಕು.

ಸೇವಾಗ್ರಾಮ ಆಶ್ರಮದಿಂದ ವರೋಡಾ ಗ್ರಾಮದವರೆಗೆ, ಆ ಸೊಗಸಾದ ಬೆಟ್ಟದವರೆಗೆ, ರಾಮನಾಮ ಹಾಡುತ್ತ ಗೆಳೆಯರು ವಿನೋಬಾಜಿಯನ್ನು ಬೀಳು ಕೊಡಲು ಬಂದರು ಸಂಸ್ಥೆಗಳ ಜನರು ದಾರಿಯ ಎರಡೂ ಪಕ್ಕದಲ್ಲಿ ನಿಂತಿದ್ದರು. ಅವರೆಲ್ಲರೂ ಮೂಕ ಅಭಿವಾದನ ಮಾಡಿದರು

ವಿನೋಬಾ ಪರಂಧಾಮ ಆಶ್ರಮಕ್ಕೆ ಹೊರಟರು. ೨–೩ ದಿನ ಅಲ್ಲಿದ್ದು ಆಮೇಲೆ ಉತ್ತರ ಭಾರತ ಯಾತ್ರೆಗೆ ಹೊರಟರು.

ಯಾತ್ರೆ ಹೊರಡುವ ಮುನ್ನ ತಮ್ಮ ಒಲವಿನ ಹಳ್ಳಿ ಸುರಂಗಾದ ಜನರನ್ನು ಭೇಟಿಯಾಗಲು ಹೋದರು. ಅರ್ಧಘಂಟೆ ಹೊತ್ತು ಅಲ್ಲಿದ್ದರು. ಅದು ಒಂದು ಸಾವಿರದ ಹಳ್ಳಿ. ಆದರೂ ಅಲ್ಲಿ, ಆ ಗಳಿಗೆಯಲ್ಲಿ, ೬೦ ಎಕರೆ ಹೊಲ ದಾನ ಸಿಕ್ಕಿತು.

ವಿನೋಬಾಜಿ ಯಾತ್ರೆ ಹೊರಡುತ್ತಾರೆ ಎಂಬ ಸುದ್ದಿ ವರ್ಧಾದವರಿಗೂ ತಿಳಿಯಿತು. ವರ್ಧಾದಿಂದ ಅವರನ್ನು ಬೀಳ್ಕೊಡುವಾಗ ಹಾಗೆಯೆ ಬರಿಗೈಯಲ್ಲಿ ಕಳಿಸುವುದೆ? ಊರಿನಲ್ಲಿ ಭೂದಾನದ ಚರ್ಚೆ ಮೊದಲಾಯಿತು. ವಿನೋಬಾಜಿ ಭೂದಾನ ಹಿಡಿಯುತ್ತಾರೆ ಎಂದು ಒಬ್ಬ ಖೋಜಾ ಸೋದರನಿಗೆ ತಿಳಿಯಿತು. ತನ್ನ ೬೫ ಎಕರೆಹೊಲವನ್ನು ಅವನು ಮಾರಲು ಹೊರಟಿದ್ದ. ವಿನೋಬಾಜಿಯ ಭೂದಾನ ಯಾತ್ರೆಯ ಸುದ್ದಿ ಕೇಳಿ ಗೆಳೆಯರೊಂದಿಗೆ ಅವನು ಪವನಾರಕ್ಕೆ ಹೋದ. ಹೋಗಿ ವಿನೋಬಾಗೆ ನಮಸ್ಕಾರ ಮಾಡಿ ಆ ೬೫ ಎಕರೆಯನ್ನೂ ಅವರಿಗೆ ಧಾರೆಯೆರೆದ. ಇಂಥ ಹೃದಯಸ್ಪರ್ಶಿಯಾದ ಸಂಗತಿ ಇನ್ನೂ ಕೆಲವು ನಡೆದುವು. ನಮ್ಮ ಜತೆಗಾರ ದತ್ತೋಬಾ ದಾಸ್ತಾನೆ, ಸರ್ವೋದಯ ಸಮಾಜ ಸೇವಕರಿಗೆ ತಿಳಿದವರು. ಆತ ತನ್ನ ಸಮಸ್ತ ಹೊಲ-೧೯ ಎಕರೆಯನ್ನೂ ವಿನೋಬಾಗೆ ಸಮರ್ಪಿಸಿಬಿಟ್ಟ. ಇನ್ನೊಬ್ಬ ಸಂಗಾತಿ ಶ್ರೀ ರಾಕರೇ ತನ್ನ ೧೮ ಎಕರೆ ಹೊಲ ಅಷ್ಟನ್ನೂ ಕೊಟ್ಟ.

ದತ್ತೋಬಾ ರ ಇಡೀ ಹೊಲವನ್ನು ತೆಗೆದುಕೊಳ್ಳಬೇಡಿ ಎಂದು ಕೆಲವರು ಸೂಚಿಸಿದರು. ಅರ್ಧದಷ್ಟಾದರೂ ಅವರಿಗೆ ಬಿಡಿ ಎಂದರು. ಆಗ 'ದತ್ತೋಬಾ ಬೇರೆ ನಾನು ಬೇರೆ ಅಲ್ಲ ಅವನನ್ನು ನಾನು ಅರ್ಧ ಪ್ರೀತಿಸಲಾರೆ ಪೂರಾ ಪ್ರೀತಿಸುತ್ತೇನೆ' ಎಂದರು ವಿನೋಬಾ. ಪೂರಾ ದಾನವನ್ನು ಹಿಡಿದರು ಬಹಳ ಸ್ವಲ್ಪ ಹೊತ್ತಿನಲ್ಲಿ ವರ್ಧಾದ ಜನ ಆರುನೂರು ಎಕರೆ ಭೂದಾನ ಯಜ್ಞಕ್ಕಾಗಿ ಅರ್ಪಿಸಿದರು.

ಪರಂಧಾಮದಲ್ಲಿ ಬಾಪೂ ಸ್ಮಾರಕದ ನೆರಳಿನಲ್ಲಿ ಜನರು ಈ ಬಗೆಯ ಭೂದಾನ ಮಾಡಿ ಬಹಳ ಸರಳತೆಯಿಂದ ವಿನೋಬಾಜಿಯ ಹುಟ್ಟಿದ ಹಬ್ಬ ಮಾಡಿದರು

ಹನ್ನೆರಡನೆ ತಾರೀಕು ಬೆಳಿಗ್ಗೆ ಪ್ರಾರ್ಥನೆಯ ತರುವಾಯ ಯಾತ್ರೆಗಾಗಿ ಪಯಣ ಹೊರಡುವಾಗ ತಮ್ಮ ಸಂದೇಶ ಸಾರುತ್ತ ವಿನೋಬಾಜಿ ಹೇಳಿದರು—"ಭೂದಾನದಲ್ಲಿ ಬರೀ ದಾನದ ಮಹತ್ವ ಅಷ್ಟೇ ಅಲ್ಲ, ಸಮವಿಭಾಜನೆಯ ಮಹತ್ವ ಇದೆ. ದಾನದ ಅರ್ಥವೇ ಸಮವಿಭಾಗ ಎಂದು ಆಗಬೇಕು. ದಾನಂ ಸಮ ವಿಭಾಗಃ--ದಾನದ ಈ ಕಲ್ಪನೆಯನ್ನು ನಾವು ಮೊದಲಿಡಬೇಕು. ಸಮಾಜವು ಕುಟುಂಬದ ಒಂದು ಅಂಗ ಎಂದು ಗ್ರಹಿಸುವಂತೆ ಜನರಿಗೆ ತಿಳಿಸಿ ಹೇಳಬೇಕು. ಈ ಭಾವನೆಯಿಂದ ದಾನ ನೀಡುವ ಪ್ರೇರಣೆ ಜನಕ್ಕೆ ಬರಬೇಕು. ಭೂಮಿಹೀನರಾದವರಿಗೂ ಭೂಮಿಯ ಮೇಲೆ ಅಧಿಕಾರವಿದೆ ಎಂದು ತಿಳಿದು ದಾನ ನೀಡಬೇಕು. ಭೂಮಿ-ಹೀನರಿಗೆ ಉಪಕಾರ ಮಾಡುವ ಭಾವನೆ ಸಲ್ಲದು. ಒಳ್ಳೆಯ ಕಲ್ಪನೆಯಿಂದ ಮಾಡಿದ ಕೆಲಸದಲ್ಲಿ ಯಾರಿಗೂ ಯಾವ ನಷ್ಟವೂ ಇಲ್ಲ ಎಂದೂ ಆಗಿಲ್ಲ ನಮ್ಮ ವಿಚಾರ ಗಳಿಗೆ ನಾವು ದೃಢವಾಗಿ ಅಂಟಿಕೊಂಡರೆ ನಾವು ತರ ಬೇಕೆನ್ನುವ ಸರ್ವೋದಯ ಬಂದೇ ಬರುತ್ತದೆ. ಶಾಂತಿಮಯಕ್ರಾಂತಿ ಆಗುತ್ತದೆ."

ಹೀಗೆ ಶಾಂತಿಮಯಕ್ರಾಂತಿಗೆ ಅನುಕೂಲ ವಾತಾವರಣವನ್ನು ಕಲ್ಪಿಸುತ್ತಾ, ಕಲ್ಪಿಸುವ ಸಂಕಲ್ಪದಿಂದ ವಿನೋಬಾಜಿ ತನ್ನ ದೇಶ ಬಾಂಧವರನ್ನು ಭೇಟಿ ಆಗಲು ಹೊರಟರು ಅವರ ಪಾಲಿಗೆ ಎಲ್ಲರೂ ನಾರಾಯಣ ಸ್ವರೂಪರೇ. ಜನರ ಸದ್ಭಾವನೆಗಳ ಬಗ್ಗೆ ಅವರಿಗೆ ನಂಬುಗೆ ಇದೆ. ಜನಕ್ಕೆ ಕೊಡುವ ಹೃದಯವಿದೆ ಬೇಡುವ ಯೋಗ್ಯತೆ ಇದ್ದವರು ಅವರ ಬಳಿ ನಾರಬೇಕು ಅಷ್ಟೇ. ವಿನೋಬಾಗಿಂತ ಹೆಚ್ಚು ಯೋಗ್ಯರು ಮತ್ತಾರು? ಯಾರಿಗೆ ಕೇವಲ ತನ್ನ ಶರೀರ, ಅದನ್ನು ಮುಚ್ಚಿದ ಒಂದು ಮೋಟು ಪಂಚೆ ಮಾತ್ರವೇ ಪರಿಗ್ರಾಹ್ಯವೋ ಅಂಥ ವಿನೋಬಾ!

ಸರಿಯಾಗಿ ೫ ಗಂಟೆಗೆ ವಿನೋಬಾ ಕೂಚು ಮೊದಲಿಟ್ಟರು. ಅದಕ್ಕೆ ಮೊದಲು ಭರತ ರಾಮ ಮಂದಿರವನ್ನು ಹೊಕ್ಕು ಬಂದರು. ತಮ್ಮ ಒಲವಿನ ಹಾಡು 'ಧರ್ಮ ಜಾಗೋ ನಿವೃತ್ತೀಚ' ಎಂಬು ದನ್ನು ಹಾಡಿದರು. ತೆಲಂಗಾಣದ ನೆನಪಿಗಾಗಿ 'ರಮಾರಮಣ ಗೋವಿಂದೋ ಹರ' ಎಂದು ಉಚ್ಚರಿಸಿ ವಿನೋಬಾ ತಮ್ಮ ಹೆಜ್ಜೆ ಮುಂದಿಟ್ಟರು. ಧಾಂ ನದಿಯೂ ಕೂಡ ಆ ಗೋವಿಂದೋ ಹರದಲ್ಲಿ ತನ್ನ ದನಿಗೂಡಿಸಿತು. ನಕ್ಷತ್ರ ಮಂಡಲದಲ್ಲಿ ಮೃಗಶಿರಾ ನಕ್ಷತ್ರ ಹೊಳೆಯುತ್ತ ಮೂಡಿತು. ಅಲ್ಲಿ ಆ ಮೃಗವನ್ನು ಬೇಡನಿಂದ ಬದುಕಿ ಸಲು ಋಷಿ ಉತ್ಸುಕನಾಗಿದಾನೆ. ಇಲ್ಲಿ ಮಾನವರನ್ನು ಹಿಂಸೆಯಿಂದ ತಪ್ಪಿಸಲು ಈ ಋಷಿ ಹೆಜ್ಜೆ ಇಟ್ಟಿದಾನೆ. ಅಹಿಂಸಕ ಕ್ರಾಂತಿಯ ಓಂಕಾರ ಧ್ವನಿಗೈದಿದಾನೆ.

ಜನರು ನೋಡಲು ಬಂದಲ್ಲೆಲ್ಲ ಅವರಿಗೆ ಅತ್ಯಂತಸರಳ ಭಾವ ದಿಂದ ವಿನೋಬಾ ತಿಳಿಸಿ ಹೇಳುತ್ತಾರೆ. ಅತ್ಯಂತ ಉತ್ಕಟತೆಯಿಂದ ತಿಳಿಸುತ್ತಾರೆ ಮನಸಾರೆ ವಿವರಿಸುತ್ತಾರೆ. ಅವರು ತಿಳಿಸಿ ಹೇಳುವು ದರ ಪ್ರಭಾವ ಅತ್ಯಂತ. ಎಲ್ಲೆಲ್ಲಿ ಅವರು ಮಾತಾಡುತ್ತಾರೋ ಅಲ್ಲಿ

ಅವರ ಪ್ರಸನ್ನವಾಣಿ ಗಾಳಿಯಲ್ಲೇ ದನಿದನಿಸುತ್ತಾ ಹರಡುತ್ತದೆ. ಜನರ ಮನೋವೃತ್ತಿಯನ್ನು ಪರಿಗ್ರಹದಿಂದ ಅಪರಿಗ್ರಹದಕಡೆ ತಿರುಗಿಸುತ್ತದೆ. ವರ್ಧಾದಿಂದ ಸೇಲಡೋಗೆ ಹೋಗುವ ದಾರಿಯಲ್ಲಿ ಸೇಲೂ ಬಳಿ ಕೆಲವು ನಿಮಿಷ ನಿಂತರು. ಅಲ್ಲಿ ೩೦ ಎಕರೆ ಹೊಲ ಸಿಕ್ಕಿತು. ಬೋರಿ ಗ್ರಾಮದಲ್ಲಿ ಕೆಲವು ನಿಮಿಷ ನಿಂತರು. ಅಲ್ಲಿಯೂ ೩೦ ಎಕರೆ. ಗುಂಗಾಂನಲ್ಲಂತೂ ಚಮತ್ಕಾರ ಮಾಡಿದರು. ಅರ್ಧಗಂಟೆ ಹನಿಹನಿಯಾಗಿ ಭೂದಾನದ ಮಳೆ ಕರೆಯಿತು. ೨೦ ಮೈಲಿ ನಡೆದು ಸೇಲಡೋನಿಂದ ಗುಂಗಾಂಗೆ ಬಂದಾಗ ಜನ ಎದೆತುಂಬಿ ಸ್ವಾಗತ ನೀಡಿದರು. ಸಂಜೆಗೆ ವೀಣಾ ನದಿಯ ದಡದಲ್ಲಿ ಸಾವಿರಾರು ಜನ ವಿನೋಬಾ ವಾಣಿಯ ಶ್ರವಣದ ಆನಂದ ಪಡೆದರು ಇತ್ತ ವೀಣಾನದಿಯ ಪ್ರವಾಹ. ಅತ್ತ ವಿನೋಬಾ ವಾಣಿಯ ಸ್ಫುರಿತ ಗಂಗಾಪ್ರವಾಹ! ‘ನೀವು ನಿಮ್ಮ ಒಳಗಿನ ಪ್ರೇಮ ಭಾವನೆಯನ್ನು ಎಚ್ಚರಗೊಳಿಸಿರಿ! ಪ್ರೇಮಭಾವದ ಗುರುತು ಪಾರಸ್ಪರಿಕ ಚಿಂತೆ. ಇಡೀ ಹಳ್ಳಿ ನಿಮ್ಮ ಕುಟುಂಬ ಎಂದು ಪ್ರೇಮಮಯವಾಗಿ ನೋಡಿ. ಭಾಗ್ಯವಂತರ ಬಳಿ ಹೊಲವಿದೆ. ಬಡವರ ಬಳಿ ಇಲ್ಲ. ಬೇರೆ ದೇಶಗಳಲ್ಲೂ ಹೊಲದ ಹಂಚಿಕೆ ಆಗಿದೆ. ಅಲ್ಲಿ ಶಾಸನ ಬಲ ಅಥವಾ ಕೊಲೆಯ ಬಲ. ನಮ್ಮ ದೇಶದ ಸಂಸ್ಕೃತಿಗೆ ಇವೆರಡೂ ದಾರಿ ಸಲ್ಲವು. ಆದ್ದರಿಂದ ನಾನು ಭೂದಾನ ಬೇಡಲು ನಿರ್ಧರಿಸಿದೆ. ಬೇಡುವವನು ಬಂದರೆ ನೀಡುವವನೂ ಹುಟ್ಟುತ್ತಾನೆ ಪ್ರೇಮಭಾವನೆ ಎಚ್ಚರವಾದರೆ ಜನ ಭೂದಾನ ಮಾಡದೆ ಇರಲಾರರು. ಚೀನಾ, ರಷ್ಯಾಗಳ ದಾರಿಯನ್ನು ಎಲ್ಲರೂ ತೋರುತ್ತಾರೆ. ಆದರೆ ನನ್ನ ದಾರಿ ಅದಲ್ಲ. ಆದ್ದರಿಂದ ನನಗೆ ಹೊಟ್ಟೆ ತುಂಬಾ ನೀಡಿ. ನೋಡಲಿಕ್ಕೆ ನಾನು ತೆಳ್ಳಗೆ ಕಡ್ಡಿಯ ಹಾಗೆ ಕಾಣುತ್ತೇನೆ. ಆದರೆ ನನ್ನ ಹೊಟ್ಟೆ ಮಾತ್ರ ಬಹಳ ದೊಡ್ಡದು.’ ಆಮೇಲೆ ಒಬ್ಬೊಬ್ಬರಾಗಿ ಭೂದಾನ ನೀಡಿದರು. ಅರ್ಧಗಂಟೆಯಲ್ಲಿ

೪೧ ಜನ ಸ್ವಲ್ಪ ಸ್ವಲ್ಪವಾಗಿ ಒಟ್ಟು ೨೫೦ ಎಕರೆ ಕೊಟ್ಟರು ಅದರಲ್ಲಿ ೧, ೨, ೪ ಎಕರೆಯೇ ಹೆಚ್ಚು. ಒಬ್ಬ ತಮ್ಮ ಮಾತ್ರ ೧೦೦ ಎಕರೆ ಕೊಟ್ಟ. ಇಲ್ಲಿ ಒಂದೊಂದು ಎಕರೆಯೂ ಒಂದೊಂದು ಸಾವಿರ ರೂಪಾಯಿ ಬೆಲೆಯದು. ಕೇವಲ ೪, ೫ ಎಕರೆ ಇದ್ದ ಬಡವರೂ ಕೂಡ ಅಲ್ಪ ಸ್ವಲ್ಪ ದಾನ ಕೊಟ್ಟರು.

ಇಂಥ ಎಷ್ಟೋ ಉಲ್ಲೇಖನೀಯ ಪ್ರಸಂಗ ದಿನವೂ ನಡೆಯು ತ್ತವೆ. ನಾಗಪುರದಲ್ಲಿ ಒಬ್ಬಾತ ತನ್ನ ಇಡೀ ಎಂಟು ಎಕರೆ ದಾನ ಮಾಡಿದ. ಕೋಲೋದ್‌ನಲ್ಲಿ ಒಬ್ಬ ಬ್ರಾಹ್ಮಣನಿಗೆ ೧೨ ಎಕರೆ ದಾನ ಬಂದಿತ್ತು. ಆತ ಅದಿಷ್ಟನ್ನೂ ಈ ಭೂದಾನ ಯಜ್ಞದಲ್ಲಿ ಅರ್ಪಿಸಿದ. ರಾಮಾಕೋಣದಲ್ಲಿ ಒಬ್ಬ ಕೂಲಿಕಾರ ತನ್ನ ೮ ಎಕರೆ ಹೊಲವನ್ನು ಕೊಟ್ಟ. ವಿನೋಬಾ ಅವನನ್ನು ಅಷ್ಟೂ ಕೊಡಬೇಡ ಎಂದರು. ಅವನು ಒಪ್ಪಲಿಲ್ಲ 'ನಾನು ಕೂಲಿಕಾರ. ಕಷ್ಟಪಟ್ಟು ಹೊಟ್ಟೆ ಹೊರೆಯುತ್ತೇನೆ ಈ ಹೊಲ ಇದ್ದರೆ ಮಕ್ಕಳು ಸೋಮಾರಿಗಳಾಗು ತ್ತಾರೆ.' ಹೀಗೆಂದು ಒತ್ತಾಯಮಾಡಿ ದಾನ ಕೊಟ್ಟ ಡೋಂಗರಪುರದ ಬಡ ಗೋಂಡರು ವಿನೋಬಾಜಿಯನ್ನು ಎರಡು ಗಳಿಗೆ ತಡೆದು ನಿಲ್ಲಿಸಿ ೪-೪ ಎಕರೆ ಹೊಲದಲ್ಲೇ ೧--೧/೨ ಎಕರೆಯಷ್ಟು ನೀಡಿದರು.

ಟಾಕಳೀಯಲ್ಲಿ ವಿನೋಬಾ ಪ್ರವಚನ ಕೇಳಿ ಹೆಂಗಸರೊಳ ಗಿಂದ ಒಬ್ಬಾಕೆ ಎದ್ದು ತನ್ನ ೨ ಎಕರೆ ಹೊಲದಲ್ಲಿ ಒಂದು ಎಕರೆ ದಾನಕೊಟ್ಟಳು. ಲೋಧಾಖೇಡಾದಲ್ಲಿ ಹೇಳತೀರದ ಹುರುಪು. ಊರಿಗೆ ಊರೇ ಉತ್ಸುಕವಾಗಿತ್ತು. ಒಬ್ಬರಾದಮೇಲೊಬ್ಬರು ದಾನ ನೀಡಿ ದರು. ೬೦ ಎಕರೆ ಆಯಿತು ೧೦೦ ಎಕರೆ ಪೂರಾ ಮಾಡುವುದಾಗಿ ಮಾತುಕೊಟ್ಟರು. ಸಂಜೆಯೊಳಗೆ ೧೬೦ ಆಯಿತು. ಸಂಸರ್‌ನಲ್ಲಿ ೫೦೦ ಎಕರೆಗೆ ೩೦-೪೦ ಎಕರೆ ಕಡಮೆ ಇತ್ತು. ಸಂಜೆಯ ಹೊತ್ತಿಗೆ ಅದನ್ನು ಪೂರ್ತಿಮಾಡಿದರು.

ವಿನೋಬಾಜಿ ಒಂದು ಕಡೆ ಕೇಳಿದರು· ' ಈ ಜನಕ್ಕೆ ಏನಾಗಿದೆ? ಹುಚ್ಚು ಹಿಡಿದಿದೆಯೋ ಏನು ? ನನ್ನಂಥ ಫಕೀರನಿಗೆ ಹೊಲ ಕೊಡುತ್ತಾರಲ್ಲ. ಇನ್ನು ಕ್ರಾಂತಿಯನ್ನು ತಡೆಯಲು ಸಾಧ್ಯವಿಲ್ಲ ಎಂದು ಅವರಿಗೆ ತಿಳಿದಿರಬೇಕು. ಚೀನಾದಲ್ಲಿ ರಷ್ಯಾದಲ್ಲಿ ಆದಂಥ ಕ್ರಾಂತಿ ಅವರಿಗೆ ಬೇಕಿಲ್ಲ. ನನ್ನ ಮಾರ್ಗದಿಂದಲೇ ಅಹಿಂಸಕ ಕ್ರಾಂತಿ ಸಾಧ್ಯ ಎಂದು ಅವರಿಗೆ ನಂಬಿಕೆಯಾಗಿರಬೇಕು. ಆದ್ದರಿಂದ ಅವರು ಹೊಲ ಕೊಡುತ್ತ ಹೋಗುತ್ತಿದಾರೆ. ತೆಲಂಗಾಣದಲ್ಲಿ ಕಮ್ಯೂನಿಷ್ಟರ ಹಾವಳಿಗೆ ಹೆದರಿದ ಜಮೀನುದಾರರು ಭೂದಾನ ಕೊಟ್ಟರು ಎಂದು ತಿಳಿದವರು ಈಗ ಅರಿತುಕೊಳ್ಳಲಿ. ಅದೇ ನಿಜ ಎಂದರೆ ಸರ್ವೋದಯಕ್ಕೆ ಮೊದಲು ಸರ್ವನಾಶ ಅತ್ಯಗತ್ಯ ಎಂದು ಆದೀತು. ಆದರೆ ಹಾಗಿಲ್ಲ ಹಿಂದುಸ್ಥಾನದಲ್ಲಿ ಸದ್ಭಾವನೆ ಬೇಕಾದಷ್ಟಿದೆ. ಅದನ್ನು ಜಾಗೃತಗೊಳಿಸುವ ಯೋಗ್ಯ ಮನುಷ್ಯ ಬೇಕು.' ಆಮೇಲೆ ಭೂದಾನ ಯಜ್ಞದ ಬಗ್ಗೆ ಹೀಗೆ ಹೇಳಿದರು—' ಇದು ಕೇವಲ ಹೊಲ ಕೊಡಿಸುವ ಕೆಲಸ ಎಂದು ತಿಳಿಯದಿರಿ. ಇದು ಕ್ರಾಂತಿಯ ಕೆಲಸ. ಅಹಿಂಸಕ ಕ್ರಾಂತಿಗಾಗಿ ಹಿಂದುಸ್ಥಾನದ ಭೂಮಿ ಸಿದ್ಧವಾಗಿದೆ. ಹೊಲದ ಪ್ರಶ್ನೆ ಅಹಿಂಸಕ ಕ್ರಾಂತಿಯಿಂದಲೇ ಪರಿಹಾರವಾಗ ಬಲ್ಲದು '

ನೀಡುವವರಿಗೆ ಹೇಳಿದರು—' ನಾನು ಬೇಡುವ ಹೊಲ ಬಡವರಿಗೆ ಸಲ್ಲಬೇಕಾದುದು. ಬಡವರನ್ನು ದೀನರಾಗಿ ಮಾಡಲು ನನಗೆ ಇಷ್ಟವಿಲ್ಲ. ಈ ಹೊಲವನ್ನು ಅವರಿಗೆ ಹಂಚಿ ಕೊಡುವಾಗ ನಿಮ್ಮ ಹೊಲ ನಿಮಗೆ ಮತ್ತೆ ಸಿಗುತ್ತಿದೆ ಎಂದು ಹೇಳಿಯೇನು.' ಆದ್ದರಿಂದ ಹೊಲ ಬೇಡುವಾಗ ಅವರು ಸ್ಪಷ್ಟವಾಗಿ ' ನಿಮಗೆ ನಾಲ್ವರು ಮಕ್ಕಳಿದ್ದರೆ ನಾನು ಐದನೆಯವ ಎಂದು ತಿಳಿದು ನನ್ನ ಪಾಲನ್ನು ನನಗೆ ಕೊಡಿ' ಎನ್ನುತ್ತಾರೆ. ' ಇವತ್ತು ಕೊಡದವರು ನಾಳೆ ಕೊಟ್ಟಾರು'

ಕೊಡದೆಯೇ ಇರಲಾರರು. ಅವರಿಗೆ ಬೇರೆ ದಾರಿಯಿಲ್ಲ. ನನಗೆ ಭೂದಾನ ನೀಡೆನೆಂಬವರೇ ಈ ಹಿಂದೂಸ್ಥಾನದಲ್ಲಿಲ್ಲ.' ಈ ರೀತಿಯ ಶ್ರದ್ಧೆಯಿಂದ ವಿನೋಬಾ ಮುಂಬರಿಯುತ್ತಾರೆ. ದೂರದ ಸ್ಥಳಗಳಿಂದಲೂ ಸಾವಿರಾರು ಜನ ಅವರ ಭೇಟಿಗಾಗಿ ಬರುತ್ತಾರೆ. ಶಾಂತವಾಗಿ ಅವರ ನುಡಿ ಕೇಳುತ್ತಾರೆ. ತಮಗೆ ಸರಿ ಅನಿಸಿದ್ದನ್ನು ಮಾಡಲು ಯತ್ನಿಸುತ್ತಾರೆ.

ಏಳು ದಿನದಲ್ಲಿ ೧೧೧ ಮೈಲಿ ನಡೆದು ೨೦೦೦ ಎಕರೆ ದಾನ ಪಡೆದಿದಾರೆ ವಿನೋಬಾ. ತೆಲಂಗಾಣದಲ್ಲಿ ದಿನಕ್ಕೆ ೨೦೦ ಎಕರೆ ಸರಾಸರಿ ದೂರೆಯಿತು. ಆ ಲೆಕ್ಕದಿಂದ ಇದು ಒಳ್ಳೆಯ ಪ್ರಾರಂಭ.

ತೆಲಂಗಾಣದ ಯಾತ್ರೆಗಿಂತ ಇದರಲ್ಲಿ ಹಲವು ವಿಶೇಷಗಳಿವೆ. ಈಗ ಎಲ್ಲೆಲ್ಲೂ ಸೃಷ್ಟಿ ಸೊಬಗಿನಿಂದ ನಲಿಯುತ್ತಿದಾಳೆ. ಹೊಲದಲ್ಲಿ ನಿಂತಿರುವ ಪೈರು ಪ್ರತ್ಯಕ್ಷ ಲಕ್ಷ್ಮೀ ದರ್ಶನ ಮಾಡಿಸುತ್ತಿದೆ. ಅಲ್ಲೂ ಗುಡ್ಡ ಬೆಟ್ಟ ಇತ್ತು. ಇಲ್ಲೂ ಇದೆ. ಅಲ್ಲಿ ಗುಡ್ಡಗಳ ಮೇಲೆ ಗಿಡಗಳಿರಲಿಲ್ಲ. ದೊಡ್ಡ ದೊಡ್ಡ ಗುಂಡು ಬಂಡೆ ಇಲ್ಲಿನ ಗುಡ್ಡ ಹಚ್ಚಗೆ ಕಾಣುತ್ತಿವೆ. ಇದೆಲ್ಲ ಹೊರಗಣ ಭೇದ ಮುಖ್ಯವಾಗಿ ಎಲ್ಲೆಲ್ಲಿ ವಿನೋಬಾಜಿ ಹೋಗುತ್ತಾರೋ ಅಲ್ಲಲ್ಲಿ ಒಂದು ಋಷ್ಯಾಶ್ರಮಕ್ಕೆ ಹೋದಂತೆ. ಭಗವಾನ್ ಶ್ರೀರಾಮಚಂದ್ರ ತನ್ನ ಪ್ರವಾಸದಲ್ಲಿ ಹೀಗೇ ಋಷಿ-ಮುನಿಗಳ ದರ್ಶನ ಮಾಡುತ್ತಿದ್ದ. ಅದನ್ನು ನೆನಪು ಕೊಡುವ ಪ್ರಸಂಗ ಹೆಜ್ಜೆ ಹೆಜ್ಜೆಗೂ ಬರುತ್ತವೆ. ಸೇಲಡೋದಲ್ಲಿ ಕುಮಾರಪ್ಪನವರ ಆಶ್ರಮ. ಆ ಹಳ್ಳಿಯಲ್ಲಿ ಅವರ ಸಂಸ್ಪರ್ಶ ಕಾಣುತ್ತಿದೆ. ಅವರು ಅಲ್ಲಿಗೆ ಹೋದಾಗಿನಿಂದ ಎರಡೂ ಹೊತ್ತು ಪ್ರಾರ್ಥನೆ ನಡೆಯುತ್ತದೆ. ಸೂತ್ರಯಜ್ಞದಲ್ಲಿ ಜನರ ಉತ್ಸಾಹ ಹೆಚ್ಚುತ್ತಿದೆ. ಗುಂಗಾಂನಲ್ಲಿ ಪರಾನ ಸೋದರರು ಅನೇಕ ವರ್ಷಗಳಿಂದ ನಿಷ್ಠಾಪೂರ್ವಕ ಸೇವೆ ನಡಸುತ್ತಿದ್ದಾರೆ. ಟಾಕಲೀಯಲ್ಲಿ ಯೋಗಿರಾಜ

ಭನ್ಸಾಲಿ, ವಿನೋಬಾಜೀ ಇಬ್ಬರೂ ವೇದಿಕೆಯ ಮೇಲೆ ಕುಳಿತಿದ್ದು ದನ್ನು ಕಂಡವರು ಮಹಾಸಾಗರವನ್ನೂ ಹಿಮಾಚಲವನ್ನೂ ಒಟ್ಟಿಗೇ ಕಂಡರು. ಧೈರ್ಯ-ಗಾಂಭೀರ್ಯಗಳನ್ನು ಒತ್ತಟ್ಟಿಗೆ ಕಂಡರು. ತೆಲಂಗಾಣ ದಲ್ಲಿ ಇಂಥ ಪ್ರಸಂಗವೇ ಕಡಮೆ. ಅಲ್ಲಿ ಇನ್ನೂ ರಚನಾತ್ಮಕ ಕಾರ್ಯದ ತಳಹದಿ ಹೊಸದು ವಿನೋಬಾಜಿಯ ಯಾತ್ರೆಯೆ ಆ ತಳಹದಿ ಹಾಕಿತು.

ಹೀಗೆ ಈ ಯಾತ್ರೆ ದಿನದಿನಕ್ಕೆ ಗಂಗಾನದಿಯ ಪಾತ್ರದಂತೆ ವಿಶಾಲವಾಗುತ್ತಿದೆ ಅದರ ಫಲಶ್ರುತಿಯ ಬಗ್ಗೆ ಈಗಲೆ ಏನು ಹೇಳಲೂ ಸಾಧ್ಯವಿಲ್ಲ. ಇದು ಕ್ರಾಂತಿಯ ಆರಂಭ ಹಿಂದಿನ ಕಾಲ ದಲ್ಲೂ ದಕ್ಷಿಣ ಭಾರತದ ಆಚಾರ್ಯರು ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೀಗೆ ಕ್ರಾಂತಿ ಮಾಡಿದರು ವಿನೋಬಾಜಿಯ ಯಾತ್ರೆ ಆ ಪರಂಪರೆ ಯನ್ನು ಮುಂಬರಿಸುವಂಥದು ಯುಗಧರ್ಮವನ್ನು ಪಾಲಿಸಲು ಪ್ರೇರಿಸುವಂಥದು ಇದರ ಐತಿಹಾಸಿಕ ಮಹತ್ವವನ್ನು ನಾವು ಅರಿತು ಈ ಚಳುವಳಿಯಲ್ಲಿ ಭಾಗವಹಿಸಬೇಕು.

# ೨. ಗೋಂಡರ ನಾಡು

ವಿನೋಬಾಜಿಯ ಯಾತ್ರೆಯ ಎರಡನೆ ಮಜಲು ಸಾತಪುರಾ ಪರ್ವತಗಳ ನಡುವೆ ಸಾಗಿತು. ಈ ಪರ್ವತ ಪ್ರದೇಶದ ಗೋಂಡರು ಎಲ್ಲೆಲ್ಲೂ ಅವರಿಗೆ ಹೃದಯ ಪೂರ್ವಕ ಸ್ವಾಗತ ನೀಡಿದರು. ಪಾಠಕರ ಅವಗಾಹನೆಗಾಗಿ ಗ್ರಾಮವಾರು ಭೂದಾನದ ಲೆಕ್ಕವನ್ನು ಕೊಟ್ಟಿದೆ:

| ತಾರೀಕು. ಸೆಪ್ಟಂಬರ್ | ಹಳ್ಳಿ | ಜನವಸತಿ | ದಾನವಾಗಿಬಂದ ಭೂಮಿ–ಎಕರೆ |
|---|---|---|---|
| ೧೮ | ಉಮರನಾಲಾ | ೩೦೦ | ೫೦.೮೦ |
| ೧೯ | ಛಿಂದವಾಡಾ | ೩೫೦೦೦ | ೫೪.೦೦ |
| ,, | ಸರನಾ | — | ೩.೫೫ |
| ,, | ಬನಗಾಂ | — | ೧೧.೫೦ |
| ೨೦ | ಸಿಂಗೋಡಿ | ೧೨೯೫ | ೭೯.೫೫ |
| ೨೧ | ಅಮ್ಮರವಾಡಾ | ೨೯೫೫ | ೧೦೮.೧೩ |
| ,, | ಕುನನೂಲ್ | — | ೧.೦೦ |
| ,, | ಜುಂಗಾರವಲೀ | — | ೯.೦೦ |
| ೨೨ | ಸರ್ವಾಕಾಪಾ | ೩೨೦ | ೫೦.೯೫ |
| ೨೩ | ಹರೇಯೀ | ೧೬೬೯ | ೧೦೩೩.೩೩ |
| ೨೪ | ಕಂದೇಲೀ | ೪೮ | ೫.೦೦ |
| ೨೫ | ನರಸಿಂಹಪೂರ್ | ೧೩,೦೦೦ | ೬೨.೯೩ |
| ೨೬ | ಕರೇಲೀ | ೭೦೦೦ | ೩೧೯.೦೦ |
| ೨೭ | ಬರಮಾನ | ೯೩೧ | ೫೨೭.೭೫ |
| | | | ೨,೩೧೬,೪೯ |

ಈ ಅಂಕೆಗಳನ್ನು ನೋಡಿ ಕಣ್ಣು ತೆರೆಯುತ್ತದೆ. ಬಿಂದವಾಢಾ, ನರಸಿಂಹಪೂರ್‌ದಂಥ ದೊಡ್ಡ ಊರುಗಳಲ್ಲಿ ಉತ್ಸಾಹ ಕಾಣಲಿಲ್ಲ. ಹಳ್ಳಿಗಳ ಔದಾರ್ಯ ಮನಸ್ಸನ್ನು ಪ್ರಸನ್ನಗೊಳಿಸುತ್ತದೆ. ಪಟ್ಟಣಗಳೇಕೆ ಇಷ್ಟು ಉತ್ಸಾಹ ಹೀನವಾಗಿವೆ? ಹಳ್ಳಿಗಳಲ್ಲಿ ವಿನೋಬಾಜಿಗೆ ಜನತೆಯ ಸಂಪರ್ಕ ನೇರಾಗಿ ಲಭಿಸುತ್ತದೆ. ಅವರ ಮಾತು ಜನತೆಯ ಸರಲ, ಉದಾರ ಹೃದಯಕ್ಕೆ ತಾಗುತ್ತದೆ. ಅವರು ಬಡವರ ನೋವನ್ನು ಗುರುತಿಸುತ್ತಾರೆ. ಭೂಮಿ-ಹೀನ ನಿರ್ಗತಿಕರ ಸಂಕಟವನ್ನು ಅವರು ಬಲ್ಲರು. ಅದೇ ಅಲ್ಲದೆ ಹಳ್ಳಿಗಳವರ ಭೋಳೇ ಹೃದಯ ಆಕಾಶದಂತೆ ವಿಶಾಲ. ಅವರೊಡನೆ ಸಹಜ ಆತ್ಮೀಯತೆಯಿಂದ ವಿನೋಬಾ ಮಾತಾಡಬಲ್ಲರು. ಅವರು ಒಂದು ಕೈ ಚಾಚಿದರೆ ಹಳ್ಳಿಯವರು ಎರಡೂ ಕೈತುಂಬುವಂತೆನೀಡುತ್ತಾರೆ. ಪಟ್ಟಣಗಳಲ್ಲಾದರೋ ಜಮೀನುದಾರರ ಬಗ್ಗೆ, ಕಾಂಗ್ರೆಸ್ ಕೆಲಸಗಾರರ ಬಗ್ಗೆ ಬರೀ ದೂರು. ಕಾಂಗ್ರೆಸ್ ಕೆಲಸಗಾರರಿಗೆ ಜನತೆಯ ಬಳಿ ಸಾರುವ ಸಾಹಸವಿಲ್ಲ. ಇವರೇ ಜಮೀನುದಾರರು. ಪರರನ್ನು ಕೇಳುವ ಮುನ್ನ ತಾವೇ ನೀಡಬೇಕಲ್ಲ. ಅಲ್ಲದೆ, ಈ ಚಳುವಳಿಯ ಮಹತ್ವ, ದೂರವ್ಯಾಪಿ ಪರಿಣಾಮ ಅವರಿಗೆ ಅರ್ಥವಾಗಿಲ್ಲ.

ತೆಲಂಗಾಣದಲ್ಲಿ ಇದಕ್ಕೆ ವ್ಯತಿರಿಕ್ತ. ಹಳ್ಳಿಯವರು ಎಷ್ಟು ಕೊಡಬಹುದೋ ಅಷ್ಟನ್ನೂ ಮನಸಾರೆ ಕೊಟ್ಟರು. ಪಟ್ಟಣದವರೂ ತಮ್ಮ ಹೊಣೆಯನ್ನು ಅರಿತು ನಡೆದರು. ಒಂದೊಂದು ಪಟ್ಟಣದ ದಾನವೂ ಸಾವಿರ ಎಕರೆಯ ಮೇಲೇ ಬಂತು. ಸೂರ್ಯಾಪೇಟ, ಮಹಬೂಬಾಬಾದ್, ವರಂಗಲ್ ಹಿಂದುಳಿಯಲಿಲ್ಲ. ಒಂದೊಂದೂ ಸಾವಿರ ಸಾವಿರ ಎಕರೆ ಕೊಟ್ಟವು. ಆದಿಲಾಬಾದು ಎರಡು ಸಾವಿರ ಎಕರೆ ಕೊಟ್ಟಿತು. ಆದರೆ ಮಧ್ಯಪ್ರದೇಶದಲ್ಲಿ ಯಾರು ಈ ಕೆಲಸವನ್ನು ಕೈಗೊಂಡಾರು ಎಂದು ನಾವು ನಿರೀಕ್ಷಿಸಿದ್ದೆವೋ, ಯಾರು ತಾವು

ಮುಂಬರಿದು ಇತರ ಜಮೀನುದಾರರಿಂದ ದಾನಕೊಡಿಸಿಯಾರು ಎಂದಿದ್ದೆವೋ, ಅವರು ಸಾಕಷ್ಟು ಪ್ರಯತ್ನಮಾಡಲಿಲ್ಲ. ಆದ್ದರಿಂದ ದಾನ ಬಂದದ್ದೆಲ್ಲ ವಿನೋಬಾಜಿ ಸ್ವಂತ ಬೇಡಿದಾಗ ತಾನೇ ದೊರೆಯಿತು. ಇದಲ್ಲದೆ ವಿನೋಬಾಜಿ ಎಲ್ಲಿಯೂ ಒಂದು ಇರುಳಿಗಿಂತ ಹೆಚ್ಚು ಕಳೆಯರು ಏನು ಸಿಕ್ಕರೂ ಸರಿ, ಅವರಿಗೆ ನಿರಾಶೆಯೆಂಬುದಿಲ್ಲ. ಬಡವರು ರೆಟ್ಟೆ ಮುರಿದು ಗಳಿಸಿದುದರಲ್ಲಿಯೆ ದಾನ ನೀಡಿದರೆ ಭಾಗ್ಯವಂತರೇನು ತಪ್ಪಿಸಿಕೊಂಡಾರೆ? ಇಂದಲ್ಲ ನಾಳೆ, ನಾಳೆಯಲ್ಲದಿದ್ದರೆ ನಾಡಿದ್ದು, ಜನರು ತುಳಿದ ದಾರಿಯನ್ನೆ ತುಳಿಯಬೇಕಾದೀತು. ಇಷ್ಟೇ; ಹೆಜ್ಜೆ ಹಾಕಿದ. ಮೇಲ್ಪಂಗ್ತಿ ಹಾಕಿದ ಕೀರ್ತಿ ಅವರಿಗಿಲ್ಲನಾದೀತು ವಿನೋಬಾ ಹೇಳುತ್ತಾರೆ: 'ಭೂಮಿಯಲ್ಲವೂ ಭಗವಂತನದು, ದರಿದ್ರನಾರಾಯಣನದು ಅದು ಅವನಿಗೆ ಸಂದೀತು ಇವೊತ್ತಿನ ಗಳಿಗೆ ಇದನ್ನೇ ಕೇಳುತ್ತಿದೆ. ಈ ಮಾತು ನನ್ನದಲ್ಲ. ಇದು ಭಗವಂತನ ಇಚ್ಛೆ. ನನ್ನ ಬಾಯಿಂದ ವ್ಯಕ್ತವಾಗುತ್ತಿದೆ, ಅಷ್ಟೆ. ಜನರು ಈ ವಿಚಾರದ ಮಹತ್ವವನ್ನು ಅರ್ಥಮಾಡಿಕೊಂಡಿದಾರೆ. ಅವರ ಹುರುಪು, ಅವರು ನೀಡಿದ ದಾನ– ಎಷ್ಟೇ ಅಲ್ಪವಾದರೂ ಅದರಲ್ಲಿ ಅವರು ಈ ಚಳುವಳಿಗೆ ನೀಡಿದ ಬೆಂಬಲ ಒಡೆದು ಕಾಣುತ್ತದೆ. ದರಿದ್ರನಾರಾಯಣನಿಗಾಗಿ ಬಾಪೂ ದರಿದ್ರನಾರಾಯಣನಿಂದಲೇ ಕವಡೆ-ಕವಡೆ ಸಂಗ್ರಹಿಸಲಿಲ್ಲವೆ?' ಈಗ ೨೦೧ ಜನ ದಾನ ನೀಡಿದಾರೆ. ಅವರಲ್ಲಿ ನೂರು ಎಕರೆಗೆ ಹೆಚ್ಚಾಗಿ ಕೊಟ್ಟವರು ನಾಲ್ವರೇ ಠಾಕುರ ಉದಯಭಾನು ೯೬೩.೩೩ ಎಕರೆ ಕೊಟ್ಟರು. ಉಳಿದವರೆಲ್ಲರೂ ಮಳೆಗಾಲದ ಹನಿಯಂತೆ ಮಳೆಗರೆದರು. ನಮ್ಮ ಹೊಲಗಳಿಗೆ ಈ ನಲವಿನ-ಒಲವಿನ ಚಿಕ್ಕಚಿಕ್ಕ ಹನಿಯೇ ತಾನೆ ಅಮೃತ! ಹಾಗೆಯೇ.

ರಾಮಾಯಣದಲ್ಲಿ ಒಂದು ಸಂದರ್ಭ ಬರುತ್ತದೆ. ಸುಗ್ರೀವ, ಹನುಮಂತ ಇಬ್ಬರೂ ರಾಮನನ್ನು ನೋಡಿದರು. ಹನುಮಂತ

ಮೊದಲನೆ ಸಲದ ದರ್ಶನದಲ್ಲೇ ಪ್ರಭುವನ್ನು ಗುರುತಿಸಿಕೊಂಡ. ಆಗಲೇ ತನ್ನನ್ನು ಪ್ರಭುಪಾದಕ್ಕೆ ಅರ್ಪಿಸಿಕೊಂಡ. ಆದರೆ ಸುಗ್ರೀವ ರಾಮನ ಶಕ್ತಿಯನ್ನು ಕಂಡಮೇಲೆ ಗೆಳೆಯನಾದ. ಬಾಪೂ ಜೀವನ ದಲ್ಲೂ ಇದೇ ಆಯಿತು ಜಮನಾಲಾಲಜೀ, ಮಹಾದೇವ ಭಾಯಿ, ಇನ್ನೊಂದು ಕೆಲವರು ವಿನಾ ಗಾಂಧೀಜಿಯನ್ನು ಗುರುತಿಸಿದ್ದು, ಅರಿತುದು ಎಂದರೆ ಜನತೆ ಮಾತ್ರವೇ. ಬುದ್ಧಿಜೀವಿ ವರ್ಗವಂತೂ ಎಲ್ಲರೂ ಅರಿತಮೇಲೆ ಅರಿಯಿತು. ಅವರ ಪರೀಕ್ಷೆಯಲ್ಲಿ ಗಾಂಧೀಜಿ ಉತ್ತೀರ್ಣರಾದ ಮೇಲೆ ಅವರು ಗಾಂಧೀಜಿಯ ಬಳಿಗೆ ಬಂದರು. ಹೀಗೇ ಪಂಜಾಬಿನ ಮೇವಾಗಳು, ತೆಲಂಗಾಣದ ಜನತೆ, ಸಾತ ಪುರಾದ ಗೋಂಡರು ಒಂದೇ ಗಳಿಗೆಯಲ್ಲಿ ಈ ಮನುಷ್ಯ ನಮ್ಮ ಹಿತಚಿಂತಕ, ನಿಜವಾದ ಸೇವಕ ಎಂದು ವಿನೋಬಾಜಿಯನ್ನು ಅರಿತುಕೊಂಡರು. ವಿನೋಬಾಸಂದೇಶ, ಚಳುವಳಿ, ಅದರ ಕ್ರಾಂತಿಕಾರಕ ಮಹತ್ವ ಭಾರತಕ್ಕೆ ಮಾತ್ರವೇ ಅಲ್ಲ, ಯುದ್ಧದಿಂದ ಜರ್ಜರಿತವಾದ ಇಡೀ ಲೋಕಕ್ಕೆ ಏನೆಂಬುದನ್ನು ನಮ್ಮ ರಾಜಕೀಯ ಕೆಲಸಗಾರರು ತಿಳಿದುಕೊಳ್ಳಲಿಲ್ಲ. ಅದಕ್ಕೂ ಸಮಯ ಬಂದೀತು. ಅಹಿಂಸೆಯಲ್ಲಿ ಆತುರ-ಅಧೀರತೆಗಳಿಗೆ ಎಡೆಯಿಲ್ಲ ನಾವಂತೂ ಅವರಿಗಾಗಿ ಕಾಯುತ್ತಿದೇವೆ. ಆದರೆ ಆ ದಿನ ಬೇಗ ಬರುವಂತೆ ಸರ್ವೋದಯ ಸೇವಕರುಪ್ರಯತ್ನ ಮಾಡಬೇಕು.

ಹೀಗೆ ನಾವು ಸಾತಪುರಾ ಬೆಟ್ಟಗಳನ್ನು ದಾಟಿದೆವು ಇಡೀ ಪ್ರದೇಶವೇ ರಮಣೀಯವಾಗಿದೆ. ೩೦೦೦ ಅಡಿ ಎತ್ತರ, ೭೫ ಮೈಲಿ ಉದ್ದ, ೨೪ ಮೈಲಿ ಅಗಲದ ಸೀಮೆ. ನೆಲ ಬಹಳ ಸಾಮಾನ್ಯ. ಆದರೆ ೨೩ ನೆ ಸೆಪ್ಟೆಂಬರ್ ದಿನ ನಾವು ತಂಗಿದ ಜಾಗೀರಿನ ಹಳ್ಳಿಯ ನೆಲ ಉತ್ತಮವಾದುದು. ಇಲ್ಲಿನ ಜನಕ್ಕೆ ಗೋಂಡಿ ಭಾಷೆಗಿಂತ ಹಿಂದಿಯೇ ಹೆಚ್ಚಾಗಿ ಬರುತ್ತದೆ. ಇಲ್ಲಿ ಜನವಸತಿ

ಚದರಮೈಲಿಗೆ ೮೮ ಜನ. ಹಳ್ಳಿಗಳಲ್ಲಿ ೮೨ ಜನ. ಪಟ್ಟಣಗಳ ಜನ ಇಡೀ ಜನಸಂಖ್ಯೆಯಲ್ಲಿ ಶೇ. ೭, ರಷ್ಟು. ಛಿಂದವಾಡಾ ಒಂದರಲ್ಲೇ ಶೇ. ೪. ಜಾಗೀರುಗಳಲ್ಲಿ ಪಟ್ಟಣಗಳೇ ಇಲ್ಲ. ಈ ಅಂಕೆಗಳಿಂದ ಕಾಣಬರುವುದಕ್ಕಿಂತ ಹೆಚ್ಚು ಜನ ಬೇಸಾಯ ಮಾಡುತ್ತಾರೆ. ಛಿಂದ ವಾಡಾ ಸೀಮೆ ಮೊದಲು 'ಗೋವಳ'ರ ರಾಜ್ಯವಾಗಿತ್ತು. ಆಮೇಲೆ ಗೋಂಡರದು. ಗೋಂಡರಿಂದ ರಾಜ್ಯ ಮರಾಠರಿಗೆ ಹೋಯಿತು. ಅವರಿಂದ ಇಂಗ್ಲೀಷರಿಗೆ. ಗೋಂಡರು ೬೦ ವರ್ಷದ ಹಿಂದಿನವರೆಗೂ ಸ್ವತಂತ್ರರಾಗಿದ್ದಂತೆ ಕಾಣುತ್ತದೆ. ಅವರ ಅರ್ಥ-ವ್ಯವಸ್ಥೆಯ ಶೋಧನೆಯಾಗಬೇಕು ಗೋಂಡರ ರಾಜ್ಯದಲ್ಲಿ ಕಾಳುಗೂಲಿ ಕೊಡು ತ್ತಿದ್ದರು. ಬೇಸಾಯ ಕೈಯಿಂದ ಆಗುತ್ತಿತ್ತು.

ಗೋಂಡ ಜಾಗಿರದಾರ ಶ್ರೀ ಉದಯಭಾನು ಷಹಾ ತನ್ನ ಉದಾರ ಕಾಣಿಕೆ ಸಲ್ಲಿಸಿದಾಗ ವಿನೋಬಾ ಹಳ್ಳಿಯವರಿಗೆ ಹೀಗೆ ಹೇಳಿದರು—'ಈ ಕಾಣಿಕೆ ನಲ್ಲಿಯ ನೀರಿನ ದಪ್ಪ ಧಾರೆಯಿದ್ದಂತೆ. ಆದರೆ ನೆಲದ ನೀರಡಿಕೆ ಮಳೆಯ ಹನಿಯಿಂದ ತಣಿದೀತು. ಅದನ್ನು ನೀವು ಮಾಡಬೇಕು.' ಇಷ್ಟು ಹೇಳಿದರೋ ಇಲ್ಲವೋ ಮಳೆಯೇ ಸುರಿಯಿತು. ಒಬ್ಬರ ಹಿಂದೊಬ್ಬರು! ೭೦ ಎಕರೆ ದಾನ ಬಂತು.

ವಿನೋಬಾಜಿ ಠಾಕೂರಸಾಹೇಬನಿಗೆ ಹೇಳಿದರು: 'ಈ ದಾನದಿಂದ ನೀವು ಸಂತುಷ್ಟರಾಗಬೇಡಿ. ಕೆಲವರು ಯುವಕರನ್ನು ಸೇವಾಗ್ರಾಮಕ್ಕೆ ಕಳಿಸಿ. ಅವರಿಗೆ ಸರ್ವೋದಯ ಕೆಲಸದ ಶಿಕ್ಷಣ ಕೊಡಿಸಿ. ಅವರು ಗೋಂಡವಾನವನ್ನು ಪುನರ್‌ನಿರ್ಮಿಸಿಯಾರು.' ಜಮನಾಲಾಲರ ಉದಾಹರಣೆ ಕೊಟ್ಟು ವಿನೋಬಾ ಹೇಳಿದರು—'ಆತ ವರ್ಧಾದಲ್ಲಿ ಎಷ್ಟು ಕೆಲಸ ಮಾಡಿದಾರೋ ನೋಡಿ. ನೀವು ಅವರ ಮೇಲ್ಪಂಗ್ತಿಯಂತೆ ನಡೆಯಿರಿ'

ಹೊಲವನ್ನು ಬೇಡುವುದರಲ್ಲೂ ವಿನೋಬಾದು ಒಂದು ವಿಶಿಷ್ಟ ರೀತಿ. ಅವರ ದರ್ಶನಕ್ಕಾಗಿ ಹಳ್ಳಿಯ ಜನ ಉತ್ಸುಕರಾಗಿ ದಾರಿಯುದ್ದಕ್ಕೂ ನಿಂತಿರುತ್ತಾರೆ. ವಿನೋಬಾ ಬಂದು ಅವರ ನಡುವೆ ಒಂದು ಮಂಚದ ಮೇಲೆ ಕೂಡುತ್ತಾರೆ ಪ್ರೀತಿಯಿಂದ ಜನರ ಬೆನ್ನು ಸವರುತ್ತಾರೆ ಐದೇ ನಿಮಿಷದಲ್ಲಿ ತಮ್ಮ ಕೆಲಸ, ಅದರ ಮಹತ್ವ ತಿಳಿಸಿಬಿಡುತ್ತಾರೆ. ಕೂಡಲೆ ಭೂದಾನ ಸಿಗಲು ಪ್ರಾರಂಭ. ಒಮ್ಮೆ ಒಂದೆಕರೆ, ಒಮ್ಮೆ ಐದು, ಒಮ್ಮೆ ಎಂಟು- ಹೀಗೆ. ಮುಗಿದಕೂಡಲೆ ಎದ್ದು ನಿಲ್ಲುತ್ತಾರೆ. ಮುಂದಕ್ಕೆ ಪಯಣ ಬೆಳೆಸುತ್ತಾರೆ. ಒಂದು ಕಡೆ ಒಬ್ಬ ಹಳ್ಳಿಯ ತಮ್ಮ ಒಂದು ಹೂಮಾಲೆ ತಂದ. 'ಏನು, ನಾನು ಹೂಮಾಲೆಗಳಿಗಾಗಿ ಬಂದೆನೇ ? ಪರಂಧಾಮದಲ್ಲೇ ನನಗೆ ಮಾಲೆ ಸಿಗುತ್ತವೆ ನನಗೆ ಬಡವರಿಗಾಗಿ ಹೊಲ ಬೇಕು. ಕೊಡುವಹಾಗಿದ್ದರೆ ಹೊಲ ಕೊಡಿ' ಎಂದರು. ಹೀಗೆ ಮಾತುಕತೆ ನಡೆಯುತ್ತದೆ. ಕೇಳುತ್ತ ನಿಂತವರ ಎದೆ ಬಿರಿಯುತ್ತದೆ, ಮನಸ್ಸು ಕರಗುತ್ತದೆ. ತಮ್ಮ ಕೈಲಾದುದನ್ನು ತಂದಿಡುತ್ತಾರೆ. ಕಛೇರಿಗಳಲ್ಲಿ ಒಂದೊಂದು ಗೇಣು ನೆಲಕ್ಕಾಗಿಯೂ ಜನರು ಹೊಡೆದಾಡುತ್ತಾರೆ; ಬಿಟ್ಟುಕೊಡರು. ಇಲ್ಲಿ ಇಷ್ಟಪಟ್ಟು ತ್ಯಾಗಪೂರ್ವಕ ನೆಲ ಕೊಡುತ್ತಾರೆ ಈ ವಿಚಾರ ಬೇರೂರುತ್ತಿದೆ, ಹಬ್ಬುತ್ತಿದೆ.

ಒಂದೊಂದು ಹಳ್ಳಿಯಲ್ಲೂ ಒಂದೊಂದು ರೀತಿಯಾಗಿ ವಿನೋಬಾ ತಮ್ಮ ಮಾತನ್ನು ಇಡುತ್ತಾರೆ. ಹೊಸ ಹೊಸ ಪರಿ. ಹೊಸ ಮಾತು, ಹೊಸದಾರಿ-ಅದೇ ತರ್ಕ. ಈ ಕೆಲಸವೇ ಅಷ್ಟು ದೊಡ್ಡದು. ಅವರಿಗೆ ಸದಾ ಹೊಸ ಹೊಸ ಪ್ರೇರಣೆಕೊಡುತ್ತಲಿದೆ. 'ಸೂರ್ಯ ಮನೆಮನೆಗೂ ಹೋಗುತ್ತಾನೆ. ಸೂರ್ಯನ ಬೆಳಕು ರಾಜನಿಗೆ ಸಿಕ್ಕಷ್ಟೇ ಭಂಗೀಗೂ ಸಿಗುತ್ತದೆ. ಭಗವಂತ ತನ್ನ ಸೃಷ್ಟಿಯನ್ನು ವಿಷಮವಾಗಿ ಹಂಚಿಲ್ಲ. ಎಲ್ಲವೂ ಸಮ. ಗಾಳಿ ನೀರು

ಬೆಳಕು ಮುಗಿಲುಗಳನ್ನು ಭೇದಭಾವವಿಲ್ಲದೆ ಎಲ್ಲರಿಗೂ ಕೊಟ್ಟಿದಾನೆ. ನೆಲವನ್ನು ಮಾತ್ರ ಒಂದು ಹಿಡಿ ಜನಕ್ಕೆ ಕೊಡಬಲ್ಲನೆ? ಇದು ಸಾಧ್ಯವೆ? ಆದನ್ನೇಕೆ ನಾವು ಸಮವಾಗಿ ಹಂಚಿಕೊಂಡಿಲ್ಲ? ಭೂಮಿಯಿದ್ದವರು ಅಪ್ರಾಮಾಣಿಕತೆಯಿಂದ ಅದನ್ನು ಗಳಿಸಿದರು ಎನ್ನುವುದಿಲ್ಲ ನಾನು. ಕೆಲವರು ತಮ್ಮ ಸೇವೆಗೆ ಪುರಸ್ಕಾರವಾಗಿ ಪಡೆದಿದ್ದಾರು. ಕೆಲವರು ಬಹಳ ಶ್ರಮಿಸಿ ದುಡಿದು ಗಳಿಸಿದ್ದಾರು. ಆದರೆ ಅನುಚಿತ ಉಪಾಯುಗಳಿಂದ ನೆಲಪಡೆದವರೂ ಕಡಮೆಯಿಲ್ಲ. ಅದೇನೇ ಇರಲಿ, ಇಂದಿನ ಪರಿಸ್ಥಿತಿ ಹೀಗೆ: ಒಂದು ಹಿಡಿ ಜನಕ್ಕೆ ಬೇಕಾದಷ್ಟು ನೆಲವಿದೆ. ಹೆಚ್ಚಾದ ಜನಕ್ಕೆ ಒಂದು ಮೊಳ ನೆಲವೂ ಇಲ್ಲ. ಇದು ಭಗವಂತನ ಇಷ್ಟಕ್ಕೆ ವಿರುದ್ಧ. ಕಡೆಗೆ ಲೋಕದಲ್ಲಿ ದೇವರ ಇಚ್ಛೆಯೇ ನಡೆಯ ಬೇಕು. ಜನರಿಗೆ ಹೀಗೆ ತಿಳಿಸಿಹೇಳಿ ಪ್ರೀತಿಯಿಂದ ಅವರು ಬಡವರಿಗಾಗಿ ಹೊಲ ನೀಡುವಂತೆ ಬೇಡುವ ಈ ಕ್ರಾಂತಿಕಾರಿ ಕಾರ್ಯಕ್ರಮಕ್ಕೆ ನನ್ನನ್ನು ನಿಮಿತ್ತವಾಗಿ ಮಾಡಿದುದು ಅದಕ್ಕೇ ಇರಬೇಕು. ಇಲ್ಲದಿದ್ದರೆ, ಬಡವರಿಗೆ ಹಂಚಿಬಿಡಿ ಎಂದು ಜನ ಹೀಗೆ ಸ್ವೇಚ್ಛೆಯಿಂದ ನನಗೆ ನೆಲವನ್ನು ದಾನಮಾಡುತ್ತಿದಾರಲ್ಲ. ನನ್ನಲ್ಲೇನು ಶಕ್ತಿಯಿದೆ?'' ಈ ಸತ್ಯ ಯಾರ ಬಾಯಿಂದಾದರೂ ಹೊರಬೀಳಬೇಕಾಗಿತ್ತು. ಇದಕ್ಕೆ ವಿನೋಬಾಗಿಂತ ಯೋಗ್ಯರು ಯಾರು? ಯಾರಿಗೆ ಸರ್ವೇಜನರ ಕಲ್ಯಾಣ ವಿನಾ ಬೇರಾವ ಇಚ್ಛೆಯೂ ಇಲ್ಲವೋ, ಎಲ್ಲರ ಬಗ್ಗೆಯೂ ಸದಿಚ್ಛೆ-ಬಡವರ ಸೇವೆ ವಿನಾ ಬೇರೆ ಭಾವನೆಯೂ ಯಾರಿಗೆ ಇಲ್ಲವೋ ಅಂಥ ವಿನೋಬಾ! ನರಸಿಂಹ ಪುರದ ಪ್ರಾರ್ಥನಾ ಪ್ರವಚನದಲ್ಲಿ ಹೀಗೆ ಹೇಳಿದರು—'ನಿಮ್ಮಿಂದ ನಾನು ಹೊಲ ಬೇಡುತ್ತೇನೆ. ಇದರಲ್ಲಿ ನನಗೆ ವಿನಯ, ಸಂಕೋಚ ಇಲ್ಲ. ನಿಮಗೂ ನೀಡುವಾಗ ಇದು ದೊಡ್ಡ ಔದಾರ್ಯ ಎನಿಸಬಾರದು. ಬಡವರ ಪರವಾಗಿ ಅವರ ನ್ಯಾಯವಾದ ಪಾಲು ಕೇಳುತ್ತಿದೇನೆ.'

ವಿನೋಬಾಗೆ ನೆಲದಾಯಿಯ ಮಗ ಪ್ರತಿಯೊಬ್ಬನಿಗೂ ಭೂಮಾತೆಯ ಮೇಲೆ ಸಮಾನಾಧಿಕಾರ ಎಂಬುದನ್ನು ಜನ ಅರಿಯಲಿ ಎಂದು.

ತಮ್ಮ ಚಳುವಳಿಯ ವಿಚಾರದ ಹಿನ್ನೆಲೆ ತಿಳಿಸುತ್ತಾ ಹೇಳಿದರು. 'ನಿಮ್ಮ ಅಗತ್ಯಗಳನ್ನು ನೀವು ನಿರ್ಧರಿಸಿ ಅದರಂತೆ ನಿಮ್ಮ ಯೋಜನೆ ಮಾಡಿಕೊಳ್ಳಿ. ಲೋಕ ತಪ್ಪುದಾರಿ ನಡೆಯುತ್ತಿದೆ. ನೀವು ನಿಮ್ಮಲ್ಲಿ ಶುದ್ಧ ಜೀವನದ ಯೋಜನೆಮಾಡಿದರೆ ಲೋಕದ ಅಧೋಗತಿ ನಿಂತೀತು. ಹೊಲದ ಹಂಚಿಕೆ ಉಚಿತ ರೀತಿ ಆಗುವ ವರೆಗೆ ಅದು ಸಾಧ್ಯವಿಲ್ಲ. ಕಾನೂನಿನ ಬಲ, ಹಿಂಸೆಯ ಬಲ ಇಲ್ಲದೆ ಈ ಹಂಚಿಕೆ ಆಗಲಾರದೆ ಎಂಬುದೇ ಪ್ರಶ್ನ ಚೀನಾ ರಷ್ಯಾಗಳಿಂದ ಪಾಠ ಕಲಿಯಿರಿ. ತೆಲಂಗಾಣದಲ್ಲಿ ಹಿಂಸೆಯ ವ್ಯರ್ಥತೆ, ಅಹಿಂಸಕ ಕ್ರಾಂತಿಯ ಶಕ್ತಿ ಕಂಡುಬಂದಿತು. ಅಲ್ಲಿ ಹಿಂಸೆ, ಕಾನೂನು ಎರಡೂ ವಿಫಲವಾಗಿವೆ. ಕಾನೂನು ರಚಿಸುವವರಿಗಿಂತ ಅದನ್ನು ಮುರಿಯುವವರಿಗೇ ಅದರ ದೌರ್ಬಲ್ಯ ಗೊತ್ತು. ಕಾನೂನು ಮಾಡಲೇ ಬೇಕಾದರೂ ಉತ್ತಮವಾದುದನ್ನು ಮಾಡಬೇಕು. ಅದಕ್ಕೆ ಅನುಕೂಲವಾದ ಗಾಳಿ ಭೂದಾನದಿಂದ ಹುಟ್ಟೀತು.

ಬೇಡಿದ ಮಾತ್ರಕ್ಕೆ ಹೊಲ ಕೊಡುವವರು ಯಾರು ಎಂದು ಮೊದಮೊದಲ ಅನಿಸುತ್ತಿತ್ತು. ದಾನ ಸಿಗಲು ಪ್ರಾರಂಭವಾದಮೇಲೆ ಈ ಚಿಕ್ಕಪುಟ್ಟ ದಾನದಿಂದ ಏನಾದೀತು ಎಂದರು ವಿನೋಬಾ ಹೇಳಿದರು : ' ಈ ಮಾತು ಸರಿ, ನೀವೇ ನಿರ್ಧರಿಸಿ—ನೀವು ಎಷ್ಟು ಹೊಲ ಕೊಟ್ಟೀರಿ? ಎಷ್ಟು ಹೊಲ ಆದರೆ ಈ ಸಮಸ್ಯೆ ಹರಿದೀತು? ನಿಮ್ಮ ಹೊಲದ ಅಧಿಕಾರ ತ್ಯಾಗಮಾಡಿ ಎನ್ನುತ್ತೇನೆ. ಹೊಲದ ಒಡೆತನ ಎಂಬುದು ನ್ಯಾಯವೂ ಅಲ್ಲ, ಉಚಿತವೂ ಅಲ್ಲ. ಸರಕಾರ ವೇಕೆ ಈ ಕೆಲಸ ಮಾಡಬಾರದು ಎಂದು ಜನ ಕೇಳುತ್ತಾರೆ. ಈ ಪ್ರಶ್ನೆಯೇ ನನಗೆ ಅರ್ಥವಾಗದು. ಸರಕಾರ ಬೇರೆ ಜನ ಬೇರೆಯೆ?

ಜನ ಏನು ಬೇಡುತ್ತಾರೋ ಅದನ್ನೇ ಸರಕಾರ ಮಾಡೀತು.' ತೆಲಂಗಾಣದಲ್ಲಿ ಹೇಗೆ ಹೊಲ ಹಂಚುತ್ತಿದಾರೋ ವಿನೋಬಾಜೀ ಹೇಳುತ್ತಾರೆ· "ಅಲ್ಲಿ ನಮ್ಮ ಕೆಲಸಗಾರರು, ತನ್ನ ಕನ್ಯೆಗೆ ಯೋಗ್ಯ ವರನನ್ನು ಹುಡುಕುವ ತಂದೆಯಂತೆ, ಭೂಮಿ-ಹೀನ-ಸೋದರರನ್ನು ಹುಡುಕುತ್ತಿದಾರ. ಕೇಳುವವರೇ ಇಲ್ಲದೆ ಎಲ್ಲೋ ಮೂಲೆಯಲ್ಲಿ ಬಿದ್ದಿರುವವನಿಗೆ ಏಕಾಏಕಿ ಒಂದು ದಿನ ಬೆಳಗಾದಾಗ ದೇವರೇ ಮನೆಗೆ ಬಂದಂತೆ ಬಂದು, ಇದೋ ಹಿಡಿ ಈ ಹೊಲ ನಿನ್ನದು ಎಂದಾಗ ಆ ಬಡವರಿಗೆ ಎಷ್ಟು ಹಿಗ್ಗಾದೀತೋ ಊಹಿಸಿ ಅವನಿಗೆ ಕನಸಿನಲ್ಲಿ ಕೂಡ ಈ ಆಸೆಯಿರಲಿಲ್ಲ ಅಂಥದು ನಡೆದುಹೋಯಿತು. ನೋಡಿ ಇದು ಅಹಿಂಸಕ ಕ್ರಾಂತಿ!"

ಬರೇಲಿಯಲ್ಲಿ ಎಕರೆಗೆ ೧,೦೦೦ ರೂಪಾಯಿ ಬೆಲೆಯ ೩೦೦ ಎಕರೆ ಹೊಲ ದೊರೆಯಿತು ಅದಕ್ಕಾಗಿ ಕೆಲಸಗಾರರು ಸ್ವಲ್ಪವೂ ಪ್ರಯತ್ನಿಸಲಿಲ್ಲ. ಜನರು ತಾವೇ ನೀಡಿದರು. ವಿನೋಬಾಜಿಯ ಬಾಯಿಂದ ಸಂದೇಶ ಕೇಳಿದ್ದೇ ತಡ, ಅವರಿಗೆ ಪ್ರೇರಣೆಯಾಯಿತು. ಕೆಲಸಗಾರರು ಈ ಸಂದೇಶವನ್ನು ಅಕ್ಕಪಕ್ಕದಲ್ಲಿ ಹರಡಿದರೆ, ಸಂಘಟಿತ ಪ್ರಯತ್ನಮಾಡಿದರೆ ಇನ್ನೂ ಹೆಚ್ಚು ಹೊಲ ಸಿಗುವುದು ಕಷ್ಟವಲ್ಲ. ಈ ಬಗ್ಗೆ ಒಂದು ನಿಶ್ಚಿತ ಕಾರ್ಯಕ್ರಮವನ್ನು ವಿನೋಬಾ ರೂಪಿಸುತ್ತಿದಾರೆ. ಅದನ್ನು ಇದಿರು ನೋಡುತ್ತಿದೇವೆ.

ಈ ವಾರದಲ್ಲಿ ಇನ್ನೊಂದು ಮಹತ್ವದ ಸಂಗತಿ ನಡೆಯಿತು. ಅದನ್ನು ಬರೆಯಲೇಬೇಕು. ನಾವು ಉಮರನಾಲಾದಲ್ಲಿ ಇದ್ದೆವು. ಅದು ಸ್ವಾಮಿ ಸೀತಾರಾಮರ ಉಪವಾಸದ ೩೪ ನೆ ದಿನ. ಸ್ವಾಮಿಗಳ ಚಿಂತೆಯಿಂದ ವಿನೋಬಾಜಿ ವಿಷಣ್ಣರಾಗಿದ್ದರು. "ಇಂಥ ದೊಡ್ಡ ಸೇವಕನನ್ನು ನೀಗಲು ನಮಗೆ ಸಾಧ್ಯವೆ?" ಎಂದುಕೊಳ್ಳುತ್ತಿದ್ದರು. ಪ್ರಧಾನ ಮಂತ್ರಿಗಳಿಗೆ ತಂತಿ ಕೊಟ್ಟು ಸುದ್ದಿ ಕೇಳಿದರು.

ಜವಾಹರಲಾಲರು ಕೂಡಲೆ ಎಲ್ಲವನ್ನೂ ತಿಳಿಸಿ ಉತ್ತರಕೊಟ್ಟರು. ತಮ್ಮ ಪ್ರಯತ್ನ ಏನು, ಆಂಧ್ರಪ್ರಾಂತ ನಿರ್ಮಾಣಕ್ಕೆ ಏನೇನು ಅಡಚಣೆ ಇವೆ ಎಂಬುದನ್ನು ತಿಳಿಸಿದರು ಛಿಂದವಾಡಾದಿಂದ ಗುಂಟೂರಿಗೂ ದಿಲ್ಲಿಗೂ ತಂತಿ-ಟೆಲಿಫೋನು ನಡದೇ ನಡೆದವು. ರಾತ್ರಿ ೧೦ ಘಂಟೆಗೆ ಸ್ವಾಮಿಗಳ ಕಾರ್ಯದರ್ಶಿಗೆ ವಿನೋಬಾ ಈ ಸಂದೇಶ ಕಳಿಸಿದರು. 'ಕೃಪೆಮಾಡಿ ಸದ್ಯಕ್ಕೆ ಉಪವಾಸ ಬಿಟ್ಟುಬಿಡಿ. ಪರಿಸ್ಥಿತಿ ನೋಡಿದರೆ ಉಪವಾಸದಿಂದ ಕೆಲಸ ಕೆಡುತ್ತಿದೆ ಎನಿಸುತ್ತಿದೆ. ಉಪವಾಸ ತ್ಯಾಗದಿಂದ ಕೆಲಸ ಆಗಲು ಸಹಾಯವಾಗುತ್ತದೆ. ಜವಾಹರಲಾಲರು ಪೂರ್ಣ ಪ್ರಯತ್ನ ಮಾಡುತ್ತಿದಾರೆಂದು ನನಗೆ ಅನಿಸುತ್ತಿದೆ."

ಸ್ವಾಮಿಗಳು ಉಪವಾಸ ಕೈಬಿಟ್ಟರು ಆದರೆ ಇದುವರೆಗೂ ಸರಕಾರದ ಘೋಷಣೆ ಹೊರಟಿಲ್ಲ. ಇದರಿಂದ ಆಂಧ್ರರು ಚಿಂತಾ ಕುಲರಾಗಿದ್ದಾರೆ ಆವರೆ ವಿನೋಬಾಜಿಯ ಸಲಹೆ ಕೇಳದೆ ಹೊಸ ಹೆಜ್ಜೆ ಇಡುವುದಿಲ್ಲವೆಂದು ಸ್ವಾಮಿಗಳು ಮಾತು ಕೊಟ್ಟಿದಾರೆ. ರಾಷ್ಟ್ರ ಪತಿ, ಪ್ರಧಾನ ಮಂತ್ರಿ, ಇಬ್ಬರೂ ಈ ಬಗ್ಗೆ ಪ್ರಯತ್ನ ನಡೆಸಿದಾರೆ ಎಂದು ವಿನೋಬಾ ಅವರಿಗೆ ಭರವಸೆ ಕೊಟ್ಟಿದಾರೆ.

ಈ ವಾರ ವಿನೋಬಾಜಿಯ ಆರೋಗ್ಯ ಚೆನ್ನಾಗಿಲ್ಲ ದಿನವೂ ೨೦—೨೧ ಮೈಲಿ ನಡೆಯಬೇಕು. ಅದೂ ಸಾತಪುರ ಗುಡ್ಡಗಳ ದಾರಿ ಯಲ್ಲಿ. ಊಟವಾದ ಮೇಲೆ ಸ್ವಲ್ಪ ವಿಶ್ರಾಂತಿ ಪಡೆದರೆ ಅವರಿಗೆ ಆಹಾರ ಜೀರ್ಣವಾಗುತ್ತದೆ. ಆದರೆ ಈಗ ಆ ವಿಶ್ರಾಂತಿ ಅವರಿಗೆ ಸಿಗುತ್ತಿಲ್ಲ. ಸಾಲದುದಕ್ಕೆ ಈಗ ಅವರು ಕಡಲೆಕಾಯಿ ರುಬ್ಬಿ ಅದರ ಹಾಲನ್ನು ಕುಡಿಯುವ ಪ್ರಯೋಗ ನಡೆಸಿದಾರೆ. ಇದೆಲ್ಲದರಿಂದ ಅವರ ಆರೋಗ್ಯ ಕೆಟ್ಟಿದೆ. ಕರುಳು ನುಲಿವಾಗಿ ಭೇದಿಯಾಗುತ್ತಿದೆ—೩ ದಿನ ಎಂಟೆಂಟು ಸಲ ಭೇದಿಯಾಯಿತು. ಸರ್ಪ್ಲಾಕಾಪ್, ಹರಯೀ ಗ್ರಾಮ

ಗಳಿಗೆ ಕಷ್ಟಪಟ್ಟು ಹೋದರೂ ಮಾತನಾಡಲಾಗಲಿಲ್ಲ ಅಷ್ಟು ನಿತ್ರಾಣ. ದಾರಿ ನಡೆವಾಗ ಅಲ್ಲಲ್ಲಿ ಮರದ ಕೆಳಗೆ ವಿಶ್ರಾಂತಿಗಾಗಿ ನಿಲ್ಲಬೇಕಾಗುತ್ತದೆ. ಹೊಟ್ಟೆ ಇಷ್ಟು ದುರ್ಬಲವಾದಾಗ ೧೫-೨೦ ಮೈಲಿ ನಡೆವುದು ಮೈಗೆ ಅಸಹ್ಯವಾಗುತ್ತದೆ. ಆರೋಗ್ಯ ಸುಧಾರಿಸುವ ವರೆಗೆ ಒಂದು ಸ್ಥಳದಲ್ಲಿ ತಂಗಲು ವಿನೋಬಾಜಿ ಒಪ್ಪರು. ಅಕ್ಟೋಬರ್ ೧-೨ ಕ್ಕೆ ಸಾಗರದಲ್ಲಿ ನಡೆವ ಸರ್ವೋದಯ ಸಮ್ಮೇಳನಕ್ಕೆ ಹೋಗಲೇಬೇಕು ಎಂದು ಅವರ ನಿಶ್ಚಯ. ಬಹಳ ಬಲವಂತದಿಂದ ಕರೇಲಿಯಲ್ಲಿ ಒಂದು ದಿನ ತಂಗಲು ಒಪ್ಪಿದರು. ಆಹಾರದಲ್ಲಿ ಪರಿವರ್ತನೆ ಮಾಡಿ ರೋಗವನ್ನು ಹಿಡಿತಕ್ಕೆ ತಂದರು ಈಗ ಆರೋಗ್ಯವಾಗಿದಾರೆ. ಯಾತ್ರೆ ಸರಿಯಾಗಿ ನಡೆಯುತ್ತಿದ. ದೈನಿಕ ಕಾರ್ಯಕ್ರಮದಲ್ಲಿ ಸ್ವಲ್ಪ ಹೆಚ್ಚು ಕಡಮೆಯಾಯಿತು. ಮೊದಲು ೩-೩೦ ಕ್ಕೆ ಏಳುತ್ತಿದ್ದವರು ಈಗ ೩ ಕ್ಕೆ. ನಾವು ೫ ಗಂಟೆಯ ಬದಲು ೪ ಗಂಟೆಗೇ ಪ್ರಯಾಣ ಹೊರಡುತ್ತೇವೆ. ಬೆಳಗಿನ ತಂಪು ಹೊತ್ತಿನಲ್ಲೇ ಪ್ರಯಾಣ ಸಾಗುತ್ತಿದೆ. ಬಿಸಿಲಿನ ಬೇಗೆ ತಪ್ಪುತ್ತಿದೆ.

**ನರ್ಮದಾ ಘಟ್ಟದಲ್ಲಿ :** ನರ್ಮದಾತಟದ ಬರಮಾನ ಗ್ರಾಮಕ್ಕೆ ವಿನೋಬಾ ತಲಪಿದಾಗ ಅಲ್ಲಿನ ನೋಟವನ್ನುನೋಡಿ ನಮಗೆ ಪರಂಧಾಮ ಆಶ್ರಮದ ನೆನಪಾಯಿತು. ನರ್ಮದಾ ಎಂದರೆ ವಿನೋಬಾಗೆ ಹೆಚ್ಚು ಪ್ರೀತಿ. ಅದರ ಅರ್ಥವೇ ಸುಖದಾಯಿ ಎಂದು. ಇದು ಉತ್ತರ-ದಕ್ಷಿಣಗಳ ಕೂಡಲಿ. ಈ ನರ್ಮದೆಯ ದಡದಲ್ಲೇ ಶಂಕರಾಚಾರ್ಯರು ಗುರುಚರಣದಲ್ಲಿ ಕುಳಿತು ದರ್ಶನ-ಶಾಸ್ತ್ರಾಭ್ಯಾಸ ಮಾಡಿದರು. ಈ ಹಳ್ಳಿಯಲ್ಲಿ ದಕ್ಷಿಣ ಭಾರತೀಯರು ಸಾಕಷ್ಟು ಜನ ಇದಾರೆ. ಅವರಲ್ಲಿ ಒಬ್ಬ ಕಿವುಡು ಮುದುಕಿ ವಿನೋಬಾಜಿಯನ್ನು ನೋಡಲು ಬಂದಳು. ನೋಡಿ ೫ ಎಕರೆ ಹೊಲ ದಾನ ಕೊಟ್ಟಳು. ಆಕೆಯ ಗಂಡ ೧೦೦ ಎಕರೆಗಿಂತ ಹೆಚ್ಚಾಗಿಯೇ ನೀಡಿದ.

**ಹಠವಾದಿ ತಾಪೀ :** ನರ್ಮದೆ ದೇಶದ ಹೃದಯದಲ್ಲಿ ಹೊಕ್ಕು ಬಹಳ ದೂರ ಹೃದಯ ಮಧ್ಯೆ ದಾರಿ ಸಾಗಿಸುತ್ತದೆ. ತಾಪೀ ನದಿ (ತಪನನ ಪುತ್ರಿ) ನಡುವೆ ನಿಂತುಬಿಟ್ಟಿದೆ. ಅದರ ಇದಿರಿಗೆ ದೊಡ್ಡ ಗುಡ್ಡಗಳು, ಇಲ್ಲವೆ ಸಮಭೂಮಿ. ತಾಪಿ ಯಾರಿಗೂ ಅನುಕೂಲವಾಗಲು ಕಲಿಯಲಿಲ್ಲ. ಯಾರೊಡನೆಯೂ ಒಪ್ಪಂದ ಮಾಡಲಿಲ್ಲ. ಇತರರ ದೌರ್ಬಲ್ಯಕ್ಕೆ ಮರುಗಲಿಲ್ಲ. ಅದೇ ನರ್ಮದೆ, ದಾರಿಯಲ್ಲಿ ದೊರೆತವರಿಗೆಲ್ಲ ಸಹಾನುಭೂತಿ ತೋರುತ್ತದೆ. ಯಾರ ಮೇಲೂ ಬಲಾತ್ಕಾರ ಮಾಡದು. ಅಂತಲೇ, ಬಹಳ ದೂರ ಅದರ ಯಾತ್ರೆ ಸಾಗಿತು. ಹೀಗೆ ತಮ್ಮ ತಾಯಿ ಚಿಕ್ಕಂದಿನಲ್ಲಿ ವರ್ಣಿಸಿ ಹೇಳಿದ್ದರೆಂದು ವಿನೋಬಾಜಿ ಹೇಳಿದರು

## ೩. ವಿಂಧ್ಯಾಚಲ

ನರ್ಮದೆಯನ್ನು ಬಿಟ್ಟು ನಾವು ವಿಂಧ್ಯಾಚಲವನ್ನು ಪ್ರವೇಶಿಸಿದೆವು. ಈ ಪರ್ವತ ಪಂಕ್ತಿಯಲ್ಲಿ ಮೊದಲನೆಯ ಬೀಡು ತೇತಾರಪಾಣೀ. ನೇಸರು ಮೂಡುತ್ತಿದ್ದಂತೆ ಅಕ್ಕಪಕ್ಕದ ಹಳ್ಳಿಗಳಜನರು ಗುಂಪು ಗೂಡಿದರು. ಸಂಜೆಯ ಪ್ರಾರ್ಥನೆಗೆ ಸಾವಿರಾರು ಜನ ಸೇರಿದರು. ವಿನೋಬಾಜಿ ಭೂದಾನ ಪಡೆದು ಬಡವರಿಗೆ ಹಂಚುತ್ತಾರೆ ಎಂಬ ಸುದ್ದಿ ಗಾಳಿಯಲ್ಲೇ ಹರಡಿತ್ತು. ಈ ಅಂಗೈಯಗಲದ ಹಳ್ಳಿಯಲ್ಲಿ ೯೪ ಎಕರೆ ಹೊಲ ಸಿಕ್ಕಿತು. ನರ್ಮದಾ ಘಟ್ಟದಲ್ಲಿ ಸುಮಾರು ೩೦೦ ಎಕರೆ ದಾನ ಕೊಟ್ಟ ಪಾಲಿವಾಲ್, ಇಲ್ಲಿ ೫೧ ಎಕರೆ ನೀಡಿದರು.

**ನಿಮಿಷಕ್ಕೆ ೫ ಎಕರೆ !** : ಎರಡನೆಯ ಬೀಡು ದೇವರೀ. ನಿತ್ಯದಂತೆ ಮುಂಜಾನೆ ೪ ಗಂಟೆಗೆ ಹೊರಟೆವು. ೪-೩೦ ಕ್ಕೆ ಇನ್ನೂ ನಸುಕು ಇರುವಾಗಲೇ ಜನ ರಾಮಭಜನೆ ಮಾಡುತ್ತ ವಿನೋಬಾಜಿಯನ್ನು ಇದಿರುಗೊಳ್ಳಲು ಬರುತ್ತಿದ್ದರು. ನಮಗೆ ಅಚ್ಚರಿಯಾಯಿತು. ಅವರು ನಮ್ಮನ್ನು ಮಹಾರಾಜಪುರಕ್ಕೆ ಒಯ್ದರು. ಅಲ್ಲಿ ಹೆಣ್ಣು ಗಂಡು, ಮಕ್ಕಳು ಎಲ್ಲರೂ ನಮ್ಮ ದಾರಿ ಕಾಯುತ್ತಿದ್ದರು. ಒಬ್ಬರಾದ ಮೇಲೊಬ್ಬರು ಭೂದಾನ ನೀಡಿದರು. ೫ ನಿಮಿಷದಲ್ಲಿ ೩೧ ಎಕರೆ ಆಯಿತು. ಇದಕ್ಕಿಂತ ಹೆಚ್ಚು ಹಿಗ್ಗು ವಿನೋಬಾಜಿಗೆ ಇನ್ನೇನು? ಇದೆಲ್ಲವೂ ಜನರ ಸ್ವೇಚ್ಛೆಯಿಂದಲೇ ಆದುದು. ವಿನೋಬಾ ಹೇಳಿದರು : " ನಮ್ಮ ತಾಯಿ ತಂದೆ ಇಂಥ ಬೆಳಗು ಮುಂಜಾವಿನ ಶುಭಗಳಿಗೆಯಲ್ಲಿ ಹೊಲವಿಲ್ಲದ ಬಡವರಿಗೆ ಹೊಲವನ್ನು ದಾನ ನೀಡಿದರು ಎಂಬ ಮಾತನ್ನು ನೆನೆದು ಈ ಮಕ್ಕಳು ಹರೆಯಕ್ಕೆ ಬಂದಾಗ ಎಷ್ಟು ಹಿಗ್ಗಿಯಾರೋ ಊಹಿಸಿಕೊಳ್ಳಿ. ಇದಕ್ಕಿಂತಲೂ ಹೆಚ್ಚಿನ ತ್ಯಾಗ

ಮಾಡಲು ಅವರಿಗೆ ಅದರಿಂದ ಸ್ಫೂರ್ತಿ ಬಂದೀತು ; ಮಾಡಿಯಾರು. ನೀವೆಲ್ಲರೂ ದೇವರೀಗೆ ಬಂದು ನಮ್ಮ ಪ್ರಾರ್ಥನೆಯಲ್ಲಿ ಸೇರಿಕೊಳ್ಳಿ. ಯಥಾಶಕ್ತಿ ಭೂದಾನ ಮಾಡಿ. ''

' ತುಲಸೀದಾಸ್ ಅತಿ ಆನಂದ, ನಿರಖಿಕೇ ಸುಖಾರವಿಂದ,
ದೀನನನಕೋ ದೇತ ದಾನ, ಭೂಷಣ ಬಹು ಮೋಲೀ. '

ಈ ಚರಣವನ್ನು ಹಾಡುತ್ತಾ ಹಾಡುತ್ತಾ ಕವಿಗೆ ಪ್ರೇರಣೆ ಕೊಟ್ಟ ಭಾವ ತಮ್ಮ ಹೃದಯದಲ್ಲಿ ತುಂಬಿ ಬರುವವರೆಗೆ ವಿನೋಬಾ ಹಾಡುತ್ತಲೇ ಇದ್ದರು. ದೇವರೀಯಲ್ಲಿ ಕೋಟೆಯ ಮೇಲೆ ಸಭೆ ನಡೆಯಿತು. ಏರ್ಪಾಟು ಚೆನ್ನಾಗಿತ್ತು. ೫ ಸಾವಿರಕ್ಕಿಂತ ಹೆಚ್ಚು ಜನ ಸೇರಿದ್ದರು ಒಬ್ಬ ಗೋಂಡ ಜಾಗೀರದಾರ ೯೦೩ ಎಕರೆ ಕೊಟ್ಟ. ದೇವರೀ ಹಳ್ಳಿಯ ಒಟ್ಟು ದಾನ ೧೪೧ ಎಕರೆ ಆಯಿತು. ಎಲ್ಲವೂ ಸಭೆಯಲ್ಲೇ, ಬಡವರೆಲ್ಲರೂ ಎದ್ದೆದ್ದು ತಮ್ಮ ದಾನ ನೀಡಿದರು.

**ಮನುವಿನ ಆದರ್ಶವನ್ನು ಮಾನವ ಮರೆತ :** ವಿನೋಬಾಜಿ ವೈಯಕ್ತಿಕ ಸತ್ಯಾಗ್ರಹ ಮಾಡಿದಾಗ ಅವರ ಜತೆಗೆ ಜೈಲಿನಲ್ಲಿದ್ದ ಒಬ್ಬ ಕಾಂಗ್ರೆಸಿಗ ಅವರನ್ನು ಕೇಳಿದ—" ಕುಟುಂಬ ಜೀವನದಿಂದ ನಿವೃತ್ತನಾಗಿ ಮನುಷ್ಯ ಸಮಾಜಸೇವೆಗೆ ಯಾವಾಗ, ಹೇಗೆ ತೊಡಗಬೇಕು ? '' ಕೆಲಸಗಾರರ ಸಭೆಯಲ್ಲಿ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಇದೇ ಮಾತನ್ನು ವಿನೋಬಾಜಿ ಇನ್ನೊಂದು ಬಗೆಯಲ್ಲಿ ಹೇಳಿದರು. " ಓದಿ ಬರೆದ, ಸುಶಿಕ್ಷಿತರಾದ ಅನುಭವಸ್ಥರಾದ ಸ್ವಾವಲಂಬಿ, ನಿಸ್ವಾರ್ಥ ಕೆಲಸಗಾರರು ಲಕ್ಷಗಟ್ಟಲೆ ಬೇಕು ಎಂದರೆ ನೀವು ಆಶ್ರಮ ಧರ್ಮದ ಜೀವನ ಪದ್ಧತಿಯನ್ನು ಮತ್ತೆ ಜೀವಂತಗೊಳಿಸಬೇಕು. '' ಈಗಿನ ಜೀವನ ಪದ್ಧತಿ ಸ್ವಾವಲಂಬನೆ ಆತ್ಮನಿಗ್ರಹಗಳ ತಳಹದಿಯ ಮೇಲಿಲ್ಲ. ಕೇವಲ ಭೋಗವಿಲಾಸ ಸುಖಸಂತೋಷಗಳ ತಳಹದಿಯ ಮೇಲಿದೆ. ಇದನ್ನು ಟೀಕಿಸುತ್ತ, "ಹಿಂದಿನ ಕಾಲದವರು

ತಮ್ಮ ಮನೆಮಾರನ್ನು ಮಕ್ಕಳಿಗೆ ಬಿಟ್ಟು ತಪಸ್ಸಿಗಾಗಿ ಸಮಾಜಹಿತ ಕ್ಕಾಗಿ ದುಡಿಯುತ್ತಿದ್ದುದನ್ನು ವಿನೋಬಾ ಹೇಳಿದರು. ಈಗಂತೂ ಧರ್ಮಾತ್ಮನಾದ ಬ್ರಾಹ್ಮಣನೂ ಕೂಡ ಈ ಪದ್ಧತಿಯನ್ನು ಮರೆತಿ ದಾನೆ. ಹುಡುಗ, ಅವನ ತಂದೆ, ತಾತ ಮೂವರೂ ಕಛೇರಿಯಲ್ಲಿ ವಕೀಲಿ ಮಾಡುತ್ತಿರುವುದು ಕಾಣಬರುತ್ತದೆ. ಎಷ್ಟು ಹಾಸ್ಯಾಸ್ಪದ! ಮಾಡಲು ಬೇರೇನೂ ಕೆಲಸವಿಲ್ಲ. ಮೃತ್ಯುವೇ ಬಂದು ಇವರನ್ನು ಈ ವೃತ್ತಿಯಿಂದ ಬಿಡಿಸಬೇಕು. ಅಲ್ಲಿಯವರೆಗೆ ಈ ಲೋಭ ಲಾಲಸೆ ಗಳಿಂದ ಮುಕ್ತಿ ಇಲ್ಲ. ಹೀಗಾದರೆ ನಮಗೆ ಲಕ್ಷಗಟ್ಟಲೆ ಕೆಲಸಗಾರರು ಹೇಗೆ ಸಿಗಬೇಕು?" ಮನು ಹೇಗೆ ತನ್ನ ಮಗನಿಗೆ ಪಟ್ಟಕಟ್ಟಿ ತನಗೆ ಇಷ್ಟವಿಲ್ಲದಿದ್ದರೂ ಕುಟುಂಬಜೀವನದಿಂದ ಪಾರಾದ ಎಂಬುದನ್ನು ವಿನೋಬಾ ತಿಳಿಸಿದರು. ಆರೋಗ್ಯಕರ, ಲಾಭದಾಯಕ ಪರಂಪರೆ ಯನ್ನು ಕಾಯ್ದುಕೊಳ್ಳಲು ಅದೊಂದೇ ದಾರಿ ಎಂದು ಅವನಿಗೆ ತಿಳಿ ದಿತ್ತು. ಸಂಸಾರದ ಜಂಜಾಟ ಬಿಟ್ಟು ವಾನಪ್ರಸ್ಥರಾಗುವ ಬುದ್ಧಿ ಸಮಾಜದಲ್ಲಿ ಬರಬೇಕೆಂದು ವಿನೋಬಾಜಿಯ ಬಯಕೆ. ನಿಃಸ್ವಾರ್ಥ ಸೇವಕರು ಲಭಿಸಲು ಇದೇ ದಾರಿ.

**ರಾಮರಾಜ್ಯದ ಹನುಮಂತರಾಗಿ :** ಇನ್ನೊಂದು ಪ್ರಶ್ನೆ: ರಾಮರಾಜ್ಯ ಬಂದೀತೇ? ಇದಕ್ಕೆ ಉತ್ತರವಾಗಿ ವಿನೋಬಾಜೀ ಹೇಳಿದರು : "ಎರಡು ಹೊಡೆದ ಮೇಲೆ ಮೂರು ಗಂಟೆ ಆದೀತೋ ಇಲ್ಲವೋ ಎಂದು ಕೇಳಿದ ಹಾಗೆ ಇದೆ ಈ ಪ್ರಶ್ನೆ. ರಾಮರಾಜ್ಯ ಇಂಥ ದಿನ ಬರುತ್ತದೆಂದು ಯಾವ ಪಂಚಾಂಗವೂ ಹೇಳಲಾರದು. ಜನರೇ ಅದನ್ನು ತರಬಲ್ಲವರು. ತಮ್ಮ ತಮ್ಮ ರುಚಿಗನುಸಾರವಾಗಿ ರಾಮರಾಜ್ಯ, ರಾವಣರಾಜ್ಯ, ಸುಗ್ರೀವರಾಜ್ಯ, ಯಾವುದನ್ನಾದರೂ ಅವರು ಸ್ಥಾಪಿಸಬಹುದು. ರಾಮರಾಜ್ಯ ಬೇಕೆಂದು ಹೃದಯ ಪೂರ್ವಕ ಅವರು ಬಯಸಿದರೆ ಹನುಮಂತನಂತೆ ಯೋಗ್ಯ ಕೆಲಸ

ಗಾರರಾಗಬೇಕು. ರಾಮರಾಜ್ಯ ಸ್ಥಾಪನೆ ಕೇವಲ ಓಟುಕೊಟ್ಟರೆ ಆಗದು. ಪರಸ್ಪರ ಪ್ರೇಮದ ವಿಕಾಸವಾಗಬೇಕು. ಪರರಿಗಾಗಿ ಕೆಲಸ ಮಾಡುವ ಮನಸ್ಸನ್ನು ಬೆಳೆಸಬೇಕು. ದೇವರೀಯ ಜನಸಂಖ್ಯೆ ೮ ಸಾವಿರ. ಇಲ್ಲಿನ ಜನರು ನಾನು ಹೇಳಿದಂತೆ ನಡೆದರೆ ಇಲ್ಲಿ ೨ ಸಾವಿರ ಕೆಲಸಗಾರರು ಸಿಕ್ಕಾರು. ''

**ದಮ-ದಯೆ-ದಾನ:** ಗೋರ್ಝಾಮರ ಎಂಬ ಚಿಕ್ಕ ಹಳ್ಳಿ ಯಲ್ಲಿ ೯೪ ಎಕರೆ ಹೊಲ ದೊರೆಯಿತು. ಮುಗಿಲು ಮೋಡ ಕವಿ ದಿತ್ತು. ಮುಗಿಲಿನ ಕಡೆ ಸನ್ನೆಮಾಡಿ ವಿನೋಬಾಜಿ ಹೇಳಿದರು: "ಅವು ನಮಗೇನು ಹೇಳುತ್ತವೆ? ಉಪನಿಷತ್ತಿನ ಋಷಿಗಳಂತೆ ಆ ಮೋಡ ನಮಗೆ ಹೇಳಬಯಸುತ್ತಿವೆ; ದಮ—ಇಂದ್ರಿಯಗಳನ್ನು ದಮನಮಾಡಿ, ದಯೆ—ಆರ್ತರ, ಪೀಡಿತರ ಸೇವೆ ಮಾಡಿ; ದಾನ—ಸರ್ವಸ್ವವನ್ನೂ ತ್ಯಜಿಸಿಬಿಡಿ. ನಮ್ಮ ಪಾಡಿಗೆ ನಾವು ನೆಲದ ಒಡೆಯರು ಎಂಬುದು ಎಂಥ ತಿಳಿಗೇಡಿತನ? ನೆಲ ಇದ್ದಲ್ಲೇ ಇರು ತ್ತದೆ. ಇದರ ಒಡೆಯನೆಂಬವನು ಸತ್ತಮೇಲೆ ಮಣ್ಣಾಗುತ್ತಾನೆ."

ಇಲ್ಲಿ ಅಕಸ್ಮಾತ್ತಾಗಿ ಸಿಕ್ಕ ಈ ದಾನದ ಬಗ್ಗೆ ಸಾಗರದಲ್ಲಿ ಮಾತಾಡುವಾಗ ಉತ್ಕಟ ಅನುಭೂತಿಯಿಂದ ಆಡಿದರು.

ಮುಂದಿನ ಬೀಡು ಸಾಗರ ಅಲ್ಲಿ ಸರ್ವೋದಯ ಸಮ್ಮೇಳನ ಏರ್ಪಾಟಾಗಿತ್ತು. ಮಧ್ಯಪ್ರದೇಶದ ಕೆಲಸಗಾರರು ಅನೇಕರು ಸೇರಿ ದ್ದರು. ಮಹಾ ಕೋಸಲ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸೇಠ್ ಗೋವಿಂದದಾಸ್ ವಿನೋಬಾಜಿಯನ್ನು ಕಂಡು ಗದ್ಗದರಾದರು. 'ತಾವು ಬಹಳ ದೊಡ್ಡ ಹೊಣೆ ಹೊತ್ತಿರಿ. ಇದು ನಿಶ್ಚಯ-ವಾಗಿಯೂ ಕ್ರಾಂತಿ ಜನಕವೇ! ನಾನು ಹೋದಲ್ಲೆಲ್ಲ ಇದರ ಪ್ರಚಾರ ಮಾಡುತ್ತೇನೆ' ಎಂದರು ಆಮೇಲೆ ಗೋವಿಂದದಾಸರ ರಾಜಕೀಯ ಪ್ರತಿಕಕ್ಷಿ ಠಾಕೂರ್ ನಿರಂಜನ ಸಿಂಹರು ಬಂದರು.

ಅವರೂ ನೆರವನ್ನು ನೀಡಿದರು. ಅವರ ಕೆಲಸಗಾರರು ಭೂದಾನ ಸಂಗ್ರಹಿಸಲು ಹೊರಟಿದ್ದಾರೆ ಅದರ ಪರಿಣಾಮವೂ ಒಳಿತಾಗಿದೆ.

**ಸದ್ಭಾವನೆ ಇನ್ನೂ ಸತ್ತಿಲ್ಲ:** ಕೆಲಸಗಾರರ ಸಭೆಯಲ್ಲಿ ಪ್ರಶ್ನೆ ಕೇಳಿ ಎಂದರು ವಿನೋಬಾ. ಸಂದೇಹ ಬಂದೆಡೆ ಹೆದರಬಾರದು ಎಂದರು ಸಂದೇಹ ಪ್ರಶ್ನೆಯು ಇನ್ನೊಂದು ಮುಖವನ್ನೆ ತೆರೆದು ತೋರಿಸುತ್ತದೆ 'ಹೊಲ ಇಲ್ಲದವರಿಗಾಗಿ ನಾನೇನೋ ಹೊಲ ಬೇಡುತ್ತಿದ್ದೇನೆ. ಆದರೆ ನನ್ನ ಬಳಿ ಒಂದು ಕುರುಡು ಕಾಸೂ ಇಲ್ಲ. ಈ ಕೆಲಸಕ್ಕೆ ನನಗೇನು ಬಲವಿದೆ?' ಎಂದು ಕೇಳಿ, ಅದಕ್ಕೆ ತಾವೇ ಉತ್ತರ ಕೊಟ್ಟರು. 'ನನ್ನ ದೇಶವೆ ನನ್ನ ಬಲ. ಅದರ ಗಾಳಿ, ಅದರ ಸಂಸ್ಕೃತಿಯೆ ನನ್ನ ಬಲ! ಇತರ ದೇಶಗಳ ಮಾತು ನನಗೆ ತಿಳಿಯದು ಆದರ ಭಾರತದಲ್ಲಿ ಹಬ್ಬಿರುವ ಕಾಳಸಂತೆ, ಲಂಚಕೋರತನ ಅಗಾಧವಾಗಿದ್ದರೂ ನಮ್ಮ ಜನರಲ್ಲಿ ಇನ್ನೂ ಸದ್ಭಾವನೆಯಿದೆ. ಹೊರಗೆ ಕಾಣುವ ಸದ್ಭಾವನೆ ಮಿಥ್ಯೆ, ಕಪಟ ಎಂಬುದನ್ನು ನಾನು ಒಪ್ಪಲಾರೆ. ಭಕ್ತಿ, ರಾಕ್ಷಸತನ ಎರಡೂ ಒಟ್ಟಿಗೇ ಇವೆ, ನಿಜ. ಆದರೂ ಬಾಳಿನಲ್ಲಿ ಭಕ್ತಿಯೇ ಗೆದ್ದ ಗಳಿಗೆ ಉಂಟು ಆಗ ಅದು ಸೇವೆ-ತ್ಯಾಗಗಳ ಮೂಲಕ ಹೊರಗೆ ಹರಿಯುತ್ತದೆ ಇಂಥ ಗಳಿಗೆ ಬದುಕಿನಲ್ಲಿ ಹೆಚ್ಚಾದರೆ ರಾಕ್ಷಸತನ ಬುಡಸಹಿತವಾಗಿ ಉರುಳಿಹೋದೀತು. ಸಾವಿರಾರು ಜನರು ಕಾಳಸಂತೆ ಲಂಚಕೋರತನದಲ್ಲಿ ಮುಳುಗಿದ್ದಾರೆ. ಅದ್ದರಿಂದ ಎಲ್ಲರೂ ಭ್ರಷ್ಟರಾಗಿದ್ದಾರೆ ಎನ್ನಲಾರೆ. ಅವರಿಗೆ ಇಷ್ಟವಿರದಿದ್ದರೂ ಅವರನ್ನು ತಪ್ಪುದಾರಿಗೆಳೆಯುತ್ತಿದೆ ನಮ್ಮ ಆರ್ಥಿಕ ವ್ಯವಸ್ಥೆ ಈ ಎಲ್ಲ ದೋಷಗಳ ಬೇರು ನಮ್ಮ ಅರ್ಥ ವ್ಯವಸ್ಥೆ ಅದನ್ನು ಸುಧಾರಿಸಬೇಕು ಇಡೀ ರಾಷ್ಟ್ರದ ಹೃದಯ ಕೆಟ್ಟಿಲ್ಲ ನನಗಿದರಲ್ಲಿ ಅನುಮಾನವಿಲ್ಲ. ಅಂತೇ ನನ್ನ ಮಾರ್ಗ ಸಫಲವಾದೀತೆಂಬ ಶ್ರದ್ಧೆ ನನಗೆ ಅಪಾರವಾಗಿದೆ. ನನ್ನ ದಾರಿ ಬೇಡುವುದು, ಸದೆಬಡಿಯುವುದಲ್ಲ.

ಅದನ್ನು, ಕೊಲ್ಲುವ ದಾರಿಯನ್ನು, ರಷ್ಯಾ ಇತರ ದೇಶಗಳು ಕೈಗೊಂಡಿವೆ ಅಲ್ಲಿ ಅದು ಸಫಲವಾಗಿಲ್ಲ ನಾವು ಆ ದಾರಿ ಹಿಡಿದರೆ ನಮ್ಮ ಸರ್ವನಾಶವಾದೀತು ಹಾಗೆ ನಮ್ಮ ಸರ್ವನಾಶವಾಗಲೆಂಬುದು ದೇವರ ಮನಸ್ಸಿನಲ್ಲಿಲ್ಲ ಇದ್ದಿದ್ದರೆ ನನ್ನನ್ನೇಕೆ ತನ್ನ ಕೆಲಸದ ನಿಮಿತ್ತವಾಗಿ ಮಾಡುತ್ತಿದ್ದ ? ''

ಎರಡು ದಿನ ಸಾಗರದಲ್ಲಿ ಬೇಕಾದಷ್ಟು ಕೆಲಸವಾಯಿತು. ವಿನೋಬಾಜಿ ಕೆಲಸಗಾರರೊಡನೆ ಸಾಮೂಹಿಕವಾಗಿ, ವೈಯಕ್ತಿಕವಾಗಿ ಕಲೆತವರು ಅಕವಿರಷ್ಟಗಳನ್ನು ಕೇಳಿ ತಿಳಿದು ಅದಕ್ಕೆ ದಾರಿ ತೋರಿದರು ಭೂದಾನ ಯಜ್ಞಕ್ಕಾಗಿ ಜಿಲ್ಲಾವಾರು ವ್ಯವಸ್ಥಾಪಕರನ್ನು ಏರ್ಪಡಿಸಿದರು ಉತ್ತರ, ವಿಂಧ್ಯ, ಮಧ್ಯಪ್ರದೇಶಗಳ ಕೆಲಸಗಾರರು ಬಂದಿದ್ದರು ಆ ದಿನ ಇಡೀ ಪ್ರಾಂತದಿಂದ ಭೂದಾನ ಸಿಕ್ಕಿತು. ಮಧ್ಯಪ್ರದೇಶದ ಆಹಾರ ಸಚಿವರಾಗಿದ್ದು, ಈಗ ಯೋಜನಾ ಸಮಿತಿಯ ಸದಸ್ಯರಾದ ಶ್ರೀ ಆರ್. ಕೆ. ಪಾಟೀಲರು ಒಂದು ಭಾವಪೂರ್ಣ ಪತ್ರ ಬರೆದು, ಚಾಂದಾ ಜಿಲ್ಲೆಯಲ್ಲಿ ತಮ್ಮ ೨೫೫ ಎಕರೆ ಹೊಲವನ್ನು ದಾನ ಕೊಟ್ಟರು ಶ್ರೀ ಗೋವಿಂದದಾಸರೂ ರಾಕೂರ ರಾಜೇಂದ್ರ ಸಿಂಹರೂ ತಲಾ ೧೦೧ ಎಕರೆ ಕೊಟ್ಟರು. ಒಬ್ಬ ಸಮಾಜವಾದಿ ನಾಯಕ, ಶ್ರೀ ಅಬ್ದುಲ್‌ಗನಿ ತನ್ನ ಇಡೀ ೪೨ ಎಕರೆ, ಅದರ ಜತೆಗೆ ಒಂದು ಮನೆಯನ್ನು ನೀಡಿದ. ಉಳಿದ ಪಟ್ಟಣಗಳಂತೆ ಇದರದೂ ಕೇವಲ ೧೨೮ ಎಕರೆ ಆಯಿತು ಉಳಿದ ದಾನ ೫೧೬ ಎಕರೆ. ಸೇರಿದ್ದ ಕೆಲಸಗಾರರು ಗಂಭೀರ ಶಪಥಮಾಡಿದರು —'ಮಧ್ಯಪ್ರದೇಶದಿಂದ ೧ ಲಕ್ಷ ಎಕರೆ ಹೊಲ ಸಂಗ್ರಹಿಸುತ್ತೇವೆ'

**ಜೈನ ಸಮಾಜದಿಂದ :** ಹೋದಲ್ಲಿ ಸಂಸ್ಥೆಗಳನ್ನು ನೋಡಲು ವಿನೋಬಾಗೆ ಬಿಡುವಿಲ್ಲ. ಸಾಗರದಲ್ಲಿ ಒಂದಕ್ಕೆ ಬದಲು ಎರಡು ದಿನ ಇದ್ದುದರಿಂದ ಎರಡು ಸಂಸ್ಥೆಗಳಿಗೆ ಹೋಗಲು ಒಪ್ಪಿದರು.

ಒಂದೆಡೆ, ಗುರುದೇವ ಸೇವಾ ಮಂಡಲದವರು ಏರ್ಪಡಿಸಿದ ಸಾಪ್ತಾಹಿಕ ಪ್ರಾರ್ಥನೆಯ ಉದ್ಘಾಟನೆ ಮಾಡಿದರು. ದಿಗಂಬರ ಸಂಸ್ಕೃತ ವಿದ್ಯಾಲಯಕ್ಕೆ ಹೋದರು. ಅಲ್ಲಿ ಕೊಟ್ಟ ಸನ್ಮಾನಕ್ಕೆ ಉತ್ತರ ಕೊಡುತ್ತ ಹೇಳಿದರು: 'ಜೈನ ಸಮಾಜ ಅಹಿಂಸಾ ದಾನ ನೀಡಿ, ಸಮಾಜವೆಂಬ ಹಾಲಿನಲ್ಲಿ ಸಕ್ಕರೆ ಬೆರೆಸಿತು.' ಅಹಿಂಸೆಯ ವಿಕಾಸಕ್ಕಾಗಿ ಜೈನ ವಿದ್ವಾಂಸರು ಬರೆದ ಸಾಹಿತ್ಯವನ್ನು ಪ್ರಶಂಸಿಸುತ್ತ 'ತಾವು ಸತ್ಯವನ್ನು ಅಸಡ್ಡೆ ಮಾಡಿದೀರಿ ಎನ್ನಲಾರೆ. ಆದರೆ ವರ್ತಕ ಸಮಾಜವಾದ್ದರಿಂದ ಅಹಿಂಸೆಯಷ್ಟು ದೊಡ್ಡದಲ್ಲ ಸತ್ಯ ಎಂದು ತಿಳಿದಿದೀರಿ. ಇದು ತಪ್ಪು. ಸತ್ಯ--ಅಹಿಂಸೆಗಳನ್ನು ಬೇರ್ಪಡಿಸಲಾಗದು; ಅವು ಅವಿಭಾಜ್ಯ. ಮಹಾತ್ಮಾಜಿಯ ಬಾಳು ಸತ್ಯದ ತಳಹದಿಯ ಮೇಲೆ ಮಾಡಿದ ಅಹಿಂಸೆಯ ಪ್ರಯೋಗ' ಎಂದು ಹೇಳಿದರು.

**ಹಿಂದೂ ಧರ್ಮದ ಪಂಚಸೂತ್ರ**. ಸಾಗರದಿಂದ ಮುಂದೆ ಮೇಹರ್, ರಜವಾಂಸ್, ಮುಲಧೌನ್‌ಗಳಿಗೆ ಹೋದೆವು. ರಜವಾರಿಸ್‌ದಲ್ಲಿ ವಿನೋಬಾಜಿ ಹಲವು ಮನೆಗಳಿಗೆ ಹೋಗಿ ಬಂದರು, ಹರಿಜನ, ಚಮ್ಮಾರ, ಗಾಣಿಗ, ಬಡಗಿ, ಬ್ರಾಹ್ಮಣ, ಜೈನ ಇತ್ಯಾದಿ. ಇಲ್ಲಿ ಹೆಂಗಸರು ಬೆಳ್ಳಿಯ ಗಿಲೀಟಿನ ಕಾಲ್ಕಡಗಗಳನ್ನು ಧರಿಸಿದ್ದರು. ಅದನ್ನು ನೋಡಿ ವಿನೋಬಾಗೆ ಅಚ್ಚರಿಯಾಯಿತು. ಏನು ತಪ್ಪು ಮಾಡಿದೀರಿ ಎಂದು ಈ ಕಾಲ್ಬೇಡಿ ಹಾಕಿಕೊಂಡಿದೀರಿ ಎಂದು ಕೇಳಿದರು. ಈ ಗೋಷಾ ಬಿಡಿ ಎಂದರು. ಅಲ್ಲಿ ಮನೆಯ ಛಾವಣಿಗಳಿಗೆ ಕಾಯಿಪಲ್ಯದ ಹಸರು ಬಳ್ಳಿಗಳನ್ನು ಹಬ್ಬಿಸಿದ್ದರು ಅದನ್ನು ನೋಡಿ ವಿನೋಬಾ ಹರ್ಷಿತರಾದರು. ಸೊಂಪಾದ ಹಸಿರು ಇಲ್ಲದ ಛಾವಣಿಯೇ ಇರಲಿಲ್ಲ.

ಬಹಿರಂಗ ಸಭೆ ಮೂಲಶಿಕ್ಷಣದ ಒಂದು ತರಗತಿ ಆದಂತಾ

ಯಿತು. ಹಿಂದೂ ಧರ್ಮದ ತತ್ತ್ವವೇನೋ ತಿಳಿಯಬಯಸಿದ ಒಬ್ಬ ತಮ್ಮ. ಅದಕ್ಕೆ ಒಂದು ಪಂಚಸೂತ್ರವನ್ನೆ ಹೇಳಿಬಿಟ್ಟರು ವಿನೋಬಾ:

೧. ಸ್ವಂತ ದುಡಿತದ ಅನ್ನ ತಿನ್ನು, ಎಂದಿಗೂ ಸುಳ್ಳು ಹಿಡಿಯ ಬೇಡ. ೨. ನೆರೆಹೊರೆಯವರ ಸೇವೆಮಾಡು ೩. ಗೋ ಸೇವೆಮಾಡು. ೪ ಬೆಳಗ್ಗೆ ಎದ್ದಾಗ ರಾತ್ರಿ ಮಲಗುವಾಗ ಪ್ರಾರ್ಥನೆಮಾಡು, ರಾಮನಾಮ ಸ್ಮರಿಸು ೫. ಯಾರೊಂದಿಗೂ ವೈರಮಾಡಬೇಡ.

ಸಭೆ ಒಂದು ತರಗತಿಯಾಯಿತು. ಎಲ್ಲರೂ ಈ ಸೂತ್ರಗಳನ್ನು ಸರಿಯಾಗಿ ಒಪ್ಪಿಸುವವರೆಗೆ ಬಿಡಲಿಲ್ಲ. ಒಬ್ಬೊಬ್ಬರನ್ನೂ ಎಬ್ಬಿಸಿ ನಿಲ್ಲಿಸಿ ಬಾಯಿಪಾಠ ಹೇಳಿಸಿದರು. ಯಾರಿಗೂ ಶೇ. ೫೦ ಕ್ಕಿಂತ ಹೆಚ್ಚು ಅಂಕಗಳು ಸಿಗಲಿಲ್ಲ. ಕಡೆಗೆ ಯಾರೂ ಮಾಡದ ಈ ಕೆಲಸವನ್ನು ಒಬ್ಬ ಗೋಪಾ ಹೆಂಗಸು ಮಾಡಿದಳು. ಸರಿಯಾಗಿ ಉಚ್ಚಾರಣೆ ಮಾಡುತ್ತಾ ಪೂರಾ ಸೂತ್ರಗಳನ್ನು ಒಪ್ಪಿಸಿದಳು.

**ಏಳಿ, ಎಚ್ಚರಿ, ಕೆಲಸಕ್ಕೆ ತೊಡಗಿ:** ಸ್ವರಾಜ್ಯ ಬಂದ ಮೇಲೆ ಸುತ್ತಲೂ ಕವಿದಿರುವ ನಿರಾಶೆಯ ಮಾತನ್ನು ಎತ್ತಿ ವಿನೋಬಾ ಕೇಳಿದರು: ಸ್ವರಾಜ್ಯ ಬಂದು ಎಷ್ಟು ವರ್ಷವಾಯಿತು? ಒಬ್ಬ ನೆಂದ—ಇಪ್ಪತ್ತು. ಇನ್ನೊಬ್ಬನೆಂದ—ಎಂಟು. ಜನರೂ ಹಾಗೇ ಹೇಳಿದರು. ವಿನೋಬಾಗೆ ಇದು ತಿಳಿದಿತ್ತು. ಅವರು ಹೇಳಿದರು. 'ಇದರಲ್ಲಿ ನಿಮ್ಮದೇನು ತಪ್ಪಿಲ್ಲ. ನಿಮಗೆ ಸರಿಯಾಗಿ ಹೇಳುವವರು ಯಾರೂ ಇಲ್ಲ. ಇದು ಸ್ವರಾಜ್ಯ ಬಂದ ಐದನೆ ವರ್ಷ. ಸ್ವರಾಜ್ಯ ಬಂದ ಮೇಲೂ ನೀವು ಹೀಗೇ ಮಲಗಿರುತ್ತೀರೋ? ಅಥವಾ ನಿಮಗೆ ನೀವೇ ಸಹಾಯಮಾಡಿಕೊಳ್ಳಲು ಏನಾದರೂ ಪುರುಷಾರ್ಥ ಮಾಡೀ ರೋ? ನಿಮಗೆ ನೀವೇ ನೆರವಾಗದಿದ್ದರೆ ದೇವರು ಕೂಡ ನಿಮಗೆ ನೆರವಾಗಲಾರ. ದೇವರು ಅನ್ನಬಟ್ಟೆಗಳ ಮಳೆಗರೆಯ. ಅವನ ದಯೆ ಭೂಮಿಯ ಮೇಲೆ ಮಳೆಯಾಗಿ ಸುರಿಯುತ್ತದೆ. ಆಮೇಲೆ ಅನ್ನಕ್ಕಾಗಿ

ಕಾಳು, ಬಟ್ಟೆಗಾಗಿ ಹತ್ತಿ, ಬಿತ್ತುವ ಕೆಲಸ ನಿಮ್ಮದು. ಬೆಳಕು ಹರಿದ ಮೇಲೂ ನೀವು ಮಲಗಿದ್ದರೆ ನಿಮಗೆ ಬೆಳಕಾದೀತು ಹೇಗೆ? ಅಂತೇ ಏಳಿ, ಎಚ್ಚರಿ, ಕೆಲಸಕ್ಕೆ ತೊಡಗಿ.'

ಈ ಊರಿನಲ್ಲಿ ನಡೆದ ಒಂದು ಮನಸೆಳೆವ ಸಂಗತಿಯನ್ನು ಹೇಳದೆ ಇದನ್ನು ಮುಗಿಸುವಂತಿಲ್ಲ ತನ್ನ ಮನೆಯೊಳಕ್ಕೆ ವಿನೋಬಾ ಬರಲಿದಾರೆ ಎಂದು ಒಬ್ಬ ತಂಗಿಗೆ ತಿಳಿಯಿತು. ಕೂಡಲೆ ಆಕೆ ಒಳಕ್ಕೆ ಓಡಿಹೋಗಿ ತಲೆಯಮೇಲೆ ಒಂದು ಕೊಡ ನೀರು ಸುರಿದುಕೊಂಡು ಶುಚಿಯಾಗಿ, ಅದೇ ಒದ್ದೆ ಬಟ್ಟೆಯಲ್ಲೇ ಬಂದು, ವಿನೋಬಾ ಒಳಗೆ ಕಾಲಿಡುತ್ತಿರುವಂತೆಯೆ ಅವರ ಪಾದಕ್ಕೆ ಬಿದ್ದಳು!

**ಕೃಷ್ಣನ ಅರ್ಥ-ವ್ಯವಸ್ಥೆ ಬೇಕು, ಯಶೋದೆಯದಲ್ಲ:** ಈ ನಿಟ್ಟಿನಲ್ಲಿ ಮಾಲಥೌನ್ ಮಧ್ಯ ಪ್ರದೇಶದ ಕೊನೆಯ ಹಳ್ಳಿ. ಇಲ್ಲಿ ವಿನೋಬಾ ಜನರ ಮುಂದೆ ತಮ್ಮ ಎದೆಯನ್ನು ತೆರೆದಿಟ್ಟರು. ಹಳ್ಳಿಯಲ್ಲಿ ಬೇಸಾಯಕ್ಕೆ ಯೋಗ್ಯವಾದ ಹೊಲವೇ ಇಲ್ಲ ಎಂದು ಜನರು ಹೇಳಿದರು. ಕಾಳಿಗಾಗಿ ಬೇರೆ ಹಳ್ಳಿಗಳಿಗೆ ಕೈಯೊಡ್ಡಬೇಕು. ಹಳ್ಳಿಗೆ ದೂರವಾಗಿ ಕೆಲವರಿಗೆ ಸ್ವಲ್ಪ ಹೊಲವಿದೆ ಆದರಲ್ಲೇ ಮೂವತ್ತು ಎಕರೆ ನೀಡಿದರು.

ಮಧ್ಯಪ್ರದೇಶದಲ್ಲಿ ಇಂದು ನಮ್ಮ ಕೊನೆಯ ದಿನ 'ನನ್ನೀ ಸಂದೇಶ ಎಲ್ಲೆಲ್ಲೂ ಹರಡಲಿ' ಎಂದರು ವಿನೋಬಾ. ಸ್ವಾವಲಂಬನದ ಮಹತ್ವವನ್ನು ತಿಳಿಸಿದರು. 'ಯಶೋದೆಯ ಅರ್ಥವ್ಯವಸ್ಥೆ ಹಣದ್ದು. ಅದರಲ್ಲಿ ನನಗೆ ನಂಬಿಗೆಯಿಲ್ಲ ನಾನು ಕೃಷ್ಣನ ಅರ್ಥವ್ಯವಸ್ಥೆ ಬಯಸುತ್ತೇನೆ ಅದರ ಆಧಾರ ವಿತರಣೆ. ವಿಭಜನೆ. ಹಳ್ಳಿಯವರ, ಅದರಲ್ಲೂ ಮಕ್ಕಳಿಗೆ, ತಿಸಿನಾದ ಬೆಣ್ಣೆ ಪೇಟೆಗೆ ಮಾರಲು ಹೋಗುವುದು ಕೃಷ್ಣನಿಗೆ ಇಷ್ಟವಿರಲಿಲ್ಲ.' ಹಳ್ಳಿಯವರು ತಮ್ಮ ಹತ್ತಿಮಾರಿ, ಪೇಟೆಯಿಂದ ಬಟ್ಟೆ ಕೊಂಡು ತರುತ್ತಾರೆ. ಎಳು

ಮಾರುತ್ತಾರೆ, ಎಣ್ಣೆ ತರುತ್ತಾರೆ. ಜೇನುಮಾರಿ ಸಕ್ಕರೆ ಕೊಳ್ಳುತ್ತಾರೆ. ಆರೋಗ್ಯಕರವಾದ ಬೆಣ್ಣೆಮಾರಿ ವನಸ್ಪತಿ ತರುತ್ತಾರೆ. ಅಮೃತ ಮಾರಿ ವಿಷ ಕೊಳ್ಳುತ್ತಾರೆ. ಇವೆಲ್ಲವೂ ಏಕೆ? ಹಣಕ್ಕಾಗಿ. ವಿನೋಬಾ ಹೇಳಿದರು: 'ಇದನ್ನೆಲ್ಲಾ ನೋಡಿ ನನಗೆ ಬಹಳ ದುಃಖವಾಗುತ್ತದೆ. ನಾನು ಸಾಮ್ಯಯೋಗ ಬಯಸುತ್ತೇನೆ ಹಳ್ಳಿಯುವರು ತಾವು ಬೆಳೆದ ವಸ್ತುಗಳನ್ನೆ ತಮ್ಮ ಆವಶ್ಯಕತಾನುಸಾರ ಹಂಚಿಕೊಂಡಾರು. ನೀವು ಹಾಗೆ ಮಾಡಿದರೆ ಹಳ್ಳಿಹಳ್ಳಿಯಲ್ಲೂ ಸ್ವರ್ಗಸುಖ ಇಳಿದು ಬಂದೀತು'

ಸರಕಾರಕ್ಕೆ ಹೇಳಿ ಇಲ್ಲಿ ಒಂದು ಆಸ್ಪತ್ರೆಮಾಡಿಸಿ ಎಂದು ಹಳ್ಳಿಯುವರು ಕೇಳಿದರು ಆಸ್ಪತ್ರೆಯಿಲ್ಲದೆ ಸಾವು ಹೆಚ್ಚಾಗಿದೆ ಎಂದರು 'ಸಾವು ಹೆಚ್ಚಾಗಿರಲು ಕಾರಣ ಔಷಧವಿಲ್ಲದ್ದಲ್ಲ. ಪುಷ್ಟಿಕರ ಆಹಾರದ ಅಭಾವ ಹಿಂದಿನವರು ಈಗಿನ ಔಷಧಿಗಳನ್ನು ಕುಡಿಯುತ್ತಿದ್ದರೆ? ಒಂದೆರಡು ದಿನ ಉಪವಾಸಮಾಡುತ್ತಿದ್ದರು. ರೋಗದ ಬೇರೇ ನಿರ್ಮೂಲವಾಗುತ್ತಿತ್ತು. ಸ್ವಾಭಾವಿಕ ಜೀವನ ನಡೆಸಿದರೆ ನಮಗೆ ಔಷಧಿಯೇಕೆ ಬೇಕು? ಬಾಳೇ ಅಸ್ವಾಭಾವಿಕ ವಾದರೆ ಔಷಧದಿಂದ ಏನು ಪ್ರಯೋಜನ? ನಿಮ್ಮೂರಿಗೆ ಇನ್ನೂ ಆಸ್ಪತ್ರೆ ಬರಲಿಲ್ಲ, ಇದು ನಿಮ್ಮಪುಣ್ಯ. ಆಸ್ಪತ್ರೆಯ ಮಾತೇ ಬಿಡಿ. ಹಳ್ಳಿಯಲ್ಲೇ ಬಳ್ಳಿ- ಬೇರು ನೆಡಿ. ಅದರಿಂದ ಮದ್ದುಮಾಡಿಕೊಳ್ಳಿ. ಆಸ್ಪತ್ರೆ ತೆರೆದರೆ ಆ ಔಷಧಿ ಕೊಳ್ಳಲು ನಿಮ್ಮ ಹಣ ಪರದೇಶಕ್ಕೆ ಬಹಳ ಮಟ್ಟಿಗೆ ಸಾಗೀತು. ಇತ್ತ ಹಣವೂ ದಂಡ, ಅತ್ತ ಆರೋಗ್ಯವೂ ನಷ್ಟ ಆದೀತು'

**ಮಧ್ಯ ಪ್ರದೇಶದ ಭೂದಾನ:—** ಭೂದಾನ ಯಜ್ಞದ ಮಹತ್ವವನ್ನು ತಿಳಿಸುತ್ತ ಅದರ ರಹಸ್ಯ, ದೀರ್ಘ ಪರಿಣಾಮಗಳನ್ನು ಅರುಹಿದರು. ಈ ಯಜ್ಞ ವಿಫಲವಾಯಿತೋ, ಕಮ್ಯುನಿಸ್ಟ್ ವಿಚಾರ

ಗೆದ್ದಿತು. ಈ ಎರಡರಲ್ಲಿ ಯಾವುದು ಬೇಕೋ ಜನರು ಯೋಚಿಸಿ ಸ್ವೀಕರಿಸಬೇಕು ಎಂದು ಕೊನೆಯಲ್ಲಿ ಹೇಳಿದರು.

ಮಧ್ಯಪ್ರದೇಶದ ಭೂದಾನ ಒಟ್ಟು ೬,೪೦೦ ಎಕರೆ ಆಯಿತು. ನೀಡಿದವರು ೫೬೩ ಅದರಲ್ಲಿ ೫೪೧ ಜನ ೨೫ ಎಕರೆಗೆ ಕಡಮೆ ಕೊಟ್ಟರು. ೧೩ ಜನ ೧೦೦ ಎಕರೆಗೆ ಹೆಚ್ಚು ಕೊಟ್ಟರು. ಈ ಹೊಲವನ್ನು ಹಂಚಲಿಕ್ಕೆ, ಇನ್ನೂ ಭೂದಾನ ಸಂಗ್ರಹಿಸಲಿಕ್ಕೆ, ಒಂದು ಸಮಿತಿಯನ್ನು ಮಾಡಲಾಯಿತು ಕೊನೆಗೆ ಒಂದು ಮಾತು ಹೇಳಬೇಕು. ಹೋದಲ್ಲೆಲ್ಲ, ಬರಲಿರುವ ಚುನಾವಣೆಗಳ ಬಗ್ಗೆ ವಿನೋಬಾಜಿಯನ್ನು ಎಲ್ಲರೂ ಕೇಳುತ್ತಿದ್ದರು ವಿನೋಬಾಜಿ ತಮ್ಮ ಧೃಢ ವಿಚಾರವನ್ನು ಜನರಿಗೆ ಸ್ಪಷ್ಟವಾಗಿ ಹೇಳಿದರು ಒಂದು ಸಭೆಯಲ್ಲಿ 'ಹಿಂಸಾವಾದಿಗಳಿಗೆ, ಜಾತೀಯ ಸಂಸ್ಥೆಗಳ ಸದಸ್ಯರಿಗೆ, ನಿಮ್ಮ ಓಟು ಕೊಡಬೇಡಿ ಬೇರೆ ಬೇರೆ ರಾಜಕೀಯ ಪಕ್ಷಗಳ ಪರ ನಿಂತಿರುವ ಜನಕ್ಕೆ ಕೊಡಿ ಬರೀ ಪಕ್ಷದ ಹೆಸರಿಗೇ ಕೊಡಬೇಡಿ ಸ್ಪರ್ಧಿಯ ಯೋಗ್ಯತೆ, ಪ್ರಾಮಾಣಿಕತೆ ನೋಡಿ ಕೊಡಿ' ಎಂದು ಹೇಳಿದರು ರಾಜಕೀಯ ವಿಚಾರ ಭೇದದಿಂದ ಸ್ನೇಹ ಕೆಡಿಸಿಕೊಳ್ಳಬಾರದು ಎಂಬುದನ್ನು ವಿನೋಬಾ ಒತ್ತಿ ಹೇಳಿದರು. ಚುನಾವಣೆಯಲ್ಲಿ ಕ್ರೀಡೆಯ ಈ ನಿಯಮವನ್ನು ಎಲ್ಲರೂ ಪಾಲಿಸಬೇಕು ಎಂದರು.

# ೪. ನಾಹಂ ಬಿಭೇಮಿ

**ಉತ್ತರ ದೇಶದಲ್ಲಿ ಪ್ರವೇಶ**. ಅಕ್ಟೋಬರ್ ೮ ಕ್ಕೆ ಬೆಳಗ್ಗೆ ೫ ಗಂಟೆಗೆ ನಾವು ಉತ್ತರ ಪ್ರದೇಶದಲ್ಲಿ ಕಾಲಿಟ್ಟೆವು. ೩೦೦--೪೦೦ ಜನ ನಮ್ಮನ್ನು ಇದಿರುಗೊಳ್ಳಲು ನೆರೆದಿದ್ದರು ಪ್ರಾಂತದ ಮೂಲೆ ಮೂಲೆಗಳಿಂದ ಬಂದ ರಚನಾತ್ಮಕ ಕೆಲಸಗಾರರು ಇದ್ದರು. ಈ ಯಜ್ಞದ ಅರ್ಥ--ಮಹತ್ವ ಅವರ ಮನಸ್ಸಿಗೆ ಬಂದಿತ್ತೆಂಬುದು ಸ್ಪಷ್ಟವೇ. ಹೊಸ ಆಸೆ, ಹೊಸ ಸ್ಫೂರ್ತಿಗಳ ಅನುಭವ ಅವರಿಗಾಗಿತ್ತು. ವಾತಾವರಣದಲ್ಲಿ ರಾಮಭಜನೆಯ ಧ್ವನಿ ಮೊಳಗಿತು.

ಕೆಲವು ನಿಮಿಷದಲ್ಲೆ ಅಮರ್ಘುರಾಘಾಟ್ ಗುಡ್ಡದ ಬಳಿಯ ಒಂದು ಗುಡಿಗೆ ಹೋದೆವು. ಒಬ್ಬ ಜಮೀನುದಾರ ೮೪ ಎಕರೆ ಹೊಲ ಕೊಟ್ಟ. ಇನ್ನೊಬ್ಬ ೪೬ ಎಕರೆ. ಬೇಗಬೇಗ ಕೆಲಸ ಆಯಿತು. ಈ ತತ್ಪರತೆ ನಮಗೆ ರುಚಿಸಿತು. ವೇಳೆಯ ಬೆಲೆ ಗೊತ್ತು, ಇವರು ಒಂದು ಕ್ಷಣವನ್ನೂ ವ್ಯರ್ಥಮಾಡಲಿಚ್ಛಿಸರು ಎನಿಸಿತು.

ಬೆಳಗಿನ ಶುಭ ವೇಳೆಯಲ್ಲಿ ಉತ್ತರ ಪ್ರದೇಶ ಯಾತ್ರೆ ಹೀಗೆ ಶುಭವಾಗಿ ಆರಂಭವಾದುದು ವಿನೋಬಾಗೆ ಹರ್ಷವಾಯಿತು. ನೋಟವೂ ರಮಣೀಯವಾಗಿತ್ತು. ಗಹನವಾದ ವನ, ಮನೋರಮ ಪರ್ವತಪಂಗ್ತಿ, ನೀಲಾಕಾಶ, ಹೊಳೆ ಹೊಳೆಪ ನಕ್ಷತ್ರ, ಎಲ್ಲಕ್ಕಿಂತ ಹೆಚ್ಚಾಗಿ ಮುಂದೆ ಹೆಸರಾಗಬಲ್ಲ ಮಕ್ಕಳು. ವಿನೋಬಾ ಮುಗ್ಧರಾದರು.

ಜನರು ಸಾವಿರಾರು ಎಕರೆ ಹೊಲ ಕೊಟ್ಟದಾರೆ. ಆದರೆ ಸಮಸ್ಯೆ ಬಹಳ ದೊಡ್ಡದು. ಈ ಸಾವಿರಾರು ಎಕರೆಯಿಂದ ಹರಿಯುವಂತಿಲ್ಲ. ಈಗಿನ ಹೊಲದ ಒಡೆಯರು ಹೊಲವಿಲ್ಲದ ತಮ್ಮ ಲಕ್ಷಾಂತರ ಸೋದರರಿಗಾಗಿ ೫ ಕೋಟಿ ಎಕರೆ ಹೊಲ ಬಿಟ್ಟು ಕೊಡಲಿ

ಎಂದು ವಿನೋಬಾಜಿಯ ಆಸೆ. ಹಾಗಾದರೆ ಇಡೀ ಲೋಕವೇ ಭಾರತದ ಕಡೆ ಆಸೆಯಿಂದ ನೋಡೀತು. ಬುದ್ಧ, ಗಾಂಧೀ ಹುಟ್ಟಿದ ದೇಶದಲ್ಲಿ ಈ ಪವಾಡ ಅಸಾಧ್ಯವೇನಲ್ಲ

**ಗೋಪಾಲ ಕಲೇವಾ:** ಮುಂಜಾನೆ ೬ ಗಂಟೆ. ಒಂದು ಮೈಲಿಗಲ್ಲಿನ ಬಳಿ ವಿನೋಬಾ ತಿಂಡಿ ತಿನ್ನುತ್ತ ಕುಳಿತರು. ಅಲ್ಲಿಯೂ ನೂರು ಜನ ಬಂದು ಗುಂಪುಗೂಡಿದರು. ನಮ್ಮ ತಂಡದ ಸದಸ್ಯರೂ ವಿನೋಬಾ ಜತೆಯಲ್ಲಿ ತಿಂಡಿ ತಿನ್ನುತ್ತಿದ್ದರು ಸದಾ ಯಾರಾದರೂ ಜತೆಯಲ್ಲಿ ಇದ್ದೇ ಇರುತ್ತಾರೆ. ನಮ್ಮಲ್ಲಿದ್ದುದನ್ನು ಆ ವೇಳೆಗೆ ಎಲ್ಲರಿಗೂ ಹಂಚಿಬಿಡುತ್ತೇವೆ. ಆದರೆ ಇಂದು ಸಂಖ್ಯೆ ಬಹಳ ಹೆಚ್ಚಾಗಿತ್ತು. ಅವರೆಲ್ಲರೂ ನಮ್ಮ ಜತೆಗೆ ತಿನ್ನಬೇಕು ಎಂದು ನಮ್ಮ ಆಸೆ ಆದರೆ ಅದು ಹೇಗೆ ಸಾಧ್ಯ?

ಗುಡ್ಡ ಹತ್ತಿ, ಅದರ ತಲೆಯ ಮೇಲಿನ ಬಯಲಿನಲ್ಲಿ ಮೂಸಾ ತನ್ನ ಕೋಲಿನಿಂದ ನೆಲ ಗೀಚಿದನಂತೆ ದೇವರು ಅಲ್ಲಿ ನೀರು, ಕಾಳು ಹುಟ್ಟಿಸಿದನಂತೆ. ಇಲ್ಲಿ ಮಾತ್ರ ದೇವರು ಆ ದಯೆ ತೋರನೇನು? ದ್ರೌಪದಿಯ ಅಕ್ಷಯಪಾತ್ರೆಯ ಕಥೆ ಕೇಳಿದೇವೆ. ಮೂಸಾನ ಜತೆಗಾರರು ತಮ್ಮ ಬಿಡುವು ದಿನಕ್ಕಾಗಿ ಊಟವನ್ನು ಅಣಿ ಮಾಡಿಟ್ಟಿರುತ್ತಿದ್ದರು. ನಮಗೆ ಬಿಡುವು ದಿನ ಯಾವುದೂ ಇಲ್ಲ. ಮೊದಲೇ ಸಂಗ್ರಹಿಸಿಡಲು ನಮಗೆ ಅಗತ್ಯವೂ ಇಲ್ಲ ಹೊಸ ದಿನ ಬರುತ್ತದೆ. ಹೊಸ ಯಜಮಾನನನ್ನು ತರುತ್ತದೆ. ಈ ನಿತ್ಯ ನವ ಆತಿಥ್ಯದಲ್ಲಿ ಈ ಅಪರಿಚಿತ-ಪರಿಚಿತರಲ್ಲಿ ಸಿಗುವ ಆದರದಲ್ಲಿ ಇರುವ ಆನಂದ ಅವರ್ಣನೀಯ. ನಮ್ಮ ತಂಡದ ಒಬ್ಬ ಗೆಳೆಯನಿಗೆ ಹಿಂದಿನ ದಿನವೇ ಮನೆಯಿಂದ ಹಣ್ಣಿನ ಬುಟ್ಟಿಯ ಪಾರ್ಸಲು ಒಂದು ಬಂದಿತ್ತು. ಅದು ನಮಗೀಗ ನೆರವಾಗಿ, ಎಲ್ಲರಿಗೂ ಪ್ರಸಾದ ದೊರೆಯುವಂತಾಯಿತು.

ಪ್ರಾಸಂಗಿಕವಾಗಿ, ವಿನೋಬಾ ಬಾರಿ ಬಾರಿಗೂ ಹೇಳುವ

ಒಂದು ಸೂಚನೆಯನ್ನು ಇಲ್ಲಿ ಹೇಳಿದರು. "ಸ್ವಾಗತ—ಸತ್ಕಾರ ಗಳಲ್ಲಿ ಮುಳುಗಬೇಡಿ, ಜೋಕೆ. ಸ್ವಾಗತ ಸಿಕ್ಕೀತು ಅತಿಯಾಗಿ, ಹೊಲ ಸಿಕ್ಕೀತು ಮಿತವಾಗಿ." ಕೆಲಸಗಾರರು ಯಜ್ಞದ ಸಾಫಲ್ಯ ಕ್ಕಾಗಿ ತಮ್ಮ ಸಮಯವನ್ನೆಲ್ಲ ವೆಚ್ಚಮಾಡಬೇಕು, ಆದರಾತಿಥ್ಯದಲ್ಲಲ್ಲ ಎಂದು ಅವರ ಅಭಿಪ್ರಾಯ.

ದಿವಾನ ಹನುಮಂತಸಿಂಹರು ಅಮುಝೂರಾಘಾಟಿನಲ್ಲಿ ೮೪ ಎಕರ ಕೊಟ್ಟಿದ್ದರು ಇಲ್ಲಿಗೂ ಒಂದರು ಎರಡು ಮಾತು ಹೇಳಲು ತನಗೆ ಅವಕಾಶಕೊಡಿ ಎಂದು ಕೇಳಿದರು ವಿನೋಬಾ ಒಡನೆಯೇ ಒಪ್ಪಿಕೊಂಡರು. ದಿವಾನರು ಎದ್ದುನಿಂತು, 'ಇನ್ನೂರು ಎಕರೆ ಹೊಲ ನೀಡಬೇಕೆಂದಿದೇನೆ, ಅಪ್ಪಣೆಕೊಡಿ' ಎಂದರು. ಇನ್ನೇನೂ ಹೇಳ ಲಾಗಲಿಲ್ಲ ಕೂರಳುತುಂಬಿ ಬಂತು ವಿನೋಬಾಜಿಯ ಬೆಳಗಿನ ಪ್ರವಚನ ಅವರ ಮೇಲೆ ಬಹಳ ಪ್ರಭಾವ ಬೀರಿತ್ತು.

ಮಧ್ಯಪ್ರದೇಶದ ಕೆಲವರು ಗೆಳೆಯರು ಇಲ್ಲಿಯವರೆಗೆ ನಮ್ಮ ಜತೆಯಲ್ಲಿ ಬಂದರು ವಿನೋಬಾಜಿಯನ್ನು ಬರಿಗೈಯಲ್ಲಿ ಕಳಿಸಿ ಕೊಡುವುದು ಸರಿಯಲ್ಲ ಎಂದು ಒಬ್ಬರಿಗೆ ಅನಿಸಿತು ಎದ್ದುನಿಂತು ತಮ್ಮ ಪ್ರಾಂತದ ಕಡೆಯ ಕಾಣಿಕೆ ಎಂಬಂತೆ, ೨ ಎಕರೆ ದಾನ ನೀಡಿ ದರು.

**ಹೊಲ · ಎಲ್ಲರದೂ**—ಭಗವಂತನ ವಿಕೇಂದ್ರಿತ ಶಾಸನ ಪ್ರಣಾಳಿಯನ್ನು ತಿಳಿಸುತ್ತ, ವಿನೋಬಾ ಒಂದು ಕಡೆ ಹೇಳಿದರು: 'ದೇವರ ಏರ್ಪಾಟು ನೋಡಿ. ನಮಗೆ ಜನ್ಮಕೊಟ್ಟ. ಸ್ವೇಚ್ಛೆಯಾಗಿ ಉಸಿರಾಡಲು ಮೂಗು ಕೊಟ್ಟ. ಮಗುವಿಗೆ ಹಾಲು ಬೇಕು ಎಂದು ಅದರ ಏರ್ಪಾಟು ಮಾಡಿದ. ಇಂಥವನು ಹೊಲವನ್ನು ಹತ್ತೇ ಜನರ ಕೈಯಲ್ಲಿ ಇಟ್ಟಾನೆಯೆ?'

ಭೂದಾನ ಯಜ್ಞ ಎಂದರೆ ಹೊಲವನ್ನು ಸಮವಾಗಿ ಹಂಚುವುದಲ್ಲ.

ಅದೊಂದು ರೂಪು, ಸಂಕೇತ, ಅಷ್ಟೆ.

ಈ ವಿಚಾರ ಜನಕ್ಕೆ ಸರಿಯಾಗಿ ತಿಳಿದರೆ ಅದು ಮೊಳೆತೀತು. ಕುಡಿಯೊಡೆದೀತು. ಆಮೇಲೆ ಅದಕ್ಕೆ ನಾಶವಿಲ್ಲ. ಹೊಲ ಇದ್ದವನು ಇಲ್ಲದವನನ್ನು ಅರಸಿಯಾನು; ತಂದೆ ಮಗಳಿಗಾಗಿ ವರನನ್ನು ಹುಡುಕುವಂತೆ. ಈ ವಿಚಾರ ಬೇಗ ಹರಡಬೇಕೆಂದು ವಿನೋಬಾಗೆ ಅವಸರವೇನಿಲ್ಲ. ಆ ವಿಚಾರ ತನ್ನ ಕಾಲವನ್ನು ತಾನೇ ಸಾಧಿಸೀತು, ಹಬ್ಬೀತು.

**'ನಾಹಂ ಬಿಭೇಮಿ.'** ಅವರು ಇಷ್ಟೆಲ್ಲ ಪ್ರಯತ್ನ ಮಾಡಿದರೂ, ಕಮ್ಯುನಿಸ್ಟರು ಬಯಸುವಂತೆ, ಸಮಾಜವಾದಿಗಳು ಪೂರ್ಣವಾಗಿ ಬಿಡಲು ಸಿದ್ಧರಿಲ್ಲದಿರುವಂತೆ—ಕೊಲೆ ಖೂನಿ ಅನಿವಾರ್ಯವಾದರೆ ಅದಕ್ಕೆ ವಿನೋಬಾಜಿ ಹೆದರರು. ನರಸಿಂಹ ಅವತಾರವಾದಾಗ ನಾರದನಂಥ ಭಕ್ತನೂ ದಂಗು ಬಡಿದ. ಎಂದೆಂದೂ ನಿಲ್ಲದ ಅವನ ವೀಣಾವಾದನ ಒಂದು ಗಳಿಗೆ ನಿಂತು ಹೋಯಿತು. ಆದರೆ ಪ್ರಹ್ಲಾದ ಮಾತ್ರ ಆಗಲೂ ನಿರ್ಭಯವಾಗಿ ಇದ್ದ. 'ನಾಹಂ ಬಿಭೇಮಿ'-'ನಾನು ಹೆದರುವುದಿಲ್ಲ', ಎಂದು ಅವನು ಹೇಳಿದ. ವಿನೋಬಾ ಹೇಳಿದರು. 'ನಾನೂ ಹಾಗೆಯೇ ಹೇಳುತ್ತೇನೆ, ಮಾಡುತ್ತೇನೆ. ಜಗತ್ ಯುದ್ಧ ಬಂದರೆ ಬರಲಿ. ನನಗಂಜಿಕೆಯಿಲ್ಲ. ಅದರಲ್ಲೂ ಅಹಿಂಸೆಯ ದಾರಿ ಹುಟ್ಟಿ ಬಂದೀತು. ಅಹಿಂಸಯ ಪ್ರಚಾರ ಮಾಡುಮಾಡುತ್ತ ನಾನು ಹೋಗಬೇಕಾಗಿ ಬಂದರೆ, ನನ್ನ ಈ ವಿಚಾರ ಸಾವಿರ ಸಾವಿರ ರೂಪಗಳಲ್ಲಿ ಕುಡಿಯೊಡೆದೀತು ಎಂಬ ವಿಶ್ವಾಸದಿಂದ ಹೋಗುತ್ತೇನೆ.'

**ಕಾಲುನಡಿಗೆಯ ಪ್ರೇರಣೆ.** ೯ನೆ ತಾರೀಕಿಗೆ ಲಲಿತಾಪುರಕ್ಕೆ ಬಂದೆವು. ಅಲ್ಲಿ ಕೆಲಸಗಾರರೊಡನೆ ಮಾತಾಡುತ್ತ ವಿನೋಬಾ ತಮ್ಮ ಹೃದಯವನ್ನು ತೆರೆದು ಸುರಿದರು–'ಯಾವ ಬಗೆಯ ಪ್ರಚಾರ ಮಾಡಲೂ ನನಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ಬಾಪೂ ನಿರ್ವಾಣದ ತರು

ವಾಯು ನಾನು ನನ್ನ ಹೊಣೆಗಾರಿಕೆಯನ್ನು ಅರಿತೆ ಈ ಕೆಲಸ ಕೈಗೊಂಡೆ. ಅಹಿಂಸಕ ಕ್ರಾಂತಿ ಮಾಡಬೇಕೇ, ಹಾಗಾದರೆ ಹಳ್ಳಿಹಳ್ಳಿಗೂ ಕಾಲ್ನಡಿಗೆಯ ಯಾತ್ರೆ ಮಾಡಬೇಕು ಎಂದು ಅನುಭವ ನನಗೆ ತಿಳಿಸಿದೆ.' ಭಾರತದಲ್ಲಿ ಅಹಿಂಸೆಯ ವಿಕಾಸ ಹೇಗಾಯಿತೆಂಬುದನ್ನು ವಿವರಿಸಿದರು. ಮಾತುಕತೆಯಲ್ಲಿ ಬಂದ ಈ ಅಂಶವನ್ನು ಸಂಜೆಗೆ ಪ್ರಾರ್ಥನೆಯಲ್ಲಿ ಮತ್ತೆ ಹೇಳಿದರು. 'ನಮ್ಮ ದೇಶ ಪೂರಾ ನಿಃಶಸ್ತ್ರವಾಗಿತ್ತು. ಆದ್ದರಿಂದ ಗಾಂಧೀಜಿ ನಮ್ಮ ದೇಶಕ್ಕೊಂದು ಐತಿಹಾಸಿಕ ಅಗತ್ಯವಾದರು. ಅಂತೇ ಗಾಂಧೀಜಿಯ ಜತೆಗೆ ಅಹಿಂಸೆಯು ಅಸ್ತ್ರವು[illegible]ತು. ಜನರು ಸಂದರ್ಭಾನುಸಾರ ಈ ಅಸ್ತ್ರವನ್ನು ಬಳಸಿದರು. ಆದರೆ ಅದರ ತಳದಲ್ಲಿರುವ ಶ್ರದ್ಧೆಯನ್ನು ಅವರು ಗ್ರಹಿಸಲಿಲ್ಲ. ಗಾಂಧೀಜಿಯ ನಿಕಟವಾಸಿಗಳೂ ಅದನ್ನು ಕೈಬಿಟ್ಟರು ನಾಲದ್ದಕ್ಕೆ ಒಬ್ಬ ಹುಚ್ಚು ತರುಣ ಅವರ ಮಣ್ಣು ಮೈಯನ್ನು ನಾಶಮಾಡಿದ.'

ಮುಂಬರಿದು ವಿನೋಬಾ ಹೇಳಿದರು. 'ಇದನ್ನು ನನ್ನ ಕಣ್ಣಿನಿಂದ ನೋಡಿ ಈ ಅಹಿಂಸೆಯ ಶಕ್ತಿಯನ್ನು ನಮ್ಮ ಶಿಕ್ಷಿತವರ್ಗ ಪ್ರಕಟಿಸಲಾರದೆಂದು ನನ್ನ ಅನುಭವ ಹೇಳುತ್ತಿದೆ. ಈ ಜನ ರಾಮ, ಕೃಷ್ಣ, ಬುದ್ಧ, ಯೇಸು, ಶಿವಾಜಿ, ಯಾರ ದಾರಿಯನ್ನಾದರೂ ತುಳಿದಾರೇನು? ನಮ್ಮ ಸಾಮಾನ್ಯ ಜನತೆ ಅಹಿಂಸೆಯ ಸಂದೇಶವನ್ನು ಆಲಿಸುತ್ತದೆ, ಪಾಲಿಸುತ್ತದೆ. ಅವರೇ ಈ ಅಸ್ತ್ರವನ್ನು ಪ್ರಯೋಗಿಸಿದವರು!'

ಆಮೇಲೆ, ಪರಂಧಾಮದಲ್ಲಿ ಮೊದಲಾದ 'ಕಾಂಚನಮುಕ್ತಿ' ಪ್ರಯೋಗವನ್ನು ಕುರಿತು ಹೇಳಿದರು.-'ನಾನು ಬಡವರಿಗೂ ಭಾಗ್ಯವಂತರಿಗೂ ಗೆಳೆಯ. ಇಬ್ಬರದೂ ಕಲ್ಯಾಣವನ್ನು ಬಯಸುತ್ತೇನೆ. ಎಲ್ಲರೂ ನನಗೆ ಭಗವಂತನ ಸ್ವರೂಪ. ಭಾಗ್ಯವಂತ ಇವೊತ್ತು ನನಗೆ ಹೊಲ ಕೊಡದಿದ್ದರೆ ನಾಳೆ ಕೊಟ್ಟಾನು, ನನಗೆ ವಿಶ್ವಾಸವಿದೆ.

ನನ್ನ ವಿಚಾರವನ್ನು ಅಲ್ಲಿಯವರೆಗೂ ಹರಿಯಿಸುವುದು ನನ್ನ ಕೆಲಸ.'

**ದಳ—ವಿಹೀನ ನಾನು:** ತಮ್ಮದು ಯಾವ ಪಕ್ಷ-ದಳವೂ ಇಲ್ಲ ಎಂಬುದನ್ನು ವಿನೋಬಾ ಸ್ಪಷ್ಟಗೊಳಿಸಿದರು. ಪ್ರೇಮ-ಸೇವೆ ಗಳೇ ಅವರ ಪಕ್ಷ-ದಳ. ಜನತೆಯ ಅವರ ಒಡೆಯ. ಅವರು ಅದರ ಆಳು. ಜನ ಯಾವ ಪಕ್ಷದಲ್ಲೇ ಇರಲಿ, ತಮ್ಮ ಮಾರ್ಗ ಪ್ರೇಮದ್ದು. ಪ್ರೇಮಸೂರ್ಯ ಹುಟ್ಟಿದ ಮೇಲೆ ಎಲ್ಲ ಮಾರ್ಗಗಳೂ ಚುಕ್ಕೆಗಳಂತೆ ನಿಸ್ತೇಜವಾಗುತ್ತವೆ, ಮುಳುಗುತ್ತವೆ ಇದನ್ನು ಜನತೆಗೆ ತಿಳಿಸ ಬೇಕಾಗಿದೆ

ಸಾಮೂಹಿಕ ಸೂತ್ರಯಜ್ಞದಲ್ಲಿ ನೂರು ಜನ ಇದ್ದರು. ಸಂಜೆಗೆ ಸುಪ್ರಸಿದ್ಧ ಜೈನ ಸಾಧು ಶ್ರೀ ಗಣೇಶಜೀ ವರ್ಣೀ, ವಿನೋಬಾ ಭೇಟಿಗೆ ಬಂದರು. ಅವರ ಆತ್ಮ ಕಥೆಯನ್ನು ವಿನೋಬಾ ಓದಿದ್ದರು. ಅವರ ಬಗ್ಗೆ ಆದರ ಭಾವವಿತ್ತು ಭೂದಾನ ಯಜ್ಞದಲ್ಲಿ ಪೂರಾ ನೆರವು ನೀಡುವುದಾಗಿ ಸಾಧುಗಳು ವಚನಕೊಟ್ಟರು

ಸಂಜೆಯ ಪ್ರವಚನ ಬಹಳ ಗಂಭೀರ, ಮಹತ್ವ ಪೂರ್ಣ ಆಗಿತ್ತು.

ಲಲಿತಾಪುರದಿಂದ ಟಿಕಮಗಡಕ್ಕೆ ಹೋಗುವ ದಾರಿಯಲ್ಲಿ ಉತ್ತರ ಪ್ರದೇಶದ ಎರಡು ಹಳ್ಳಿಗಳಲ್ಲಿ ಖಿತವಾಂಸ್-ಮಹರೌನೀ-ಬಿಡಾರವಾಯಿತು. ಖಿತವಾಂಸ್ ಜನ ಎರಡು ದಿನದಿಂದ ಹಳ್ಳಿಯ ನ್ನೆಲ್ಲ ಸ್ವಚ್ಛ ಮಾಡಿಟ್ಟಿದ್ದರು. ಹಳ್ಳಿಯವರ ಹುರುಪು ಅವರ್ಣನೀಯ. ಅಲ್ಲಿ ೨೨೧ ಎಕರೆ ಹೊಲ ದಾನ ಕೊಟ್ಟರು. ಮಹರೌನೀಯಲ್ಲಿ ೭೦೦ ಎಕರೆ ಸಿಕ್ಕಿತು. ಉತ್ತರ ಪ್ರದೇಶದ ಈ ಮೂರುದಿನದ ಅನು ಭವವೇ ತಿಳಿಸಿತು—ಜನ ಎಚ್ಚೆತ್ತಿದಾರೆ, ಈ ಕ್ರಾಂತಿ ಕಾರ್ಯದ ಮಹ ತ್ವವನ್ನೂ ಅರಿತಿದಾರೆ

## ೫ ನೀವೇ ನನ್ನ ಕೃಷ್ಣ

ವಿಂಧ್ಯ ಪ್ರದೇಶದ ಕೆಲಸಗಾರರ ಆಗ್ರಹದಿಂದ ಅಕ್ಟೋಬರ್ ೧೧ರ ದಿನ ಉತ್ತರ ಭಾರತ ಯಾತ್ರೆಯ ನೇರುದಾರಿಯನ್ನು ಬಿಟ್ಟು ವಿಂಧ್ಯ ಸೀಮೆಯನ್ನು ಹೊಕ್ಕೆವು. ಪ್ರಸಿದ್ಧ ಹಿಂದೀ ಲೇಖಕ ಶ್ರೀ ಬನಾರಸೀ ದಾಸ ಚತುರ್ವೇದಿ ಕಳೆದ ೧೪ ವರ್ಷಗಳಿಂದ ಟಿಕಮುಗಡದಲ್ಲಿ ಕೆಲಸ ಮಾಡುತ್ತಿದಾರೆ. ಅವರ ಜತೆಗೆ ಹುರುಪಿನ ಹರೆಯದವರ ತಂಡವೊಂದು ಇದೆ ಚತುರ್ವೇದಿ ಪ್ರಿನ್ಸ್ ಕ್ರೊಪಾಟ್ಕೀನ್ ಭಕ್ತರು. ಗಾಂಧೀ ವಿಚಾರವನ್ನು ಆಳವಾಗಿ ಅಧ್ಯಯನ ಮಾಡಿದಾರೆ. ಅದನ್ನು ವಿಮರ್ಶಿಸಿದಾರೆ. ವಿನೋಬಾ ಸಾಹಿತ್ಯವನ್ನು ಎರಡು ವಾರ ಏಕಾಗ್ರವಾಗಿ ಅಧ್ಯಯನ ಮಾಡಿದರು ಅದರಿಂದ ಬಹಳ ಪ್ರಭಾವಿತರಾಗಿ, ಅವರ ಅಶ್ರದ್ಧೆಯ ಮೋಡ ಚದುರಿ ಅಹಿಂಸೆಯಲ್ಲಿ ದೃಢ ವಿಶ್ವಾಸ ಮೂಡಿತು.

ಅವರು ವಿನೋಬಾಗೆ ಗಾಂಧೀಭವನವನ್ನು ತೋರಿಸಿ, ಅದರ ಉದ್ದೇಶ್ಯ ಕೆಲಸಗಳನ್ನು ತಿಳಿಸಿ ಹೇಳಿದರು. ಗಾಂಧೀಭವನ ಗಾಂಧೀಜಿಯ ನೆನಪಿಗಾಗಿ ಟಿಕಮುಗಡದ ಮಹಾರಾಜರು ಕೊಟ್ಟ ದಾನ. ಭವನವಿರುವ ಸ್ಥಾನ ರಮಣೀಯವಾಗಿದೆ. ಕಲಕಲನಿನಾದ ಮಾಡುವ ಜಲಪಾತ; ಝರಿಗಳು ಸೊಂಪಾದ ವನಶ್ರೀ ನಾಲ್ಕೂ ಕಡೆ ಹಬ್ಬಿದೆ. ಭವನದಲ್ಲಿ ಚತುರ್ವೇದಿಗಳಿಗೆ ಗಾಂಧೀಜಿ, ದೀನ ಬಂಧು ಆಂಡ್ರೂಸ್ ಬರೆದ ಪತ್ರಗಳ ಬಹಳ ಬೆಲೆಯುಳ್ಳ ಸಂಗ್ರಹವಿದೆ. ಅವನ್ನು ನೋಡಿ ಕಣ್ಣು-ಮನಸ್ಸು ಎರಡೂ ತುಂಬಿದುವು ವಿನೋಬಾಜಿಯ ಇತ್ತೀಚಿನ ಭಾಷಣ-ಲೇಖನಗಳನ್ನು ಚಿಕ್ಕ ಚಿಕ್ಕ ಪುಸ್ತಕಗಳಾಗಿ ಪ್ರಕಟಿಸಬೇಕೆಂದು ಚತುರ್ವೇದಿಗಳ ಅಭಿಪ್ರಾಯ. ಇದನ್ನು ಸಾಹಿತ್ಯ-ಸದಾವ್ರತ ಎನ್ನುತ್ತಾರೆ ಅವರು. ಇದರಲ್ಲಿ, ಇದರ ಸಫಲತೆಯಲ್ಲಿ ಅವರಿಗೆ

ಅಪಾರ ಶ್ರದ್ಧೆ. ಅದನ್ನು ಕಂಡು ವಿನೋಬಾಜಿ ಆಗಲಿ ಎನ್ನದಿರಲು ಸಾಧ್ಯವಿರಲಿಲ್ಲ. ಈ ಯೋಜನೆ ಭೂದಾನ-ಯಜ್ಞದಲ್ಲಿ ನೆರವಾದೀತು ಎಂಬ ಆಸೆಯಿದೆ.

**ವಿಂಧ್ಯದ ಕೀರ್ತಿ:** ಸ್ವಾತಂತ್ರ್ಯಕ್ಕೆ ಮೊದಲು ವಿಂಧ್ಯ ಪ್ರದೇಶ ದಲ್ಲಿ ೩೪ ರಾಜ್ಯ ಇದ್ದುವು ಅವನ್ನು ಕಲೆಸಿ ಹೊಸದೊಂದು ಪ್ರಾಂತ ಮಾಡಲಾಯಿತು. ಈ ಸೀಮೆ ಮೈಥಿಲೀಶರಣಗುಪ್ತ, ವಿಯೋಗಿಹರಿ, ಘಾಸಿರಾಮ ವ್ಯಾಸ ಮುಂತಾದ ಸಾಹಿತಿಗಳ ಜನ್ಮಭೂಮಿ. ಇಲ್ಲಿನ ಕೊಳ, ಕೊಳದಲ್ಲಿ ಅರಳುವ ಕಮಲ, ಈ ವಿಂಧ್ಯದ ಬನಸಿರಿ, ಹಣ್ಣು, ಜೇನು ಎಲ್ಲವೂ ಅನುಪಮವಾದುವು. ಇದರ ಪ್ರಾಕೃತಿಕ ಖನಿಜ ಸಂಪತ್ತಿ ಎಷ್ಟಿದೆಯೋ ಇನ್ನೂ ತಿಳಿದುಬಂದಿಲ್ಲ. ಇಲ್ಲಿ ಜನವಸತಿ ಬಹು ವಿರಳ. ಭಾರತದ ಸರಾಸರಿ ಜನವಸತಿ ಚದರ ಮೈಲಿಗೆ ೩೧೩; ಇಲ್ಲಿ ೧೪೭ ಮಾತ್ರ.

ಅಲ್ಲಿಗೆ ವಿನೋಬಾಜಿ ಬರಬೇಕೆಂದು ಕೆಲಸಗಾರರಿಗೆ ಇಷ್ಟ. ಆದರೆ ಅಲ್ಲಿ ಸರಿಯಾದ ದಾರಿಗಳೇ ಇಲ್ಲ. ಆದ್ದರಿಂದ ಅವರಿಗೆ ಕರೆ ಯಲಿಕ್ಕೂ ಸಂಕೋಚ. ಅಲ್ಲದೆ ಅಕ್ಟೋಬರ್ ೧೦ರ ವೇಳೆಗೆ ಮಳೆ ಬರುವ ಸಂಭವವೂ ಉಂಟು. ಇಂಥ ಸಂದರ್ಭದಲ್ಲಿ ಒಳನಾಡಿನ ಗುಡ್ಡ-ಕಾಡಿನಲ್ಲಿ, ಕಾಡುದಾರಿಯಲ್ಲಿ ವಿನೋಬಾಜಿಯನ್ನು ಕರೆದೊ ಯ್ಯುವುದು ಕಠಿಣವಾದೀತೆಂದು ಎಣಿಸಿದರು. ಆದರೆ ಒಮ್ಮೆ ವಿನೋ ಬಾಜಿ ಈ ಬಡವರ ಸಂಕಟವನ್ನು ಕಣ್ಣಾರೆ ಕಂಡು ಹೋಗಲೆಂದು ಬನಾರಸಿದಾಸರ ಬಯಕೆ. ಒಮ್ಮೆ ಠಕ್ಕರ ಬಾಪಾ ಕೆಲವು ದಿನ ಇಲ್ಲಿ ತಂಗಿದ್ದರು. ವಿನೋಬಾಜಿ ಬೇಗ ದಿಲ್ಲಿಗೆ ಹೋಗಬೇಕಾಗಿತ್ತು. ವಿಂಧ್ಯ ಪ್ರದೇಶ ಗೊತ್ತಾದ ದಾರಿಯಲ್ಲಿ ಇರಲಿಲ್ಲ. ಆದರೆ ದಲಿತ ಜನತೆಯ ದುಃಖದೊಡನೆ ಸ್ಪಂದಿತರಾಗುವ ವಿನೋಬಾಜಿಯ ಹೃದಯ ವಿಂಧ್ಯವಾಸಿಗಳ ಬಯಕೆಗೆ ಇಲ್ಲವೆನ್ನಲಾರದಾಯಿತು. ಒಳಿ

ತೇ ಆಯಿತು ! ಈ ಜನರ ಸ್ಥಿತಿ ನಿಜವಾಗಿಯೂ ಕರುಣಾಮಯವಾ ಗಿದೆ ತಮ್ಮ ಆಹಾರವನ್ನೆಲ್ಲ ಅವರೇ ಬೆಳೆಸಿಕೊಳ್ಳಬಲ್ಲರು. ಆದರೂ ಅವರು ಕಡು ಬಡತನದ ಭಾರದಿಂದ ಚೈತ್ರ, ವೈಶಾಖಗಳಲ್ಲಿ ಕೊಯ್ಲು ಗಾಲ ಬಂದಾಗ ತಿಂಗಳುಗಟ್ಟಲೆ ಉತ್ತರ ಪ್ರದೇಶ, ಮಧ್ಯ ಪ್ರದೇಶ ಗಳಿಗೆ ಕೂಲಿಮಾಡಲು ಅಲೆದಾಡುತ್ತಾರೆ ಅವರಿಗೆ 'ಚೈತುವಾ' ಚೈತ್ರ ಮಾಸದ ಜನ—ಎಂಬ ಹೆಸರೇ ಬಂದಿದೆ. ಚಿಕ್ಕವರು ದೊಡ್ಡವರು ಮುದುಕರು, ಹೆಂಗಸರು ಸಾವಿರಾರು ಮಂದಿ ಚಿಕ್ಕ ಚಿಕ್ಕ ಮಕ್ಕಳನ್ನು ಬುಟ್ಟಿಗಳಲ್ಲಿ ಹೊತ್ತುಕೊಂಡು ಮನೆಮಾರು ಬಿಟ್ಟು ಹೊರಟುಹೋಗು ತ್ತಾರೆ ಇಲ್ಲಿ ಬೆಳೆವ ಧಾನ್ಯ ಬಹಳ ಹೀನವಾದುದು ಅದರಲ್ಲಿ ಪುಷ್ಟಿ ಶಕ್ತಿಯೇ ಇಲ್ಲ ತಿನ್ನಲು ಯೋಗ್ಯವೂ ಅಲ್ಲ ತಿಂದರೆ ಬಾಧ ಕವೂ ಆಗುತ್ತದೆ ಈ ತಿನ್ನಲಾರದ ಕಾಳಿನ ಪಟ್ಟಿ ಹೀಗಿದೆ. ಎಲ್ಲ ಕ್ಕಿಂತ ಹೆಚ್ಚು ಕೀಳಾದುದು ಮೊದಲು

ಖಿಕಾರ್ ರೂ ಗೆ ೭ ಸೇರು, ಕನವಾನೀ ೭ ಸೇ, ರಾಲಿ ೭ ಸೇ, ಸಮಾ ೭ ಸೇ. ತುಟಕೀ ೪ ಸೇ. ಕೊದೋ ೫ ಸೇ, ಕೊದಯೀ ೩ ಸೇ.

ಈ ಧಾನ್ಯ ಬೆಳೆಯುತ್ತದೆ ಇದನ್ನು ತಿಂದು ಜನರು ಹೊಟ್ಟೆ ಕೆಡಿಸಿಕೊಳ್ಳುತ್ತಾರೆ. ಬೀಜ, ಗೊಬ್ಬರ ಮುಂತಾದ ಅನುಕೂಲ ದೊರೆತರೆ ಇಲ್ಲಿನ ಜನ ಯಥೇಚ್ಛವಾಗಿ ಗೋಧಿ, ಅಕ್ಕಿ ಬೆಳೆಯ ಬಲ್ಲರು. ಈ ಅನುಕೂಲ ಅವರಿಗೆ ಬೇಗ ದೊರೆಯಬೇಕು. ಹಳೆಯ ಕೆರೆಗಳ ಜೀರ್ಣೋದ್ಧಾರ ಮಾಡಿದರೆ ಹೊಲಗಳಿಗೆ ಸಾಕಷ್ಟು ನೀರು ಆಗುತ್ತದೆ. ತಮ್ಮ ಹಳ್ಳಿಯ ಕೆರೆಯನ್ನು ಸರಿಪಡಿಸಿಕೊಡಬೇಕೆಂದು ಜೀವರಾ ಗ್ರಾಮಸ್ಥರು ವಿನೋಬಾಗೆ ಅರ್ಜಿ ತಂದು ಕೊಟ್ಟರು. ಈ ಕೆರೆ ಸರಿಯಾದರೆ ೪೦೦ ಎಕರೆಗೆ ನೀರು ಹರಿಯುತ್ತದೆ. ಸರ ಕಾರ ಇದನ್ನು ಮಾಡಿಸಿಕೊಡಲಿ ಎಂದು ಇವರ ಮನಸ್ಸು. ಆದರೆ ವಿನೋಬಾ ಈ ಕೆಲಸವನ್ನು ನೀವೇ ಸ್ವಂತ ಕಷ್ಟಪಟ್ಟು ಮಾಡಲು

ಒಪ್ಪಿದರೆ ಉಳಿದ ವೆಚ್ಚವನ್ನು ಕೊಡುವಂತೆ ಸರಕಾರಕ್ಕೆ ಹೇಳುತ್ತೇನೆ. ಎಂದರು. ಅದಕ್ಕೆ ಅವರು ಒಪ್ಪಿ ಒಂದು ಬಿನ್ನಹವನ್ನು ಬರೆದು ಅಧಿಕಾರಿಗಳಿಗೆ ಕಳಿಸಿಕೊಟ್ಟರು. ಇದೇ ರೀತಿ ಅನೇಕ ಹಳ್ಳಿಗಳಿಗೆ ಹುರುಪು ಕೊಟ್ಟರೆ ಎಷ್ಟೋ ಕೆರೆಗಳ ಜೀರ್ಣೋದ್ಧಾರ ಮಾಡಬಹುದು.

**ಹೊಸ ಬಗೆಯ ಜಮೀನುದಾರಿ:** ವಿಂಧ್ಯ ಪ್ರದೇಶದಲ್ಲಿ ೫ ದಿನ ಕಳೆದೆವು. ೨೦೪ ಜನ ದಾನಿಗಳಿಂದ ೮೦೦ ಎಕರೆ ಹೊಲ ಸಿಕ್ಕಿತು. ಅಲ್ಲಿ ಭೂದಾನ ಸಿಗದು, ಅಲ್ಲಿ ಜಮೀನುದಾರಿಯಿಲ್ಲ ಎಂದು ನಮಗೆ ಹೇಳಿದ್ದರು. ಆದ್ದರಿಂದ ಈ ದಾನ ಕಡಮೆಯಲ್ಲ ಹೀಗೆ ಹೇಳಿದವರಿಗಿಂತ ವಿನೋಬಾಜಿಗೆ ಮನುಷ್ಯ ಸ್ವಭಾವ ಚೆನ್ನಾಗಿ ಗೊತ್ತು. ಹೊಲ ಪೂರಾ ಸರಕಾರದ್ದೇ ಇರಬಹುದು. ಜಮೀನುದಾರರು ಇಲ್ಲದಿರಬಹುದು ಆದರೂ ರೈತರಲ್ಲಿ ಚಿಕ್ಕವರು ದೊಡ್ಡವರು ಎಂಬ ಭೇದ ಇದ್ದೇ ಇದೆ. ಕೆಲವರಿಗೆ ಹೊಲವೇ ಇಲ್ಲ. ಕೂಲಿ ದೊರೆತರೆ ಉಂಟು, ಇಲ್ಲದಿದ್ದರೆ ಇಲ್ಲ ಹೀಗೆ ಅನಿಶ್ಚಿತ ಜೀವನ. ರೈತವಾರೀ ಪದ್ಧತಿ ಇದ್ದರೂ ಸೇ. ೩೩ ರಷ್ಟು ಹೊಲ ಜಾಗೀರುದಾರರ ಕೈಯಲ್ಲಿದೆ. ಹೊಲ ಬೇಕಾದವರು ಬೇಡಿದರೆ ಕೊಡುತ್ತೇವೆಂದು ಸರಕಾರ ಹೇಳಿದೆ. ಆದರೆ ಅದಕ್ಕೆ ಏನೇನೋ ವಿಧಿ—ವಿಧಾನ. ಹೆಚ್ಚು ಅರ್ಜಿ ಬಂದರೆ ಹೊಲವನ್ನು ಹರಾಜು ಹಾಕುತ್ತಾರೆ. ಆಗ ಹಣ ಇದ್ದವರಿಗೆ ಹೊಲ ದಕ್ಕುತ್ತದೆ ಹೀಗೆ ನೂರಾರು ಎಕರೆ ಸ್ವಂತ ಬೇಸಾಯ ಮಾಡಲಾರದವರ ಕೈಗೆ ಹೋಗಿ ಇದೊಂದು ಬಗೆಯ ಹೊಸ ಜಮೀನುದಾರಿ ಹುಟ್ಟುತ್ತಿದೆ. ತಾವು ಬೇಡವೆಂದರೂ ತಮ್ಮ ಮನಸ್ಸಿಗೆ ವಿರುದ್ಧವಾಗಿ ಅವರ ಮಗನೇ ಇಂಥ ಹೊಲವನ್ನು ಹೆಚ್ಚಾಗಿ ಕಟ್ಟಿಕೊಂಡಿದ್ದಾನೆ ಎಂದು ಬನಾರಸೀ ದಾಸರು ಹೇಳಿದರು.

ವಿನೋಬಾ ಅಲ್ಲಿನ ಅಧಿಕಾರಿಗಳಿಗೆ ಹೇಳಿದರು. ‘ನೀವೇ

ಹಳ್ಳಿಗಳಿಗೆ ಹೋಗಿ ಹೊಲವಿಲ್ಲದವರನ್ನು ಹುಡುಕಿ ಅವರಿಗೆ ಹೊಲ ಕೊಡಬೇಕು. ಎಂದಾದರೂ ಹೀಗೆ ಮಾಡಿದೀರಾ? ನಮ್ಮ ಹುಡುಗಿಯರಿಗೆ ಮದುವೆ ಮಾಡುವಾಗ ಅಲಂಕಾರಮಾಡಿ ದಾನ ಕೊಡುವುದಿಲ್ಲವೆ?'

ಹೊಲದ ಜತೆಗೆ ರೈತನಿಗೆ ಎತ್ತು-ಬಿತ್ತವನ್ನು ಕೊಡಬೇಕು. ಈ ಸಾಧನ ದೊರೆತರೆ ರೈತ ಜಮೀನು ಮಾಡಿಯಾನು. ಈ ಓದುಬರಹ ಬಾರದ ರೈತರು ನಿಮಗೆ ಕಾನೂನು ಪ್ರಕಾರ ಹೊಲಕ್ಕಾಗಿ ಅರ್ಜಿ ಕೊಡಬಲ್ಲರೆ? ಸರಕಾರ ಸಾರಿ ಹೇಳಿದರೂ ಯಾರೂ ಜಮೀನನ್ನೇ ಬೇಡರು ಎಂದು ಅಧಿಕಾರಿಗಳ ದೂರು ಸಭೆಯಲ್ಲಿ ಈ ಮಾತು ಬಂದಾಗ ಜನರು ಎದ್ದುನಿಂತು, ನಮಗೆ ಹೊಲಬೇಕು, ಆದರೆ ಅಧಿಕಾರಿಗಳ ಕೈಯಿಂದ ನಮಗೇನೂ ಸಿಗುವುದಿಲ್ಲ ಎಂದರು. ಅಧಿಕಾರಿಗಳು ತಮಗೆ ಬಗೆಬಗೆಯ ಅಡಚಣೆ ತಂದೊಡ್ಡುತ್ತಾರೆ ಎಂದು ದೂರು ಹೇಳಿದರು.

ಮೊದಲೇ ಹೇಳಿದಂತೆ ಈ ದೇಶಕ್ಕೆ ನೀರು ಬಹಳ ಅಗತ್ಯ. ಸಾಕಷ್ಟು ನೀರು ಹರಿಯಿಸಿದರೆ ವಿಂಧ್ಯ ಪ್ರದೇಶ ಆಹಾರದ ಭಂಡಾರವಾದೀತು. ನೀರಿನ ಅಭಾವದಿಂದ ಕಿತ್ತಲೆ ಮರ ಒಣಗಿಹೋದುವು ಎಂದು ಬಹಳ ದುಃಖದಿಂದ ಶ್ರೀ ಬನಾರಸಿದಾಸರು ತಿಳಿಸಿದರು. ಸಾಕಷ್ಟು ಪೋಷಣೆಯಿಲ್ಲದೆ ಅಷ್ಟು ಮಂದಿ ಮಕ್ಕಳು ಮರಣ ಹೊಂದಿದರು ಎನಿಸಿತು ಅವರಿಗೆ. ಅವರ ಕಣ್ಣಿಗೆ ಬಂಗಾಲದ ಭೀಕರ ಕ್ಷಾಮಕ್ಕೂ ಈ ಕಿತ್ತಲೆ ಗಿಡಗಳ ವಿನಾಶಕ್ಕೂ ಏನೂ ಭೇದ ಕಾಣಲಿಲ್ಲ.

ಗೋರಕ್ಷಣೆ, ಗ್ರಾಮೋದ್ಯೋಗಗಳ ಬೆಳವಣಿಗೆಗೆ ಇಲ್ಲಿ ಧಾರಾಳವಾದ ಅವಕಾಶವಿದೆ. ಹಸುಗಳು ಹೇರಳವಾಗಿವೆ. ಆದರೆ ಎಲ್ಲವೂ ಕೀಳು ತಳಿ. ಹೊಲಕೆಲಸಕ್ಕಾಗಿ ಹೊರಗಿನಿಂದ ಎತ್ತುಗಳನ್ನು ಕೊಂಡು ತರುತ್ತಾರೆ. ಹಸುಗಳು ಸರಾಸರಿ ಅರ್ಧ ಸೇರಿಗಿಂತ ಹೆಚ್ಚು ಹಾಲು ಕೊಡುವುದಿಲ್ಲ. ದನದ ತಳಿಯನ್ನು ಉತ್ತಮಗೊಳಿಸುವ ಶಾಸ್ತ್ರೀಯ

ವ್ಯವಸ್ಥೆ ಯಾವುದೂ ಇಲ್ಲ. ಸರಕಾರ ಬೀಜದ ಹೋರಿಗಳ ವ್ಯವಸ್ಥೆಯನ್ನು ಕೂಡ ಮಾಡಿಲ್ಲ. ಪೃಥ್ವೀಪುರದಲ್ಲಿ ೩೫ ಗಾಣಗಳಿವೆ. ಕೆಲವು ವರ್ಷದ ಹಿಂದೆ ೧೦೦ ಗಾಣ ಇದ್ದವಂತೆ ಈ ಗಾಣಗಳ ದುಃಸ್ಥಿತಿಯನ್ನು ಕಣ್ಣಾರೆ ನೋಡಲಿಕ್ಕಾಗಿ ವಿನೋಬಾ ಹೋದರು. ಅವುಗಳ ನೀತಿ ಬಹಳ ಕೆಟ್ಟದೆ, ಅವನ್ನು ಸಹಕಾರ ಪದ್ಧತಿಯ ಮೇರೆಗೆ ಸಂಘಟನೆ ಮಾಡದಿದ್ದರೆ ಅವು ಉಳಿಯುವ ಸಂಭವವಿಲ್ಲ. ನೇಕಾರರು ಗಿರಣಿ ನೂಲು ನೇಯುತ್ತಾರೆ ಆಟದ ಸಾಮಾನು, ಕಂಬಳಿ ಮುಂತಾದುವನ್ನು ಮಾಡುವ ಇತರ ಹಳ್ಳಿಯ ಕೈಗಾರಿಕೆ ಹಾಳಾಗಿಹೋಗಿವೆ ಹೊರಗಿನಿಂದ ಅಗ್ಗದ ಸಾಮಾನು ನುಗ್ಗಿಬಂದು ಇವನ್ನು ಕೊಂದು ಹಾಕಿತು ಇವನ್ನು ಕಾಪಾಡುವವರು ಯಾರೂ ಇಲ್ಲ

ಹಿಂದೂಸ್ಥಾನೀ ತಾಲೀಮೀ ಸಂಘದ ಮಾರ್ಜರಿ ಸೈಕ್ಸ್ ಇವರ ಸಲಹೆಯಂತೆ ಮೂಲಶಿಕ್ಷಣದ ಯೋಜನೆಯೊಂದನ್ನು ಮಾಡಲಾಯಿತು ಸರಕಾರದಿಂದ ಪ್ರತಿವರ್ಷ ಅದಕ್ಕೆ ೨೫,೦೦೦ ರೂ ಸಿಗುತ್ತದೆ ವರ್ಷವರ್ಷವೂ ಆ ಹಣ ಸರಕಾರದಲ್ಲೇ ಉಳಿದುಹೋಗುತ್ತದೆ ಅದನ್ನು ವಿನಿಯೋಗಿಸಲು ಅನುಕೂಲಗಳಿಲ್ಲ ಈ ಗಾಂಧೀ ಭವನವನ್ನು ಮೂಲಶಿಕ್ಷಣ ಕೇಂದ್ರವಾಗಿ ಮಾಡಲು ಬನಾರಸೀದಾಸರು ಪ್ರಯತ್ನ ಮಾಡಿದರು. ಕಡೆಗೆ ನಿರಾಶರಾದರು. ಈ ವಿಂಧ್ಯಪ್ರದೇಶವನ್ನೆ ಬಿಟ್ಟು ಬೇರೆಲ್ಲಾದರೂ ಹೋಗಿ ನೆಲೆಸೋಣ ಎಂಬ ನಿರ್ಧಾರಕ್ಕೆ ಬಂದಿದ್ದರು. ಆದರೆ ಇಷ್ಟು ಸೇವೆಮಾಡಿದ ಸ್ಥಾನವನ್ನು ಬಿಟ್ಟು ಹೋಗಬಾರದೆಂದು ವಿನೋಬಾ ತಿಳಿಸಿಹೇಳಿದ ಮೇಲೆ ಅವರು ಒಪ್ಪಿಕೊಂಡರು. ಸಭೆಯಲ್ಲಿ ಈ ಸಂತೋಷದ ಮಾತನ್ನು ಹೇಳಿದಾಗ ಜನರು ಬಹಳ ಕೃತಜ್ಞರಾದರು.

**ಹೊಸಯುಗದ ಹೊಸಕಾರ್ಯ :** ತಮ್ಮ ಪ್ರಾರ್ಥನಾ ಪ್ರವಚನದಲ್ಲಿ, ತಾವು ಈ ಯಜ್ಞದ ಮೂಲಕ, ಯಾತ್ರೆಯ ಮೂಲಕ

ದೇಶದ ವಾತಾವರಣವನ್ನು ಹೇಗೆ ಬದಲಿಸ ಬಯಸಿದಾರೋ ವಿನೋಬಾ ತಿಳಿಸಿದರು. ಜಮೀನುದಾರರ ಮನಸ್ಸು ಹೇಗೆ ಬದಲುತ್ತಿದೆ. ಯಾವ ಪಕ್ಷ, ಗುಂಪಿನಲ್ಲೂ ಭೂದಾನ ಯಜ್ಞದಂಥ ಕಾರ್ಯಕ್ರಮವಿಲ್ಲ. ಜವಾಹರಲಾಲರು ಕಾಂಗ್ರೆಸ್ಸನ್ನು ಶುದ್ಧಿಮಾಡ ಬಯಸುತ್ತಾರೆ. ಕೃಪಲಾನಿಯೂ ಅದನ್ನೇ ಮಾಡಬಯಸುತ್ತಾರೆ. ಅದಕ್ಕಾಗಿ ಅವರೇ ಒಂದು ಪಕ್ಷ ಕಟ್ಟಿದಾರೆ. ಆದರೆ ತ್ಯಾಗ, ಬಲಿದಾನಗಳ ಕಾರ್ಯಕ್ರಮ ಬರುವ ವರೆಗೆ ಶುದ್ಧೀಕರಣವಾಗದು ಗಾಂಧೀಜಿಯೇ ಬದುಕಿದ್ದರೂ, ಅವರು ತ್ಯಾಗದ ಕಾರ್ಯಕ್ರಮವನ್ನು ಕೊಡದಿದ್ದರೆ ಶುದ್ಧೀಕರಣ ಅಸಂಭವವಾಗುತ್ತಿತ್ತು ಗಾಂಧೀಜಿ ಸದಾ ತ್ಯಾಗದ ಪ್ರೇರಣೆ ಕೊಡುವ ಕಾರ್ಯವನ್ನೆ ಸೂಚಿಸುತ್ತಿದ್ದರು. ಅವರ ಕೌಶಲವೇ ಅಂಥದು. ಭೂದಾನ ಯಜ್ಞದ ಕೆಲಸದಲ್ಲಿ ಇಂಥ ಪ್ರೇರಣೆ ತುಂಬಿದೆ. ಇದರಲ್ಲಿ ಕ್ರಾಂತಿಯ ಸಂದೇಶವಿದೆ ಇಡೀ ಲೋಕದ ಮನಸ್ಸನ್ನೆ ಸೆಳೆಯುತ್ತದೆ ಹೀಗೆ ವಿನೋಬಾ ತಿಳಿಸಿದರು.

**ಮನೆಮನೆಯಲ್ಲೂ ಕೃಷ್ಣ** ಟಿಕಮುಗಡದಿಂದ ಮುಂದೆ ನಮ್ಮ ಬಿಡಾರ ೧೨ ಮೈಲಿ ದೂರದಲ್ಲಿ ಕುರೈಯೀ. ಹಳ್ಳಿಯ ಜನರು ವಿನೋಬಾಗಾಗಿ ಒಂದು ಗುಡಿಸಿಲು ಕಟ್ಟಿದ್ದರು. ದಾರಿಯುದ್ದಕ್ಕೂ ಕಮಲಪುಷ್ಪವನ್ನು ಅರ್ಪಿಸಿದರು. ಆರ್ಯನಾಯಕರ ಮಗಳು ಮಿತೂ (ಯಾತ್ರೆಯ ಗುಂಪಿನಲ್ಲಿದಾಳೆ) ಆ ಹೂಗಳಿಂದ ಗುಡಿಸಿಲನ್ನು ಸಿಂಗರಿಸಿದಳು. ಸುತ್ತಮುತ್ತಲಿನ ಹಳ್ಳಿಗಳಿಂದ ಭಜನ ಮಂಡಲಿಗಳು ಹಾಡುತ್ತ ಬಂದರು. ಅವರ ಧ್ವನಿ, ಸ್ವರ ಕೇಳಿ ವಿನೋಬಾಜಿಗೆ ಎದೆ ತುಂಬಿಬಂತು. 'ಭಕ್ತಜನ ಶ್ರೀ ಕೃಷ್ಣನ ದರ್ಶನಕ್ಕಾಗಿ ಮಧುರಾಕ್ಕೆ ಹೋಗುತ್ತಿದಾರೆ' ಎಂಬುದು ಒಂದು ಹಾಡು. ವಿನೋಬಾ ಹೇಳಿದರು: 'ನಾನು ಮಧುರಾಕ್ಕೆ ಹೋಗುತ್ತಿದೇನೆ. ಆದರೆ ನನ್ನ ಕೃಷ್ಣ ಮಧುರಾದಲ್ಲಿ ಮಾತ್ರವೇ ಇಲ್ಲ. ನಾನು ಹೋದಲ್ಲೆಲ್ಲ ನನ್ನ ಕೃಷ್ಣನ

ದರ್ಶನವಾಗುತ್ತದೆ. ನೀವೆಲ್ಲರೂ ನನ್ನ ಕೃಷ್ಣ. ನಿಮ್ಮ ದರ್ಶನಕ್ಕಾಗಿಯೆ ನಾನು ಬಂದಿದೇನೆ.'

ಆಮೇಲೆ ಹಳ್ಳಿಯನ್ನು ನೋಡಲು ಊರೊಳಗೆ ಹೋದರು. ಯಾವ ಮನೆಯಲ್ಲೂ ವಿನೋಬಾ ಎದ್ದುನಿಂತುಕೊಳ್ಳುವಹಾಗಿರಲಿಲ್ಲ. ಎಲ್ಲೂ ಬಿಸಿಲು-ಬೆಳಕು ಧಾರಾಳವಾಗಿ ಬರುವಂತಿರಲಿಲ್ಲ. ಒಂದು ಬುಟ್ಟಿತೊಟ್ಟಿಲಲ್ಲಿ ಮಗುವನ್ನು ನೋಡಿ 'ಈ ಉಯ್ಯಾಲೆಯಲ್ಲಿ ಮಲಗಿರುವ ಮಗುವೇ ನನ್ನ ಕೃಷ್ಣ' ಎಂದರು. ಹಳ್ಳಿಗಳ ವಾತಾವರಣ ತೆಲಂಗಾಣವನ್ನು ನೆನಪಿಗೆ ತರುವಂಥದಾಗಿತ್ತು. ತಮ್ಮ ತಮ್ಮೊಳಗಿನ ದೂರು ಬಂದುವು. ಒಬ್ಬ ವಿಧವೆ ಅಳುತ್ತ ಬಂದು 'ನನ್ನ ಗಂಡನ ಗೆಳೆಯನೊಬ್ಬ ಬಲಾತ್ಕಾರವಾಗಿ ನನ್ನ ಹೊಲವನ್ನು ತೆಗೆದುಕೊಂಡಿದಾನೆ' ಎಂದು ದೂರಿದಳು. ವಿನೋಬಾ ಅವನನ್ನು ಕೇಳಿದರು. ಅವನು ತನ್ನ ತಪ್ಪನ್ನು ಒಪ್ಪಿದ ಆ ಹೊಲವನ್ನು ನನಗೆ ದಾನ ಕೊಡು ಎಂದು ವಿನೋಬಾ ಕೇಳಿದರು. ಅವನು ಕೊಟ್ಟ. ಹೀಗೆ ಎಷ್ಟೋ ಜಗಳಗಳನ್ನು ಹರಿಸಿದರು.

ಪೃಥ್ವೀಪುರದಲ್ಲಿ ಆದಿವಾಸಿಗಳ ಪ್ರತಿನಿಧಿ ಮಂಡಲವೊಂದು ಭೇಟಿಗೆ ಬಂದಿತು. ಅಲ್ಲಿನ ರಾಜರ ಅಪ್ಪಣೆಯಂತೆ ಅಡವಿಯಲ್ಲಿ ಸೌದೆ ಕಡಿಯಲು, ಮೀನು ಹಿಡಿಯಲು, ಜೇನು ಮುರಿಯಲು ಅವಕಾಶವಿತ್ತು. ಅದರ ಮೇಲೆ ಸುಂಕ-ತೆರಿಗೆ, ಅಡ್ಡಿ ಯಾವುದೂ ಇರಲಿಲ್ಲ ಆದರೆ ಹೊಸ ರಾಜ್ಯದಲ್ಲಿ ಇವೆಲ್ಲವೂ ಹೋಯಿತು. ಆದಾಯವನ್ನು ಸರಕಾರ ಕಳೆದುಕೊಂಡರೆ ಹೇಗೆ? ಪ್ರತಿನಿಧಿ ಮಂಡಲಕ್ಕೆ ಈ ತೆರಿಗೆ ಇಷ್ಟವಿರಲಿಲ್ಲ. ತೆರಿಗೆ ಭಾರವಾಗಿಯೂ ಇದೆ.

ಹುಲ್ಲು, ಕಸ-ಕೆಸರು ತುಂಬಿದ ದುರ್ಗಮ ದಾರಿಯನ್ನು ದಾಟಿ ೮ ಗಂಟೆಗೆ ಜೀವರಾ ಹಳ್ಳಿಗೆ ತಲಪಿದೆವು. ಹಿಂದೆ ವಿಂಧ್ಯ ಪ್ರದೇಶದ ವಿದ್ಯಾ ಸಚಿವರಾಗಿದ್ದ ಶ್ರೀ ಪಾರಕರು ನಮ್ಮ ಯಾತ್ರೆಯ ವ್ಯವಸ್ಥೆ

ಮಾಡುತ್ತಿದ್ದರು 'ಪಾರಕ್, ಈ ಹಳ್ಳಿಗೆ ಹಿಂದೆ ನೀವು ಎಷ್ಟು ಸಲ ಬಂದಿದ್ದೀರಿ?" ವಿನೋಬಾ ಕೇಳಿದರು. ಆತ ಬಿಗಿದ ಕೊರಳಿನಿಂದ 'ನನ್ನ ತಪ್ಪು ಒಪ್ಪಿಕೊಳ್ಳುತ್ತೇನೆ. ಈಗ ತಾವು ದಾರಿತೋರಿದಿರಿ. ನಮಗೆ ಕಾರ್ಯಕ್ರಮ ಕೊಟ್ಟಿದೀರಿ. ಇನ್ನು ನಾವು ಹಳ್ಳಿ ಹಳ್ಳಿ ತಿರುಗುತ್ತೇವೆ. ಮನೆ ಮನೆಗೆ ನಿಮ್ಮ ಸಂದೇಶ ತಿಳಿಸುತ್ತೇವೆ' ಎಂದ.

ಸಹಕಾರ-ವ್ಯವಸಾಯದ ಬಗ್ಗೆ ಜನರು ಕೇಳಿದರು. ಅದರ ದುಷ್ಪರಿಣಾಮವನ್ನು ವಿನೋಬಾ ಹೀಗೆ ವರ್ಣಿಸಿದರು. 'ಚಿಕ್ಕ ಚಿಕ್ಕ ರೈತರಿಗೆ ಚಿಕ್ಕಪುಟ್ಟ ಹೊಲ ಇಲ್ಲದಾಗುತ್ತದೆ. ಅದರ ಬದಲು ದೊಡ್ಡ ದೊಡ್ಡ ರೈತರು ಹುಟ್ಟುತ್ತಾರೆ. ನಿನ್ನೆ ಮೊನ್ನೆಯ ವರೆಗೆ ತನ್ನ ಚಿಕ್ಕ ಹೊಲದಲ್ಲಿ ಬಿತ್ತಿ ಬೆಳೆದು, ತನ್ನ ಬುದ್ಧಿ-ಶಕ್ತಿಗಳ ಉಪಯೋಗದಿಂದ ಹಿಗ್ಗುತ್ತಿದ್ದ ಪುಟ್ಟ ರೈತ ಭೂಮಿಹೀನನಾಗುತ್ತಾನೆ ದೊಡ್ಡ ರೈತನ ಬಳಿ ಕೂಲಿಗಾರನಾಗಿ ಗುಲಾಮಗಿರಿಗೆ ಸಿಗುತ್ತಾನೆ ಈ ಭೂಮಿಹೀನ ರೈತರಿಗೂ ನೇಗಿಲು ಎಳೆವ ದನಕ್ಕೂ ಏನು ಭೇದವಿಲ್ಲದಾದೀತು' ಈಗಿನ ಸಹಕಾರ ಪದ್ಧತಿಗೆ ವಿನೋಬಾ ಒಪ್ಪರು. ರೈತ ಹೊಲದ ಒಡೆಯನಾಗಿದ್ದು ಕೆಲಸದಲ್ಲಿ ಸಹಕರಿಸುವ ಪದ್ಧತಿ ಅವರಿಗೆ ಇಷ್ಟ

ಇಲ್ಲಿಂದ ಮುಂದೆ ನಾವು ಸಿಪಾಡೀಗೆ ಹೋದೆವು ಇನ್ನು ವಿಂಧ್ಯ ಪ್ರದೇಶ ಯಾತ್ರೆ ಮುಗಿಯುತ್ತದೆ ಸಿಪಾಡೀ ಆದ ಮೇಲೆ ದತಿಯಾ. ಇಲ್ಲಿ ಮುಗಿಯಿತು. ಇಲ್ಲಿಂದ ದಾರಿ ಇನ್ನೂ ಕಷ್ಟ ಹೊಲದ ಹಸಿರು ಹುಲ್ಲಿನಲ್ಲಿ ಚಿಕ್ಕಪುಟ್ಟ ಕಾಲುವೆ ದಾಟಿ ಮುಂಬರಿದೆವು. ದಾರಿಯು ತುಂಬಾ ಕೆಸರು. ಒಂದೊಂದು ಹೆಜ್ಜೆಯನ್ನೂ ಎಚ್ಚರಿಕೆಯಿಂದ ಇಡ ಬೇಕಾಗಿತ್ತು. ವಿನೋಬಾ ೨-೩ ಸಲ ಜಾರಿಬೀಳುವ ಹಾಗಾದರು.

ವಿಂಧ್ಯ ಪ್ರದೇಶದ ಜನಸಂಖ್ಯೆ ೩೬ ಲಕ್ಷ ಈ ಪ್ರದೇಶಕ್ಕೆ ಎಷ್ಟು ಭೂದಾನ ಎಂದು ಗೊತ್ತು ಮಾಡಬೇಕಿತ್ತು ಮಧ್ಯ ಪ್ರದೇಶ ಒಂದು ಲಕ್ಷ ಎಕರೆ, ಉತ್ತರ ಪ್ರದೇಶ ಒಂದು ಕೋಟಿ ಎಕರೆ ಆದರೆ,

ವಿಂಧ್ಯ ಪ್ರದೇಶದ ಕೆಲಸಗಾರರಿಗೆ ಶಕ್ತಿ ಮೀರಿ ಹೊರೆ ಹೊರಿಸುವ ಇಷ್ಟ ವಿನೋಬಾಜಿಗೆ ಇರಲಿಲ್ಲ ಒಬ್ಬ ತಮ್ಮ ೨೫ ಸಾವಿರ ಎಕರೆ ಎಂದ. ವಿನೋಬಾಜಿ ೩೬ ಸಾವಿರ ಎಂದು ಗೊತ್ತುಮಾಡಿದರು ಇದಕ್ಕೆ ಪಂಡಿತ ಬನಾರಸಿದಾಸರೂ, ಶ್ರೀ ಲಾಲಾರಾಮ್ ವಾಜಪೇಯಿ, ಶ್ರೀ ಚತುರ್ಭುಜ ಪಾಠಕ-ಇವರ ಸಮಿತಿಯನ್ನು ಮಾಡಿದರು.

ವಿಂಧ್ಯ ಪ್ರದೇಶಕ್ಕೆ ತಾವು ಬಂದುದಕ್ಕಾಗಿ ವಿನೋಬಾ ಸಂತೋಷ ಸೂಚಿಸಿ ಪ್ರಾರ್ಥನಾ ಪ್ರವಚನದಲ್ಲಿ ಹೇಳಿದರು—'ನಾನು ಇಲ್ಲಿ ಬಾರದಿದ್ದರೆ ಒಂದು ವಿಶೇಷ ಅನುಭವ ನನ್ನ ಪಾಲಿಗೆ ಇಲ್ಲದಾಗುತ್ತಿತ್ತು ಇಲ್ಲಿನ ಕೆಲವರು ಕೆಲಸಗಾರರೊಡನೆ ನನಗೆ ಸಂಬಂಧ ಬಂದದ್ದು ಒಳಿತಾಯಿತು ಹೈದರಾಬಾದಿನಲ್ಲಿ ಎಷ್ಟು ಹೊಲ ಸಿಕ್ಕಿತು ಎಂಬುದರ ಮೇಲೆ ಅಲ್ಲಿನ ಕೆಲಸದ ಸಫಲತೆಯನ್ನು ಜನರು ನಿರ್ಧರಿಸುತ್ತಾರೆ ಆದರೆ ನನ್ನ ಒರೆಗಲ್ಲೇ ಬೇರೆ ನನಗೆ ಎಷ್ಟು ಜನ ಕೆಲಸಗಾರರು ಸಿಕ್ಕರು ಎಂಬುದು ಒರೆಗಲ್ಲು ಈ ಯಾತ್ರೆಯ ತರುವಾಯ ನನಗೆ ಆರು ಜನ ಕೆಲಸಗಾರರು ದೊರೆತರು. ಅದೇ ನನಗೆ ಹಿಗ್ಗು ವಿಂಧ್ಯ ಪ್ರದೇಶದಲ್ಲೂ ಹಲವರು ಕೆಲಸಗಾರರು ದೊರೆತರೆಂಬುದೇ ನನ್ನ ಸಂತೋಷ'

**ಕ್ರಾಂತಿವಾದಿ ವಿ ಸ್ಥಾಯೀವಾದಿ** ತಮ್ಮ ಕಲಸದ ಮಹತ್ವವನ್ನು ತಿಳಿಸುತ್ತಾ ವಿನೋಬಾ ಹೀಗೆ ಹೇಳಿದರು 'ಜನರು ಕ್ರಾಂತಿ ಕ್ರಾಂತಿ ಎನ್ನುತ್ತಾರೆ ನೆತ್ತರು ಹರಿಯದೆ ಕ್ರಾಂತಿಯಾಗದು ಎನ್ನುತ್ತಾರೆ. ಇದನ್ನು ನಾನು ಒಪ್ಪುವುದಿಲ್ಲ ನೆತ್ತರು ಹರಿಸದೆ ಕ್ರಾಂತಿಯಿಲ್ಲ ಎಂಬವರು ನಿಜವಾಗಿ ಕ್ರಾಂತಿವಾದಿಗಳಲ್ಲ. ಅವರು ಸ್ಥಾಯೀವಾದಿಗಳು. ಇದ್ದಂತಿರಲಿ ಎಂಬವರು. ಅವರ ಗುರಿ ಕ್ರಾಂತಿಯಲ್ಲ, ಸ್ಥಾನದ ಪರಿವರ್ತನೆ ಈಗ ಸುಖವಾಗಿರುವವರನ್ನು ದುಃಖಿಗಳಾಗಿಮಾಡಿ, ದುಃಖಿಗಳಾಗಿರುವವರನ್ನು ಸುಖಿಗಳ

ನ್ನಾಗಿ ಮಾಡುವುದು ಅವರ ಗುರಿ. ಇದು ಕ್ರಾಂತಿಯಲ್ಲ. ಆದರಿಂದ ಈಗಿನ ವ್ಯವಸ್ಥೆಯಲ್ಲಿ ಯಾವ ಭೇದವೂ ಆಗದು. ಸುಖಿಗಳು ದುಃಖಿಗಳಾಗಿ, ದುಃಖಿಗಳು ಸುಖಿಗಳಾದರೆ ಸಮಾಜದಲ್ಲಿ ದುಃಖ ತಪ್ಪಲಿಲ್ಲ. ಆದ್ದರಿಂದ ಇವರು ಇದ್ದಂತಿರಲಿ ವಾದಿಗಳು ಎನ್ನುತ್ತೇನೆ ಕ್ರಾಂತಿಯಲ್ಲಿ ಎಲ್ಲರಿಗೂ ಸುಖ ಸಿಗಬೇಕು ಅಪವಾದವೇ ಇರಕೂಡದು. ನಾನು ಸರ್ವೋದಯವನ್ನು ನಂಬಿದೇನೆ ಸಾರ್ವಜನಿಕ ಕಲ್ಯಾಣ ಬಯಸುತ್ತೇನೆ ಆದ್ದರಿಂದ ನಾನೇ ಕ್ರಾಂತಿವಾದಿ ಎನ್ನುತ್ತೇನೆ. ಸಮಾಜವನ್ನು ಎರಡು ಪಂಗಡವಾಗಿ ಹಂಚ ಬಯಸುವವರು ಕಮ್ಯುನಿಸ್ಟ್ ಎಂದುಕೊಳ್ಳಲಿ, ಅಥವಾ ಎಂಥ ಇಸ್ಟ್ ಬೇಕಾದರೂ ಆಗಲಿ, ನನ್ನ ಅಭಿಪ್ರಾಯದಲ್ಲಿ ಅವರು ಕಮ್ಯುನಿಸ್ಟ್ ಅಥವಾ ಕೋಮುವಾರು ವಾದಿಗಳು ಎನ್ನುತ್ತೇನ ಪಶ್ಚಿಮದಲ್ಲ ಅಧಿಕಾಧಿಕ ಜನರ ಅಧಿಕತಮ ಹಿತದ ಭಾಷೆ ಬಳಸುತ್ತಾರೆ. ಅವರ ಮನಸ್ಸು ಈ ಪರಂಪರೆಯಲ್ಲೇ ಬಂದಿದೆ ಆದರೆ ಭಾರತೀಯರ ಮನಸ್ಸು ಚಿಕ್ಕಂದಿನಿಂದಲೂ 'ವಸುಧೈವ ಕುಟುಂಬಕ' ದ ವಿಶ್ವಮೈತ್ರಿಯ ಸಂಸ್ಕಾರದಲ್ಲಿ ಬೆಳೆಯುತ್ತದೆ. ಭೂತಮಾತ್ರದಲ್ಲಿ ಪ್ರೇಮವಿಡುವಂತೆ ಅವರು ಕಲಿಯುತ್ತಾರೆ. ಎಷ್ಟು ಜನರ ಸೇವ ಮಾಡಿದರು ಎಂಬುದು ಮುಖ್ಯವಲ್ಲ. ಬಹು ಸಂಖ್ಯೆಯ ಜನರ ಬಲದಿಂದ ಒಂದು ಹಿಡಿ ಜನ ವಿಲಾಸ ಮಾಡುತ್ತಿದ್ದ ಕಾಲವೊಂದಿತ್ತು. ಈಗ ತಲೆಕೆಳಗಾಗಿದೆ ಒಂದು ಬೊಗಸೆ ಜನರ ಬಲದಿಂದ ಬಹು ಸಂಖ್ಯೆಯ ಜನ ಸುಖವಾಗಿರಲು ಬಯಸುತ್ತಾರೆ ಆದರೆ ಭಾರತದಲ್ಲ ನಮಗೆ ಸಿಗುವ ಸಾರವೇ ಬೇರೆ ತನ್ನೊಡನೆ ತಾನು ನಡೆವಂತೆ ಪ್ರತಿಯೊಬ್ಬನೊಡನೆಯೂ ನಡೆ ಎಂಬ ಸೂತ್ರ ನಮ್ಮದು. ಗೀತೆ ಇದನ್ನೇ **ಆತ್ಮೌಪಮ್ಯ** ಎನ್ನುತ್ತದೆ. ಈ ಆಧಾರದ ಮೇಲೆ ಇಡೀ ಸಮಾಜವನ್ನು ನಾನು ಕಟ್ಟ ಬಯಸುತ್ತೇನೆ. ಎಂತಲೇ ನನ್ನದು ಕ್ರಾಂತಿ ಎನ್ನುತ್ತೇನ ಜೇನುಹುಳು ಹೂವಿನಿಂದ

ಜೇನನ್ನು ತರುತ್ತವೆ. ಆದರಿಂದ ಹೂವಿಗೆ ಎಳ್ಳಷ್ಟೂ ನಷ್ಟವಿಲ್ಲ. ನಾನೂ ಹೀಗೇ ಪರರಿಗೆ, ನಷ್ಟವಿಲ್ಲದಂತೆ ಗಳಿಸಲು ಒಪ್ಪುತ್ತೇನೆ. ಹೃದಯ ಪರಿವರ್ತನದ ಸಿದ್ಧಾಂತ ನಮ್ಮದು. ಹೊಸದು ಯಾವುದೂ ನನ್ನಲ್ಲಿಲ್ಲ ನಮ್ಮ ಸಾಧು ಶರಣರು ಹಾಕಿದ ದಾರಿಯಲ್ಲಿ ನಡೆಯುತ್ತಿದೇನೆ. ಈ ಅಹಿಂಸಕ ಕ್ರಾಂತಿ ಭಾರತದಲ್ಲಿ ಬಾರದಿದ್ದರೆ ಲೋಕದಲ್ಲಿ ಇನ್ನೆಲ್ಲಿಯೂ ಬರಲಾರದು ಎಂದು ನನ್ನ ದೃಢ ವಿಶ್ವಾಸ.'

ಉಪಸಂಹಾರ ಮಾಡುತ್ತ, 'ನನ್ನ ಯೋಗ್ಯತೆ ಮೀರಿ ದೇವರು ನನಗೆ ಕೃತಕೃತ್ಯತೆ ಕೊಟ್ಟಿದಾನೆ ನನ್ನ ಚಿತ್ತಶುದ್ಧಿ ಬೆಳೆದ ಹಾಗೆಲ್ಲ ನನ್ನ ಸಫಲತೆಯೂ ಹೆಚ್ಚೀತು' ಎಂದರು. ಕಡೆಗೆ ಜನರನ್ನು ಭೂದಾನಕ್ಕಾಗಿ ಪ್ರೋತ್ಸಾಹಿಸುತ್ತ ಈ ಯಜ್ಞದಲ್ಲ ನಿಮ್ಮ ಪಾಲಿನ ಕೆಲಸ ಮಾಡುವವರೆಗೆ 'ಈ ಗೋಡೆ ದಾಟಿ ಹೋಗಬೇಡಿ' ಎಂದರು. ಹಾಗೆಯೇ ಆಯಿತು. ಯಾರೂ ಹೊರಗೆ ಹೋಗಲು ಆಗಲಿಲ್ಲ. ಅದೇನು ಕಲ್ಲು ಇಟಿಗೆಯ ಗೋಡೆಯೆ? ಅಲ್ಲ ಅದು ಪ್ರೀತಿಯ ಗೋಡೆ, ಅನುಲ್ಲಂಘನೀಯ ಪ್ರಾಕಾರ ವಿನೋಬಾ ವಾಣಿ ಅವರ ಹೃದಯದಲ್ಲಿ ಹೊಕ್ಕು ಒಬ್ಬೊಬ್ಬರೂ ಎದ್ದುನಿಂತರು.

ಒಬ್ಬೊಬ್ಬರೂ ದಾನದ ಘೋಷಣ ಮಾಡಿದರು. ೭೫ ಜನ ೧೨೫೦ ಎಕರೆ ಕೊಟ್ಟರು ಇವರಲ್ಲಿ ಝಾನ್ಸಿ ಜಿಲ್ಲೆಯ ಕಟೇರಾದ ದೊರೆ ಬಹದೂರಸಿಂಹರು ಸಾವಿರ ಎಕರೆ ಕೊಟ್ಟರು ಅದೊಂದು ಅಪೂರ್ವ ದೃಶ್ಯ; ಎಂದಿಗೂ ಮರೆಯಲಾರದುದು ನಿಜವಾಗಿ ಪ್ರೀತಿಯ ಪಾಳಿಯನ್ನು ಯಾರು ಹಾರಬಲ್ಲರು? ಪ್ರೇಮದ ಬಂಧನ ಬಹಳ ಕೋಮಲ, ಅಷ್ಟೇ ಕಠಿಣವೂ ಹೌದು ಇದನ್ನು ಕಡಿಯ ಬಲ್ಲವರಾರು? ಇದೇ ಕೋಮಲ ಸೂತ್ರದಿಂದ ಒಮ್ಮೆ ಶ್ರೀಕೃಷ್ಣ ತನ್ನ ಭಕ್ತೆ ಮೀರಾಬಾಯಿಯನ್ನು ಕಟ್ಟಿದ್ದ. ಮೀರಾ ಸದಾಕಾಲಕ್ಕೂ ಆ ಪಾಶದಿಂದ ಬಂಧಿತಳಾದಳು:

# ೬ ಕವಿಗಳ ನಡುವೆ

ಮತ್ತೆ ಉತ್ತರ ಪ್ರದೇಶಕ್ಕೆ ಬಂದೆವು ಚಿರಗಾಂವದಿಂದ ಉತ್ತರ ಪ್ರದೇಶದ ಯಾತ್ರೆ ಮೊದಲಾಯಿತು. ಉತ್ತರ—ವಿಂಧ್ಯ ಪ್ರದೇಶಗಳ ನಡುವೆ ನಯಸಾ ನದಿ ಹರಿಯುತ್ತಿದೆ ಜಲಪಾನದ ಹೊತ್ತಿಗೆ ನಾವು ತಲಪಿದ ಸ್ಥಳವನ್ನು ನೋಡಿ ವಿನೋಬಾಜೀ ಬಹಳ ಪ್ರಸನ್ನರಾದರು. ಉಪಾಹಾರಕ್ಕಾಗಿ ತಂಗಿದ ಅತ್ಯಂತ ಶ್ರೇಷ್ಠ ಸ್ಥಾನಗಳಲ್ಲಿ ಇದು ಹೆಚ್ಚಿನದು. ನಯಸಾನದಿ, ಅದರ ದಂಡೆಯ ಹಸಿರು, ಇದಿರಿನ ಕಾಲುದಾರಿ, ಎಲ್ಲವೂ ಅಂಬಿನಿಂದ ಸಜ್ಜಿತವಾದ ಬಿಲ್ಲಿನಂತೆ ಕಾಣುತ್ತಿತ್ತು. ನಾಲದ್ದಕ್ಕೆ ವಿನೋಬಾಗೆ, ಅವರ ಸಂಗಡಿಗರಿಗೆ ಠಾಕುರಜೀ ಕೊಟ್ಟ ಸುಮಧುರ ಸ್ವಾಗತ. ಠಾಕೂರಜೀ ಒಂದು ಹಕ್ಕಿ ಅದಕ್ಕೂ ವಿನೋಬಾಗೂ ಬಹಳ ಗೆಳೆತನ ಎಷ್ಟೇ ಕೆಲಸದಲ್ಲಿರಲಿ ಅವರ ದನಿ ಕಿವಿಗೆ ಬಿದ್ದರೆ ಎಲ್ಲವನ್ನೂ ಬಿಟ್ಟು ಠಾಕುರ್‌ಜೀ ಠಾಕುರ್‌ಜೀ ಎಂದು ಕರೆಯುತ್ತಾರೆ

ಸ್ವಲ್ಪ ದೂರವಲ್ಲೇ ಬೇತಿಯಾ ಹೊಳೆ ದಾಟಬೇಕು. ನಡುವಿನ ಹಳ್ಳಿಯಲ್ಲಿ ಉಪಾಹಾರದ ಏರ್ಪಾಟುಮಾಡಿದ್ದರು. ನಮ್ಮ ಉಪಾಹಾರ ಆಗಿಹೋಗಿತ್ತು. ಆದ್ದರಿಂದ, ಭೂದಾನ ಮಾಡುವುದಿದ್ದರೆ ಮಾಡಿ ಎಂದು ವಿನೋಬಾ ಹೇಳಿದರು. ಒಬ್ಬ ತಮ್ಮ ಎರಡು ಎಕರೆ ಕೊಟ್ಟ. ಇನ್ನೊಬ್ಬ ಒಂದು ಗುಂಟೆ. ಸುಮಾರು ೨೦—೩೦ ಜನ ಇದ್ದರು. ನಿಮ್ಮೊಳಗೆ ಹೊಲವಿಲ್ಲದವರು ಎಷ್ಟು ಎಂದು ವಿನೋಬಾ ಕೇಳಿದರು. ಚಮ್ಮಾರ, ಕುಂಬಾರ, ಕಮ್ಮಾರ ಇವರನ್ನು ಬಿಟ್ಟು ಕೂಲಿಗಾರರನ್ನು ಆರಿಸಿದರು. 'ಈ ಹತ್ತು ಜನ ಭೂಮಿಹೀನರು. ಒಬ್ಬೊಬ್ಬರಿಗೆ ಒಂದೊಂದು ಎಕರೆ ಹೊಲವನ್ನಾದರೂ ನೀವು ಕೊಡಿ' ಎಂದು ಅವರಿಗೆ ಹೇಳಿದರು. ಆ ಚಿಕ್ಕಹಳ್ಳಿಯಲ್ಲೂ ಆ ಬಡ ರೈತರು ಕೂಡಲೇ

೧೦ ಎಕರೆ ನೀಡಿದರು.

**ಮಹಾತಪಸ್ವಿ–ಮಹಾಕವಿಗಳ ಭೇಟಿ** · ಬೇತಿಯಾ ನದಿಯ ದಡಕ್ಕೆ ಬಂದೆವು ಅಗಲವಾದ ನೈ, ಯಮುನೆಯಂಥ ಅಂದವಾದ ಜಲ ಎಲ್ಲರೂ ದೋಣಿಯಲ್ಲಿ ಕುಳಿತೆವು ನದಿಯನ್ನು ದಾಟಲು ೫೦ ನಿಮಿಷ ಹಿಡಿಯಿತು. ಚಿರಗಾಂ ಮುಟ್ಟಲು ಇನ್ನೂ ೪ ಮೈಲಿ ನಡೆಯಬೇಕು ಊರಿನ ಪ್ರತಿನಿಧಿಗಳು, ಭಜನಮಂಡಲಿಗಳು ದಾರಿಕಾಯುತ್ತಿದ್ದರು. ಅರ್ಧದಾರಿ ಹೋಗುವ ಹೊತ್ತಿಗೆ ಇದಿರಿಗೆ ಮಹಾಕವಿ ಮೈಥಿಲೀ ಶರಣಗುಪ್ತರು ಬರುತ್ತಿದ್ದುದು ಕಂಡಿತು. ಅವರ ಜತೆಗೆ ಶ್ರೀಮತಿ ಮಹಾದೇವಿ ವರ್ಮ, ಶ್ರೀ ದಿನಕರ್, ಶ್ರೀ ಇಳಾಚಂದ್ರ ಜೋಷಿ ಮುಂತಾದ ಸರಸ್ವತೀಪುತ್ರರು ಇದ್ದರು. ಈ ಮಹಾಕವಿ–ಮಹಾತಪಸ್ವಿಗಳ ಭೇಟಿ ಅನೇಕ ಅವ್ಯಕ್ತ ಭಾಗಗಳ ಸಂಕೇತವಾಗಿತ್ತು.

ತೋರಣ ಬಾವುಟಗಳಿಂದ ಸಿಂಗರಿಸಿದ್ದ ದಾರಿಯಲ್ಲಿ ನಡೆದು ಬಿಡಾರ ತಲಪಿದೆವು ಅಲ್ಲಿ ಮಹಾಕವಿಯ ತಾಯಿ, ತಂಗಿ, ಸೊಸೆ, ಮಕ್ಕಳು ಹೃತ್ಪೂರ್ವಕ ಸ್ವಾಗತವನ್ನು ನೀಡಿದರು. ಶ್ರೀ ಸಿಯಾರಾಮ ಶರಣರು ತಮ್ಮ 'ಗೀತಾ ಸಂವಾದ'ದ ಹೊಸ ಆವೃತ್ತಿಯನ್ನು ವಿನೋಬಾಗೆ ಕಾಣಿಕೆ ಕೊಟ್ಟರು ವಿನೋಬಾ ಎಲ್ಲರಿಗೂ ಧನ್ಯವಾದ ಕೊಟ್ಟು 'ಕವಿವರ ಮೈಥಿಲೀ ಶರಣರಂತಹರ ಆಶೀರ್ವಾದವೂ ನನಗೆ ದೊರೆಯಿತು ಎಂಬುದು ಬಹಳ ಹರುಷದ ಮಾತು' ಎಂದರು. ಪ್ರಾರ್ಥನಾ ಪ್ರವಚನದಲ್ಲಿ ಗೀತಾ ಸಂವಾದದ ಹೊಸ ಆವೃತ್ತಿಯ ಪ್ರಸ್ತಾಪಮಾಡಿ ಭೂದಾನ ಯಜ್ಞಕ್ಕೆ ಈ ಕಾಣಿಕೆ ಒಂದು ಶುಭ ಶಕುನ ಎಂದರು.

ವಿನೋಬಾಜಿಯ ಆಗಮನದ ಈ ಸಂದರ್ಭಕ್ಕೆ ಕವೀಶ್ವರರು ಒಂದು ಹಾಡು ಬರೆದಿದ್ದರು. ಅದನ್ನು ತಾವೇ ಓದಿ ಹೇಳಿದರು.

'ನಮ್ಮ ದೇಶ ದೊರೆಗಳನ್ನು ಪೂಜಿಸದು. ಆದರೆ ನಮ್ಮ ತಂಗಿಯರೂ ಕೂಡ ಸಾಧುಗಳನ್ನು ಬಲ್ಲರು. ಜ್ಞಾನೇಶ್ವರ, ತುಕಾರಾಮರ ಪರಂ ಪರೆಯ ಸತ್ಪುರುಷರು ವಿನೋಬಾಜಿ. ಚಿರಗಾಂವದ ಬದುಕಿನಲ್ಲಿ ಇಂದು ಸುದಿನ, ಚಿರಸ್ಮರಣೀಯ ದಿನ ಮಹಾತ್ಮಾಜಿ ಬಂದ ದಿನ ದಂತೆ' ಎಂದು ಮಹಾಕವಿ ಆರಂಭ ಭಾಷಣ ಮಾಡಿದರು.

ಚಿರಗಾಂವದ ನೆನಪು ಚಿರವಾಗಿದ್ದೀತು. ರಾಷ್ಟ್ರಭಾರತಿಯ ಮಹೋಪಾಸಕರು ಅಲ್ಲಿ ನೆರೆದಿದ್ದರು. ಅವರ ಸದ್ಭಾವನೆಗೆ ಅಳತೆಯೇ ಇರಲಿಲ್ಲ. ಸಂಜೆಗೆ ಶ್ರೀ ಬೃಂದಾವನಲಾಲ ವರ್ಮ ಬಂದರು. ಆ ಮುಚ್ಚಂಜೆಯಲ್ಲಿ ಕವಿ ವೃಂದದ ಮನಸಿನ ನವಿಲು ಗರಿಗೆದರಿ ನಲಿ ದಾಡಿತು. ಎಲ್ಲರೂ ತಮ್ಮ ತಮ್ಮ ಕವಿತೆಯನ್ನು ವಿನೋಬಾಗೆ ಹಾಡಿ ಹೇಳಿದರು. ಎಷ್ಟೋ ಸದ್ಭಾವ ಸಗುಣರೂಪದಲ್ಲಿ ವ್ಯಕ್ತವಾಗಿ ದ್ದುವು ವಿನೋಬಾಗೆ ಬಹಳ ರುಚಿಸಿತು. ನಡುನಡುವೆ ವಿನೋ ಬಾಜಿಯೂ ಏನಾದರೂ ಹೇಳುತ್ತಿದ್ದರು. ಇವತ್ತು 'ಗೀತಾ ಸಂವಾ ದ'ದಲ್ಲಿನ ಸ್ಥಿತಪ್ರಜ್ಞ ದರ್ಶನದ ಭಾಗವನ್ನು ಕಡೆಯ ಬಾರಿ ನೋಡ ಬಯಸಿದರು. ಮಧ್ಯಾಹ್ನವೂ ಅದನ್ನು ನೋಡಿ ಹಲ ಕೆಲವು ಕಡೆ ತಿದ್ದಿದರು. ಪ್ರಾರ್ಥನೆಯಲ್ಲಿ ತಾವೇ ಆ ಶ್ಲೋಕಗಳನ್ನು ಹಾಡಿದರು. ಪೂಜ್ಯ ಮೈಥಿಲೀಶರಣರು ಕೊಟ್ಟ ಹಾರ್ದಿಕ ಆತಿಥ್ಯ, ಎಲ್ಲರ ಬಗ್ಗೆ ಅವರು ತೋರಿದ ಗಮನ, ಅವರ್ಣನೀಯ. ಬೆಳಗ್ಗೆ ಬೀಳ್ಕೊಡು ವಾಗ ಎಲ್ಲರೂ ತಮ್ಮ ಅತಿಥಿದೇವತೆಯನ್ನು ಊರಿನ ಗಡಿಯವರೆಗೆ ಕಳಿಸಿಕೊಡಲು ಬಂದರು. ಬೀಳ್ಕೊಡುಗೆಯ ನೋಟ ಬಹಳ ಹೃದಯ ಸ್ಪರ್ಶಿಯಾಗಿತ್ತು. ಸಿಯಾರಾಮಜೀ ಅಲ್ಲೇ ನಿಲ್ಲಲಾರದೆ ಇನ್ನೂ ಸ್ವಲ್ಪ ದೂರ ಜತೆಗೆ ಬಂದರು. ಪ್ರಾರ್ಥನೆ ಮುಗಿದ ಮೇಲೆ ಹಿಂದಿ ರುಗಬೇಕೆಂದಿದ್ದವರು ಹಿಂದಿರುಗಲು ಆಗಲಿಲ್ಲ. ಯಾವುದೋ ಅವ್ಯಕ್ತ ಶಕ್ತಿ ಅವರನ್ನು ಮುಂದೆ ಮುಂದೆ ಎಳೆಯುತ್ತಿತ್ತು ;

ನಮ್ಮನ್ನು ಹಿಂದೆ ಹಿಂದಕ್ಕೆ. ಆದರ ಯಾರೂ ತಮ್ಮ ಕರ್ತವ್ಯ ಮರೆಯುವಂತಿರಲಿಲ್ಲ. ಸಾರ್ವಭೌಮ ಸ್ನೇಹದ ಈ ಸುಖಪ್ರದ ಪಾವನ ಸ್ಮರಣೆ ನಮಗೆ ಅಮೃತ ವರ್ಷದಂತೆ ಎಷ್ಟು ಪುಷ್ಟಿಕೊಡುತ್ತಿದೆಯೋ ಯಾರು ಹೇಳಬಲ್ಲರು?

**ಬಡಾಗಾಂವದ ಬಡಾ ಮನುಷ್ಯರು.** ಚಿರಗಾಂವದಲ್ಲಿ ಒಟ್ಟು ೧೫೦ ಎಕರೆ ದಾನ ಸಿಕ್ಕಿತು ಅಲ್ಲಿಂದ ಬಡಾಗಾಂವ್. ಮುಂದೆ ಝಾನ್ಸಿ. ಬಡಾಗಾಂವದಲ್ಲಿ ಕೆಲಸಗಾರರ ಅಭಾವ ಕಂಡು ಬಂದಿತು. ಬಡಾಗಾಂವದಲ್ಲಿ ದೊರೆತ ದಾನ ಬಹಳ ಸ್ವಲ್ಪ. ಅದನ್ನು ನೋಡಿ ಒಬ್ಬ ರೈತನಿಗೆ ಮನಸ್ಸು ತುಂಬಿಬಂತು. ಏನೋ ನಾಚಿಕೆಯಾದಂತಾಗಿ ತನಗಿದ್ದ ಒಂದೇ ಅರ್ಧ ಎಕರೆ ಹೊಲವನ್ನು ಕೊಟ್ಟುಬಿಟ್ಟ. ಇನ್ನೂ ಮೊನ್ನೆ ತಾನೇ ಈ ಹೊಲ ಸರಕಾರದಿಂದ ಅವನಿಗೆ ದೊರೆತಿತ್ತು. ಝಾನ್ಸಿಯಿಂದ ಇನ್ನೂ ೪ ಮೈಲಿ ದೂರ ಇರುವಾಗಲೇ ಜನ ಸಂದಣಿ ಹೆಚ್ಚಿತು ಆ ಗದ್ದಲದಲ್ಲಿ ದಾರಿ ಸಾಗುವುದೇ ಕಷ್ಟವಾಯಿತು. ವಿನೋಬಾ ವೃದ್ಧು, ಮಿತು ಇಬ್ಬರು ಹುಡುಗಿಯರನ್ನೂ ಜೊತೆಗೆ ಕರೆದುಕೊಂಡು ವೇಗವಾಗಿ ನಡೆದರು. ಆ ವೇಗಕ್ಕೆ ಈ ಹುಡುಗಿಯರು ಓಡಲಾರಂಭಿಸಿದರು. ಓಡಬಲ್ಲವರು ಜತೆಗೆ ಓಡಿದರು. ಉಳಿದವರು ಹಿಂದುಳಿದರು.

ಬಿಡಾರದಲ್ಲಿ ರಾಣಿ ಲಕ್ಷ್ಮೀಬಾಯಿಯ ವಿಗ್ರಹದ ಬಳಿ ಮಂಚ ಹಾಕಿದ್ದರು. ಪ್ರಾರಂಭಭಾಷಣದಲ್ಲಿ ವಿನೋಬಾ ಹೇಳಿದರು— 'ಝಾನ್ಸಿಯ ಇತಿಹಾಸ ಬೇಕಾದಷ್ಟಿದೆ. ಆದರೆ ಆ ಇತಿಹಾಸದಿಂದಲ್ಲ ಭಾರತವರ್ಷ ಝಾನ್ಸಿಯ ಪರಿಚಯ ಮಾಡಿಕೊಂಡುದು. ಆ ಪರಿಚಯಕ್ಕೆ ಕೇವಲ ಮಹಾರಾಣೀ ಲಕ್ಷ್ಮೀಬಾಯಿಯೇ ಕಾರಣ.' ಮಾತಾಡುತ್ತ ಗದ್ಗದಕಂಠರಾದರು. 'ನೀವು ಭೂದಾನ ಕೊಡುತ್ತೀರಿ, ಉದಾರತನದಿಂದ ಕೊಡುತ್ತೀರಿ. ಆದರೆ ವೀರತನದಿಂದಲೂ ಕೊಡಿ

ಎನ್ನುತ್ತೇನೆ.' ಬೆಳಿಗ್ಗೆ ಓಡುತ್ತ ಬಂದಿದ್ದರು. ಮಹಾರಾಣಿ ಲಕ್ಷ್ಮೀ ಬಾಯಿಯ ವೀರ ಸ್ಮರಣೆ ನನಗೆ ಆ ಪ್ರೇರಣೆ ಕೊಟ್ಟಿತು ಎಂದರು.

ಸಂಜೆಗೆ ಸಭೆಯಲ್ಲಿ, ನಿವಾಡಿಯಲ್ಲಿ ಆದಂತೆ ಇಲ್ಲೂ ಭೂದಾನದ ಮಳೆಗರೆಯಿತು. ಮೂರೂವರೆ ಗಂಟೆಗೆ ವಿನೋಬಾ ಸಭೆಗೆ ಬಂದರು. ೭ ಗಂಟೆಯವರೆಗೆ ಕುಳಿತೇ ಇದ್ದರು ನೂಲುವುದು, ಪ್ರವಚನ, ಪ್ರಾರ್ಥನೆ, ಭೂದಾನ, ಪ್ರಶ್ನೋತ್ತರ ಎಲ್ಲವೂ ಲಕ್ಷ್ಮೀಬಾಯಿಯ ಆ ಭೂಮಿಗೆ ಅನುಗುಣವಾಗಿ ನಡೆದುವು. ಹೆಂಗಸರೂ ಕೂಡ ಮಹಾರಾಣಿಯ ಪರಂಪರೆಗೆ ತಕ್ಕಂತೆ ಭೂದಾನಕೊಟ್ಟರು. ತಂಗಿ ಕನಕಕುವರಿ ತನ್ನ ಇಡೀ ಹೊಲ—೫೦೦ ಎಕರಯನ್ನು—ಕೊಟ್ಟು ಬಿಟ್ಟಳು. ಇನ್ನೊಬ್ಬ ತಂಗಿ ಶ್ರೀ ಚಂದ್ರಮುಖೀದೇವಿ ತನ್ನ ೮೦ ಎಕರೆ ಹೊಲದಲ್ಲಿ ೪೦ ಎಕರೆ ಕೊಟ್ಟಳು. ಅಣ್ಣ ನಸೀರ್‌ಖಾನ್ ಜಮೀನುದಾರಿಯಲ್ಲಿ ತನ್ನ ಪಾಲನ್ನಷ್ಟು ಕೊಟ್ಟ ಇಂಥ ವೀರತಾ ಪೂರ್ಣ ದಾನ ಇನ್ನೂ ನಡೆದವು.

ವಿದ್ಯಾರ್ಥಿಗಳ ಪ್ರಶ್ನೆಗೆ ಉತ್ತರಕೊಡುತ್ತಾ ತಾನೇ ವಿದ್ಯಾರ್ಥಿ, ಆದ್ದರಿಂದ ತನಗೆ ವಿದ್ಯಾರ್ಥಿಗಳಲ್ಲಿ ಪೂರ್ಣ ಸಹಾನುಭೂತಿ ಎಂದರು. ಭೂದಾನಯಜ್ಞದಲ್ಲಿ ವಿದ್ಯಾರ್ಥಿಗಳೂ ನೆರವಾಗಬಲ್ಲರು. ತಮ್ಮ ತಮ್ಮ ಹಿರಿಯರನ್ನು ಭೂದಾನಕೊಡುವಂತೆ ಮಾಡಬಲ್ಲರು. ಮಕ್ಕಳಿಗಾಗಿ ತಾವು ಆಸ್ತಿಗಳಿಸುತ್ತೇವೆ ಎಂದು ಹಿರಿಯರು ಹೇಳಿದರೆ ಆ ಚಿಂತೆ ಅವರಿಗೆ ಬೇಡವೆಂದು ಹುಡುಗರು ಹೇಳಬಹುದು. ನಾವು ದುಡಿದೇವು, ನಮ್ಮ ಚಿಂತೆ ನಿಮಗೆ ಬೇಡ, ನೀವು ದಾನ ನೀಡಿ ಎಂದು ತಿಳಿಸಿಹೇಳಬಹುದು. ಈ ವಿಜ್ಞಾನ ಯುಗದಲ್ಲಿ ನೀವು ಪಾದಯಾತ್ರೆ ಏಕೆ ಕೈಗೊಂಡಿರಿ ಎಂದು ಒಬ್ಬ ವಿದ್ಯಾರ್ಥಿ ಕೇಳಿದ. 'ನಾವು ಗಾಳಿ–ಗಾಡಿಯಲ್ಲಿ (ವಿಮಾನ) ತಿರುಗಾಡಿದರೆ ನಮ್ಮ ಕೆಲಸವೂ ಗಾಳಿಗೆ ಹಾರಿಹೋದೀತು. ನಾನು ನೆಲದ ಮೇಲೆ ಕೆಲಸ ಮಾಡಬೇಕೆಂದಿ

ದೇನೆ.' ಹಲವು ಪ್ರಶ್ನೆ ಗಂಭೀರವಾಗಿದ್ದುವು ಮನೋರಂಜಕವಾಗಿ ದ್ದುವು. ನಿಮ್ಮ ಹಾಗೆ ನಾವು ಆಗಬೇಕಾದರೆ ಏನು ಮಾಡಬೇಕು ಎಂದು ಒಬ್ಬ ಕೇಳಿದ. 'ನನ್ನ ದೋಷಗಳನ್ನೆಲ್ಲ ಬಿಡಬೇಕು, ಗುಣ ಗಳನ್ನು ಹಿಡಿಯಬೇಕು ಇತರರ ಬಗ್ಗೆಯೂ ಹೀಗೇ, ದೋಷ ಬಿಟ್ಟು ಗುಣ ಗ್ರಹಿಸಬೇಕು. ಹೀಗೆ ಮಾಡಿದರ ನನಗಿಂತ ದೊಡ್ಡವನಾಗುತ್ತೀ'

ರಾಜಕೀಯದಲ್ಲಿ ಭಾಗ ವಹಿಸಬೇಕೇ ಬೇಡವೇ ಎಂಬ ಪ್ರಶ್ನಗೆ ಉತ್ತರಕೊಡುತ್ತಾ, ರಾಜಕೀಯ ದಲ್ಲಿ ಭಾಗವಹಿಸಬಹುದು, ಆದರೆ ರಾಜಕೀಯ ಪಕ್ಷಗಳಿಗೆ ಸೇರಬಾರದು ಎಂದರು 'ಒಂದು ಮಾತು ನೆನಪಿರಲಿ. ಕುರಿಯಾಗಬಾರದು ಹುಲಿಯಾಗಿರಬೇಕು ಕುರಿ ಗಳು ಮಂದ ಕಟ್ಟುತ್ತವೆ. ಹುಲಿಗಳು ಗುಂಪು ಗೂಡುತ್ತವೆಯು? ಇಲ್ಲ. ಇನ್ನೂ ಒಂದು ಮಾತು. ಈಗಂತೂ ಪ್ರತಿಯೊಬ್ಬರೂ ತಮ್ಮ ವಿಚಾರವನ್ನು ವಿದ್ಯಾರ್ಥಿಗಳ ಮೇಲೆ ಹೇರ ಬಯಸುತ್ತಾರೆ ಇಂಥ ಆಕ್ರಮಣಕ್ಕೆ ಸಿಗಬೇಡಿ ಎಂದು ಎಚ್ಚರಕೊಡುತ್ತೇನೆ' ಒಬ್ಬ ಮಹಿಳೆ ಕೇಳಿದ ಪ್ರಶ್ನೆಗೆ ಉತ್ತರಕೊಡುತ್ತ, 'ಗಂಡಸರ ದುರ್ಗುಣಗಳನ್ನು ನೀವು ಅನುಕರಿಸಬೇಡಿ ಅವನ್ನು ನಿರ್ಮೂಲಮಾಡಿ ಬೇಕಾದರೆ ಅದಕ್ಕಾಗಿ ಸತ್ಯಾಗ್ರಹ ಮಾಡಿ ಬರಲಿರುವ ಮಹಾಯುದ್ಧವನ್ನು ತಡೆ ಯಲು ಹೆಂಗಸರು ತಮ್ಮಲ್ಲಿರುವ ಅಹಿಂಸಕ ಶಕ್ತಿಯನ್ನು ಅರಳಿಸ ಬೇಕು. ಸತ್ಯಾಗ್ರಹವೂ ಅದರ ಅಂಗ ಮಹಿಳೆ ಎಂಬ ಶಬ್ದ ನನಗೆ ರುಚಿಸುತ್ತದೆ. ಅದರಲ್ಲ ಮಹಾಕಾರ್ಯದ ಸ್ಫೂರ್ತಿಯ ಸೂಚನೆ ಯಿದೆ. ನಿಮ್ಮೊಳಗೆ ಅಹಿಂಸಕ ಶಕ್ತಿಯ ತೇಜಸ್ಸು ಚಿಮ್ಮಲಿ. ಇದೇ ಇಂದಿನ ಮಹಾಕಾರ್ಯ ನಿಮಗೆ' ಎಂದರು.

ಭೂದಾನದಿಂದ ಹೊಲ ತುಂಡು ತುಂಡು ಆಗಿ ಹಂಚೀತಲ್ಲ ಎಂಬ ಪ್ರಶ್ನೆಗೆ, 'ಐದು ಕೋಟಿ ಎಕರೆ ಹೊಲ ಕೈಬಿಟ್ಟು—ಕೈಗೆ ಹೋ ದರೆ ಎಂಥ ಕ್ರಾಂತಿಯಾದೀತೋ ಅದರ ಮುಂದೆ ಈ ತುಂಡ-ತುಕಡಿ

ಗಳ ಪ್ರಶ್ನೆ ಕ್ಷುದ್ರ ಈ ಪ್ರಶ್ನೆಯೇ ವ್ಯರ್ಥ ಈಗ ಚೀಣಾದಲ್ಲಿ ಕಮ್ಯುನಿಸ್ಟರ ರಾಜ್ಯವಿದೆ ಅಲ್ಲಿ ಅವರು ತುಂಡು-ತುಕಡಿಗಳ ತತ್ವದಂತೆ ಕೆಲಸ ಮಾಡುತ್ತಿದ್ದಾರೆ ರೈತರಿಗೆ ಚಿಕ್ಕ ಚಿಕ್ಕ ತುಂಡುಗಳನ್ನು ಕೊಡುತ್ತಿದ್ದಾರೆ ಈ ಚಿಕ್ಕ ಪುಟ್ಟ ಹೊಸ ರೈತರ ನಡುವೆ ಹಲವು ಬಗೆಯ ಸಹಕಾರ ಸಾಧ್ಯ ನಾಲ್ಕಾರು ಸಂಸಾರ ಸೇರಿ ಎತ್ತು-ಗಾಡಿ ಇಡಬಹುದು ಒಬ್ಬೊಬ್ಬರೇ ಈ ಭಾರ ಹೊರಬೇಕಾಗಿಲ್ಲ' ಎಂದರು. ವಿದ್ಯಾರ್ಥಿಗಳು ಸಿನಿಮಾದ ಬಗ್ಗೆ ಪ್ರಶ್ನೆ ಕೇಳಿದರು ಅದಕ್ಕೆ ಇದಿರಾಗಿ ವಿನೋಬಾ ಅವರನ್ನೇ ಪ್ರಶ್ನೆ ಕೇಳಿದರು 'ಇಲ್ಲಿ ಮೈಥಿಲೀ ಶರಣರು ಕೂತಿದ್ದಾರೆ, ಅವರನ್ನು ಕೇಳಿ ಅವರಿಗೆ ಸಿನಿಮಾ ನೋಡಿದರೆ ಹೊಸ ಹೊಸ ಸ್ಫೂರ್ತಿ, ನವನವೋನ್ಮೇಷ ಪ್ರಜ್ಞೆ ಬರುತ್ತದೇನೋ ಕೇಳಿ ಅಥವಾ ಮುಗಿಲಿನಲ್ಲಿ ಮಿರುಗುವ ತಾರೆಗಳನ್ನು ನೋಡಿ ಸ್ಫೂರ್ತಿ ಪಡೆಯುತ್ತಾರೋ ಕೇಳಿ'

**ಸರ್ವೇಷಾಂ ಅವಿರೋಧೇನ** ಹಿಂದೂ ಸಂಘಟನೆಯ ಔಚಿತ್ಯದ ಬಗ್ಗೆ ಒಬ್ಬರು ಕೇಳಿದರು ಹಿಂದೂ ಸಂಘಟನೆಯೆಂದರೆ ಮುಸ್ಲಿಂದ್ವೇಷವಲ್ಲ ಗುಣ ಸಂಘಟನೆ ಅಥವಾ ಸೇವಾ ಸಂಘಟನೆ, 'ಸರ್ವೇಷಾಂ ಅವಿರೋಧೇನ'—ಗುಣವಂತಿದ್ದರೆ ಅದು ಉಚಿತ ಗಾಂಧೀಜಿಗಿಂತ ಹೆಚ್ಚು ಹಿಂದೂ ಧರ್ಮಪ್ರೇಮಿ, ಹಿಂದೂ ಸಂಘಟನೆ ಮಾಡಿದವರು ಯಾರಾದರೂ ಹುಟ್ಟಿದ್ದರೆ? ಗೀತಾಪ್ರಚಾರಕ್ಕೆ ಗಾಂಧೀಜೀ ಕೊಟ್ಟಷ್ಟು ಮಹತ್ವವನ್ನು ಶಂಕರಾಚಾರ್ಯ, ಜ್ಞಾನದೇವರ ತರುವಾಯ ಯಾರೂ ಕೊಡಲಿಲ್ಲ. ಆದರೆ ಅದೆಲ್ಲವೂ ಈ ಸರ್ವೇಷಾಂ ತತ್ವದ ಅನುಸಾರ ನಡೆಯಿತು ಈ ತತ್ವ ಅರಿತುಕೊಳ್ಳಿ ಅದರ ಒರೆಗಲ್ಲಿಗೆ ತಿಕ್ಕಿ ನೋಡಿ ಕೆಲಸಮಾಡಿ' ಕಡೆಯಲ್ಲಿ ಒಬ್ಬ ತಮ್ಮ ಕೇಳಿದ—'ವಿನೋಬಾ, ತಾವು ನಮಗೆ ಒಂದು ಒಳ್ಳೆ ಹಾಡು ಹಾಡಿ ತೋರಿಸಬಾರದೆ?' 'ಒಳ್ಳೆಯದು, ಸಮಯವಿದ್ದರೆ ಹೇಳುತ್ತೇನೆ' ಎಂದರು. ಹೊತ್ತು ಮೀರಿತ್ತು.

ಆದರೂ ತಮ್ಮ ಅತ್ಯಂತ ಭಾವಮಯ ಧ್ವನಿಯಿಂದ ಕಬೀರನ ಪ್ರಸಿದ್ಧ ಗೀತೆ—(ಲೋಕಾಜಾನ್ ನ ಭೂಲೋ ಭಾಯೀ, ಖಾಲಿಕ ಖಲಕ್, ಖಲಕಮೇ ಖಾಲಿಕ್, ಸಬಘಟ ರಹಾ ಸಮಾಯೀ—)ಹಾಡಿದರು. ಹಾಡುವ ಮೊದಲು ಅದರ ಅರ್ಥವನ್ನು ಹೇಳಿದರು ಕಡೆಯಲ್ಲಿ, ಈ ಭಜನೆಯಲ್ಲಿ ಕಬೀರ್ ಘೋಷಿಸಿರುವ ಭಾವದಿಂದ, ಅದೇ ಪರಮೇಶ್ವರ ಭಾವನೆಯಿಂದ ನಿಮಗೆಲ್ಲರಿಗೂ ಪ್ರಣಾಮ ಎಂದರು.

ಈ ಕಟ್ಟಕಡೆಯ ಪ್ರಸಾದ ಪಡೆದು ಎಲ್ಲರೂ ತೃಪ್ತರಾದರು.

## ೭ ವಿಂಧ್ಯಪ್ರದೇಶದಲ್ಲಿ

ಮತ್ತೊಮ್ಮೆ ವಿಂಧ್ಯಪ್ರದೇಶಕ್ಕೆ ಬರಬೇಕಾಯಿತು. ಝಾನ್ಸಿಯಿಂದ ೧೮ ಮೈಲಿ ನಡೆದು ದತಿಯಾಗೆ ಬಂದೆವು. ನಡುವೆ ಒಂದು ಹಳ್ಳಿಯಲ್ಲಿ ಜನ ಸ್ವಾಗತ ನೀಡಿ ೪ ಎಕರೆ ದಾನಕೊಟ್ಟರು. ವಿನೋಬಾಜಿ ಮುನ್ನಡೆದರು. ದಾನಪತ್ರ ಬರೆಸಿಕೊಳ್ಳಲು ನಮ್ಮಲ್ಲೊಬ್ಬರು ಹಿಂದೆ ನಿಂತರು ಆ ಪತ್ರ ಬರೆಯುವುದರೊಳಗಾಗಿ ಇನ್ನೂ ೩ ಎಕರೆ ದಾನ ಸಿಕ್ಕಿತು.

ದತಿಯಾದಲ್ಲಿ ೨೪ ಜನ ಸೇರಿ ೭೮ ಎಕರೆ ಹೊಲಕೊಟ್ಟರು. ಕೆಲಸಗಾರರು ಮಾಡಬೇಕಾದಷ್ಟು ಕೆಲಸಮಾಡಿರಲಿಲ್ಲ ಅವರನ್ನು ಎಚ್ಚರಿಸುತ್ತ ವಿನೋಬಾ 'ತೆಲಂಗಾಣದಂತೆ ಇಲ್ಲಿಯೂ ಸರ್ವೋದಯಕ್ಕೆ ಮೊದಲು ಸರ್ವನಾಶ ಆಗಬೇಕೆ? ಕಮ್ಯುನಿಸ್ಟ್ ಕ್ರಾಂತಿ ಚೀನಾ ದಾಟಿ ತಿಬೆಟ್ಟಿನ ವರೆಗೆ ಬಂದಿದೆ ಹಿಂದೂಸ್ಥಾನಕ್ಕೂ ಅದೇ ಬರಬೇಕೇನು? ಹೊಲದ ಪ್ರಶ್ನೆ ಹರಿದೇ ಹರಿದೀತು ನೀರಡಿಸಿದಾಗ ತಿಳಿನೀರು ಸಿಗದಿದ್ದರೆ ಜನರು ಕೊಳೆ ನೀರನ್ನೇ ಕುಡಿದಾದರೂ ನೀರಡಿಕೆ ತಣಿಸಿಕೊಂಡಾರು. ಜನ ತಮ್ಮ ತಮ್ಮ ಸಂಸಾರದ ಕೆಲಸದಲ್ಲಿ ಮುಳುಗಿದಾರೆ. ಎಲ್ಲಿ ನೋಡಿದರೂ ಆಯಾಸ, ಸೋಮಾರಿತನ. ಗೋಪುರ ಹತ್ತಿದ ಮೇಲೆ ದಣಿವಾದರೆ ಅರ್ಥವಾಗುತ್ತದೆ. ಇನ್ನೂ ಅಡಿಯಲ್ಲೇ ನಿಂತು ಕೊನೆಗಂಡವರಂತೆ ದಣಿವು ತೋರಿದರೆ ಏನು ಮಾಡಬೇಕು? ದೇಶದ ಇಡೀ ರಚನೆಯನ್ನೇ ನಾವು ಬದಲಿಸಬೇಕಾಗಿದೆ. ಈಗಿನ ರಚನೆ ಕುಟುಂಬನಿಷ್ಠ. ಆದರಿಂದ ಅದು ಸ್ವಲ್ಪ ಮಟ್ಟಿಗೆ ಸ್ವಾರ್ಥಿಯಾಗಿದೆ ಕುಟುಂಬವ್ಯವಸ್ಥೆ ಒಂದು ಕಾಲಕ್ಕೆ ಅಗತ್ಯವಾಗಿತ್ತು. ಈಗ ಅದು ಮುಲತಿದೆ. ನಾವು ಮುಂದೆ ಸಾಗುವಂತಿಲ್ಲ. ನಮ್ಮ ಬೆಳವಣಿಗೆ ಅದರಿಂದ ನಿಂತುಹೋಗಿದೆ.'

ಭೂದಾನಯಜ್ಞದಲ್ಲಿ ಸಹಕಾರ ನೀಡುವಂತೆ ಹುರಿದುಂಬಿಸುತ್ತ 'ನಾವು ಪಕ್ಷಭೇದ, ವೃತ್ತಿಭೇದ, ಜಾತಿಭೇದ ಎಲ್ಲವನ್ನೂ ಬಿಟ್ಟು ಜನತೆಯ ಬಳಿ ಸಾರಿದರೆ ಹೊಲ ಖಂಡಿತ ಸಿಗುತ್ತದೆ. ಅದರಿಂದ ಬೀಸುವ ಗಾಳಿ ತಗಲದಂತಹ ಒಂದು ಮಗುವೂ ಈ ದೇಶದಲ್ಲಿ ಇರಲಾರದು' ಎಂದರು.

ಈ ಯಜ್ಞದ ಕಲ್ಪನೆ ಬೇರೆ ಬೇರೆ ಸ್ಥಳದಲ್ಲಿ ಹೇಗೆ ಜನರಿಗೆ ಸಾತ್ವಿಕ ಭಾವದ ಪ್ರೇರಣೆ ಕೊಟ್ಟಿತೋ, ಜನರು ಹೇಗೆ ಸಾತ್ವಿಕ ದಾನ ನೀಡಿದರೋ ಉದಾಹರಣೆ ಕೊಟ್ಟು ತೋರಿಸಿದರು. 'ಎಷ್ಟು ದಿನ, ಯಾರು ಯಾರಿಗೆ ಹಿಟ್ಟು ಕೊಡುತ್ತಿರೋಣ? ಅನ್ನ ಕೊಡುವ ಬದಲು ಅನ್ನ ಪಡೆವ ಉತ್ಪಾದಕ ಸಾಧನವನ್ನೇ ಜನರಿಗೆ ಕೊಡೋಣ. ಸಾಲಂಕೃತ ಕನ್ಯಾದಾನದಂತೆ ಸಲಕರಣೆಗಳೊಂದಿಗೆ ಭೂದಾನ ಕೊಡೋಣ. ನಾವು ಅತಿಥಿ ದೇವೋ ಭವ ಎನ್ನುತ್ತೇವೆ ಈ ದರಿದ್ರ ನಾರಾಯಣ ಬೇಡಲೂ ಆರದಂಥ ಅತಿಥಿ ದೇವರು ನನ್ನ ಬಾಯಲ್ಲಿ ಅವನ ಮಾತು ಆಡಿಸುತ್ತಿದಾನೆ ತಾವೆಲ್ಲರೂ ಈ ಮಹಾಕ್ರಾಂತಿಯ ಕೆಲಸದಲ್ಲಿ ತೊಡಗಬೇಕು.' ಮುಂದೆ ಮಧ್ಯಭಾರತಕ್ಕೆ ಕಾಲಿಡಬೇಕು. ಆಗಲೇ ಶ್ರೀ ವೈಜನಾಥರು ಬಂದು ಕಾದಿದ್ದರು. ಇನ್ನೂ ಐದಾರು ಜನ ಈ ಯಾತ್ರೆಯಲ್ಲಿ ವಿನೋಬಾಜಿಯ ಜತೆಗೆ ಇರಬಯಸಿ ಬಂದಿದ್ದರು. ಹಳ್ಳಿ ಹಳ್ಳಿಗೂ ಈ ಯಜ್ಞದ ಸಂದೇಶ ಸಾಕಷ್ಟು ತಲಪಿಲ್ಲ ಎಂದು ಅನುಭವವಾಗುತ್ತಿತ್ತು. ಕೆಲಸಗಾರರ ಅಭಾವ, ಕಲ್ಪನಾಶಕ್ತಿಯ ಅಭಾವ. ಆದ್ದರಿಂದ ನೀವೆಲ್ಲರೂ ಹಳ್ಳಿಗಳಿಗೆ ಹೋಗಿ ಭೂದಾನ ಯಜ್ಞದ ಸಂದೇಶವನ್ನು ತಿಳಿಸಿ ಎಂದು ಅವರನ್ನು ಪುಸಲಾಯಿಸಿ ವಿನೋಬಾಜಿಯ ಆಶೀರ್ವಾದ ಪಡೆದು ಅವರನ್ನು ಕಳಿಸಿಕೊಟ್ಟರು.

ದತಿಯಾದ ತರುವಾಯ ಉಪರಾಯ ಎಂಬ ಹಳ್ಳಿ ಬಂತು. ಅಲ್ಲಿ ೫೦ ಗುಂಟೆ ಹೊಲ ಸಿಕ್ಕಿತು. 'ಹಳ್ಳಿಯ ಮಕ್ಕಳೆಲ್ಲ ನಿಮ್ಮ

ಮಕ್ಕಳೇ, ಹಳ್ಳಿಯಲ್ಲಿ ಹಸಿದವರೆಲ್ಲ ನಿಮ್ಮ ತಮ್ಮಂದಿರೇ, ಅವರಿಗೆ ಅಶನವಿಕ್ಕಿ ನೀವು ಮಲಗಬೇಕು. ಇದನ್ನೇ ಹೇಳುತ್ತ ನಾನು ಹಳ್ಳಿ ಹಳ್ಳಿ ತಿರುಗುತ್ತಿದೇನೆ. ಹುಟ್ಟುವಾಗ ಅಳುತ್ತ ಅಳುತ್ತ ಬಂದೆವು. ಹೋಗುವಾಗ ನಗುತ್ತ ನಗುತ್ತ ಹೋಗಬೇಕು. ಆ ರೀತಿ ಕೆಲಸ ಮಾಡಬೇಕು ಯಾರು ಲೋಕದಲ್ಲಿ ಕೇವಲ ಪ್ರೇಮವನ್ನೇ ಸೂಸಿ ಪ್ರೇಮವನ್ನೇ ಪಡೆವರೋ ಅವರು ನಗುನಗುತ್ತ ಹೋಗಬಲ್ಲರು’

ದತಿಯಾದ ಮಾತು ಎತ್ತಿ ಅಲ್ಲಿ ಬಹಳ ಕಡಮೆ ದಾನ ದೊರೆತುದನ್ನು ಹೇಳಿದರು. ‘ಒಂದೊಂದು ಹೆಜ್ಜೆ ನೆಲಕ್ಕಾಗಿ ತಂದೆ ಮಕ್ಕಳಲ್ಲಿ ಕೂಡ ಜಗಳವಾಗುತ್ತದಲ್ಲ ಹಾಗಿದ್ದರೂ, ಜನ ನನಗೇಕೆ ಹೊಲ ನೀಡುತ್ತಾರೆ? ಪ್ರೇಮವಿಲ್ಲದೆ ಇದು ಸಾಧ್ಯವೆ? ಹೀಗೆ ಯಾರಾದರೂ ಹೊಲ ಬೇಡಲು ನಿಮ್ಮ ಹಳ್ಳಿಗೆ ಬಂದಿದ್ದರೆ? ಇನ್ನು ಮುಂದೆ ನನ್ನ ಪರವಾಗಿ ಬೇಡಲು ಜನ ಬಂದಾರು. ಅವರಿಗೆ ಹೊಲ ಸಿಕ್ಕೀತು. ಹೈದರಾಬಾದಿನಲ್ಲಿ ಈಗ ಹೀಗೆ ಕೆಲಸ ನಡೆಯುತ್ತಿದೆ ದಿನವೂ ಹೊಸದಾಗಿ ಹೊಲ ಸಿಗುತ್ತಿದೆ ಉತ್ತು, ಬಿತ್ತಬೇಕೆಂಬ ಮನುಷ್ಯ, ಹೊಲವಿಲ್ಲದ ಒಬ್ಬನೇ ಒಬ್ಬ ಇರುವ ವರೆಗೂ ಈ ಭೂದಾನಯಜ್ಞದ ಕೆಲಸ ನಡೆದೇ ನಡೆಯುತ್ತದೆ. ಅಂತೆಯೇ, ನೀವು ಭೂದಾನ ನೀಡಿ. ಕೈಯಾರ ಏನಾದರೂ ದಾನ ಕೊಡುವ ವರೆಗೆ ಮನುಷ್ಯನಿಗೆ ಸಮಾಧಾನವಿಲ್ಲ ಕೊಡುವವರನ್ನೂ ಪಡೆವವರನ್ನೂ ಇಬ್ಬರನ್ನೂ ಮೇಲಕ್ಕೇರಿಸುವ ಕಾರ್ಯಕ್ರಮ ಈ ಭೂದಾನ’

## ೮ ದೀಕ್ಷೆ ಕೊಡಲು ಬಂದಿದೇನೆ

**ಗ್ವಾಲೇರ್ :** ಮಧ್ಯಭಾರತದ ರಾಜಧಾನಿ ಗ್ವಾಲೇರನ್ನು ವಿನೋಬಾಜೀ ಬೆಳಗ್ಗೆ ೭-೩೦ ಕ್ಕೆ ತಲಪಿದರು. ಚೌರಾಸಿಗೆ ಇದು ೧೫ ಮೈಲಿ. ಇಲ್ಲಿಯವರೆಗೆ ದಾರಿಯ ಎರಡೂ ಬದಿ ಬೀಗಿ ಬೆಳೆದ ಪೈರಿನ ಹಸಿರು ಹೊಲಗಳು ಕಣ್ಣಿಗೆ ಹಬ್ಬವಾಗಿದ್ದುವು. ಈಗ ಬರೀ ಬೀಳು ಭೂಮಿ. ಈ ವ್ಯತ್ಯಾಸ ಯಾರಿಗೆ ಬೇಕು? ಸಾವಿರಾರು ಎಕರೆ ನೆಲ ನೇಗಿಲ ಸ್ಪರ್ಶವನ್ನೇ ಅರಿಯದೆ ಬಿದ್ದಿದೆ ಈ ನೆಲವನ್ನು ಬಡವರಿಗೆ ಹಂಚಲು ಮಧ್ಯಭಾರತ ಸರಕಾರ ನಿರ್ಧರಿಸಿದೆ. ಆದರೆ ಹಂಚುವ ವಿಧಾನ, ಹರಾಜಿನಲ್ಲಿ ಹೆಚ್ಚಿಗೆ ಕೊಟ್ಟು ಕೊಂಡವರಿಗೆ. ಇದರಿಂದ ಬಡವರಿಗೆ ಹಂಚುವ ಉದ್ದೇಶ್ಯವೇ ವಿಫಲವಾಗುತ್ತದೆ. ನೂರಾರು ಎಕರೆ ನೆಲವನ್ನು ಭಾರಿ ವ್ಯಾಪಾರಿಗಳಿಗೆ ಕೊಟ್ಟಿದಾರೆ. ಅವರು ಬೇಗ ಸಾಗುವಳಿ ಮಾಡಿನಬಲ್ಲರು ಎಂದು. ಹೆಚ್ಚು ಆಹಾರ ಬೆಳೆಯಿರಿ ಯೋಜನೆಯಲ್ಲಿ ಇವರಿಗೆ ಪ್ರಯೋಗಾರ್ಥ ಹೇರಳವಾಗಿ ಹಣವನ್ನೂ ಕೊಟ್ಟಿದಾರೆ. ತೆಲಂಗಾಣದಲ್ಲಿ, ಉತ್ತರ ಭಾರತದಲ್ಲಿ ನಮಗಾದ ಅನುಭವದಿಂದ ಬಡವರಿಗೆ ಹೊಲ ಹಂಚುವ ಕೆಲಸ ಸಾರ್ವಜನಿಕ ಸಮಿತಿಗಳಿಂದ ಚೆನ್ನಾಗಿ ನಡೆದೀತು ಎನಿಸಿದೆ.

ಗಾಲ್ವೇರನ್ನು ತಲಪಿದಾಗ ಯಾತ್ರಿಕರ ಗುಂಪು ದೊಡ್ಡದಾಗಿತ್ತು. ದಾರಿಯುದ್ದಕ್ಕೂ ಕ್ಯಾಮೆರಾಗಳ ಸದ್ದು ಇತ್ತು. ಊರಿಗೆ ಬಂದು ಸೇರಿದಾಗ ವಿನೋಬಾಜೀ ತೀರ ಚಿಕ್ಕ ಭಾಷಣ ಮಾಡುತ್ತಾರೆ. ಆ ದಿನ ಅಲ್ಲಿ ನಡೆಯಬೇಕಾದ ಕೆಲಸಕ್ಕೆ ಪೀಠಿಕೆಯಿದ್ದಂತೆ. ಆದರೆ ಗಾಲ್ವೇರದಲ್ಲಿ ಬೆಳಗಿನ ಭಾಷಣ ದೀರ್ಘವಾಗಿತ್ತು.

'ಭಾರತವನ್ನೂ ಇಡೀ ಲೋಕವನ್ನೂ ಪೀಡಿಸುತ್ತಿರುವ ಮಹಾ

ಸಮಸ್ಯೆಗಳಿಗೆ ಒಂದು ಅಹಿಂಸಕೋಪಾಯವನ್ನು ಅರಸಲು ನಾನು ಹಳ್ಳಿಹಳ್ಳಿಗೂ ಹೀಗೆ ಪಾದಯಾತ್ರೆ ಮಾಡುತ್ತಿದೇನೆ. ನನ್ನ ಅಭಿಪ್ರಾಯದಲ್ಲಿ ಭಾರತಕ್ಕೆ ಇರುವುದು ಎರಡೇ ದಾರಿ ಇಲ್ಲವೆ, ಹಿಂಸೆಯನ್ನಾದರೂ ಖಚಿತವಾಗಿ ಅವಲಂಬಿಸಬೇಕು. ಗಾಂಧೀಜೀ ತೋರಿದ ಅಹಿಂಸೆ-ಸತ್ಯಗಳ ದಾರಿಯನ್ನಾದರೂ ತುಳಿಯಬೇಕು ಹಿಂಸೆಯ ದಾರಿ ಹಿಡಿದರೆ ನಾವು ಶಸ್ತ್ರ ಸಜ್ಜಿತರಾಗಲಿಕ್ಕೇ ಬಹಳ ಕಾಲ ಬೇಕಾದೀತು ದ್ರವ್ಯಾಭಾವಕ್ಕಾಗಿ ನಮ್ಮ ಅಭಿವೃದ್ಧಿ ಯೋಜನೆಗಳನ್ನೆಲ್ಲ ೫೦ ವರ್ಷ ಮುಂದಕ್ಕೆ ತಳ್ಳಬೇಕಾದೀತು. ಜನಾಭಿಪ್ರಾಯವನ್ನು ಅದುಮಬೇಕಾದೀತು ಬಡತನ-ಉಪವಾಸಗಳು ದೇಶಕ್ಕಾಗಿ ನೀವು ಸಲ್ಲಿಸುವ ಕಾಣಿಕೆಯೆಂದು ಅವರಿಗೆ ಹೇಳಬೇಕಾದೀತು ನಮ್ಮ ಸಮಸ್ಯೆಗೆ ಪರಿಹಾರಗಳನ್ನು ರಷ್ಯಾ-ಅಮೆರಿಕಾಗಳಲ್ಲಿ ಹುಡುಕಬೇಕಾದೀತು ಆಮೇಲೆ ಭಾರತವು ಬೆಳಗಲು ಕನಿಷ್ಠ ಒಂದು ಶತಮಾನವಾದರೂ ಬೇಕು ಆಗಲೂ ಉಳಿದೆಲ್ಲ ಸ್ಪರ್ಧಿ-ದೇಶಗಳನ್ನು ಹಾಳುಮಾಡಬೇಕು ಭಾರತದಂಥ ಹಿರಿಯ ರಾಷ್ಟ್ರ ಬಲಿಷ್ಠವಾದರ ಉಳಿದವಕ್ಕೆ ಬಾಳಲು ಎಡೆಯೇ ಇಲ್ಲ. ಆದರೆ ನಮ್ಮ ಜನ ಕೋಟಿಗಟ್ಟಲೆ ಸಾಯುವುದು ನಮಗೆ ಬೇಡ. ನಮಗೆ ಭೂ-ಸ್ವರ್ಗ ಬೇಕು. ಪ್ರತಿಯೊಬ್ಬ ಬಡವನೂ ಏಳಿಗೆಯಾಗಬೇಕು. ಬಲಿದಾನ ಎಂದರೆ ಬಲಶಾಲಿಗಳ ದಾನ, ಬಲಹೀನರದಲ್ಲ ಅಂತೇ, ಈ ಎಲ್ಲ ಸಮಸ್ಯೆಗಳಿಗ ಅಹಿಂಸಕ ಪರಿಹಾರವನ್ನು ನಾನು ಹುಡುಕುತ್ತಿದ್ದೆ ತೆಲಂಗಾಣದಲ್ಲಿ ಭೂದಾನ ಯಜ್ಞದ ಮೂಲಕ ನನಗಾ ದಾರಿ ಸಿಕ್ಕಿತು.

ಆತ್ಮಾನಸ್ಯದಲ್ಲಿ- ತನ್ನಂತೆ ಪರರ ಬಗೆವುದರಲ್ಲಿ ಪರಿಹಾರ ಇದೆ ಎಂಬುದನ್ನು ಕಂಡೆ. ಇದು ಶ್ರೇಷ್ಠ ಆರ್ಯಧರ್ಮ. ಹಿಂಸಾಪಥ ಪವಿತ್ರವಲ್ಲ. ಅಪವಿತ್ರ.'

ಸಭೆ ಮುಗಿದ ಮೇಲೆ ಇಬ್ಬರು ವರ್ತಕರು ತಲಾ ೫೦೦ ರೂ. ನೀಡಿದರು. ವಿನೋಬಾಜೀ ಆ ಹಣದಿಂದ ಹೊಲ ಕೊಂಡುಕೊಡಿ ಎಂದು ಹೇಳಿದರು. ಒಬ್ಬ ತಂಗಿ ಬಂದು ತನಗಿದ್ದ ಹೊಲವನ್ನೆಲ್ಲ ನೀಡಿದಳು.

ಗ್ವಾಲೇರದಿಂದ ಬಾಮೋರ. ಒಂದು ಚಿಕ್ಕ ಹಳ್ಳಿ. ಅಲ್ಲೊಂದು ಸಿಮೆಂಟು ಕಾರ್ಖಾನೆ. ಆದ್ದರಿಂದ ಕೂಲಿಗಾರರ ಸಂಖ್ಯೆ ಹೆಚ್ಚು. ಅಲ್ಲಿ ನೆರದಿದ್ದ ಜನರಿಗೆ ವಿನೋಬಾಜೀ 'ನಾನು ನಿಮ್ಮ ಬಳಿ ಅಥಿತಿಯಾಗಿ ಬಂದಿದೇನೆ ಅತಿಥಿಯಂತೆ ಒಂದೇ ದಿನ ಇರುತ್ತೇನೆ. ಒಂದೊಂದು ದೇವತೆಗೆ ಒಂದೊಂದು ಬಗೆಯ ಪೂಜೆ ಇಷ್ಟ. ವಿಷ್ಣುವಿಗೆ ಬಿಲ್ವಪತ್ರೆ ಸಲ್ಲದು ಶಿವನಿಗೆ ತುಲಸಿ ಸಲ್ಲದು ಈ ಅತಿಥಿ ದೇವನಿಗೆ ಭೂಮಿದಾನ ಮಾತ್ರವೇ ಸಲ್ಲುತ್ತದೆ. ನೀವು ಹೂ–ಹಣ್ಣು–ಹಾಲು ಮೊಸರು ತಂದೀರಿ. ಆದರಿಂದ ಮೈ ತಣಿದೀತು. ಆದರೆ ದೇವತೆಗೆ ಭೂಮಿಯಿಂದಲೇ ತೃಪ್ತಿ. ತಾವು ಪ್ರತಿಯೊಬ್ಬರೂ ಕೊಡಿ. ಆಗ ಈ ಹಳ್ಳಿ ಗೋಕುಲವಾದೀತು. ನಾವು ಪ್ರೇಮದೇವತೆಯ ಉಪಾಸನೆ ಮಾಡಬೇಕಾಗಿದೆ. ಆದ್ದರಿಂದ ಇಡೀ ದಿನ ಭೂದಾನ ಸಂಗ್ರಹದಲ್ಲಿ ತೊಡಗಿರಿ. ಸಂಜೆಗೆ ಅದೆಲ್ಲವನ್ನೂ ಭಗವಂತನಿಗೆ ಅರ್ಪಿಸೋಣ. ಈ ಯಜ್ಞದಲ್ಲಿ ನನಗೆ ಎಲ್ಲರೂ ನೆರವಾಗಿದಾರೆ. ಆದರೆ ಮೊದಲು ತಾವು ಸ್ವಂತ ಕೊಡಬೇಕು' ಎಂದರು.

೧೦ ಗಂಟೆಗೆ ಗ್ರಾಮ ಪ್ರದಕ್ಷಿಣೆ ಮೊದಲಾಯಿತು. ಜಾಟರ ಮನೆಗಳಿಗೆ ಹೋದರು. ಕೂಲಿಗಾರರ ಮನೆಗಳಿಗೆ ನುಗ್ಗಿದರು. ರಾಜಪೂತರಲ್ಲಿ ಹೊಕ್ಕರು. ಒಂದು ಮನೆಯಲ್ಲಿ ಎರಡು ಕತ್ತಿ ತೂಗು ಹಾಕಿದ್ದರು. 'ನಿನ್ನ ಜೀವನದಲ್ಲಿ ಎಷ್ಟು ಸಲ ಇದನ್ನು ಉಪಯೋಗಿಸಿದೀಯೆ' ಎಂದು ವಿನೋಬಾ ಆ ರಾಜಪೂತನನ್ನು ಕೇಳಿದರು.

'ಸ್ವಾಮಿ ಇಂದಿನ ವರೆಗೆ ಅಂಥ ಪ್ರಸಂಗವೇ ಬಂದಿಲ್ಲ.'

'ಇನ್ನು ಮುಂದೆ ಪ್ರಸಂಗ ಬಂದೀತೇನು?'

'ಇಲ್ಲ, ಇದು ರಾಜಪೂತರ ಗೌರವದ ಗುರುತು.'

'ಹಾಗಾದರೆ ಇದು ಅಗತ್ಯವಿಲ್ಲ. ಇದನ್ನು ಕರಗಿಸಿ ಏನಾದರೂ ಮುಟ್ಟು ಮಾಡಿಸು.'

ಜನರ ಮೈಮೇಲಿ ಹರಿದ, ಕೊಳೆಯ ಬಟ್ಟೆ ಕಂಡುಬಂದಿತು. ಕೆಲವರನ್ನು ತಡೆದು ತಮ್ಮ ಮೈಮೇಲಿನ ಬಟ್ಟೆ ತೋರಿಸಿದರು. ಇದು ಹೇಗೆ ಆಯಿತು ಗೊತ್ತೆ? ನಮ್ಮ ಆಶ್ರಮದಲ್ಲೇ ಇದನ್ನು ನೇಯ್ದರು. ನೂತು, ನೇದು ಎಲ್ಲವನ್ನೂ ನಾವೇ ಮಾಡುತ್ತೇವೆ. ನೀವೇಕೆ ನೂಲಬಾರದು' ಎಂದು ಕೇಳಿದರು. 'ಇಂಥ ಹರಕಲು ಬಟ್ಟೆ ತೊಡುವುದಕ್ಕಿಂತ ನನ್ನ ಹಾಗೆ ಬರೀ ಮೈಯಲ್ಲಿರುವುದೇ ಲೇಸು ಎಂದರು.

ಹಿಂದಿರುಗಿದಾಗ ಮನೆಯಲ್ಲಿ ಒಬ್ಬ ಹೆಂಗಸು ಕಾಯುತ್ತಿದ್ದಳು. ತನ್ನ ಜಮೀನುದಾರಿಯಲ್ಲಿ ೨೫ ಎಕರೆ ನೀಡಿದಳು. ಚಿಕ್ಕ ಚಿಕ್ಕ ದಾನಗಳೂ ಬಂದುವು.

ಹೈದರಾಬಾದಿನ ಕಮ್ಯುನಿಸ್ಟರು ತಮ್ಮ ಚಳುವಳಿಯನ್ನು ನಿಲ್ಲಿಸಿದರು ಎಂದು ಪತ್ರಿಕೆಗಳಲ್ಲಿ ಬಂದಿತ್ತು. ಈ ಬಗ್ಗೆ ವಿನೋಬಾಜಿಯ ಅಭಿಪ್ರಾಯ ತಿಳಿಯಲು ಪತ್ರಿಕೆಯವರು ಬಂದಿದ್ದರು. ಚಳುವಳಿ ನಿಲ್ಲಿಸಿದ ಮಾತ್ರಕ್ಕೆ ಸರಕಾರವಾಗಲಿ ಜನವಾಗಲಿ ಕಮ್ಯುನಿಸ್ಟರನ್ನು ನಂಬದು. ತಮ್ಮಲ್ಲಿರುವ ಆಯುಧಗಳನ್ನೆಲ್ಲ ಸರಕಾರಕ್ಕೆ ಅವರು ಒಪ್ಪಿಸಬೇಕು. ೩ ತಿಂಗಳ ಮೊದಲೇ ನಾನು ಈ ಸಲಹೆ ಕೊಟ್ಟೆ. ಆಗಲೇ ಹಾಗೆ ಮಾಡಿದ್ದರೆ ಈ ವೇಳೆಗೆ ಜನರ ವಿಶ್ವಾಸ ಗಳಿಸಬಹುದಾಗಿತ್ತು.'

ಬಾವೋರಧಿಂದ ಮುರೈನಾ ೧೩ ಮೈಲಿ. ಇದು ಮಧ್ಯ ಭಾರತದ ಕಡೆಯ ಬಿಡಾರ. ಸಂಜೆಯ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಹೇಳುತ್ತ ವಿನೋಬಾಜೀ : 'ಭೂದಾನಕ್ಕಾಗಿ ನಾನು ಮಾಡಿದ

ಬಿನ್ನಹ ವಿಫಲವಾದರೆ ಏನು ಮಾಡುತ್ತೀರಿ ಎಂದು ನನ್ನನ್ನು ಕೇಳಿದಾರೆ. ಇದು ನಾನು ವಿಚಾರಮಾಡುವ ದಾರಿಯಲ್ಲ. ಈ ಕೆಲಸ ನನ್ನ ಪಾಲಿಗೆ ಬಂದಿದೆ. ನಾನು ಮಾಡುತ್ತಿದೇನೆ ನಾನೇ ಇದಕ್ಕೆ ಕೈಹಾಕಿಲ್ಲ. ಈ ಕೆಲಸ ಸಫಲವಾದೀತೆಂಬ ಭರವಸೆಯಿಂದ ಮಾಡುತ್ತಿದೇನೆ. ಯಾರಲ್ಲಿ ನನಗೆ ಈ ಭರವಸೆ? ನನ್ನ ಪರಮೇಶ್ವರನಲ್ಲಿ? ಆಮೇಲೆ ತೆಲಂಗಾನದ ದುಃಖಪೂರ್ಣ ಕಥೆಯನ್ನು ತಿಳಿಸುತ್ತ 'ತೆಲಂಗಾಣದಲ್ಲಿ ಹಿಂಸೆಗೆ ಎಡೆಯಿರಲಿಲ್ಲ. ಅಲ್ಲಿನ ಕಡು ಬಡತನ ಮನುಷ್ಯರ ಸಂಸ್ಕಾರವನ್ನೇ ಬದಲಿಸಿ ಹಿಂಸೆಯ ದಾರಿ ಹಿಡಿಸಿತ್ತು. ಇದನ್ನೇ ಚಿಂತನೆ ಮಾಡುತ್ತ ಹಿಂದಿನ ಸಂಸ್ಕಾರದ, ಹಿಂದಿನ ಆಚಾರ್ಯರ ದಾರಿ ನನಗೆ ಸಿಕ್ಕೀತೇ ಎಂದು ಅರಸುತ್ತಿದ್ದೆ. ಆಗ ಈ ಭೂಸಮಸ್ಯೆ ನನ್ನೆದುರಿಗೆ ಬಂದು ನಿಂತಿತು. ಪ್ರೇಮದಿಂದ ಬಡವರಿಗಾಗಿ ಹೊಲ ಬೇಡಲು ಮೊದಲಿಟ್ಟೆ. ಇವತ್ತು ನಿಮ್ಮ ನಡುವೆ ನಿಷ್ಕಾಮಬುದ್ಧಿಯಿಂದ ಕಾಲ ಕಳೆದೆ. ಈ ದೇಶವನ್ನು ದೃಢ, ಬಲಶಾಲಿ ಮಾಡಬೇಕಾದರೆ ಇದನ್ನು ಸಮರಸಗೊಳಿಸಬೇಕು, ಹೊಸದೊಂದು ಸಾಮಾಜಿಕ, ಆರ್ಥಿಕ ದೃಷ್ಟಿಯನ್ನು ತರಬೇಕು. ಇದು ಜನರ ಕೆಲಸ.

ಧೋಲ್ಪುರದ ಕೆಲಸಗಾರರು ವಿನೋಬಾಜಿಯನ್ನು ಸ್ವಾಗತಿಸಲು ಚೆಂಬಲ್ ನದಿಯ ದಡದಲ್ಲಿ ಕಾದಿದ್ದರು. ಸುತ್ತಲೂ ಹಚ್ಚಗೆ ಸೊಂಪಾಗಿತ್ತು. ಆದರೆ ಕೆಲಸಗಾರರು ಮಾತ್ರ ಅಂತಃಕಲಹದಲ್ಲಿ ಮುಳುಗಿದ್ದರು. ವಿನೋಬಾಜಿ ಸ್ಪಷ್ಟವಾಗಿಯೇ ಬಹಿರಂಗವಾಗಿ ಕೆಲವು ಮಾತು ಹೇಳಿದರು. 'ನನಗೆ ಮೊದಲೇ ತಿಳಿದಿದ್ದರೆ ಇಲ್ಲಿಗೆ ಬರುತ್ತಲೇ ಇರಲಿಲ್ಲ. ನೆರೆಯ ಹಳ್ಳಿಯಲ್ಲಿ ನಿಲ್ಲುತ್ತಿದ್ದೆ. ನಾನು ಗೀತೆಯ ಉಪಾಸಕ. ಬಲವಂತವಾಗಿ ತತ್ವಜ್ಞಾನ ನೀಡಬಾರದು ಎಂಬುದು ಗೀತೆಯ ಸಂದೇಶ. ಇಂಥ ದೊಡ್ಡ ದೇಶದಲ್ಲಿ ಇರುವ

ನೀವು ಇಷ್ಟು ಚಿಕ್ಕ ಮನಸ್ಸಿನಿಂದ ಇರಬಾರದು. ಈ ದೇಶ ಅತ್ಯಂತ ವ್ಯಾಪಕ ತತ್ವಜ್ಞಾನಕ್ಕೆ ಜನ್ಮಕೊಟ್ಟಿತು. ಸಂಕುಚಿತ ಭಾವಕ್ಕೆ ಇಲ್ಲಿ ಸ್ಥಳವೇ ಇಲ್ಲ ಹಿಂದುಸ್ಥಾನದ ಪಾಲಿಗೆ ಒಂದು ಕೆಲಸ ಬಂದಿದೆ. ಆದ್ದರಿಂದ ನಮ್ಮ ಒಳಗಿನಿಂದ ಒಂದು ಧ್ವನಿ ಹೊರಡಬೇಕು. ನಾವೆಲ್ಲರೂ ಒಂದು ಎಂಬ ಅನುಭೂತಿ ಆಗಬೇಕು ಕೆಲಸಗಾರರು ತಮ್ಮ ಮತಭೇದ ತ್ಯಾಗಮಾಡಬೇಕು.'

ಇಲ್ಲಿ ೫೦೦ ಎಕರೆ ದಾನ ಸಿಕ್ಕಿತು.

ಧೋಲ್ಪುರದಿಂದ ಮತ್ತೆ ಉತ್ತರ ಪ್ರದೇಶಕ್ಕೆ, ಜಾಜವ್‌ಗೆ. ಜಾಜವ ಎಂಬುದು ಯಾದವ ಎಂಬುದರ ಅಪಭ್ರಂಶವಿರಬಹುದು ಎಂದರು ವಿನೋಬಾ ಅಂದಿನ ಪ್ರಾರ್ಥನಾ ಸಭೆಯಲ್ಲಿ ವಿನೋಬಾಜೀ ದೇಶಧರ್ಮದ ದೀಕ್ಷೆ ಕೊಟ್ಟರು ಒಂದೊಂದು ದೇಶಕ್ಕೂ ಒಂದೊಂದು ವೈಶಿಷ್ಟ್ಯವಿದೆ. ನಮ್ಮ ದೇಶದ ವೈಶಿಷ್ಟ್ಯ ನಮ್ಮ ಸಂಯಮಶೀಲತೆ ಸ್ವರಾಜ್ಯ ಸಂಗ್ರಾಮವನ್ನು ಉದಹರಿಸುತ್ತ ಅದರಲ್ಲಿ ಅನಕ್ಷರಸ್ಥ ಸ್ತ್ರೀಯರೂ ಭಾಗವಹಿಸಿದುದನ್ನು ಹೇಳಿದರು. 'ನಮ್ಮ ಯುದ್ಧದಲ್ಲಿ ಕೆಲವು ಮಿತಿ–ಮರ್ಯಾದೆಗಳನ್ನು ನಾವು ಇಟ್ಟುಕೊಂಡಿದ್ದೇವೆ ಈ ಗುಣವನ್ನು ನಾವು ಅರಳಿಸಿದರೆ ಸರಿ, ಇಲ್ಲವಾದರೆ ನಮ್ಮ ಸ್ವಾತಂತ್ರ್ಯ ಹಾನಿಯಾದೀತು.' ಇನ್ನೊಂದು ದೃಷ್ಟಾಂತ ಕೊಡುತ್ತ 'ನಮ್ಮ ಮುಸ್ಲಿಂ ಸೋದರರು ತಾವು ಇಲ್ಲಿ ಸುರಕ್ಷಿತವಾಗಿದ್ದೇವೆ ಎನ್ನುತ್ತಾರೆ. ಪಂಡಿತ ನೆಹರು ನಿಷ್ಪಕ್ಷನೀತಿಯ ಪರಿಣಾಮ ಇದು. ನಾಯಕ ಒಳ್ಳೆಯವನಲ್ಲದಿದ್ದರೆ ಕೆಡುಕು ಹುಟ್ಟುತ್ತದೆ. ಆದರೆ ನೆಹರು ನೀತಿಯೇ ಮುಸಲ್ಮಾನರ ಸುರಕ್ಷಿತತೆಗೆ ಕಾರಣವಲ್ಲ. ಅದು ನಮ್ಮ ಸಮಾಜ ರಚನೆಯ ಗುಣವಿಶೇಷ. ಎಷ್ಟು ಬೇಗ ನಾವು ನಮ್ಮ ಮನೋಮಾಲಿನ್ಯವನ್ನು ಮರೆತುಬಿಟ್ಟೆವು. ಇದರ ಶ್ರೇಯಸ್ಸು ನಮ್ಮ ಸಮಾಜರಚನೆಯದು. ಗಾಂಧೀಜಿಗೆ ಇಲ್ಲಿ ಇಷ್ಟು ಅನುಕೂಲ ದೊರೆತುದು ನಮ್ಮ ಸಭ್ಯತೆ

ಯಿಂದ, ನಮ್ಮ ಸಂಯಮಶೀಲತೆಯಿಂದ. ನಾವು ಯಾವ ಸಮಸ್ಯೆಯನ್ನೇ ಪರಿಹರಿಸಲಿ ಈ ಗುಣದ ವಿಕಾಸದ ಮೂಲಕವೇ ಹರಿಸಬೇಕು.'

ಸಂಯಮದ ತರುವಾಯ ವಿಶಾಲ ಮನಸ್ಸು ಮುಖ್ಯ. 'ಗೀತೆ ನಮಗೆ ಯಜ್ಞ, ದಾನ ತಪಗಳನ್ನು ಕಲಿಸಿತು ಇವನ್ನು ನಾವು ನೈಮಿತ್ತಿಕ ಧರ್ಮ ಎನ್ನುತ್ತೇವೆ ಈಚೆಗೆ ಧರ್ಮದ ಸೂತ್ರಗಳು ನಿತ್ಯ ಧರ್ಮದ ಮಾತಾಗಿಲ್ಲ. ಪ್ರಾಸಂಗಿಕ ಧರ್ಮ ಆಗಿದೆ. ಊಟ ಮಾಡುವ ಧರ್ಮವೊಂದು ಮಾತ್ರ ನಿತ್ಯಧರ್ಮವಾಗಿದೆ. ಇತರರಿಗೆ ಊಟ ನೀಡುವ ಧರ್ಮ ಎಂದಾದರೊಂದು ದಿನ ಮಾಡುವ ಪ್ರಾಸಂಗಿಕ ಧರ್ಮವಾಗಿದೆ. ಕರುಣೆ, ದಯೆಗಳಿಗೆ ನಿತ್ಯವೂ ಬಾಳಿನಲ್ಲಿ ಪ್ರಸಂಗ ಒದಗುತ್ತವೆ, ಒದಗಬೇಕು ಅನ್ನಕ್ಕಾಗಿ ಹೊಟ್ಟೆ ಹಸಿವಂತೆ ದಯ ಕರುಣೆಗಳಿಗಾಗಿ ಅಂತಃಕರಣ ದಿನವೂ ಹಸಿಯಬೇಕು ಈ ಭೂದಾನ ಯಜ್ಞದ ಅರ್ಥವೂ ಅದೇ ಸಮಾಜದಲ್ಲಿ ನಿತ್ಯ ಯಜ್ಞ ದಾನ ತವ ಆದಿಗಳ ಗುಣವಿಕಾಸವಾಗಲಿ ಅದರಿಂದ ನಮ್ಮ ದೇಶದಲ್ಲಿ ರಷ್ಯಾ ಚೀನಾಗಳ ದಾರಿ ಅನಗತ್ಯವಾಗಲಿ. ಭೂದಾನ ಕೊಡುವಾಗ ದಾತೃಗಳಿಗೆ, ತಾಯಿಗೇ ಮೊಲೆಹಾಲು ಕೊಡವಾಗ ಆಗುವ ಆನಂದ ಆಗಲಿ.'

ಧೋಲ್ಪುರದಿಂದ ಜಾಜವ್‌ಗೆ ನಮ್ಮ ಜತೆಗೆ ಬಂದ ಡಾ|| ಮಂಗಲಸಿಂಹ ಮತ್ತು ಅವರ ಸಂಗಾತಿ ಕೈಯಲ್ಲಿ ಒಂದು ಬಾವುಟ, ಒಂದು ಸಲಿಕೆ ಹಿಡಿದಿದ್ದರು. ವಿಚಾರಿಸಲಾಗಿ ಈ ಗೆಳೆಯರು ಜನರ ಶ್ರಮದಾನದಿಂದ ೨೭ ಮೈಲಿ ರಸ್ತೆಮಾಡಿದ್ದರು ಎಂದು ತಿಳಿಯಿತು. ಮೊದಲು ಅಲ್ಲಿ ರಸ್ತೆಯಿರಲಿಲ್ಲ. ರೈತರಿಗೆ ಬಹಳ ಕಷ್ಟವಾಗುತ್ತಿತ್ತು. ೪೦,೦೦೦ ಜನ ಸಹಕರಿಸಿದರು. ೬ ತಿಂಗಳು ಕೆಲಸ ಹಿಡಿಯಿತು. ಈಗ ಸರಕಾರ ಅದನ್ನು ಗಟ್ಟಿಮಾಡಬೇಕು. ಇಲ್ಲದಿದ್ದರೆ

ಮಾಡಿದ ಕೆಲಸವೆಲ್ಲ ಮಳೆಗಾಲದಲ್ಲಿ ಕೊಚ್ಚಿಹೋದೀತು. ಈ ಬಾವುಟ, ಸಲಿಕೆ ಹಿಡಿದು ಮೂಕ ಸತ್ಯಾಗ್ರಹ ಮಾಡುತ್ತ ಸರಕಾರದ ದೃಷ್ಟಿಯನ್ನು ಈ ಗೆಳೆಯ ಇತ್ತ ಸೆಳೆಯಬಯಸುತ್ತಿದ್ದ. ಧೋಲ್ಪು ರದ ಜನರನ್ನು ಈ ಪ್ರಯೋಗಕ್ಕಾಗಿ ಅಭಿನಂದಿಸಿ ತಮ್ಮ ಪರಂಧಾಮ ಆಶ್ರಮದಲ್ಲಿ ಮಾಡಿದ 'ಪಾಪಿಯಜ್ಞ'ವನ್ನು ವರ್ಣಿಸಿ ಈ 'ಮಾರ್ಗ ಯಜ್ಞ' ಅದಕ್ಕಿಂತಲೂ ಹೆಚ್ಚಿನದು ಎಂದು ಪ್ರಶಂಸಿಸಿದರು.

ಜಾಜವ್‌ದಿಂದ ರೋಹತಾ, ರೋಹತಾದಿಂದ ಆಗ್ರಾ. ರೋಹ ತಾದಲ್ಲಿ ಕೆಲಸಗಾರರು ತಮ್ಮ ಭೂದಾನ ಯಜ್ಞದ ವರದಿಯನ್ನು ಒಪ್ಪಿಸಿದರು. ಆಗ್ರಾದ ಮುಖ್ಯ ಕಾರ್ಯಕರ್ತರೆಲ್ಲ ಈ ಕೆಲಸದಲ್ಲಿ ತೊಡಗಿದ್ದರು. ಆಗ್ರಾದಲ್ಲೊಬ್ಬ ದೊಡ್ಡ ಜಮೀನುದಾರ ಇದಾನೆ. ಅವನನ್ನು ಕೇಳಲು ನಮಗೆ ಶಕ್ತಿ ಸಾಲದು ಎಂದರು. ವಿನೋಬಾಜೀ ತಾವೇ ಅವನ ಭೇಟಿ ಮಾಡುವುದಾಗಿ ಹೇಳಿ ಕಳಿಸಿದರು ಆದರೆ ಆತ ತಾನೇ ಬಂದು ವಿನೋಬಾಜಿಯನ್ನು ನೋಡಿದ. ಒಂದು ಗಂಟೆಯ ಹೊತ್ತು ಮಾತುಕತೆಯಾಯಿತು. ವಿಷಯ ತಿಳಿಯದೆ ಆತ ತಪ್ಪು ತಿಳಿದಿದ್ದ. ಅದನ್ನೆಲ್ಲ ದೂರಮಾಡಲಾಯಿತು.

ಸಂಜೆಗೆ ಯಮುನಾ ತೀರದಲ್ಲಿ ಪ್ರಾರ್ಥನೆ ಎರಡು ವರ್ಷ ಮೊದಲು ಜಯಪುರಕ್ಕೆ ಹೋಗುವಾಗ ವಿನೋಬಾಜೀ ಆಗ್ರಾದಲ್ಲಿ ತಂಗಿದ್ದರು. ಅಂದು ಗೀತಾಜಯಂತಿಯ ದಿನ ಆ ಪ್ರಸಂಗವನ್ನು ಸ್ಮರಿಸಿ ಭೂದಾನಯಜ್ಞ ಗೀತಾಪಾರದ ಆಚರಣೆ ಎಂದರು. ಗೀತೆಯ ಆತ್ಮೌಪಮ್ಯ ಸೂತ್ರದ ಸ್ಪಷ್ಟಾಚರಣೆ ಇದು ಆಗ್ರಾದಲ್ಲಿ ಶಿರೋ ಮಣಿ ಕುಟುಂಬ ಪ್ರಸಿದ್ಧವಾದುದು ಮೂವರು ಅಣ್ಣತಮ್ಮಂದಿರು. ತಮ್ಮೊಳಗೇ ವಿಚಾರ ಮಾಡಿದರು. ನಿಮ್ಮಲ್ಲಿ ಒಬ್ಬ ಅಣ್ಣ ಎಂದು ನನಗೆ ನನ್ನ ಹಿಸ್ಸೆ ಕೊಡಿ ಎಂದು ವಿನೋಬಾ ಹೇಳಿಕಳುಹಿಸಿದರು. ಅವರಿ ಗಿದ್ದುದು ೧,೯೦೦ ಎಕರೆ ಹೊಲ. ಅದರಲ್ಲಿ ನಾಲ್ಕು ಹಿಸ್ಸೆ ಮಾಡಿ

೫೦೦ ಎಕರೆ ವಿನೋಬಾಜಿಗೆ ದಾನಕೊಟ್ಟರು.

ಆಗ್ರಾದಿಂದ ರೇಣುಕಾ. ಇದು ಪರಶುರಾಮ-ಭಕ್ತಸೂರ ದಾಸರ ಭೂಮಿ. ಇಂದು ಬಲಿಪಾಡ್ಯಮಿ, ವಿನೋಬಾಜೀ ಹೇಳಿ ದರು: 'ಬಲಿರಾಜನಿಂದ ವಾಮನ ಭಿಕ್ಷೆ ಬೇಡಿದ ದಿನ ಇದು. ಆ ದೊರೆ ಸರ್ವಸ್ವ ಸಮರ್ಪಣೆ ಮಾಡಿದ ತಾನೇ ಪಾತಾಳಕ್ಕೆ ಇಳಿದು ಹೋದ. ಆದರೆ ವಾಮನ ಮಾತ್ರ ಸದಾಕಾಲಕ್ಕೂ ಬಲಿಯ ದ್ವಾರ ಪಾಲಕನಾಗಿ ನಿಂತ.' ಜನರ ಕಡೆ ನೋಡಿ ವಿನೋಬಾಜೀ ಹೇಳಿ ದರು. 'ನಿಮ್ಮ ಭೂಮಿ ಕೃಷ್ಣಭಗವಾನನ ಪಾದಸ್ಪರ್ಶದಿಂದ ಪುನೀತವಾದುದು. ಆತ ಎಲ್ಲ ಭೇದಗಳನ್ನೂ ಅಳಿಸಿದ ಬಡವ ಬಲ್ಲಿದರೆಂಬ ಭೇದ, ಗಂಡು ಹೆಣ್ಣೆಂಬ ಭೇದ, ಶಿಕ್ಷಿತ-ಅಶಿಕ್ಷಿತರೆಂಬ ಭೇದ ಎಲ್ಲವನ್ನೂ ಆತ ಅಳಿಸಿಬಿಟ್ಟ. ಪ್ರೇಮರಾಜ್ಯವನ್ನು ಸ್ಥಾಪಿಸಿದ. ಹಾಂ, ಹಣವೂ ಹರಿಯೂ ಒಂದೇ ಕಡ ಇರಬಲ್ಲರೆ? ಬಲಿಯ ಔದಾರ್ಯವನ್ನು ಅನುಸರಿಸಿ ಹೊಲ ಮಾಡುತ್ತೇನೆ ಎಂಬವನಿಗೆ ಹೊಲವಿಲ್ಲ ಎಂಬ ಮಾತು ಹಿಂದುಸ್ಥಾನದಲ್ಲಿ ಕೇಳಿಬಾರದಂತಾಗಲಿ.'

ರೇಣುಕಾದಿಂದ ಮಥುರಾ. ಮಥುರಾ ಹತ್ತಿರವಾದಂತೆಲ್ಲ ವಿನೋಬಾ ಬೇಗ ಬೇಗ ಹೆಜ್ಜೆ ಹಾಕಿದರು. ಶ್ರೀ ಕೃಷ್ಣನ ಸ್ಮರಣೆ ಯಿಂದ ಹೆಜ್ಜೆ ಹೆಜ್ಜೆಯೂ ಉತ್ಕಂಠಿತವಾಗಿತ್ತು. ವಿನೋಬಾಜೀಗೆ ಸೂರದಾಸರ ಸ್ಮರಣೆಯಾಯಿತು. ಸೂರದಾಸರು ಇದೇ ಅಡವಿಗಳ ಲ್ಲಿಯೇ ಭಗವಂತನನ್ನು ಹುಡುಕಿದರು. ಶರಣವಾಙ್ಮಯ, ಉಪನಿ ಷತ್ತುಗಳಿಂದ ಹಲವಾರು ವಚನಗಳನ್ನು ಶ್ರವಣಮಾಡಿಸುತ್ತ ವಿನೋ ಬಾ ಮುಂದೆ ಸಾಗಿದರು. ಉತ್ತರ ಪ್ರದೇಶದಲ್ಲಿ ಕೆಲಸಗಾರರು ತಮ್ಮ ತಮ್ಮ ಜಿಲ್ಲೆಗೆ ವಿನೋಬಾಜೀಯನ್ನು ಆಹ್ವಾನಿಸಿದರು. ಚಿತ್ರಕೂಟದ ಅರ್ಜುನಜೀ ಹಳ್ಳಿಗೆ ಹತ್ತು ಎಕರೆಯಂತೆ ೧೧ ಸಾವಿರ ಎಕರೆ ದಾನ ಸಂಗ್ರಹಿಸುವುದಾಗಿ ಹೇಳಿದರು. ರಾಧೇಶ್ಯಾಮ್ ಜೋಷಿ ೭೦೦ ಎಕರೆ

ನೀಡಿದರು. ಬಾಬಾ ರಾಘವದಾಸರಿಗೆ ಭೂಮಿಯಿಲ್ಲ ಅಸೆಂಬ್ಲಿ ಸದಸ್ಯತನದ ಸಂಭಾವನೆ ಸ್ವಲ್ಪ ಬರುತ್ತದೆ. ಅದರಿಂದ ಒಂದೂಕಾಲು ಎಕರೆ ನೀಡಿದರು ಸಾಧಾರಣವಾಗಿ ಒಂದೂರಿನಲ್ಲಿ ಒಂದೇ ದಿನ ವಿನೋಬಾ ತಂಗುವುದು. ಈ ಸಮ್ಮೇಳನಕ್ಕಾಗಿ ೨ ದಿನ ತಂಗುವುದಾಗಿ ನಿರ್ಧರವಾಗಿತ್ತು ನವೆಂಬರ್ ೩ ನೆ ದಿನ ಮಧುರೆಯಿಂದ ಸೋನಯೀ, ಹಾಥರಸಾ, ನಾನನೀಗಳ ಮಾರ್ಗವಾಗಿ ಆಲಿಘಡಕ್ಕೆ ಹೋದೆವು. ಹಾಥರಸದಲ್ಲಿ ೯೯ ಎಕರೆ ದಾನ ಬಂತು. ಹಾಥರಸದ ಭಾಷಣದಲ್ಲಿ ತಮ್ಮ ಪಾದಯಾತ್ರೆಯ ರಹಸ್ಯವನ್ನು ತಿಳಿಸುತ್ತ ವಿನೋಬಾಜೀ ಇಡೀ ಮಾನವ ಸಮಾಜವನ್ನು ಒಂದುಗೂಡಿಸುವುದು ತಮ್ಮ ಬಯಕೆ ಎಂದು ಹೇಳಿದರು 'ಇದು ಮಹತ್ವಾಕಾಂಕ್ಷೆ. ಆದರೆ ಆಕಾಂಕ್ಷೆ ನಮ್ಮ ಆತ್ಮದಷ್ಟೇ ಮಹತ್ತಾಗಿರಬೇಕು ಎದೆ ಅಕ್ಕರೆಯಿಂದ ತುಂಬಿದ್ದರೆ ಹೃದಯ ಪರಿವರ್ತನ ಕಷ್ಟವಲ್ಲ. ಇದರ ಮಂತ್ರ, ಬೀಗದ ಕೈ ಸರ್ವರಲ್ಲಿ ಪ್ರೀತಿ'

ನಾನನೀ ದಾರಿಯಲ್ಲಿ ಒಂದು ಕನ್ಯಾ ಗುರುಕುಲ ಸಿಗುತ್ತದೆ. ಮುಂಜಾನೆ ೫ ಗಂಟೆಗೇ ಅಲ್ಲಿಗೆ ಹೋದೆವು ವೇದಮಂತ್ರ ಪಠನೆಯಿಂದ ವಿನೋಬಾಜೀಗೆ ಸ್ವಾಗತವಾಯಿತು ಅಲ್ಲಿ ಒಬ್ಬ ಹುಡುಗಿ ರಾಮನಾಮದ ಔಚಿತ್ಯ ಕುರಿತು ಪ್ರಶ್ನಿಸಿದಳು. ವಿನೋಬಾಜೀ ಹೇಳಿದರು 'ಪರಮೇಶ್ವರನ ನಾಮಗಳು ಅನಂತ. ಅವನ ಗುಣವೂ ಅನಂತ ನಮ್ಮ ನಮ್ಮ ರುಚಿಗನುಸಾರವಾಗಿ ನಾವು ಗುಣಧ್ಯಾನ ಮಾಡುತ್ತೇವೆ ರಾಮ ಎಂದರೆ ದಶರಥರಾಮ, ಬಲರಾಮ, ಪರಶುರಾಮ ಅಲ್ಲ ನಮ್ಮೆಲ್ಲರ ಒಳಗೆ ರಮಿಸುತ್ತಿರುವವನೇ ರಾಮ,' ಆ ಹುಡುಗಿಗೆ ಇದರಿಂದ ಸಮಾಧಾನವಾಗಲಿಲ್ಲ 'ಹಾಗಾದರೆ ಸೀತಾರಾಮ ಎಂದೇಕೆ ಹೇಳುತ್ತೀರಿ?' ಎಂದು ಕೇಳಿದಳು.

'ಸೀತೆ ಭಕ್ತೆ. ರಾಮ ಭಗವಂತ ಗೀತೆಯ ಕೊನೆಯಲ್ಲಿ

ಕೃಷ್ಣಾರ್ಜುನ, ಶ್ರೀ ವಿಜಯ ಎಂದು ಹೇಳಿದಾರೆ. ಭಕ್ತ ಯಾವಾಗಲೂ ಭಗವಂತನ ಜತೆಗೇ. ಇದು ಭಗವಂತನಿಗೆ ಬಹು ಪ್ರಿಯ.'

ನಾಳೆ ಅಲೀಘಡ್. ಅಲೀಘಡದ ಡಾ॥ ಝಾಕಿರ್ ಹುಸೇನ್ ಸಾಹೇಬರು ವಿನೋಬಾಜೀಯನ್ನು ಕರೆಯಲು ಬಂದಿದ್ದರು. ವಿನೋಬಾಜೀ ಅಲೀಘಡಕ್ಕೆ ಹೋಗಲು ಆಗಲಿಲ್ಲ ಆದರೆ ಅಲ್ಲಿಂದ ಜನರು ಬಂದು ಅವರನ್ನು ಭೇಟಿಮಾಡಿದರು. ೬೫೦ ಎಕರೆ ದಾನ ನೀಡಿದರು. ೧,೦೦೦ ಎಕರೆಯ ವರೆಗೆ ಕೊಡಿಸುತ್ತೇವೆ ಎಂದರು. ಸಾಧಾರಣವಾಗಿ ಭೂದಾನವಾದ ಮೇಲೆ ವಿನೋಬಾಜೀ ಮಾತಾಡರು. ಇವತ್ತು ಮಾತಾಡಿ ಜನರನ್ನು ಪ್ರಶಂಸಿಸಿದರು. ಅಲೀಘಡದಲ್ಲಿ ಒಟ್ಟು ೧,೮೯೪ ಎಕರೆ ದೊರಕಿತು.

# ೯ ಗ್ರಾಮ ಗೋಕುಲ

**ಖೂರ್ಜಾ**. ಖೂರ್ಜಾದಲ್ಲಿ ಹಳ್ಳಿಯ ಬೇಸಾಯ ಸಂಘಗಳು ಬೇಸಾಯ ಮಾಡುತ್ತಿವೆ. ಶ್ರೀರಾಮಸ್ವರೂಪರು ಒಬ್ಬರು ಮುಖ್ಯ ಕಾರ್ಯಕರ್ತರು. ಖೂರ್ಜಾಕ್ಕೆ ಹೋದಾಗ ಕೆಲವರು ಹೆಂಗಸರು ನೂಲುತ್ತಿದ್ದುದನ್ನು ಕಂಡು ಹರ್ಷವಾಯಿತು. ಸಂಜೆಗೆ ಪ್ರಾರ್ಥನೆಗೆ ಮೊದಲು ವಿನೋಬಾಜೀ ಹಳ್ಳಿಯ ಗೊಬ್ಬರದ ಬಯಲಿಗೆ ಹೋಗಿದ್ದರು. ಪ್ರಾರ್ಥನೆಯಾದ ಮೇಲೆ ಕೆಲವರು ಸಮಾಜವಾದಿ ಗೆಳೆಯರು ನೋಡಲು ಬಂದರು. ಅವರು ಕೆಲವರು ತಮ್ಮ ಯಥಾಶಕ್ತಿ ಹೊಲ ಕೊಟ್ಟರು. ಅಲ್ಲಿಂದ ಬುಲಂದಷಹರಿಗೆ, ಅಲ್ಲಿಂದ ಸಿಕಂದರಾಬಾದಿಗೆ. ಎರಡೂ ಕಡೆ ಭೂದಾನ ದೊರೆಯಿತು.

ಸಿಕಂದರಾಬಾದಿಗೆ ಹೋಗುವಾಗ ದಾರಿಯಲ್ಲಿ ಎರಡೂ ಕಡೆ ಜನ ಸೇರಿದ್ದರು. ಹೂ, ಹಾರಗಳ ಸ್ವಾಗತದ ಜತೆಗೆ ಒಬ್ಬ ಬಂದೂಕಿನ ಸಲಾಂ ಮಾಡಿದ. ಅದು ದೊಡ್ಡವರಿಗೆ ತೋರಿದ ಗೌರವವೆಂದು ಹೇಳಿದರು. ಸಾಧಾರಣವಾಗಿ ಮೃಗಗಳನ್ನು ಬೆದರಿಸಲು ಗುಂಡು ಹಾರಿಸುತ್ತಾರೆ, ಅದನ್ನು ಸ್ವಾಗತವೆಂದು ತಿಳಿಯಬಾರದು ಎಂದು ಹೇಳಿದರು ವಿನೋಬಾ. ತನಗೆ ಹೂ, ಹಾರ, ಚಪ್ಪರ, ಚಪ್ಪಾಳೆ ಯಾವುದೂ ಬೇಡವೆಂದರು. ಅವರಿಗೆ ಬೇಕಾದುದು ಭೂಮಿ. 'ನಮ್ಮ ಸಂಪ್ರದಾಯಗಳು ಎಷ್ಟು ಹುಚ್ಚುತನದವು? ಮುಗಿಲು ಎಷ್ಟು ಸೊಗಸಾಗಿದೆ. ಅದು ಸಾಲದೆ? ಚಪ್ಪರ ಬೇರೆ ಹಾಕಬೇಕೆ? ಬೇರೇನೂ ಕೆಲಸವಿಲ್ಲವೆ? ಇಗ ತೋಪು ಹಾರಿಸಿ ಚಪ್ಪರ ತೋರಣ ಕಟ್ಟಿ, ಉಘೇ ಎಂದು ಏಕೆ ಕಾಲ ವ್ಯರ್ಥಮಾಡಬೇಕು? ಸಸುಕಿಸಲ್ಲಿ ದೇವರ ನಾವು ನೆನೆಯುದೆ ಈ ಗಲಭೆಯನ್ನೇಕೆ ಮಾಡುತ್ತೀರಿ? ಭೂದಾನ

ಕೊಡದೆ ಬರಿದೆ ಈ ವಿಜೃಂಭಣೆಯೇಕೆ? ಬರೀ ಶಕ್ತಿಹ್ರಾಸ.'

ದಿಲ್ಲಿ ಕಾಂಗ್ರೆಸ್ಸಿನಲ್ಲಿ ಆದ ದುರ್ಘಟನೆಯನ್ನು ವಿವರಿಸಿದರು. 'ದಿಲ್ಲಿಯ ಜನ ಮಾಡಿದ ವಿಶೇಷ ಅಲಂಕಾರ ದೇವರಿಗೇ ಮೆಚ್ಚಿಗೆಯಾಗಲಿಲ್ಲ. ಎಲ್ಲವೂ ಸುಟ್ಟುಹೋಯಿತು. ಆದರೂ ನಿರಾಡಂಬರವಾಗಿ ಕಾಂಗ್ರೆಸ್ಸು ನಡೆಯಿತು ಕೆಲಸಕ್ಕೆ ಅಲಂಕಾರವೇಕೆ ಎಂದು ದೇವರು ಪಾಠ ಕಲಿಸಿದ ಜಯಪುರದ ಕಾಂಗ್ರೆಸ್ಸಿನಲ್ಲಿ ಎಷ್ಟು ವ್ಯರ್ಥ ಪರಿಶ್ರಮ? ಮನುಷ್ಯನ ಪ್ರಗತಿಗೆ ಕಲೆ ಅಗತ್ಯ ಆದರೆ ಕಲೆಯ ಪ್ರಗತಿಗಲ್ಲದೆ, ಗಂಭೀರ ಚರ್ಚೆಗೆ ಸೇರಿದಾಗ ಇದೆಲ್ಲ ಅಪ್ರಾಸಂಗಿಕ ರಾಜ್ಯ ಕಟ್ಟುವವರಿಗೆ ಇದಕ್ಕೆಲ್ಲಿ ಬಿಡುವು?'

ನಡೆಯುವಾಗ ವಿನೋಬಾಜೀಗೆ ಎಡಗಾಲಿನಲ್ಲಿ ಸ್ವಲ್ಪ ನೋವು ಕಂಡಿತು ಎಡಗಾಲಿನ ನರ ಉಬ್ಬಿತ್ತು ಬಹಳ ಹೊತ್ತು ಕಲ್ಲಿಗೆ ಒತ್ತಿಕೊಂಡಿದ್ದು ಆ ಭಾಗ ಉಬ್ಬಿತ್ತು ವಿನೋಬಾ ಹೇಳಿದರು 'ಎಡಗಾಲಿಗೆ ಭಾರ ಕಡಮೆಮಾಡಲು ನನ್ನ ಬಲಗಾಲು ಹೆಚ್ಚು ಭಾರ ಹೊರುತ್ತಿದೆ ಸಮಾಜದಲ್ಲೂ ಹೀಗೇ ಇರಬೇಕು ಒಬ್ಬರ ಕಷ್ಟವನ್ನು ಒಬ್ಬರು ಹಂಚಿಕೊಳ್ಳಬೇಕು ಈಗಿನ ಕುಟುಂಬ ಪದ್ಧತಿ ಅದಕ್ಕೆ ಅಡ್ಡಿಯಾಗಿದೆ. ಜೀವರಾಶಿಯ ಏಕತೆಯನ್ನು ಜನಕ್ಕೆ ತಿಳಿಸಲು ನಾನು ಯತ್ನಿಸುತ್ತಿದೇನೆ. ದೇವರ ಮನಸ್ಸಿನಲ್ಲಿ ವಿನಾಶವೇ ಇದ್ದರೆ ಇದೇ ಸ್ಥಿತಿ ಇನ್ನೂ ಸಾಗೀತು.'

ಇಷ್ಟರಲ್ಲಿ ಕಾಲಿನ ನೋವು ಹೆಚ್ಚಿತು. ಮೆಟ್ಟನ್ನು ಮೆಟ್ಟುವುದೇ ಕಷ್ಟವಾಯಿತು ಮೆಟ್ಟು ಇಲ್ಲದೆ ಬರಿಗಾಲಿನಲ್ಲ ನಡೆಯುವುದೂ ಕಷ್ಟ ವಿಧಿಯಿರಲಿಲ್ಲ. ಎರಡು ದಿನ ನೋವು ಬಲವಾಗಿತ್ತು. ಪಯಣವೂ ಬಲವಂತವಾಗಿಯೇ ಸಾಗಿತು.

ಸಿಕಂದರಾಬಾದಿನಲ್ಲಿ ಒಬ್ಬ ಪತ್ರಿಕೋದ್ಯೋಗಿ ಬಂದ. ನಿರಾಶ್ರಿತರ ಸುದ್ದಿಯೆತ್ತಿ 'ಸರಕಾರದವರು ಈ ವಿಷಯದಲ್ಲಿ ಮಾಡಿರುವುದು ನಿಮಗೆ ತೃಪ್ತಿಕರವಾಗಿದೆಯೆ?' ಎಂದು ಕೇಳಿದ.

ವಿನೋಬಾಜೀ ಹೇಳಿದರು 'ಈ ಪರಿಸ್ಥಿತಿಯಲ್ಲಿ ಇದಕ್ಕಿಂತ ಹೆಚ್ಚು ಮಾಡಲಾಗುತ್ತಿರಲಿಲ್ಲ. ಕಾಂಗ್ರೆಸ್ಸೂ ಉಳಿದ ಪಕ್ಷಗಳೂ ಒಮ್ಮೆಲೇ ನಿರಾಶ್ರಿತರ ಸೇವೆ ಮಾಡಬೇಕಾಗಿತ್ತೆಂದು ನನ್ನ ಅಭಿಪ್ರಾಯವಾಗಿತ್ತು. ನೀವು ಸ್ವಾವಲಂಬಿಗಳಾಗಬೇಕು ಎಂದು ಅವರಿಗೆ ಹೇಳಬೇಕಾಗಿತ್ತು ಮೊದಲೇ ಇದನ್ನು ಹೇಳಿದ್ದರೆ ಅವರು ಜನತೆಯೊಡನೆ ಮೊದಲೇ ಬೆರೆಯುತ್ತಿದ್ದರು ಎಂಥ ಪ್ರಸಂಗಕ್ಕೂ ಹೊಂದಿಕೊಳ್ಳುವ ಬುದ್ಧಿ ಅವರಲ್ಲಿತ್ತು.'

ಪ್ರಶ್ನೆ · ನೂರಾರು ಜನ ವಾಸಮಾಡಬಹುದಾದ ದೊಡ್ಡ ಕಟ್ಟಡಗಳಲ್ಲಿ ಮಂತ್ರಿಗಳು ವಾಸಿಸುತ್ತಾರೆ ಇತ್ತ ನೂರಾರು ಜನರಿಗೆ ಮನೆಗಳೇ ಇಲ್ಲ. ತಾವೇನು ಹೇಳುತ್ತೀರಿ?

ಉತ್ತರ ನೀವು ಸೂಚಿಸುವುದನ್ನು ಅಲ್ಲ ಎಂದು ಹೇಳಲಾರೆ. ಆದರೆ ನಮ್ಮ ನಾಯಕರಿಗೆ ಔಚಿತ್ಯ, ಪ್ರತಿಷ್ಠೆಗಳ ಬಗ್ಗೆ ಕೆಲವು ಅಭಿಪ್ರಾಯಗಳಿವೆ ನಾನಿಷ್ಟೇ ಹೇಳಬಲ್ಲೆ—ಸರಳತನ ಒಳ್ಳೆಯದು.

ಪ್ರಶ್ನೆ ಗಾಂಧೀಜೀ ಇಂದು ಬದುಕಿದ್ದರೆ ಪಾಕೀಸ್ಥಾನದಿಂದ ಬಂದವರನ್ನು ಹಿಂದಕ್ಕೆ ಅವರ ಮನೆಗೆ ಕಳಿಸುತ್ತಿರಲಿಲ್ಲವೆ?

ವಿನೋಬಾ . ಇವೊತ್ತು ಗಾಂಧೀಜೀ ಏನುಮಾಡುತ್ತಿದ್ದರೋ ಹೇಳುವುದು ಕಷ್ಟ ಅವರ ಶಕ್ತಿ, ಅವರ ದಾರಿ ನಮಗೆ ಊಹಾತೀತ. ಆದರೆ ನಾವು ಈಗ ಇರುವ ಪರಿಸ್ಥಿತಿಯಲ್ಲಿ ಪಾಕೀಸ್ಥಾನದಿಂದ ಬಂದವರನ್ನು ಹಿಂದಕ್ಕೆ ಕಳಿಸುವುದು, ಅಲ್ಲಿಗೆ ಹೋಗಿರುವವರು ಹಿಂದಕ್ಕೆ ಬರುವುದು ಸಾಧ್ಯವಿಲ್ಲವೆನಿಸುತ್ತದೆ ಆದರೆ ಎರಡೂ ದೇಶಗಳು ಉತ್ತಮ ಸಂಬಂಧ ಬೆಳೆಸಬೇಕು. ವ್ಯಾಪಾರ ಸಂಬಂಧವೂ ಬೆಳೆಯಬೇಕು.

'ನೀವು ಸಂಗ್ರಹಿಸಿದ ಭೂಮಿಯಲ್ಲಿ ನಿರಾಶ್ರಿತರಿಗೆ ಪ್ರಥಮ ಭಾಗವನ್ನು ಕೊಡುತ್ತೀರಾ?'

'ಹೈದರಾಬಾದಿನ ಭೂಮಿಯ ವಿಷಯ ಬೇರೆ ಅದು ಕಮ್ಯೂನಿಸ್ಟರ ಚಳುವಳಿಯ ಪರಂಪರೆ ಅಲ್ಲಿ ಹರಿಜನರನ್ನೇ ಆರಿಸಿದೇವೆ. ಆದರೆ ಉಳಿದ ಕಡ ನಿರಾಶ್ರಿತರು ಹೊಲ ಉಳಬಲ್ಲವರಾದರೆ, ಅವರ ವಿಷಯವಾಗಿ ಯೋಚಿಸಬಹುದು '

' ಬರಲಿರುವ ಚುನಾವಣೆಗಳಲ್ಲಿ ಸರ್ವೋದಯ ಸಮಾಜದ ಧೋರಣೆಯೇನು ?'

'ಸರ್ವಸೇವಾಸಂಘ ತನ್ನ ಠರಾವು ಮಾಡಿ ಪ್ರಕಟಿಸಿದೆ ಅದನ್ನು ನಾನು ಒಪ್ಪುತ್ತೇನೆ ಪಂಡಿತ ನೆಹರೂ, ಆಚಾರ್ಯ ಕೃಪಲಾನೀ, ಜಯಪ್ರಕಾಶ ನಾರಾಯಣ, ಮೂವರೂ ನನಗೆ ಆದರಣೀಯರು. ಮೂವರಿಗೂ ನನ್ನಲ್ಲಿ ಗೌರವ ನಾನು ಕೈಗೊಂಡ ಕೆಲಸದಲ್ಲೂ ಮೂವರೂ ಒಟ್ಟಿಗೆ ಸೇರಬಹುದು '

ಮುಗಿಸುವ ಮೊದಲು ಪತ್ರಿಕೋದ್ಯೋಗಿ ಖಾನ್ ಅಬ್ದುಲ್ ಗಫಾರಖಾನರ ವಿಷಯ ಕೇಳಿದ

' ಬಾದಷಾ ಖಾನರು ಸದಾ ನನ್ನ ಮನಸ್ಸಿನೊಳಗೆ ಇದಾರೆ ಅವರು ಭಾರತಕ್ಕೂ, ಪಾಕಿಸ್ತಾನಕ್ಕೂ ಇಡೀ ಲೋಕಕ್ಕೂ ಗೆಳೆಯರು ಅವರು ಸೆರೆಯಲ್ಲಿರುವುದು ನನಗೆ ವಿಷಾದಕರವಲ್ಲ ಅವರ ಈ ತಪಸ್ಸು ಎಂದಾದರೊಂದು ದಿನ ಈಗ ಭೇದ-ಭಗ್ನವಾಗಿರುವ ಎದೆಗಳನ್ನು ಒಂದುಗೂಡಿಸೀತು ಅವರ ತಪಸ್ಸಿಗೆ ದೇವರು ಸಾಫಲ್ಯ ಕೊಡುತ್ತಾನೆ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಅವರು ಯಾರ ಬದುಕಿನಲ್ಲಿ ಹೊಸ ಬಾಳನ್ನು ತುಂಬಿದರೋ ಆ ಪಠಾನರು ಅಹಿಂಸೆಯ ದಾರಿ ಬಿಡದಿದ್ದರೆ, ಶಾಂತಿ-ಸಹನೆಗಳಿಂದ ಲೋಕಸೇವೆ ಮಾಡಿದರೆ ಅವರ ಗುರಿ ಮುಟ್ಟಿಯಾರು '

**ದದರಿ** : ನಾವು ದದರಿಗೆ ಬಂದೊಡನೆಯೆ ಕೆಲವರು ಸಮಾಜವಾದಿಗಳು ಬಂದು, ಸರ್ವೋದಯ ಸಮಾಜ, ಭೂದಾನಯಜ್ಞ,

ಯೋಜನಾಸಮಿತಿ ಇತ್ಯಾದಿಗಳ ಬಗ್ಗೆ ಕೇಳಿ ತಿಳಿದರು.

'ಯೋಜನಾಸಮಿತಿಯ ಬಗ್ಗೆ ನನ್ನ ಅಭಿಪ್ರಾಯವನ್ನು ಓದಿಲ್ಲವೆ?'

'ಇಲ್ಲ'

'ಜಯಪ್ರಕಾಶ ನಾರಾಯಣರಿಗೂ ನನಗೂ ನಡೆದ ಸಂಭಾಷಣೆಯನ್ನು ಓದಿಲ್ಲವೆ?'

'ಇಲ್ಲ'

'ರಾಜಕೀಯದ ಬಗ್ಗೆ ಸರ್ವಸೇವಾ ಸಂಘದ ತೀರ್ಮಾನವನ್ನು ಓದಿದೀರಾ?'

'ಇಲ್ಲ'

'ಹಾಗಾದರೆ ಅವನ್ನೆಲ್ಲ ಓದಿ, ಆಗ ನಿಮ್ಮ ಪ್ರಶ್ನೆಗಳೇ ಬೇರೆಯಾದಾವು'

ಅವರನ್ನು ಕೇಳಿದ ಒಂದು ಪ್ರಶ್ನೆ ಹೀಗಿತ್ತು 'ಉದ್ದೇಶಪಟ್ಟೋ ಪಡದೆಯೋ ನೀವು ಕಾಂಗ್ರೆಸ್ಸಿನ ಕೀರ್ತಿಯನ್ನು ಹೆಚ್ಚಿಸುತ್ತಿಲ್ಲವೆ?'

'ಚುನಾವಣೆಗಳಲ್ಲಿ ಇದಿರುನಿಂತು ಹೋರಾಡಿಯೂ ಗೆಳೆಯರಾಗಿರಬಹುದು ಎಂಬ ಭಾವನೆ ನಿಮಗಿನ್ನೂ ಬಂದಿಲ್ಲ. ಪರಸ್ಪರ ಅರ್ಥ ಮಾಡಿಕೊಳ್ಳುವ ಬದಲು ಮನಸ್ಸಿಯಾಗಿ ತೆಗಳುತ್ತೀರಿ. ನಾವೆಲ್ಲರೂ ಜನಕ್ಕೆ ಈ ತೀರ್ಮಾನವನ್ನು ಬಿಡಬೇಕು.'

ಸಂಜೆಗೆ ಒಂದು ಕನ್ಯಾಶಾಲೆಯನ್ನು ಪ್ರಾರಂಭಿಸಿದರು. ಅಲ್ಲೇ ಪ್ರಾರ್ಥನೆ ನಡೆಯಿತು. ವಿನೋಬಾ ಸಹನಾವವತು ಮಂತ್ರದಿಂದ ಮೊದಲಿಟ್ಟರ. ಅದನ್ನು ಭಾಷಣದಲ್ಲಿ ವಿವರಿಸಿದರು.

'ನಾವಿಬ್ಬರೂ ಒಟ್ಟಾಗಿ ಬದುಕುತ್ತೇವೆ, ತಿನ್ನುತ್ತೇವೆ. ಕೆಲಸ ಮಾಡುತ್ತೇವೆ, ಇತ್ಯಾದಿ. ಇಬ್ಬರೂ ಎಂದರೆ ಗುರು-ಶಿಷ್ಯರು

ಮಾತ್ರವೇ ಅಲ್ಲ. ಗಂಡ ಹೆಂಡತಿ, ತಂದೆ-ಮಗ, ಯಜಮಾನ-ಕೆಲಸಗಾರ, ಹಿಂದು-ಮುಸ್ಲಿಂ, ಇಂಥಾ ಎಲ್ಲ ಸಂಬಂಧವುಳ್ಳವರೂ. ಎಲ್ಲ ಭೇದಗಳೂ ಹೋಗಬೇಕು.'

ಇದರ ನಾನಾ ಮುಖಗಳನ್ನು ವಿವರಿಸಿದರು ಮುಸ್ಲಿಮರಲ್ಲಿ ಹೆಂಗಸರು ನಮಾಜು ಮಾಡುವುದಿಲ್ಲ. ಒಂದು ಜಾತಿಯ ಹೆಣದ ಹಿಂದೆ ಬೇರೆ ಜಾತಿಯವರು ಹೋಗರು ನಮ್ಮ ಭೇದಗಳಿಗೆ ಕೊನೆಯೆ ಇಲ್ಲ ಜನರು ಒಟ್ಟಿಗೆ ಬದುಕಿದರೆ ಹಣದ ಅಗತ್ಯ ತಗ್ಗುತ್ತದೆ. ಆಗ ಪ್ರತಿಯೊಬ್ಬನೂ ಕುಟುಂಬದವರಂತೆ ಪರರಿಗಾಗಿ ದುಡಿಯುತ್ತಾನೆ. ತಮ್ಮ ತಮ್ಮ ಪರಿವಾರಕ್ಕಾಗಿ ಜನ ದುಡಿಯುತ್ತಿದ್ದಾರೆ ಎಂದೇ ಈ ಕಳ್ಳಸಂತೆ, ಲಂಚ ಇತ್ಯಾದಿ ಬಂದಿವೆ ಸಮಷ್ಟಿ ಜೀವನದಲ್ಲಿ ಆಹಾರೋತ್ಪಾದನೆ, ವಸ್ತ್ರನಿರ್ಮಾಣ ಎಲ್ಲವೂ ಪರಸ್ಪರರಿಗಾಗಿ ಆಗ ಹಣ ಅಗತ್ಯವಿಲ್ಲ.

'ಆದ್ದರಿಂದ ಊರಿನಲ್ಲಿರುವ ಹೊಲವೆಲ್ಲ ಸಮಸ್ತ ಗ್ರಾಮಸ್ಥರದು ಎನ್ನಿ. ಈಗ ಕಾಗದ ಪತ್ರಗಳ ಗದ್ದಲದಿಂದ ಹೊಲವೆಲ್ಲ ಯದ್ವಾತದ್ವಾ ಭಾಗಗಳಾಗಿ ಹಂಚಿಹೋಗಿದೆ. ವರ್ಷವರ್ಷವೂ ನಾವು ಕಾಮನ ಹಬ್ಬವನ್ನು ಮಾಡುತ್ತೇವೆ ಈ ವರ್ಷ ಅದನ್ನು ಪ್ರಾಮಾಣಿಕವಾಗಿ ಮಾಡೋಣ. ಆ ಬೆಂಕಿಯಲ್ಲಿ ನಮ್ಮ ಪಟ್ಟಾ ಕಾಗದಗಳನ್ನೆಲ್ಲ ಸುಡೋಣ. ಈ ಕಾನೂನೇ ನಿಮ್ಮ ಹೃದಯವನ್ನೂ ಭಾಗಿಸಿಬಿಟ್ಟಿದೆ. ನಮ್ಮ ಬಾಳನ್ನೇ ತುಂಡರಿಸುತ್ತಿದೆ ಅಂಥ ಹೃದಯಗಳು ಕಲೆತಾವು ಹೇಗೆ? ಆದ್ದರಿಂದ ಈ ಕಾಗದ ಪತ್ರಗಳನ್ನು, ಜರಾಸಂಧನನ್ನು ಭೀಮ ಸೀಳಿದಂತೆ ಸೀಳಿ ಬೆಂಕಿಯಲ್ಲಿ ಸುಡೋಣ. ಆಮೇಲೆ ಹೊಲವನ್ನು ಒಟ್ಟಾಗಿ ಮಾಡೋಣ. ಆಗ ನೋಡಿ. ಹಠಾತ್ತಾಗಿ ಭ್ರಾತೃಭಾವ, ಪ್ರೀತಿಗಳು ಹೊಮ್ಮಿಯಾವು. ಇಡೀ ಗೋಕುಲವನ್ನು ಒಂದು ಕುಟುಂಬವಾಗಿ ಮಾಡಿದ

ಶ್ರೀಕೃಷ್ಣ ಎಲ್ಲರೂ ಒಟ್ಟಿಗೆ ದುಡಿದರು, ಒಟ್ಟಿಗೆ ಇದ್ದರು, ಒಟ್ಟಿಗೆ ವಿನೋದವಾಗಿ ಕಾಲಕಳೆದರು ಅಂಥ ಸ್ಥಿತಿ ಮತ್ತೆ ಬರಬೇಕೆಂದು ನನ್ನ ಅಭಿಪ್ರಾಯ, ಪ್ರಯತ್ನ'

ದಿಲ್ಲಿ ಹತ್ತಿರ ಬಂದಂತೆಲ್ಲ ಭಾವನೆಗಳು ಪ್ರಖರವಾದುವು ಎಲ್ಲ ಕಡೆಯಿಂದಲೂ ವಿನೋಬಾಜೀಗೆ ಪ್ರೀತಿಯ ಅಭಿಷೇಕವಾಯಿತು. ದಾರಿಯುದ್ದಕ್ಕೂ ನಿಂತಿದ್ದ ಸಾವಿರಾರು ಜನರ ಮನಸ್ಸಿನಲ್ಲಿ ಪ್ರೀತಿ-ಪ್ರೇಮ ಅಲ್ಲದೆ ಮತ್ತೇನೂ ಇರಲಿಲ್ಲ ಎಲ್ಲರಿಗೂ ಸಮಾನವಾದ ಸ್ಥಿತಿ-ಅವಕಾಶ ಕಲ್ಪಿಸುವುದು ಅವರ ಬಯಕೆ. ಇದೇ ಅವರ ಪ್ರಚಾರದ ಮೂಲ ತತ್ವ

**ಗಾಜಿಯಾಬಾದ್** ಪದರಿಯಿಂದ ಗಾಜಿಯಾಬಾದ್, ಅಲ್ಲಿಂದ ದಿಲ್ಲಿಗೆ ಗಾಜಿಯಾಬಾದಿನಲ್ಲಿ ಒಬ್ಬ ನಿವೃತ್ತ ಮೆಜಿಸ್ಟ್ರೇಟ್ ತನ್ನ ಇಡೀ ೧೧೦ ಎಕರೆ ಭೂಮಿಯನ್ನು ದಾನಮಾಡಿದ ರಾತ್ರಿ ಎಂಟು ಗಂಟೆಗೆ ವಿನೋಬಾ ಮಲಗಲು ಹೋಗುವಾಗ ಒಬ್ಬ ಮಹಿಳೆ ತನ್ನ ಸೊತ್ತನ್ನೆಲ್ಲ ನೀಡಲು ಬಂದಳು ವಿನೋಬಾಜೀ ಭಾರಿ ಜಮೀನುದಾರರಿಂದ ಮಾತ್ರವೇ ಹೊಲ ಪಡೆಯುತ್ತಾರೆಂದು ಆಕೆ ತಿಳಿದಿದ್ದಳು. ತನ್ನ ಕಾಣಿಕೆಯನ್ನು ತೆಗದುಕೊಳ್ಳುತ್ತಾರೆಂದು ಕೇಳಿ ಆಕೆಗೆ ಹರ್ಷವಾಯಿತು ಆಕೆಯ ಗಂಡ ಲಾಯರು ಅವರಲ್ಲಿ ಸಾಕಷ್ಟು ಸಂಪಾದನೆ ಇತ್ತು ಅವರಿಗೆ ಹೊಲ ಬೇಕಿರಲಿಲ್ಲ. ತನ್ನ ಹೊಲವನ್ನೆಲ್ಲ ಸ್ವೀಕರಿಸಿ ಆಶೀರ್ವದಿಸಬೇಕೆಂದು ವಿನೋಬಾಜೀಯನ್ನು ಕೇಳಿದಳು.

ಇಂಥ ಚಳುವಳಿಗೆ ದೇವರ ಬೆಂಬಲವಿಲ್ಲವೆನ್ನಲು ಸಾಧ್ಯವೆ? ಇಂಥ ದಾನಗಳಿಂದ ಮಾನವನ ಉತ್ತಮ ಗುಣಗಳಲ್ಲಿ ವಿಶ್ವಾಸ ಹೆಚ್ಚುತ್ತದೆ. ಭೂದಾನ ಕೊಟ್ಟಮೇಲೆ ಆ ಮಹಿಳೆಗೆ ಆದ ಆನಂದಾನುಭವ ವಿಲಕ್ಷಣ! ತನ್ನ ಚೊಚ್ಚಲು ಮಗುವಿಗೆ ಮೊಲೆಹಾಲು ಕುಡಿಸುವಾಗ ಆಗುವ ಆನಂದವಾಗಬೇಕು ಭೂದಾನ ನೀಡುವಾಗ ಎನ್ನುತ್ತಾರೆ ವಿನೋಬಾ.

## ೧೦ ಪ್ರಜಾಸೂಯ ಯಜ್ಞ

ನವಂಬರ್ ೨೪ಕ್ಕೆ ನಾವು ದಿಲ್ಲಿಯನ್ನು ಬಿಟ್ಟೆವು ಅಲ್ಲಿಂದ ೨೪-೨೫ ಫೆಬ್ರವರಿಯ ವರೆಗೆ ಭೂದಾನಯಜ್ಞದ ದೃಷ್ಟಿಯಿಂದ ಪರೀಕ್ಷಾಕಾಲ ನವಂಬರ್ ೨೪ಕ್ಕೆ ಚುನಾವಣೆಗಾಗಿ ಉಮೇದುವಾರಿಕೆ ಪತ್ರವನ್ನು ತುಂಬಿದರು ಫೆಬ್ರವರಿ ೨೫ ರ ವರೆಗೆ ಚುನಾವಣೆ, ವೋಟಿನ ಎಣಿಕೆ ನಡೆದಿತ್ತು ೨೪ ಕ್ಕೆ ಚುನಾವಣೆಯ ಪರಿಣಾಮ ಪ್ರಕಟವಾಯಿತು ಹೀಗೆ ಈ ಚುನಾವಣೆಯ ಕುದುರೆ ಹಿಡಿತಡೆಯಿಲ್ಲದೆ ನಾಗಿತು ಲೋಕವೆಲ್ಲ ಅವನ್ನೇ ನೋಡುತ್ತಿತ್ತು, ಬೆರಗಾಗಿ. ಇಷ್ಟು ದೊಡ್ಡ ಪ್ರಮಾಣದಲ್ಲ, ಅದೂ ಮೊದಲನೆ ಸಲ, ಇಷ್ಟು ಶಾಂತಿಯಿಂದ ಇಂಥ ಚುನಾವಣೆ ಲೋಕದಲ್ಲಿ ಎಲ್ಲೂ ನಡೆದಂತಿಲ್ಲ. ಭಾರತದ ದೃಷ್ಟಿಯಲ್ಲಂತೂ ಇದೊಂದು ಅಭೂತಪೂರ್ವ ಘಟನೆ. ಈ ಚುನಾವಣೆಯ ಕುದುರೆಯ ಕಾವಲಿಗೆ ಇಡೀ ರಾಜ್ಯಬಲವೆಲ್ಲ ಕಾದಿತ್ತು ಆದರೆ ಈ ನಡುವೆ ಇನ್ನೊಂದು ಕುದುರೆಯೂ ದಣಿವುಗಾಣದೆ, ಏನೂ ತೊಂದರೆಯಿಲ್ಲದೆ, ಅಖಂಡ ರೂಪವಾಗಿ ಸಾಗಿತ್ತು— 'ಪ್ರಜಾಸೂಯ ಯಜ್ಞದ ಕುದುರೆ' ಇದರ ಹಿನ್ನಲೆಯಲ್ಲೂ ಬಲವಿತ್ತು. ಅದು ದರಿದ್ರನಾರಾಯಣನ ಬಲ, ಎಲ್ಲವನ್ನೂ ಕಳೆದುಕೊಂಡವರ ಬಲ!

**ಹಳ್ಳಿ-ಪಟ್ಟಣಗಳ ಎರಡು ನೋಟ:** ಕೆಲವು ದಿನ ಯಾತ್ರೆ ನಿಲ್ಲಿಸಿ, ಚುನಾವಣೆ ಮುಗಿದಮೇಲೆ ಮತ್ತೆ ಮೊದಲಿಡಿ ಎಂದು ಕೆಲವರು ಸೂಚಿಸಿದರು ಕಡೆಗೆ ಮತದಾನದ ದಿನವಾದರೂ ಯಾತ್ರೆ ನಿಲ್ಲಿಸಿ ಎಂದು ಹತ್ತಿರದ ಸಂಗಾತಿಗಳು ಹೇಳಿದರು. ತಿಳಿದೂ ತಿಳಿದೂ ಇಂಥ ವೇಳೆಯಲ್ಲಿ ಈ ಯಾತ್ರೆಯ ಕಾರ್ಯಕ್ರಮ ಇಟ್ಟಿದೀ

ರಲ್ಲ ಎಂದು ಕೆಲವು ಕಾಂಗ್ರೆಸ್ ಕಮಿಟಿಗಳವರು ಬೇಸರಗೊಂಡರು. ಆದರೆ ತಿಳಿದೂ ತಿಳಿದೂ ಕಾರ್ಯಕ್ರಮ ಇಡುವ ಮಾತೇ ಇರಲಿಲ್ಲ. ಗಂಗೆ ತನ್ನ ತಲೆಮೂಡಿನಿಂದ ಹೊರಟಿತ್ತು. ಅಖಂಡವಾಗಿ ಹರಿಯುತ್ತಿತ್ತು ಅದು ನಿಲ್ಲಲಾರದು ಸೂರ್ಯನಿಗೆ ಬಿಡುವಿಲ್ಲ. ವಿನೋಬಾಜೀ ಹೇಳಿಯೇ ಬಿಟ್ಟರು–' ನಾವು ನನ್ನ ಹಿಂದೆ ಪ್ರತಿಕ್ಷಣವೂ ಓಡಿಬರುತ್ತಿದೆ ನಾನು ಹೇಗೆ ನಿಲ್ಲಲಿ? ಗಳಿಗೆ ಗಳಿಗೆಯೂ ಉಸಿರು ಆಡುವಂತೆ ಈ ಕಲಸವನ್ನು ನಾನು ಮಾಡಲೇಬೇಕಾಗಿದೆ.' ಪೂರಾ ಇಷ್ಟವಿದ್ದರೂ ಕಾರ್ಯಕರ್ತರು ಎಷ್ಟೋ ಸಲ ಜತೆಗೆ ಇರಲಾರರು. ಏಕಾಕಿಯಾಗಿ ನಾಗಬೇಕಾಯಿತು. ಒಂದು ಸಲ ವಿನೋಬಾಜೀ ಹೇಳಿದರು 'ಶ್ರೀಮಂತನ ಮನೆಯಿಂದ ಹಣ ಹೊರಟುಹೋದರೆ ಪರಿವಾರದವರೂ ಬಿಟ್ಟುಹೋಗುತ್ತಾರೆ. ಹಾಗೇ ಕೆಲಸಗಾರರು ನನ್ನನ್ನು ಬಿಟ್ಟುಹೋದರು' ಇಷ್ಟೆಲ್ಲ ಆದರೂ ಜನರಲ್ಲಿ ಕಂಡುಬಂದ ಉತ್ಸಾಹ ಚುನಾವಣೆಯ ಸಭೆಗಳಲ್ಲೂ ಕಾಣಲಿಲ್ಲ ವಿನೋಬಾಜೀ ಹೋದಲ್ಲಿ ನೆರೆಹೊರೆಯ ಹಳ್ಳಿಗಳಿಂದ ನಾಬಿರಾರು ಜನ ಬಂದು ನೆರೆದರು. ಜನರ ಮನಸ್ಸಿನೊಳಗಣ ಪ್ರೇಮ-ಆಶಗಳು ಹುದುಗಿರುತ್ತಿರಲಿಲ್ಲ ತಮ್ಮ ಶ್ರದ್ಧೆಯನ್ನು ಪ್ರಕಟಿಸಲು ತಮಗೆ ತೋರಿದ ನಾನಾ ಬಗೆಯನ್ನು ಪ್ರಯೋಗಿಸಿಯೂ ಅವರಿಗೆ ಎದೆ ತುಂಬುತ್ತಿರಲಿಲ್ಲ ಇನ್ನೂ ವಿನೋ ಕೊರತೆ. ೧೦ ಗಂಟೆಗೆ ವಿನೋಬಾಜೀ ಬಿಡಾರವನ್ನು ತಲಪುತ್ತಿದ್ದರು ಅಲ್ಲಿಂದ ಜನರ ಪ್ರವಾಹ ಪ್ರಾರಂಭ ಬಂದವರು ಪ್ರಾರ್ಥನಾ ಪ್ರವಚನ ಮುಗಿಸಿಕೊಂಡೇ ಹಿಂದಿರುಗುತ್ತಿದ್ದರು ಹಳ್ಳಿಯಾಗಲಿ ಪಟ್ಟಣವಾಗಲಿ ವಿನೋಬಾಜೀ ಇಡೀ ದಿನ ತಂಗುತ್ತಾರೆ. ಹಳ್ಳಿಗಳಲ್ಲಿ ದರಿದ್ರನಾರಾಯಣನ ದರ್ಶನ ಮಾಡುತ್ತಾರೆ. ಪಟ್ಟಣಗಳಲ್ಲಿ ಈ ದರಿದ್ರನಾರಾಯಣನ ಸೇವೆಗೆ ಕೆಲವರು ಸೇವಕರು ದೊರೆತಾರೆಂದು ಅಪೇಕ್ಷಿಸುತ್ತಾರೆ. ಹೀಗೆ ಇಬ್ಬಗೆಯ ಲಾಭ ನೋಡುತ್ತಾರೆ.

ಪಟ್ಟಣಗಳಲ್ಲಿ ಕೆಲವು ಜನ ಹೆಚ್ಚು ಹೊಲ ಕೊಡುತ್ತಾರೆ. ಹಳ್ಳಿಗಳಲ್ಲಿ ಹೆಚ್ಚು ಜನ ಸ್ವಲ್ಪ ಸ್ವಲ್ಪ ಹೊಲಕೊಡುತ್ತಾರೆ ಆದರೂ ಹಳ್ಳಿಗಳಲ್ಲಿಯೆ ಅವರಿಗೆ ಪಕ್ಷಪಾತ. ಹಿಂದುಸ್ಥಾನದ ಜನ ಹಳ್ಳಿಗಳಲ್ಲಿರುತ್ತಾರೆ ನಾವು ಆಡುವ ಮಾತೆಲ್ಲ ಅವರ ದೃಷ್ಟಿಯಿಂದ ಆಡಿದ್ದಾಗಬೇಕು ಹಳ್ಳಿಯ ಜನ ದುರ್ಬಲರಾದರೆ ಇಡೀ ದೇಶವೆ ದುರ್ಬಲ. ಹಳ್ಳಿಯ ಜನ ಬಲಿಷ್ಠರಾದರೆ ಇಡೀ ದೇಶ ಬಲಿಷ್ಠ.

ಚುನಾವಣೆ ಅತ್ಯಂತ ಶಾಂತಿಪೂರ್ವಕವಾಗಿ ನಡೆಯಲು ಈ ಪ್ರಜಾಸೂಯ ಯಜ್ಞವೂ ಒಂದು ಕಾರಣ.

**ಸರ್ವ ಸಮನ್ವಯಕಾರಿ ಕೆಲಸ·** ಸಂಪಾಯಾದ ಪ್ರಾರ್ಥನಾ ಸಭೆಯಲ್ಲಿ ವಿನೋಬಾಜೀ ಹೇಳಿದರು. 'ಚುನಾವಣೆ ಮುಗಿದ ಮೇಲೆ ನಾವೆಲ್ಲರೂ ಸೇರಿ ಬಡವರ ಸೇವೆಯ ಕೆಲಸಮಾಡಬೇಕು. ರಾಜಕೀಯದಲ್ಲಿ ಭಿನ್ನಭಾವವಿದ್ದರೂ ಭೂದಾನಯಜ್ಞದಲ್ಲಿ ಎಲ್ಲರೂ ಕಲೆತು ಕೆಲಸ ಮಾಡಬಲ್ಲೆವು ಎಂದು ತೋರಿಸಬೇಕು ಈ ಕೆಲಸದ ಮೂಲಕ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬಲ್ಲೆವೆಂಬುದನ್ನು ತೋರಿಸಬೇಕು ಸಮಾಜ ಯಾರನ್ನಾದರೂ ಆರಿಸಲಿ, ನಾವು ಕೆಲಸಗಾರರು ಒಬ್ಬರನ್ನೊಬ್ಬರು ಬಿಡಲಾರೆವು ಹೋದಲ್ಲೆಲ್ಲ ನಾನು ಈ ಮಾತನ್ನು ತಿಳಿಸುತ್ತಿದೇನೆ ಭೂದಾನ ಯಜ್ಞದ ಮೂಲಕ ನಾವು ಐಕಮತ್ಯದಿಂದಿರಬಹುದು ಎಲ್ಲರ ಸಹಕಾರದಿಂದ ಈ ಕೆಲಸ ಆದೀತು. ಎಲ್ಲ ಪಕ್ಷಗಳ ಮೇಲ್ಮೆಯೂ ಇದರಲ್ಲಿದ.'

**ಸೈಕಲ್ ದುರ್ಘಟನೆ :** ಇನ್ನೊಂದು ದೃಷ್ಟಿಯಿಂದಲೂ ಇದು ಪರೀಕ್ಷಾ ಕಾಲವಾಯಿತು ಯಾತ್ರಾಪಥ ತರಾಯೀ ಪ್ರದೇಶದಲ್ಲಿತ್ತು. ಹಲವು ಕಡೆ ನಾವು ಹಿಮಾಲಯವನ್ನು ಮುಟ್ಟಿ ಮುಂಬರಿಯಬೇಕಾಯಿತು ಗಂಗಾ-ಯಮುನೆಯರ ಶೀತಲ ಸುಖಕರ ಸ್ಪರ್ಶವನ್ನು ಅನುಭವಿಸುತ್ತ ಯಾತ್ರಿಕರು ಸಾಗುತ್ತಿದ್ದರು. ಆದರೆ ಛಳಿ

ಗಾಲವಾದ್ದರಿಂದ ಬಹಳ ಜೋಕೆಯಿಂದಿರಬೇಕಾಗುತ್ತಿತ್ತು. ಯಾತ್ರಿಕರು ಇಷ್ಟೆಲ್ಲ ಜೋಕೆಯಿಂದಿದ್ದರೂ ಒಬ್ಬ ತಮ್ಮನಿಗೆ ದಿಲ್ಲಿಯಲ್ಲಿ ನ್ಯುಮೋನಿಯಾ ಆಯಿತು ದೇವರ ದಯೆಯಿಂದ ಅವನಿಗೆ ಆರೋಗ್ಯವಾಗಿ, ಬಾದಷಾಹಿಬಾಗಿನಲ್ಲಿ ಬಂದು ನಮ್ಮನ್ನು ಕೂಡಿಕೊಂಡ. ಈ ನಡುವೆ ಒಬ್ಬ ಪ್ರಜ್ಞೆಯಿಲ್ಲದ ಸೈಕಲ್ ಸವಾರನ ಸೈಕಲ್ ನಮ್ಮನ್ನು ತಾಗಿ ವಿನೋಬಾಜೀಯು ಮೇಲೆ ಬಿತ್ತು. ವಿನೋಬಾಜೀ ಬಲಗೈ, ಬಲಮುಂಡಿಯೂರಿ ಕೆಳಗೆ ಬಿದ್ದರು ಮೊದಲು ಮೂರು ನಾಲ್ಕು ದಿನ ಬರೀ ಸೊಂಟ-ನೋವು ಕಾಣಿಸಿಕೊಂಡಿತು. ಮುಂದೆ ಡೆಹರಾಡೂನ್ ಜಿಲ್ಲೆಯಲ್ಲಿ ಕಾಲಿಟ್ಟಾಗ ಮಂಡಿ ಬಹಳ ನೋವಾಯಿತು. ಸಹರನ್‌ಪೂರ್‌ದಿಂದ ಬಾದಶಾಹಿಬಾಗ್ ತಲಪುವಾಗ ನಾಲ್ಕು ಮೈಲಿ ನಡೆದಮೇಲೆ ಮೊಣಕಾಲು ಬಹಳ ನೋವಾಗಿ ಮುಂದಿನ ೭–೮ ಮೈಲಿ ನಡೆಯುವುದೇ ಕಷ್ಟವಾಯಿತು ಆದರೂ ವಿನೋಬಾಜೀ ನಡೆಯುತ್ತಿದ್ದರು ಬಾದಶಾಹಿಬಾಗ್ ತಲಪಿದ ಮೇಲೆ ಕಾಲು ಮುಂದೆ ಹೆಜ್ಜೆಯಿಡಲು ಒಪ್ಪಲಿಲ್ಲ ಮೋಟಾರೋ ರೈಲೋ ಎಂಬ ಮಾತೇ ಇರಲಿಲ್ಲ ವಾಹನದ ಪ್ರಶ್ನೆಯೇ ಇಲ್ಲ. ಒಂದು ಆರಾಮ ಕುರ್ಚಿಯಲ್ಲಿ ಕೂಡಿಸಿ ನಾವು ಹೊರುತ್ತೇವೆ ಎಂದು ಸಂಗಾತಿಗಳು ಹೇಳಿದ್ದಕ್ಕೆ ಒಪ್ಪಿಕೊಂಡರು ಕಾಶೀಪುರದ ವರೆಗೆ ಕುರ್ಚಿಯಲ್ಲಿಯೇ ಪ್ರಯಾಣ ನಾಗಿತು ಆದರೆ ಬೆಳಗಿನ ತಂಪುಹೊತ್ತಿನಲ್ಲಿ ಹೊಳೆ ದಾಟುವುದು, ಸಮನಲ್ಲದ ದಾರಿ, ಧೂಳು–ಗಾಳಿ ಇವೆಲ್ಲದರ ಪರಿಣಾಮವಾಗಿ ವಿನೋಬಾಜೀ ಕುರ್ಚಿಬಿಟ್ಟು ಎತ್ತಿನಗಾಡಿಯಲ್ಲಿ ಪಯಣಮಾಡಲು ನಿಶ್ಚಯಿಸಿದರು. ತಾವು ಸಂಕೋಚಿಸಬೇಡಿ, ನಮಗಾಗಲೇ ರೂಢಿಯೂ ಆಗಿದೆ ಎಂದು ಸಂಗಾತಿಗಳು ಬಹುವಾಗಿ ಬೇಡಿಕೊಂಡರು ಆದರೆ ವಿನೋಬಾಜೀ ಒಪ್ಪಲಿಲ್ಲ. ನನ್ನನ್ನು ಹೊರುವವರು ನನ್ನ ಜತೆಗಾರರಲ್ಲ, ನನ್ನ

ದೇವರು ಎಂದು ವಿನೋಬಾಜೀಯ ಭಾವನೆ. ಜತೆಗಾರರಿಗೆ ತಾವು ಹೊರುವುದು ವಿನೋಬಾಜೀಯ ರೂಪದಲ್ಲಿ ದರಿದ್ರನಾರಾಯಣನನ್ನು ಎಂಬ ಭಾವನೆ. ಪ್ರತಿಯೊಬ್ಬನೂ ಒಂದುಗಳಿಗೆ ಆ ಕುರ್ಚಿಗೆ ಹೆಗಲು ಕೊಡಲು ಅವಕಾಶ ದೊರೆತರೆ ಅದು ತನ್ನ ಪುಣ್ಯೋದಯ ವೆಂದು ತಿಳಿಯುತ್ತಿದ್ದ ತಂಗಬೇಕಾದ ಊರು ಹತ್ತಿರ ಬಂದಾಗ ತಾನು ಮುಂದ, ನಾನು ಮುಂದೆ ಎಂದು ಊರಿನ ಜನ ಗುಂಪುಗಟ್ಟಿ ಕಾಯುತ್ತಿದ್ದರು. ಹೆಗಲುಕೊಡುವ ಪ್ರಸಂಗ ದೊರೆಯದಿದ್ದರೆ ಜನ ರಿಗೆ ಚಡಪಡ. ಆದ್ದರಿಂದ ಎರಡೆರಡು ನಿಮಿಷವಾದರೂ ಸರಿಯೆ ಎಲ್ಲರಿಗೂ ಅವಕಾಶ ಕೊಡಬೇಕು ಡೇರಾಡೂನಿನಿಂದ ಮುಂದೆ ಹೃಷೀಕೇಶದ ವರೆಗೆ ಶ್ರೀ ಮಹಾವೀರತ್ಯಾಗಿ ಉತ್ಸಾಹದಿಂದ ಸ್ವಯಂ ಕುರ್ಚಿಯನ್ನು ಹೆಗಲಮೇಲೆ ಹೊತ್ತು ನಡೆದರು

ಒಂದು ವಾರ ಎಲ್ಲ ಕಾರ್ಯಕ್ರಮ ನಿಲ್ಲಿಸಿ ಒಂದು ಕಡೆ ಏಕಾ ಗ್ರವಾಗಿ ನಿಂತು ಕಾಲಿಗೆ ಉಪಚಾರ ಮಾಡಿದ್ದರೆ ಸರಿಹೋಗುತ್ತಿತ್ತು. ಆದರೆ ಪ್ರಜಾಸೂಯ ಯಜ್ಞಕ್ಕಾಗಿ ಹೊರಬಿದ್ದ ಕುದುರೆ ಮಳೆ, ಮಂಜು, ಬಿಸಿಲು, ಯಾವುದಕ್ಕೂ ನಿಲ್ಲುವಂತಿರಲಿಲ್ಲ ಮಾಡು ಇಲ್ಲವೇ ಮಡಿ ಎಂಬ ಸಂಕಲ್ಪ ವಿನೋಬಾಜೀಯದು. ೫ ಲಕ್ಷ ಎಕರೆಯ ಸಂಕಲ್ಪಸಿದ್ಧಿಯಾಗಬೇಕು ಏಪ್ರಿಲ್ ೧೩ ಕ್ಕೆ ಸೇವಾ ಪುರಿಗೆ ತಲಪಬೇಕು ಆದ್ದರಿಂದ ಎಷ್ಟು ಹೇಳಿದರೂ ವಿನೋಬಾಜೀ ಎಲ್ಲೂ ನಿಲ್ಲಲು ಒಪ್ಪಲಿಲ್ಲ. ದಿನಕ್ಕೆ ಒಂದು ಸಲ ಕಾಲನ್ನು ಚೆನ್ನಾಗಿ ನೀವಿ ಎರಡು ಸಲ ಶಾಖಕೊಡುವ ಉಪಚಾರ ಮಾತ್ರ ನಡೆದಿತ್ತು

ಇದು ನಿಜವಾಗಿಯೂ ಪರೀಕ್ಷಾಕಾಲ ವಿನೋಬಾಜೀಗೆ ಸೈಕ ಲ್ಲಿನ ಏಟಿನಿಂದ ನೋವಾಯಿತು. ಈ ೪ ತಿಂಗಳಲ್ಲಿ ಭೂದಾನ ಯಜ್ಞದ ಕೆಲಸ ಮಾಡಲು ಕೆಲಸಗಾರರಿಗೆ ಬಿಡುವೇ ಸಿಗಲಿಲ್ಲ. ಹಲವು ಜಿಲ್ಲೆಗಳಲ್ಲಿ ಅಲ್ಲಿನ ಒಬ್ಬಿಬ್ಬರು ಖಾದೀ ಕೆಲಸಗಾರರು ಏಕಾ

ಕಿಗಳಾಗಿ ಇಡೀ ಯಾತ್ರೆಯ ವ್ಯವಸ್ಥೆ ಮಾಡಬೇಕಾಯಿತು. ಭೂದಾನಕ್ಕಾಗಿ ಹಳ್ಳಿಹಳ್ಳಿ ತಿರುಗುವುದಂತೂ ಒತ್ತಟ್ಟಿಗಿರಲಿ, ವಿನೋಬಾಜೀ ಪಯಣಮಾಡುತ್ತಿದ್ದ ದಾರಿಯಲ್ಲಿ ಸಹ ಜನರನ್ನು ಕಂಡು ಭೂದಾನ ಪಡೆವ ಪ್ರಯತ್ನವನ್ನು ಕೆಲಸಗಾರರು ನಾಕಷ್ಟು ಮಾಡಲಾರದಾದರು ದೊರೆತ ಭೂದಾನವೆಲ್ಲ ಬಹುಶಃ ಸ್ವಯಂಸ್ಫೂರ್ತಿಯದು. ವಿನೋಬಾಜೀಯ ಮಾತಿನ ನಮ್ರತೆ, ದೃಢತೆ, ದಾರ್ಶನಿಕತೆ, ಹಾರ್ದಿಕತೆಗಳಿಂದ ಆ ದಾನ ಲಭಿಸಿತು ನಮ್ಮ ಹಿತ ಬಯಸುವ, ಒಂದು ಭಾರಿ ಸಂಕಟದಿಂದ ನಮ್ಮನ್ನು ಪಾರುಗಾಣಿಸುವ, ನಮಗೆ ಸರಿಯಾದ ದಾರಿ ತೋರಿಸುವ, ಒಂದು ಹೊಸ ರೀತಿಯಲ್ಲಿ ಲೋಕವನ್ನೇ ಬದಲಿಸಬೇಕೆನ್ನುವ ಒಬ್ಬ ಮಹಾ ಗುರು ಬಂದಿದಾನೆ ಎನಿಸುತ್ತಿತ್ತು ಜನರಿಗೆ.

**ರಾಮುಚರಣ ರೂಪದಲ್ಲಿ ಶ್ರೀರಾಮ** ಈ ಯಾತ್ರೆಯ ಮಧ್ಯೆ ದಿನವೂ ಕಾಣಬಂದ ಜನರ ಸದ್ಭಾವನೆ, ಚಿಕ್ಕ ಚಿಕ್ಕವರಿಂದ ಪುನಃ ಪುನಃ ದೊರೆತ ಮಹಾದಾನ ಇವುಗಳ ವರ್ಣನೆ ಇಲ್ಲಿ ಸಾಧ್ಯವಿಲ್ಲ. ಇಂಥ ಪ್ರಸಂಗಗಳ ಒಂದು ಸ್ವತಂತ್ರ ಪುಸ್ತಕವೇ ಆಗಬೇಕು. ಒಂದೆರಡಾದರೂ ಅದ್ಭುತ ಘಟನೆ ನಡೆಯದ ದಿನವೇ ಇರಲಿಲ್ಲ. ಚೌದಹಪುರದ ಮಾತು. ಪ್ರಾರ್ಥನೆಯಾದಮೇಲೆ ಜನ ತಮ್ಮ ತಮ್ಮ ಮನೆಗೆ ತೆರಳಿದರೂ ಭೂದಾನದ ಮಾತು ನಡೆದೇ ಇರುತ್ತಿದೆ ತಮ್ಮ ಊರಿಗೆ ಮಹಾತ್ಮರು ಬಂದಿದಾರೆ ಅವರು ಹೊಲವಿಲ್ಲದವರಿಗೆ ಹೊಲ ಕೊಡುತ್ತಾರೆ ಎಂದು ರಾಮುಚರಣ ಚೌಧುರಿ ಕೇಳಿದ್ದ. ಗಾಡಿಯಲ್ಲಿ ಕುಳಿತು ರಾತ್ರಿ ಒಂದು ಗಂಟೆಯ ವೇಳೆಗೆ ನಮ್ಮ ಬಿಡಾರಕ್ಕೆ ಬಂದ. ವಿನೋಬಾಜೀಗೆ ನಿದ್ರಾಭಂಗವಾದೀತಲ್ಲ ಎಂದು ಯಾತ್ರಿಕರಲ್ಲೊಬ್ಬ ಇಷ್ಟು ಅವೇಳೆಯಲ್ಲಿ ಈ ಮನುಷ್ಯ ಏಕೆ ಬಂದ ಎಂದು ಮೆಲುಧ್ವನಿಯಲ್ಲಿ ಕೇಳಿದ. ರಾಮುಚರಣನಿಗೆ ಎರಡೂ ಕಣ್ಣು ಕುರುಡು. ತನ್ನ

ಸಂಗಾತಿಯ ಸಹಾಯದಿಂದ ಕುಳಿತುಕೊಂಡು 'ಗುರುಗಳು ಭೂದಾನ ಸ್ವೀಕರಿಸುತ್ತಾರೆ ಎಂದು ಕೇಳಿದೇನೆ. ಬಡವರಿಗೆ ಹೊಲ ಹಂಚುತ್ತಾರಂತೆ. ನನ್ನ ಬಳಿ ೧೨ಕೂರಿಗೆ ಹೊಲವಿದೆ ಅದನ್ನು ನಾನು ಗುರುಗಳಿಗೆ ಅರ್ಪಿಸಬಯಸುತ್ತೇನೆ' ಎಂದ ಆ ಪ್ರಸಂಗವನ್ನು ನೆನೆದರೆ ಇಂದಿಗೂ ಎದೆ ತುಂಬಿ ಬರುತ್ತದೆ ಇದನ್ನು ಬರೆಯುವಾಗ ಅದರ ಪಾವನ ಸ್ಮೃತಿ ಕಣ್ಣಿನಲ್ಲಿ ಹನಿ ತುಂಬುತ್ತಿದೆ.

ನಾವು ದಾನಪತ್ರ ಬರೆಸಿಕೊಂಡೆವು ೬ ಮೈಲಿ ದೂರದ ತನ್ನ ಊರಿಗೆ ರಾಮುಚರಣ ಹಿಂತಿರುಗಿದ ಬೆಳಗ್ಗೆ ಇದನ್ನೆಲ್ಲ ವಿನೋಬಾಜೀಗೆ ತಿಳಿಸಲಾಯಿತು. ಪ್ರಾರ್ಥನಾ ಸಭೆಯಲ್ಲಿ ಇದನ್ನು ಪ್ರಸ್ತಾಪಿಸಿ 'ರಾಮುಚರಣ ಎಂಬ ತಮ್ಮನೊಬ್ಬ ರಾತ್ರಿ ಬಂದು ತನ್ನ ಇಡೀ ೧೨ ಕೂರಿಗೆ ಹೊಲವನ್ನು ದಾನನೀಡಿದ ರಾಮುಚರಣ ಕುರುಡ ಎನ್ನುತ್ತಾರೆ ಜನ. ನಿಜವಾಗಿ ಕುರುಡರು ನಾವು. ರಾಮುಚರಣನ ರೂಪದಲ್ಲಿ ಪ್ರತ್ಯಕ್ಷ ಶ್ರೀರಾಮನ ಚರಣವೇ ಈ ಭೂದಾನಯಜ್ಞವನ್ನು ಆಶೀರ್ವದಿಸಲು ಬಂದವು ಎಂದು ಅರಿಯಲಾರದ ನಾವು!'

ಅನೇಕ ಕಡೆ ವಿನೋಬಾಜೀ ಈ ಪ್ರಸಂಗವನ್ನು ವರ್ಣಿಸಿ ಹೇಳಿದರು.

**ಪಥಿಕರ ಪಾಥೇಯ** ನೈನಿತಾಲ್ ಜಿಲ್ಲೆಯ ಮಾತು. ಕಾಲಾಡೂಂಗಿ ಎಂಬ ಚಿಕ್ಕ ಹಳ್ಳಿಯಲ್ಲಿ ಆ ದಿನ ನಮ್ಮ ಬಿಡಾರ. ಸುತ್ತಲಿನ ಹಳ್ಳಿಗಳ ಜನ ಬಂದಿದ್ದವರು ಸಂಜೆಗೆ ತಮ್ಮ ತಮ್ಮ ಹಳ್ಳಿಗಳಿಗೆ ಹಿಂದಿರುಗಿದರು. ಒಂದು ಹಳ್ಳಿಯಲ್ಲಿ ಒಬ್ಬ ಮುದುಕಿಗೆ ಹೀಗೆ ಬಡವರಿಗಾಗಿ ಬೈರಾಗಿ ಗುರುಗಳು ಹೊಲ ಬೇಡುತ್ತಾರೆ ಎಂದು ತಿಳಿಯಿತು. ಅವಳಿಗೆ ಗುಡ್ಡದಲ್ಲಿ ಸ್ವಲ್ಪ ಹೊಲ, ತರಾಯಿಯಲ್ಲಿ ಸ್ವಲ್ಪ ಹೊಲ ಇತ್ತು. ಅವಳೂ ಹಾಗೇ ರಾತ್ರಿ ೧೧ ಗಂಟೆಗೆ ಬಿಡಾರಕ್ಕೆ ಬಂದಳು. ಎಲ್ಲರೂ ಮಲಗಿದ್ದುದನ್ನು ಕಂಡಳು. ರಾತ್ರಿಯಲ್ಲಿ

ಬಾಗಿಲಲ್ಲ ಕಾದು ಕುಳಿತಿದ್ದಳು. ಬೆಳಗ್ಗೆ ಎಲ್ಲರನ್ನೂ ಎಚ್ಚರಿಸುವ ಗಂಟೆಯನ್ನು ಬಾರಿಸಿ ನಾನು ಹೊರಗೆ ಬಂದಾಗ ಮುದುಕಿ ಬಾಗಿಲಲ್ಲಿ ಕುಳಿತಿದ್ದಳು ಬಯಲಲ್ಲಿ ಸ್ವಲ್ಪ ಹೊಲ, ಒಂದು ಮನೆ ಇದ್ದುದನ್ನು ಈ ಯಜ್ಞದಲ್ಲಿ ಅರ್ಪಿಸಲು ಆಕೆ ಎಂದಿದ್ದಳು ದಾನಪತ್ರ ಬರೆಸಿ ಕೊಂಡುದಾಯಿತು. ನಮ್ಮೆಲ್ಲರ ಶ್ರದ್ಧೆಯನ್ನು ದೃಢಪಡಿಸಲು ದಾನ ರೂಪದಲ್ಲಿ ನಮಗೀ ಪಾಥೇಯ ಕೊಟ್ಟಳು, ಆ ಮುದುಕಿ. ನಮ್ಮ ಎದೆಯೊಳಗೆ ಎಂಥ ಅಪೂರ್ವ ಬಲದ ಚಿಲುಮೆ ಹೊಮ್ಮಿತೋ ಈ ದಾನದಿಂದ, ಹೇಗೆ ವಿವರಿಸಲು ಸಾಧ್ಯ !

'**ತೇನ ತ್ಯಕ್ತೇನ ಭುಂಜೀಥಾಃ**' ಕರಹಲ್ ಒಂದು ಚಿಕ್ಕ ಹಳ್ಳಿ ಮುಂದಿನ ಮಜಲು ಬಹಳ ದೂರ ಎಂದು ಒಮ್ಮೆಲೆ ಈ ಹಳ್ಳಿಯಲ್ಲಿ ತಂಗುವ ನಿಶ್ಚಯ ಮಾಡಿದೆವು ಇಲ್ಲಿ ಒಬ್ಬ ತಮ್ಮ ತನ್ನ ಇಡೀ ಹೊಲವನ್ನು ನೀಡಿದ ಇದ್ದದ್ದೇ ನಾಲ್ಕು ಎಕರೆ ತನ್ನ ಹೆಸರನ್ನು ಹೇಳಬಾರದು ಎಂದ ಇದರಿಂದ ಪ್ರೇರಣೆಗೊಂಡು ಇನ್ನೊಬ್ಬ ೫ ಎಕರೆ ಕೊಡಬೇಕೆಂದಿದ್ದವನು ಹತ್ತು ಕೊಟ್ಟ. ಮತ್ತೊಬ್ಬ ೧೧ ಎಕರೆ ಕೊಡುವ ಮನಸ್ಸು ಮಾಡಿದ್ದವನು ೨೦ ಎಕರೆ ನೀಡಿದ. ಸಂಜೆಗೆ ಊಟಮಾಡಿ ಹಿಂದಿರುಗುವಾಗ ಒಬ್ಬ ತಮ್ಮ ಸಿಕ್ಕ ಅವನು ಪ್ರವಚನಕ್ಕೆ ಬಂದಿರಲಿಲ್ಲ. ಆದರ ದಾನ ನೀಡುವ ಮನಸ್ಸಿತ್ತು, ತನ್ನ ಅಂಗಡಿ ಮುಚ್ಚಿ ಮನೆಗೆ ಹೋಗುತ್ತಿದ್ದ. ನಮ್ಮನ್ನು ಕಂಡು ಬಹಳ ಶ್ರದ್ಧಾಪೂರ್ವಕವಾಗಿ ಹಿಂದಿರುಗಿದ. ಅಂಗಡಿ ತೆರೆದು ಕಾಗದ ಪತ್ರ ತೆಗೆದು ತನ್ನ ಇಡೀ ೧೦ ಎಕರೆಯನ್ನು ದಾನಪತ್ರ ಬರೆದು ಕೊಟ್ಟ ಈ ಚಿಕ್ಕ ಹಳ್ಳಿಯಲ್ಲಿ ೬೦-೬೨ ಎಕರೆ ಸಿಕ್ಕಿತು.

ಇಟಾವಾ ಜಿಲ್ಲಾ ಸಮಿತಿಯ ಅಧ್ಯಕ್ಷ ಠಾಕೂರ್ ರಘುನಾಥ ಸಿಂಹ ಇಡೀ ಜಿಲ್ಲೆಯಲ್ಲಿ ನಮ್ಮ ಜತೆಗೇ ಇದ್ದರು. ಇಟಾವಾದಲ್ಲಿ ಗಾಂಧೀ ಸ್ಮರಣ ದಿನ. ವಿನೋಬಾಜೀಯ ಪ್ರವಚನ ಮುಗಿಯಿತು.

ರಘುನಾಥಸಿಂಹ ಮಾತಾಡಲು ಎದ್ದು ನಿಂತರು. ಮಾತು ಸರಾಗ ವಾಗಿ ಹೊರಡಲಿಲ್ಲ ಕಣ್ಣಿಂದ ಧಾರೆಯಾಗಿ ನೀರು ಹರಿಯುತ್ತಿತ್ತು. 'ವಿನೋಬಾಜೀ, ನಾವು ಇಬ್ಬರು ಅಣ್ಣತಮ್ಮಂದಿರು. ನಮಗೆ ಹತ್ತು ಎಕರೆಯಿದೆ. ಎಲ್ಲವನ್ನೂ ತಮಗೆ ಒಪ್ಪಿಸುತ್ತೇನೆ. ನಮ್ಮ ಹೊಟ್ಟೆ ಪಾಡಿಗೆ ಎಷ್ಟು ಬೇಕೆಂದು ತಾವು ಕೊಟ್ಟರೆ ಅದನ್ನು ಮಹಾ ಪ್ರಸಾದ ಎಂದು ತೆಗೆದುಕೊಳ್ಳುತ್ತೇವೆ' ಎಂದರು.

'ತೇನತ್ಯಕ್ತೇನ ಭುಂಜೀಥಾಃ ಈ ಬಗೆಯ ವಿಶಿಷ್ಟ ದಾನಗಳು ಈ ಚಳುವಳಿಗೆ ನೈತಿಕ ಬಲವನ್ನು ಕೊಟ್ಟು ವೃದ್ಧಿಗೊಳಿಸಿವೆ. ಈ ಪಟ್ಟಿಯನ್ನು ಇನ್ನು ಬೆಳೆಸುವುದಿಲ್ಲ ಈ ಹತ್ತು ತಿಂಗಳಲ್ಲಿ ಇಂಥ ಎಷ್ಟೋ ಅದ್ಭುತ ಅನುಭವ ಆಗಿದೆ.

ಪೀಲಿಭೀತ್ ಜಿಲ್ಲೆಯಲ್ಲಿ ಪೂರಣಪುರ ಒಂದು ತಹಸೀಲು. ಈ ತಹಸೀಲಿನಲ್ಲಿ ಷೇರಪುರ್ ಹಳ್ಳಿಯಲ್ಲಿ ಮೂವರು ಮುಸ್ಲಿಂ ಸೋದರರು ತಲಾ ೨॥ ಸಾವಿರ ಎಕರೆ ಕೊಟ್ಟರು. ಶಾರದಾ ಕಾಲುವೆಯ ದಡದಲ್ಲಿ ೭॥ ಸಾವಿರ ಎಕರೆಗಳ ಒಂದು ಪೂರಾ ಅಖಂಡ ಕ್ಷೇತ್ರ ದರಿದ್ರನಾರಾಯಣನಿಗೆ ಆ ದಿನ ಲಭಿಸಿತು. ೨೫,೦೦೦ ಎಕರೆ ಮಾಡಿಕೊಡುತ್ತೇವೆ ಎಂದು ಪೂರಣಪುರದ ಜನ ಮಾತುಕೊಟ್ಟರು. ವಿನೋಬಾಜೀಗೆ ಗಣಿತ ಎಂದರೆ ಬಲು ಇಷ್ಟ. ಲೆಕ್ಕ ಮೊದಲಿಟ್ಟರು. 'ಹಿಂದೂಸ್ಥಾನದಲ್ಲಿ ಒಟ್ಟು ೨೦೦೦ ತಹಸೀಲು ಇವೆ ೫ ಕೋಟಿ ಎಕರೆ ಬೇಕು ಎಂದು ನಾನು ದೇಶವನ್ನು ಬೇಡಿದೇನೆ ಒಂದೊಂದು ತಹಸೀಲೂ ೨೫ ಸಾವಿರ ಎಕರೆ ಕೊಟ್ಟರೆ ೫ ಕೋಟಿ ಸಹಜ ವಾಗಿ ಆಗುತ್ತದೆ ಪೂರಣಪುರ ತಹಸೀಲು ೨೫ ಸಾವಿರ ಎಕರೆ ಮಾಡಿಕೊಟ್ಟರೆ ಉಳಿದ ತಹಸೀಲುಗಳಿಗೆ ಏಕೆ ಇದು ಸಾಧ್ಯವಾಗ ಬಾರದು ?'

ಉಜ್ಜಯಿನಿಯಲ್ಲಿ ಒಬ್ಬ ತಂಗಿ ದಕ್ಷಿಣದಲ್ಲಿದ್ದ ತನ್ನ ೬ ಹಳ್ಳಿ

ಗಳ ಪಾಲೆಲ್ಲವನ್ನೂ ನೀಡಿದಳು. ಬಹುಶಃ ೫-೬ ಸಾವಿರ ಎಕರೆ ಇರಬಹುದು.

**ದೇಶಾದ್ಯಂತ ಸ್ವಾಗತ:** ದಿಲ್ಲಿ ಬಿಟ್ಟಮೇಲೆ ಅಂಚೆಯಿಂದಲೂ ತಂತಿಯಿಂದಲೂ ಬೇಕಾದಷ್ಟು ದಾನ ಬಂದಿವೆ-ಸೌರಾಷ್ಟ್ರ,ಗುಜರಾತ್, ಮಹಾರಾಷ್ಟ್ರ, ಆಂಧ್ರ, ಕರ್ನಾಟಕ, ಪಂಜಾಬ್ ಇತ್ಯಾದಿ ಮಧ್ಯ ಪ್ರದೇಶದ ಒಬ್ಬ ೯ ವರ್ಷದ ಹುಡುಗ ಪಂಡಿತ ಜವಾಹರಲಾಲರ ಹುಟ್ಟು ಹಬ್ಬದ ದಿನ ೭೦ ಎಕರೆಯ ದಾನ ಪತ್ರ ಕಳಿಸಿದ.

ಬೆಂಗಳೂರಿನ ಒಬ್ಬ ಮುಸಲ್ಮಾನ ಸೋದರ ಸಯ್ಯದ್ ಹುಸೇನ್ ರಾಜೇಂದ್ರಬಾಬುಗಳ ಜನ್ಮದಿನದಲ್ಲಿ ತನ್ನ ೧,೦೦೦ ಎಕರೆ ಹೊಲವನ್ನು ಕಳಿಸಿ, ‘ ಉತ್ತರ ಭಾರತದಲ್ಲಿ ವಿನೋಬಾಜೀ ಕೆಲಸ ಮಾಡುತ್ತಿದಾರೆ, ದಕ್ಷಿಣ ಭಾರತದಲ್ಲಿ ಭೂದಾನದ ಶ್ರೀ ಗಣೇಶ ಮಾಡಲೆಂದು ಇದನ್ನು ಅರ್ಪಿಸಿದೇನೆ ’ ಎಂದು ಬರೆದ ಮಧ್ಯಭಾರತದ ಒಬ್ಬ ಜಾಗೀರ ದಾರ, ಶ್ರೀ ಗಂಗಾಸಿಂಹ, ಕನಿಷ್ಠ ಒಂದು ಸಾವಿರ ಎಕರೆ ಕೊಡುವ ಮಾತು ಕೊಟ್ಟು, ನಮ್ರತೆಯಿಂದ ‘ ತಾವು ಯಾರನ್ನಾದರೂ ಕಳಿಸಿ, ಹೊಲವನ್ನು ಆರಿಸಿಕೊಳ್ಳಲಿ ’ ಎಂದು ಬರೆದ.

ಈ ಭೂದಾನ ಯಜ್ಞದಲ್ಲಿ ಸಮಾಜವಾದಿ ಸೋದರರೂ ಪಾಲುಗೊಂಡಿದಾರೆ, ದಾನ ನೀಡಿದಾರೆ, ಪ್ರಚಾರ ಮಾಡಿ ಜೊತೆಗೆ ನಡೆದಿದಾರೆ ಎಲ್ಲ ಬಗೆಯ ಸಹಾನುಭೂತಿ ತೋರಿದಾರೆ. ಕೆಲವರಂತೂ ‘ ವಿನೋಬಾಜೀ, ತಾವು ನಮ್ಮ ಕೆಲಸವನ್ನೇ ಮಾಡುತ್ತಿದೀರಿ ’ ಎಂದರು ಆದರೆ ಮೈನಪುರಿ ಜಿಲ್ಲೆಯ ಕಮ್ಯುನಿಸ್ಟ್ ನಾಯಕ ಬಾಬುರಾಂ ಪಾಲೀವಾಲ್ ಕೂಡ ವಿನೋಬಾಜೀ ತಮ್ಮೂರಿನ ಬಳಿ ಉಪಾಹಾರಕ್ಕಾಗಿ ತಂಗಿದಾಗ ಅವರನ್ನು ಭೇಟಿಮಾಡಿ ೨ ಎಕರೆ ದಾನ ನೀಡಿದ್ದಲ್ಲದ ಸಂಪೂರ್ಣ ಸಹಕಾರ ಕೊಡುವುದಾಗಿ ಭರವಸೆ ಕೊಟ್ಟಾಗ ಜನಕ್ಕಾದ ಆಶ್ಚರ್ಯ ಅಷ್ಟಿಷ್ಟಲ್ಲ

ಈ ಎಲ್ಲ ಉದಾಹರಣೆಗಳಿಂದ ಸಿದ್ಧವಾಗುವುದಿಷ್ಟು – ವಿನೋಬಾಜೀಗೆ ಭೂದಾನ ಬೇಡಲು ಯಾವುದು ಪ್ರೇರಣೆ ಕೊಟ್ಟಿತೋ ಅದೇ ಇತರರಿಗೆ ನೀಡಲು ಪ್ರೇರಣೆ ಕೊಡುತ್ತಿದೆ ಹುಡುಗ ಹುಟ್ಟಿದಾಗ ಅವನ ಅನ್ನದ ವ್ಯವಸ್ಥೆ ಮಾಡುವ ಮಹಾ ಯೋಜಕನಿಗೆ ಯಾವುದು ತಾನೇ ಅಸಾಧ್ಯ? ನಾವು ನಿಷ್ಠೆಯಿಂದ ಮುನ್ನಡೆದರೆ ಸಾಕು.

## ೧೧ ಸಮಸ್ಯೆಗಳ ಸಂತೆ

**ಕಬ್ಬು–ಕಾಸುಗಳ ಕದನ.** ಉತ್ತರಪ್ರದೇಶದ ಭೂಸಮಸ್ಯೆ ಒಂದು ವಿಶಿಷ್ಟ ರೀತಿಯದು: ಪೂರ್ವದ ಜಿಲ್ಲೆಗಳದು ಒಂದು ಬಗೆ, ಪಶ್ಚಿಮದ ಜಿಲ್ಲೆಗಳದು ಇನ್ನೊಂದು ಬಗೆ. ಪೂರ್ವದಲ್ಲಿ ಎಲ್ಲಾ ಚಿಕ್ಕ ಚಿಕ್ಕ ತುಂಡು ಹೊಲ ಪಶ್ಚಿಮದಲ್ಲಿ ಹಾಗಿಲ್ಲ ಪಶ್ಚಿಮದಲ್ಲಿ ಕಾಲುವೆ, ಟ್ಯೂಬ್‌ವೆಲ್ ಇತ್ಯಾದಿ ಸೌಕರ್ಯ ಇದೆ ಪೂರ್ವದಲ್ಲಿ ಇಲ್ಲ ಈ ಸೌಕರ್ಯಗಳಿಂದ ಚಿಕ್ಕ ರೈತರಿಗಿಂತ ದೊಡ್ಡ ಜಮೀನುದಾರರಿಗೇ ಹೆಚ್ಚು ಲಾಭ. ಮಳೆಯ ನೀರಿನಂತೆ ಕಾಲುವೆಯ ನೀರು ಎಲ್ಲರಿಗೂ ಸಮವಾಗಿ ಸಿಗದು. ಪೂರ್ವದಲ್ಲಿ ಘಾಗರಾ, ಸರಜೂ ನದಿಗಳು ಸಾವಿರಾರು ಎಕರೆ ಹೊಲವನ್ನು ತಮ್ಮ ಹರಿವಿನಲ್ಲಿ ಕೊಚ್ಚಿಕೊಂಡು ಹೋಗುವ ರೂಢಿಯನ್ನು ಇನ್ನೂ ನಡೆಸಿವೆ. ಕಬ್ಬೋ ಕಾಸೋ ಎಂಬ ಸಮಸ್ಯೆ ಎರಡೂ ಕಡೆ ಇದೆ ಕಬ್ಬಿನ ದೆಸೆಯಿಂದ ಎರಡೂ ಕಡೆ ದೇಶೀ ಸಕ್ಕರೆ, ಬೆಲ್ಲಗಳ ಕೈಗಾರಿಕೆ ನಿಂತುಹೋಗಿದೆ. ಎಲ್ಲಕ್ಕಿಂತ ಹೆಚ್ಚಿನ ದೌರ್ಭಾಗ್ಯ ಸಕ್ಕರೆ ಗಿರಣಿಗಳಿಗಾಗಿ ನಾಟಲ್ಪಡುವ ಕಬ್ಬು–ನೆಲದ ಹುಲುಸನ್ನೇ ಹಿಂಡಿಹಾಕುತ್ತಿದೆ. ಬೇಗ ಬೇಗನೆ ಭೂಸಾರ ಕ್ಷಯವಾಗುತ್ತಿದೆಯೆಂದು ಬಲ್ಲವರು ಹೇಳುತ್ತಿದ್ದಾರೆ.

**ಕಾನೂನಿನ ಮೂಲಕ ಜಮೀನುದಾರಿಯ ಸ್ಥಾಪನೆ:** ಈಗೀಗ ಜಮೀನುದಾರಿ ನಿರ್ಮೂಲನಕ್ಕಾಗಿ ಮಾಡಿದ ಕಾನೂನಿನಿಂದ ರೈತರಿಗೆ ಮತ್ತಷ್ಟು ತೊಂದರೆಯಾಗಿದೆ. ದೊಡ್ಡ ದೊಡ್ಡ ಜಮೀನುದಾರರು ತಮ್ಮ ಬಂಧು ಬಳಗದ ಹೆಸರಿನಲ್ಲಿ ಹೊಲವನ್ನು ಹಂಚಿಬಿಟ್ಟಿದ್ದಾರೆ ಉಳಿದುದನ್ನು ದೊಡ್ಡ ದೊಡ್ಡ 'ಫಾರಮ್ಸ್' ಮಾಡಿದ್ದಾರೆ ಜಮೀನು

ದಾರಿ ಹೋಯಿತು. ಫಾರಮುದಾರಿ ಬಂತು. ' ಹೆಚ್ಚು ಆಹಾರ ಬೆಳೆಯಿರಿ' ಯೋಜನೆಯಿಂದ ಇದಕ್ಕೆ ಅನುಕೂಲ ಜೇರೆ ಸಿಗುತ್ತದೆ. ಒಂದೆರಡು ಸಾವಿರ ಎಕರೆಯ ಫಾರಮುಗಳಲ್ಲ, ೧೫-೨೦ ಸಾವಿರ ಎಕರೆಯವು. ವರ್ಷಾಂತರಗಳಿಂದ ಹೊಲಮಾಡುತ್ತಿದ್ದ ರೈತರನ್ನು ಇದಕ್ಕಾಗಿ ಬಿಡಿಸಲಾಗಿದೆ. ಈ ಫಾರಂಗಳಲ್ಲಿ ಕೆಲಸ ಮಾಡುವ ಕೂಲಿ ಗಾರರ ಪರಿಸ್ಥಿತಿ ಬಹಳ ಶೋಚನೀಯ ಇವರಲ್ಲಿ ಹೆಚ್ಚಾಗಿ ಗೋರಖ ಪೂರ್, ಬಸ್ತಿ, ಜಿಲ್ಲೆಯವರು. ಈ ಕೂಲಿಗಾರರ ಫಾರಮಿನಲ್ಲಿ ಗೋಧಿ ಮುಂತಾದ ಧಾನ್ಯ ಬೆಳೆಯುತ್ತಾರೆ ಆದರೆ ಅವರಿಗೆ ಆ ಧಾನ್ಯದಲ್ಲಿ ಯಾವ ಪಾಲೂ ಇಲ್ಲ. ಅವರಿಗೆ ದುಡ್ಡಿನ ಸಂಬಳ ಕೊಡುತ್ತಾರೆ. ಹೊರಗಿನ ರೇಷನ್ ಅಂಗಡಿಯಿಂದ ಅವರು ಧಾನ್ಯಕೊಳ್ಳಬೇಕಾಗು ತ್ತದೆ. ಫಾರಂಗಳಲ್ಲಿ ಬೆಳೆವ ಗೋಧಿ ಬಹಳ ಉತ್ತಮಜಾತಿಯದು. ಅದಕ್ಕೆ ಹೆಚ್ಚು ಧಾರಣೆ ಸಿಗುತ್ತದೆ ಈ ಕೂಲಿಗಾರರು ಮಾತ್ರ ಪಡಿತರದ ಅಂಗಡಿಯಲ್ಲಿ ಸಿಕ್ಕಂಥ ಕಾಳಿನಿಂದ, ಸಿಕ್ಕಷ್ಟರಿಂದ ತೃಪ್ತ ರಾಗಬೇಕು. ನೇಗಿಲು ಹೊತ್ತು ದುಡಿವ ಎತ್ತಿಗೆ ಬೆಳೆಯ ಮೇಲೆ ಎಷ್ಟು ಅಧಿಕಾರವೋ ಇವರಿಗೂ ಅಷ್ಟೇ ಅಧಿಕಾರ. ಈ ಅಸಹ್ಯ, ಅಸಹಾಯ ಪರಿಸ್ಥಿತಿಗೆ ಭೂದಾನವೊಂದೇ ಪರಿಹಾರ.

**ಅಂಧಾನುಕರಣದ ಫಲ** —ಸಾಮಾಜಿಕ ಸಮಸ್ಯೆಗಳೂ ಇಲ್ಲಿ ಕಡಮೆಯಿಲ್ಲ. ತೆಲಂಗಾಣದಲ್ಲಿ ಗಂಡಸರ ಜತೆಗೆ ಹೆಂಗಸರೂ ಬರುತ್ತಿದ್ದರು. ಇಲ್ಲಿ ಅನೇಕ ಕಡೆ ಸಭೆಗಳಲ್ಲಿ ಹೆಂಗಸರ ಸುಳಿವೇ ಇಲ್ಲ. ಇದ್ದರೂ ಬಹಳ ಕಡಮೆ ಬಂದರೂ ವಿನೋಬಾಜೀಯಂಥ ಸಾಧು, ಶರಣರದರ್ಶನ ಮಾಡಬೇಕು, ಅವರ ವಚನಾಮೃತ ಕೇಳ ಬೇಕು ಎಂಬ ಆಸೆ. ಉಳಿದ ಸಭೆಗಳಲ್ಲಿ ಹೆಂಗಸರ ಸೊಲ್ಲೇ ಇಲ್ಲ. ೨೦ ವರ್ಷದ ಕೆಳಗೆ ಪಿವಾರೀ ಹಳ್ಳಿಯಲ್ಲಿ ಗಾಂಧೀಜೀ ಬಂದಾಗ ಹೆಂಗಸರು ಸಭೆಗೆ ಬಂದಿದ್ದರು. ಬಂದರೂ ಪರದೆಯ ಹಿಂದೆ

ಕೂತಿದ್ದರು. ಈಗಲೂ ಹಾಗೇ. ವಿನೋಬಾಜೀ ಪರದೆಯನ್ನು ತೆಗೆಸಿದರು ಹಳ್ಳಿಯ ಮುಖಂಡರು ಇನ್ನು ಮುಂದೆ ಪರದಾ ಪದ್ಧತಿ ಬಿಡುತ್ತೇವೆಂದು ಭರವಸೆ ಕೊಟ್ಟರು. ಇನ್ನೊಂದು ಕಡೆ ಹೆಂಗಸರು ಸಭೆಗೆ ಬರಲು ಬಯಸಿದರು. ಆದರ ಮನೆಯವರ ಅಂಜಿಕೆಗೆ ಬೆದರಿದರು. ಅವರ ಮನೆಯ ಅಂಗಳದಲ್ಲೇ ಸಭೆ ಹೆಂಗಸರ ಈಸಂಕಟ ಶ್ರೀ ಮಹಾದೇವಿ ತಾಯಿಗೆ ಸಹಿಸಲಿಲ್ಲ. ವಿನೋಬಾಜೀಯ ಬಳಿ ದೂರುಹೋಯಿತು. ಪರಿಣಾಮವಾಗಿ ಹೆಂಗಸರು ಸಭೆಗೆ ಬಂದರು. ಪ್ರಾರಂಭದಲ್ಲಿಯೆ ವಿನೋಬಾಜೀ ವಿಚಾರಿಯ ಮಾತು ಎತ್ತಿ, 'ಅಲ್ಲಿನ ಹೆಂಗಸರಿಗೆ ತಮಗೆ ಓಟಿನ ಹಕ್ಕು ಬಂದಿದೆ ಎಂಬುದು ಸಹಾ ತಿಳಿದಿರಲಿಲ್ಲ. ಅವರು ಓಟು ಕೊಡಲು ಹೋಗಲಿಲ್ಲ ಈ ಸಲ ದಿಲ್ಲಿಯಲ್ಲಿ ಮುಸ್ಲಿಂ ಹೆಂಗಸರು, ಮಹಾರಾಷ್ಟ್ರದಲ್ಲಿ ಹರಿಜನ ಹೆಂಗಸರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮತಕೊಟ್ಟರು. ಹೆಂಗಸರಿಗೆ ಮತಾಧಿಕಾರ ಕೊಟ್ಟಿರುವಾಗ ಈ ಸಭೆಯಲ್ಲಿ ಒಬ್ಬ ಹೆಂಗಸೂ ಇಲ್ಲದಿರುವುದು ಆಶ್ಚರ್ಯಕರ. ಹಿಂದುಗಳಾದ ತಾವು ಅನೇಕವೇಳೆ ಶಾಸ್ತ್ರಾಧಾರದ ಮಾತು ಆಡುತ್ತೀರಿ ಶಾಸ್ತ್ರಗಳಲ್ಲಿ ಹೆಂಗಸನ್ನು ಬಿಟ್ಟು ಯಾವ ಶುಭ ಕಾರ್ಯವೂ ಇಲ್ಲ ಶ್ರೀರಾಮಚಂದ್ರ ಯಜ್ಞ ಮಾಡಬೇಕಿತ್ತು. ಗೃಹಸ್ಥನಿಗೆ ಹೆಂಡತಿ ಜೊತೆಗಿಲ್ಲದೆ ಯಜ್ಞಮಾಡಲು ಸಾಧ್ಯವಿಲ್ಲ. ಕಡೆಗೆ ಸೀತೆಯದೊಂದು ಮಣ್ಣಿನ ಗೊಂಬೆ ಮಾಡಿ ರಾಮಚಂದ್ರನ ಪಕ್ಕದಲ್ಲಿ ಕೂಡಿಸಿದರು. ನಾವು ಸೀತಾರಾಮ–ರಾಧೇಶ್ಯಾಮ ಎಂದು ಪಟಗುಟ್ಟುತ್ತೇವೆ ಹೆಂಗಸರನ್ನು ಜೈಲಿನಲ್ಲಿಡುತ್ತೇವೆ. ಇದರಿಂದ ದೇಶ ದುರ್ಬಲವಾಯಿತು ದಕ್ಷಿಣದಲ್ಲಿ ಕಮ್ಯೂನಿಸ್ಟರ ಕರೆ ಹೆಂಗಸರ ಕಿವಿಯ ವರೆಗೆ ಮುಟ್ಟಿ ಅಲ್ಲಿ ಹೆಂಗಸರು ಗಂಡಸರಿಗೆ ಸಮನಾಗಿ ಮತಕೊಟ್ಟಿದಾರೆ. ಆ ಹೆಂಗಸರೆಲ್ಲರೂ ಹಿಂದೂಗಳಲ್ಲವೇ? ಈ ಮುಸ್ಲಿಂ ಪದ್ಧತಿಯಾದ ಪರದೆ ಹಾಕುವ ಜನರನ್ನು ನೀವು ಹಿಂದು

ಗಳೋ ಮುಸಲ್ಮಾನರೋ ಎನ್ನುತ್ತೇನೆ ಇತರರ ಒಳ್ಳೆಯ ಪದ್ಧತಿ ಹಿಡಿಯಬೇಕು ಅವನ್ನು ಬಿಟ್ಟು ನಮ್ಮ ಹೆಂಗಸರು ಗುಲಾಮರಾಗಿ ಹೋಗುವಂಥ ನಮ್ಮ ದೇಶದ ಶಕ್ತಿ ಕ್ಷೀಣವಾಗುವಂಥ ಈ ಬಗೆಯ ರೂಢಿ ಹಿಡಿಯಬಾರದು

'ತಾಯಂದಿರು ಅಜ್ಞಾನಿಗಳಾದರೆ ಮಕ್ಕಳ ಗತಿಯೇನು? ಶಾಲೆಗಳಲ್ಲಿ ಕಲಿಸುವುದು ಒಂದಾದರೆ ಮಕ್ಕಳು ತಾಯಿಯಿಂದ ಕಲಿವುದು ಹತ್ತು. ತಾಯಂದಿರು ಮಕ್ಕಳಿಗೆ ರಾಮಾಯಣ ಭಾರತದ ಕಥೆಗಳನ್ನು ಹೇಳುತ್ತಾರೆ ದಾಸರಪದ, ಶರಣರ ವಚನಗಳನ್ನು ಹೇಳುತ್ತಾರೆ ಇದು ಆ ಮಕ್ಕಳ ಜೀವನದ ಆಧಾರ ಅದಕ್ಕಾಗಿಯೇ ವೇದಗಳು ತಾಯನ್ನು ಮೊದಲನೆ ಗುರು ಎಂದದ್ದು ಮೊದಲು ಮಾತೃ ದೇವೋಭವ. ಆಮೇಲೆ ತಂದೆ, ಗುರು

'ಗಂಡಸಿನಲ್ಲಿ ಇದ್ದಂತೆ ಹೆಂಗಸಿನಲ್ಲೂ ದೇವರು ಇದ್ದಾನೆ. ಮರೆಯಲಾಗದು. ಆತ್ಮದಲ್ಲಿ ಏನು ಭೇದ? ನಮ್ಮ ದೇಶದ ಮಹಾ ಮಹಿಳೆಯರ ಮಾತೆಯನ್ನು ನೋಡಿ ಜನಕನ ಆಸ್ಥಾನದಲ್ಲಿ ಯಾಜ್ಞವಲ್ಕ್ಯನನ್ನು ಗಾರ್ಗಿ ಕೇಳಿದ ಪ್ರಶ್ನೆ ನಮ್ಮ ಉಪನಿಷತ್ ವಾಙ್ಮಯದ ಸಾರವೇ ಆಗಿದೆ ಅದನ್ನು ಈಗಲೂ ಚಿಂತನ ಮಾಡುತ್ತಾರೆ. ಆಕೆಯ ಪ್ರಶ್ನೆ ಬಾಣದಂತೆ ಹರಿತ ಎಂದು ಉಪನಿಷತ್ತೇ ಹೇಳಿದೆ ಗಾರ್ಗಿಯ ಈ ನಾಡಿನಲ್ಲಿ ಹೆಂಗಸರನ್ನು ಪರದೆಯಲ್ಲಿಡುತ್ತೇವೆಂಬ? ಏನು ಸಾಹಸ?'

ಕುಡಿತದ ಸಮಸ್ಯೆಯೂ ಇದೆ ತೆಲಂಗಾಣದಷ್ಟು ಇಲ್ಲ. ನಮಗೆ ದೊರೆತ ಕುಡುಕರ ಸಂಖ್ಯೆ ಭಯಾನಕ ಗಂಡಸರೇ ಅಲ್ಲ, ಹೆಂಗಸರೂ ಕುಡಿಯುತ್ತಾರೆ ಹುಕ್ಕಾ ಸೇದುವುದಂತೂ ಬಹಳ ಸಾಧಾರಣ ಒಂದು ಹಳ್ಳಿಯಲ್ಲಿ ಓದುಬರಹ ಬಂದವರ ಮೂರರಷ್ಟು ಮದ್ಯಸಾಯಿಗಳು ಎಂದು ತಿಳಿಯಿತು ಹಾಗಾದರೆ ಜ್ಞಾನಕ್ಕಿಂತ

ನಿಮಗೆ ಮೂರುಪಾಲು ಹೆಚ್ಚು ಪ್ರಿಯವೇ ಮದ್ಯ? ಎಂದು ಕೇಳಿದರು ವಿನೋಬಾಜೀ. ಶಾಸ್ತ್ರಗಳಲ್ಲಿ ಪಂಚಮಹಾಪಾತಕಗಳಲ್ಲಿ ಕುಡಿತ ಒಂದು ಎಂದು ಹೇಳಿದಾರೆ. ಮುಂದೆ ಕುಡಿಯುವುದಿಲ್ಲ ಎಂದು ನನ್ನಿದಿರು ಶಪಥ ಮಾಡಿ ಎಂದರು ವಿನೋಬಾ 'ಗಂಡಸರು ಈ ಶಪಥವನ್ನು ಪಾಲಿಸುವಂತೆ ಹೆಂಗಸರು ಎಚ್ಚರವಾಗಿರಬೇಕು. ನಿಜ ವಾಗಿ ಶ್ರದ್ಧಾಳುವಾದ ಹೆಂಗಸಿಗೆ ಪತಿವ್ರತೆಯೆಂಬ ಬಿರುದಿದೆ. ಗಂಡನ ವ್ರತಗಳನ್ನು ಪಾಲಿಸುವವಳು ಎಂದು. ತಮ್ಮ ಗಂಡಂದಿರು ಶಪಥದಂತೆ ನಡೆಯಲು ನೆರವಾಗಿ ಈ ಬಿರುದನ್ನು ಅವರು ಪಡೆಯಲಿ. ಮೊದಲು ಮನೆಮನೆಯಲ್ಲೂ ತುಳಸೀ ರಾಮಾಯಣವನ್ನು ದಿನವೂ ಹೇಳುತ್ತಿದ್ದರು. ಈಗ ನಿಂತಿದೆ ನಮ್ಮ ಜನತೆಯ ಸಂಸ್ಕೃತಿವರ್ಧನಕ್ಕೆ ಇದು ಅಪಾರ ನಷ್ಟ. ದಿನವೂ ರಾಮಾಯಣವನ್ನು ಹಾಡಿದರೆ ಅದ ರಿಂದ ಶ್ರೀರಾಮನಲ್ಲಿ ಭಕ್ತಿ-ಅಭಿಮಾನ ಹುಟ್ಟಿದರೆ ಕುಡಿತ ಮಾಯ ವಾದೀತು' ರಾಮಾಯಣ ಓದಿ, ಪಠಿಸಿ ಎಂದು ಹಳ್ಳಿಗರನ್ನು ವಿನೋಬಾ ಹುರಿದುಂಬಿಸಿದರು ರಾಮನಾಮ ರಾಕ್ಷಸರನ್ನೆ ಓಡಿಸಿ ದಂಥ ಪವಿತ್ರ ಶಕ್ತಿ. ಕುಡಿತವೂ ಒಂದು ರಾಕ್ಷಸನೇ

## ೧೨. ಉದ್ಯೋಗಪರ್ವ

ವಿನೋಬಾಗೆ ನಡೆಯಲು ಕಷ್ಟವಾಗಿದ್ದರೂ ಗೊತ್ತಾಗಿದ್ದ ಪ್ರಕಾರ ಮಾತ್ರ ನಡಿಗೆ ನಡೆಯಿತು. ಕಾಲುನೋವು ತಗ್ಗಲಿಲ್ಲ. ಕಾಡುಮೃಗಗಳು ತುಂಬಿದ ದಟ್ಟವಾದ ಕಾಡುಗಳಲ್ಲಿ ಹೊಕ್ಕು ಮುಂಬರಿಯ ಬೇಕಾಯಿತು ಕೆಲವು ಕಡೆ. ಒಂದು ಕಡೆ, ಐದು ಹತ್ತು ನಿಮಿಷ ಮೊದಲು ಅಲ್ಲೇ ಹುಲಿ ಹಾದು ಹೋಗಿದ್ದ ಹೆಜ್ಜೆಯ ಗುರುತು ಕಂಡಿತು!

ನಡುನಡುವೆ ಹಿಮಾಲಯದ ಧವಳ ಶಿಖರ ಪಂಗ್ತಿಯ ದರ್ಶನ ವಾಗುತ್ತಿತ್ತು. ಅವರ ನಿಷ್ಕಳಂಕ ಧವಳತೆ, ಅದರ ಅಖಂಡ ಶಾಂತಿ

ಗಳನ್ನು ಅನುಭವಿಸುತ್ತ ಮುಂದೆ ಸಾಗುತ್ತಿದ್ದೆವು. ವಿನೋಬಾಗೆ ಅದನ್ನು ಕಂಡು ಅಭಿಮಾನ. ಏನೋ ಭಾವನಾಮಯತೆ! ತಮ್ಮ ಹರಿಯದಲ್ಲಿ ತಪಸ್ಸು ಮಾಡಲೆಂದು ಇಲ್ಲಿಗೇ ಅಲ್ಲವೇ ಅವರು ಹೊರಟಿದ್ದುದು. ಕಾಶಿಯ ವರೆಗೆ ಬಂದು ಬಿಟ್ಟಿದ್ದರು. ಅಷ್ಟರಲ್ಲಿ ಮಾನವ ಹಿಮಾಲಯವನ್ನು—ಗಾಂಧೀಜೀಯನ್ನು— ನೋಡಲೆಂದು ಸಾಬರ್ಮತಿಗೆ ಹಿಂದಿರುಗಿದರು. ಅದೆಲ್ಲವೂ ನೆನಪಾಗುತ್ತಿತ್ತೋ ಏನೋ!

ಇವೊತ್ತು ಊರಿಂದೂರಿಗೆ ತಿರುಗುತ್ತ, ಬಡವರಿಗೆ ಸಮಾಜ ದಲ್ಲಿ ಸರಿಯಾದ ಸ್ಥಾನಕೊಡಿಸಬೇಕು ಎಂಬ ತಮ್ಮ ಸಂಕಲ್ಪ ಸಾಧನೆ ಗಾಗಿ ದುಡಿಯುತ್ತ, ಅಹಿಂಸೆಯ ವೈಭವವನ್ನು ಬೆಳಗಿ, ಸಂಶಯಾತ್ಮ ಕವಾದರೂ ಆಸೆಗೊಂಡು ನಿಂತ ಈ ಲೋಕವನ್ನು ಬೆರಗಾಗಿಸುತ್ತಿ ದಾರೆ. ಐಶ್ವರ್ಯವನ್ನು ಸಮವಾಗಿ ಹಂಚಿಕೊಳ್ಳಬೇಕಾದ ಅಗತ್ಯ ವನ್ನೂ ಅದರ ನ್ಯಾಯವನ್ನೂ ತಿಳಿಸುತ್ತಲಿದಾರೆ. ಜನರಿಗೆ ಹೊಸ ದಯಾಧರ್ಮದ ದೀಕ್ಷೆಕೊಡುತ್ತಿದಾರೆ. ಹಳೆಯ ಧಾರ್ಮಿಕ ವಿಚಾರ ಗಳಿಗೆ ಹೊಸ ವ್ಯಾಖ್ಯಾನ ಮಾಡಿ ಮತ್ತೆ ಚೇತನಗೊಳಿಸುತ್ತಿದಾರೆ. ಕ್ಷತ್ರಿಯನ ಧರ್ಮದ ಬಗ್ಗೆ ಹೇಳುತ್ತ ಈಗ 'ಹೊಸ ಧರ್ಮವನ್ನು ಹೇಳಬೇ ಕಾಗಿದೆ ಕ್ಷತ್ರಿಯನಿಗೆ. ಕ್ಷತ್ರಿಯನ ಕೆಲಸ ಯುದ್ಧಮಾಡುವುದಲ್ಲ, ಯುದ್ಧವನ್ನು ತಡೆಯುವುದು. ಕೊಲ್ಲುವುದನ್ನಲ್ಲ ನಮ್ಮ ಧರ್ಮ ಕಲಿ ಸಬೇಕಾದುದು; ನಾವು ಸತ್ತು ಮಾನವ ಕೋಟಿ ಬದುಕಲಿ ಎಂಬು ದನ್ನು, ಭೂದಾನಯಜ್ಞ ಧರ್ಮದ ಈ ಅರ್ಥದ ಮೇಲೆ ಬೆಳೆದಿದೆ.'

ಇನ್ನೊಂದು ಕಡೆ ಸನ್ಯಾಸದ ಮಾತು ಹೇಳಿದರು. ನಮ್ಮ ಭಾಷೆಯಲ್ಲಿ ಅದೊಂದು ಉತ್ತಮೋತ್ತಮ ಶಬ್ದ. ಅದಕ್ಕೆ ಸರಿ ಯಾದ ಮಾತು ಇನ್ನಾವ ಭಾಷೆಯಲ್ಲೂ ಇಲ್ಲ. ಮಗ ವಯಸ್ಸಿಗೆ ಬಂದೊಡನೆ ಮನೆವಾಳ್ತೆಯನ್ನೆಲ್ಲ ಮಗನಿಗೆ ಒಪ್ಪಿಸಿ, ತಾನು ಲೋಕ

ಸೇವೆಯಲ್ಲಿ ನಿರತನಾಗಬೇಕು ಎಂಬುದು ಸನ್ಯಾಸದ ಆದರ್ಶ. ಇದು ಕೌಟುಂಬಿಕ ಜೀವನಕ್ಕೆ ಮಾತ್ರವಲ್ಲ, ಸಾಮಾಜಿಕ ಜೀವನಕ್ಕೂ ಅನ್ವಯಿಸುತ್ತದೆ. ಆದರೆ ಕಾಂಗ್ರೆಸ್ಸಿನಲ್ಲೂ ರಚನಾತ್ಮಕ ಸಂಸ್ಥೆಗಳಲ್ಲೂ ಹಳೆಯ ಪೀಳಿಗೆಯವರು ಹೊಸಪೀಳಿಗೆ ಬಂದು ತಮ್ಮನ್ನು ನೂಕುವ ವರೆಗೂ ಗಟ್ಟಿಯಾಗಿ ಕುಳಿತೇ ಬಿಡುತ್ತಾರೆ. ತಾವೇ ಸ್ವಚ್ಛಂದವಾಗಿ ಆ ಸ್ಥಾನಗಳನ್ನು ಬಿಟ್ಟು ಚಿಕ್ಕವರು ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ದಾರಿಮಾಡಬೇಕು ಹಳಬರ ಅನುಭವದ ಲಾಭವಂತೂ ಚಿಕ್ಕವರಿಗೆ ಬೇಕಾದಾಗ ಸಿಗುತ್ತಿರಬೇಕು. ಹಾಗಾದರೆ ದೇಶ ಮುಂಬರಿದೀತು

ನಿಜವಾದ ಬಯಕೆಯಿದ್ದರೆ ಬಾಳಿನಲ್ಲಿ ದೇವರನ್ನು ಕಾಣಬಹುದು ಎಂದರು ವಿನೋಬಾ. 'ನೋಡುವ ಕಣ್ಣು ಇದ್ದರೆ, ಹೇಗೆ ಕಾಣಬೇಕೆಂಬುದು ತಿಳಿದಿದ್ದರೆ ಶ್ರೀ ಕೃಷ್ಣ ಪರಮಾತ್ಮ ಸದಾ ಕಾದುನಿಂತಿದಾನೆ ಆ ಕಣ್ಣು ಪಡೆಯದವರಿಗೆ, ಅದನ್ನು ಪಡೆದುಕೊಳ್ಳದವರಿಗೆ ಶ್ರೀ ಕೃಷ್ಣ ಮೈ ತಳೆದುಬಂದರೂ ಗೊತ್ತಾಗುವುದಿಲ್ಲ. ಶಿಶುಪಾಲ, ಜರಾಸಂಧರಿಗೆ ತಿಳಿಯಿತೆ? ಈಶ್ವರ ನಮ್ಮ ಹೃದಯದಲ್ಲೇ ಕುಳಿತಿದಾನೆ. ನಾವು ಗುರುತಿಸಿಯೇವೆ ಎಂದು ಕಾದಿದಾನೆ. ತನ್ನ ಹಳ್ಳಿ ಗೋಕುಲದಲ್ಲಿ ಪರಸ್ಪರ ಪ್ರೇಮ, ಸಹಕಾರ, ಏಕಹೃದಯಗಳನ್ನು ಕೃಷ್ಣ ಸ್ಥಾಪಿಸಿದ ನಾವು ಅದನ್ನು ಮಾಡೋಣ. ಆಗ ಶ್ರೀಕೃಷ್ಣ ನಮ್ಮ ಜೊತೆಗೆ ಕುಣಿಯುತ್ತಿರುವುದು ಕಾಣಬಂದೀತು. ಹೊಲವಿಲ್ಲದವರಿಗೆ ಹೊಲ ಕೊಟ್ಟು ಪ್ರೀತಿಯನ್ನು ಮೊಳೆಯಿಸೋಣ. ಆಗ ನಮ್ಮ ನಡುವೆ ಅವನಿರುವುದನ್ನು ಅರಿತೇವು.'

ಯುದ್ಧ ಪರ್ವ (ಭಾರತದ್ದು) ಮುಗಿಯಿತು, ಈಗ ಉದ್ಯೋಗ ಪರ್ವ (ನಿರ್ಮಾಣ) ಪ್ರಾರಂಭವಾಗಿದೆ ಎಂದರು. 'ಋಷಿಗಳು ಹೇಳಿಲ್ಲವೇ–ಪೂರ್ಣಮಿದಂ, ಪೂರ್ಣಮದಂ. ಹಾಗೇ ನಾವೂ

ಈ ಹಳ್ಳಿ ಪರಿಪೂರ್ಣ, ಆ ಹಳ್ಳಿಯೂ ಪರಿಪೂರ್ಣ ಎಂದು ಹೇಳು ವಂತಿರಬೇಕು.' ಸ್ವಯಂಪೂರ್ಣ ಗ್ರಾಮ ಮಂಡಲಗಳನ್ನು ನಿರ್ಮಿಸುವ ಮಾತು ಆಡಿದರು. ವಿನೋಬಾ ಹೇಳಿದರು–ಜೀವನದ ಕಲೆ ನಮ್ಮ ನೆರೆಹೊರೆಯವರ ದುಃಖವನ್ನು ಹಂಚಿಕೊಂಡು ಅವರಿಗೆ ಆನಂದ ವನ್ನು ಕೊಡುವುದು. ಆನಂದಮಯ ಜೀವನಕ್ಕೆ ಅದೇ ಮೂಲಾಧಾರ.

ಹೀಗೇ ಸಾಗುತ್ತಿದೆ ಯಾತ್ರೆ. ಜನರು ಹೊಲ ನೀಡುತ್ತಾರೆ. ವಿನೋಬಾ ತಮ್ಮ ಅಪಾರ ಜ್ಞಾನದಲ್ಲಿ ಸ್ವಲ್ಪವನ್ನು ಜನರಿಗೆ ನೀಡು ತ್ತಾರೆ ಈ ಯಾತ್ರೆಯಲ್ಲಿ ಒಳ್ಳೆಯ ಸಾಹಿತ್ಯ, ಸರ್ವ–ವಾಙ್ಮಯದ ಪ್ರಸಾರದ ಬಗ್ಗೆ ಸದಾ ಹೇಳುತ್ತಿದ್ದಾರೆ ' ಅಭ್ಯಾಸ, ಅಧ್ಯಯನಗಳು ಬರೀ ವಿದ್ಯಾರ್ಥಿಗಳ, ಸನ್ಯಾಸಿಗಳ ಕೆಲಸ, ಸಾಮಾನ್ಯ ಜನರದಲ್ಲ ಎಂಬ ಅಭಿಪ್ರಾಯ ಬೆಳೆದಿದೆ ಇದು ತಪ್ಪು. ಅಧ್ಯಯನ--ಅಭ್ಯಾಸ-- ಧ್ಯಾನ—ಪೂಜೆಗಳ ಗಂಧವಿಲ್ಲದ ಮನೆ ಬಂಜೆಯಂತೆ ವ್ಯರ್ಥ-' ತಮ್ಮ ಗ್ರಂಥಗಳನ್ನು ಓದಲು ಸಲಹೆಕೊಡುತ್ತಾರೆ ಅವು ಸದಾ ಸಜ್ಜನ ಸಂಗದ ಸುಖವನ್ನು ಕೊಡುತ್ತವೆ. ' ನೀರಿಲ್ಲದಿದ್ದರೆ ಗಿಡ ಒಣಗುತ್ತದೆ. ಕರ್ಮವೂ ಅಷ್ಟೇ. ಜಿಜ್ಞಾಸೆ--ಧ್ಯಾನಗಳ ಪೋಷಣೆ ಯಿಲ್ಲದಿದ್ದರೆ ಎಲ್ಲ ಕೆಲಸವೂ ನಿರ್ವೀರ್ಯ, ನೀರಸ ಆಗುತ್ತದ ' ಅವರು ಹೆಚ್ಚಾಗಿ ಸೂಚಿಸುವ ಗ್ರಂಥ '**ಗೀತಾ ಪ್ರವಚನ**.' ' ಗೀತಾ ಪ್ರವಚನ ನನ್ನ ಜೀವನದ ಸಾರ. ಪ್ರತಿಯೊಬ್ಬರೂ ಅದನ್ನು ಓದ ಬೇಕು.' ಈ ಯಾತ್ರೆಯಲ್ಲಿ ೧೦ ಸಾವಿರ ಪ್ರತಿ ಹೋಗಿವೆ. ಸರ್ವೋ ದಯಕ್ಕೆ ಹೊಸ ಚಂದಾದಾರರಾಗಿದ್ದಾರೆ. ಸರ್ವೋದಯ ಸಾಹಿತ್ಯದ ಪ್ರಚಾರವೂ ಒಂದು ಮುಖ್ಯಕಾರ್ಯ ಯಾತ್ರೆಯಲ್ಲಿ.

ಮೀರತ್ತಿನಿಂದ ಸೀತಾಪುರಕ್ಕೆ ಹೋಗುವಾಗ ದಾರಿಯಲ್ಲಿ ಎಷ್ಟೋ ಸಂಸ್ಕೃತಿ ಕೇಂದ್ರಗಳನ್ನು ಐತಿಹಾಸಿಕ ಸ್ಥಳಗಳನ್ನು ಭೇಟಿ ಮಾಡಿದೆವು. ಈಗಿನ ಭೂದಾನ ಯಜ್ಞದೊಂದಿಗೆ ಮೀರತ್ ಗಾಂಧೀ

ಆಶ್ರಮ, ಹಳದವಾನಿ ಆಶ್ರಮ, ದೇವಬಂದ್‌ನ ಅಂತರರಾಷ್ಟ್ರೀಯ ಮುಸ್ಲಿಂ ಸಂಸ್ಕೃತಿ ಕೇಂದ್ರಗಳು ಸಹಕರಿಸುತ್ತಿವೆ. ಈ ಸಂಸ್ಥೆಗಳೊಂದಿಗೆ ನಮಗೆ ಬಾಂಧವ್ಯ ನಿಕಟವಾಗಿದೆ. ಕಾಲಸೀ ಅಶೋಕಾಶ್ರಮದ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕು. ಧರ್ಮದೇವಶಾಸ್ತ್ರಿಗಳೂ ಅವರ ಹೆಂಡತಿಯೂ ಅಲ್ಲಿನ ಆದಿವಾಸಿಗಳಿಗೆ ಮಾಡುತ್ತಿರುವ ಸೇವೆ ಸತ್ಯವಾದುದು. ಜನರು ಕುಡಿತವನ್ನು ಬಿಡುವಂತೆ ಬಹಳ ಪ್ರಯತ್ನ ಮಾಡಿದಾರೆ.

ಹೃಶಿಕೇಷದಲ್ಲಿ ನಡೆದ ಒಂದು ಸಂಗತಿ ಇಲ್ಲಿ ಹೇಳಬೇಕಾದದ್ದೇ ಗಂಗಾನದೀ ತೀರದಲ್ಲಿ, ಆ ದಿನ ವಿನೋಬಾಜೀ ಬ್ರಹ್ಮವಿದ್ಯೆಯ ಬಗ್ಗೆ ಬಹಳ ಗಹನವಾದ ಭಾಷಣ ಮಾಡಿದರು. ಕೇಳುವವರು ಸಮ್ಮೋಹನ ಮಂತ್ರಕ್ಕೆ ಒಳಗಾದಂತಿತ್ತು. ನಾವು ಭಕ್ತಿಯಿಂದ ಕೇಳುತ್ತಿದ್ದೆವು. ಆ ದಿನ ಸಂಜೆಗೆ ಕಾಲೀ ಕಂಬಾಳಿವಾಲೆ ಸ್ವಾಮಿಗಳ ಆಶ್ರಮದ ತಪಸ್ವಿಗಳು ವಿನೋಬಾ ದರ್ಶನಕ್ಕೆ ಬಂದರು' ಮಾರನೆಯ ದಿನ ಬೆಳಗ್ಗೆ ನಾವು ಮುಂದೆ ನಾಗಿದಾಗ ದಾರಿಯಲ್ಲಿ ಅವರ ಧರ್ಮಶಾಲೆಯ ಬಳಿ ಸ್ವಲ್ಪ ನಿಂತೆವು ಬಹಳ ಪ್ರೀತಿಯಿಂದ ಸ್ವಾಗತಿಸಿ ಆ ಸಾಧುಗಳು ಅತ್ಯಂತ ಅಭಿಮಾನದಿಂದ ವಿನೋಬಾಜೀಗೆ ಒಂದು ರುದ್ರಾಕ್ಷ ಸರವನ್ನೂ ಒಂದು ಗಂಗಾಜಲ ಸ್ಥಾಲಿಯನ್ನೂ ಅರ್ಪಿಸಿದರು.

## ೧೨ ದಿಲ್ಲಿ—ರಾಜಘಾಟ್

ಎಂಟೂವರೆ ಗಂಟೆಗೆ ಸರಿಯಾಗಿ ರಾಜಘಾಟಿನ ಸಮಾಧಿಗೆ ತಲಪಿದೆವು. ಆ ಸಮಯದ ದೃಶ್ಯವನ್ನು ವರ್ಣಿಸಲು ಬಹಳ ಸಾಮರ್ಥ್ಯ ಬೇಕು. ವಿನೋಬಾಜೀಯ ಕಣ್ಣಿಂದ ನೀರು ಧಾರೆಯಾಗಿ ಹೊರಸೂಸಿತು. ಅವರು ಹೊದ್ದಿದ್ದ ದುಪ್ಪಟಿಯನ್ನು ಒದ್ದೆಮಾಡಿ ಕಣ್ಣಹನಿ ಸಮಾಧಿಯಮೇಲೂ ಸುರಿದವು. ಇದು ತಾಯಿಮಕ್ಕಳ ಮಿಲನ. ಬಾಪು ಸ್ವಯಂ ಹೇಳಿದಂತೆ ಗೋರಖನಾಥ—ಮತ್ಸೇಂದ್ರರ ಮಿಲನ. ಲೋಕದ ಎಲ್ಲಾ ಸುಪ್ತ ಭಾವನೆಗಳೂ ಆ ಕಣ್ಣೀರಿನಲ್ಲಿ ಮೂರ್ತಿವೆತ್ತು ಸಗುಣವಾಗಿ ಬಂದಿದ್ದವು ಇಡೀ ಜನತೆ ಸ್ತಬ್ಧವಾಗಿ ನಿಂತಿತ್ತು. ಬಹಳ ಹೊತ್ತಿನ ವರಗೆ ವಿನೋಬಾಜೀಯ ಬಾಯಿಂದ ಮಾತೇ ಹೊರಡಲಿಲ್ಲ. ಕಡೆಗೆ ಮಾತಾಡಿದರು, ನಾಲ್ಕೇಮಾತು! ಆ ಕೆಲವು ಮಾತಿನಲ್ಲಿ ನಿಶ್ಚಲನಿಷ್ಠೆ, ನಿರಪೇಕ್ಷ ನೇತೃತ್ವ ಹೊರಸೂಸುತ್ತಿತ್ತು.

ಹನ್ನೊಂದು ದಿನ ವಿನೋಬಾಜೀ ದಿಲ್ಲಿಯಲ್ಲಿದ್ದರು. ಆಗ ಅವರನ್ನು ನೋಡಲು ರಾಷ್ಟ್ರಪತಿ ಪ್ರಧಾನ ಮಂತ್ರಿ, ದೇಶವಿದೇಶಗಳ ರಾಯಭಾರಿಗಳು, ಪತ್ರಿಕೋದ್ಯೋಗಿಗಳು, ನಾಯಕರು ಎಲ್ಲರೂ ಬಂದಿದ್ದರು ನಿರಾಶ್ರಿತರಿಗಂತೂ ಬಾಪುವೇ ಮತ್ತೆ ಬಂದಂತೆ ಎನಿಸಿತು. ಇದ್ದ ಹನ್ನೊಂದು ದಿನ ಅವರ ಒಂದೊಂದು ದೂರಿನ ಮಾಲೆ ಹೆಣೆದಂತಾಯಿತು ನೂರಾರು ಬಿನ್ನಹ ಬಂದವು. ಹನ್ನೊಂದು ದಿನ ರಾಜಘಾಟಿನಲ್ಲಿ ಒಂದು ಯಾತ್ರೆ ನೆರೆದಂತಿತ್ತು. ಭಕ್ತಜನರ ದರ್ಶನವಾಯಿತು. ಜನತಾ ಜನಾರ್ಧನನ ಚಿರಸ್ಮರಣೀಯ ಸಾಕ್ಷಾತ್ಕಾರವಾಯಿತು.

ವಿನೋಬಾಜೀ ಈ ದಿಲ್ಲಿ ಯಾತ್ರೆಯ ಬಗ್ಗೆ ತಾವೇ ಹೀಗೆ ಬರೆದಿದ್ದಾರೆ: "ಯೋಜನಾ ಸಮಿತಿಯ ವರದಿಯ ಕೆಲವು ಅಂಶಗಳ ಬಗ್ಗೆ ನಾನು ಬಹಳ ಅಸಂತೋಷವನ್ನು ಪ್ರಕಟಿಸಿದೆ. ಅದನ್ನು ಕಂಡು ದಿಲ್ಲಿಗೆ ಬಂದು ಸಮಿತಿಯ ಸದಸ್ಯರ ಮುಂದೆ ನನ್ನ ವಿಚಾರಗಳನ್ನು ಸವಿಸ್ತಾರವಾಗಿ ತಿಳಿಸಬೇಕೆಂದೂ ಅದರಿಂದ ವಿಚಾರ ವಿನಿಮಯಕ್ಕೆ ಅನುಕೂಲವಾದೀತೆಂದೂ ಜವಾಹರಲಾಲರು ಅಪ್ಪಣೆ ಮಾಡಿದರು. ಅದಕ್ಕೆ ವಿಧೇಯನಾಗಿ ನನ್ನ ಹೊಸವರ್ಷದ ಹೊಸದಿನ ಆದ ಸೆಪ್ಟಂಬರ್ ೧೨ರಲ್ಲಿ ದಿಲ್ಲಿಗಾಗಿ ಹೊರಟೆ. ನನ್ನನ್ನು ಬೇಗ ಬರಲು ಹೇಳಿದರು. ಆದರೆ ನಾನು ಬಂದದ್ದು ಎರಡು ತಿಂಗಳಾದ ಮೇಲೇ "ಚರೈವೇತಿ ಚರೈವೇತಿ" ಎಂಬ ಸಂದೇಶಕ್ಕೆ ಅನುಸಾರವಾಗಿ ನಾನು ಪಾದಯಾತ್ರೆ ಹೊರಟೆ. ತೆಲಂಗಾಣದಲ್ಲಿ ಮೊದಲನೆಯ ಅಧ್ಯಾಯ ಮಾತ್ರ ಮುಗಿದಿದ್ದ ಭೂದಾನ ಯಜ್ಞದ ಎರಡನೆಯ ಅಧ್ಯಾಯವನ್ನು ಮೊದಲಿಟ್ಟೆ. ಜನರು ಶ್ರದ್ಧೆ-ಪ್ರೇಮಗಳಿಂದ ಯಥಾಶಕ್ತಿ ಆಹುತಿ ಕೊಟ್ಟರು. ೧೦,೦೦೦ ಎಕರೆ ಹೊಲವಿಲ್ಲದವರಿಗಾಗಿ ಸಿಕ್ಕಿತು. ಇಷ್ಟೇ ಅವಧಿಯಲ್ಲಿ ತೆಲಂಗಾಣದಲ್ಲಿ ೧೮,೦೦೦ ಎಕರೆ ಸಿಕ್ಕಿತ್ತು. ಬಲಿದಾನ ಕೊಟ್ಟ ಬಲಿಯ ಮಹಿಮೆಯೇ ವಾಮನನನ್ನು ವಿರಾಟ್ ಆಗಿ ಮಾಡ ಬಲ್ಲದ್ದು.

'೧೩ ನೆ ನವೆಂಬರಿಗೆ ದಿಲ್ಲಿ ಮುಟ್ಟಿದೆವು. ರಾಜಘಾಟಿನ ಸನ್ನಿಧಿಯಲ್ಲಿ ನನಗಾಗಿ ಬಿಡಾರ ಮಾಡಿದರು. ಅಲ್ಲಿ ನನಗೆ ವಿಶೇಷ ಶಾಂತಿ, ಸ್ಫೂರ್ತಿ ದೊರೆಯಿತು. ಯೋಜನಾ ಸಮಿತಿಯೊಡನೆ ಚರ್ಚೆ ಯಾಯಿತು. ಚರ್ಚೆ ನಿಸ್ಸಂಕೋಚವಾಗಿ ನಡೆಯಿತು. ನಾನು ಬಹಳ ಸ್ಪಷ್ಟವಾಗಿ ನನ್ನ ವಿಚಾರ ತಿಳಿಸಿದೆ. ಗೆಳೆಯರೆಲ್ಲರೂ ಗಮನಕೊಟ್ಟು ಕೇಳಿದರು. ಆ ಚರ್ಚೆಯ ಫಲವಾಗಿ ಯೋಜನೆಯಲ್ಲಿ ಸ್ವಲ್ಪ ಪರಿವರ್ತನೆ ಆಗಬಹುದು ಎಂಬ ಆಸೆ ನನಗಿದೆ. ಮೂರು ದಿನ ಚರ್ಚೆ

ನಡೆಯಿತು. ಆದರೆ ಅದನ್ನು ಅರಗಿಸಲು ೬-೭ ದಿನವಾಯಿತು. ಒಟ್ಟು ೧೧ ದಿನ ಇರಲು ಮೊದಲೇ ತೀರ್ಮಾನಿಸಿದ್ದೆ. ಅಷ್ಟು ದಿನ ಬೇಕೂ ಆಗಿತ್ತು. ನಾನು ದಿಲ್ಲಿ ಸೇರಿದ ದಿನ ನಾನಕನ ಪುಣ್ಯತಿಥಿ. ಮಾರನೆಯ ದಿನ ಯೋಜನಾಸಮಿತಿಯೊಡನೆ ಚರ್ಚೆಗೆ ಕುಳಿತೆವು. ಆ ಹೊತ್ತು ಜವಾಹರಲಾಲರ ಹುಟ್ಟು ಹಬ್ಬ. ಎಷ್ಟೋ ತಿಂಗಳ ತರುವಾಯ ಆ ಹೊತ್ತೇ ಅವರನ್ನು ನಾನು ನೋಡಿದ್ದು. ಬಾಪೂನ ಸಮಾಧಿಯ ಪವಿತ್ರ ಸನ್ನಿಧಿಯಲ್ಲಿ ಇಂಥ ಪುಣ್ಯ ಸಮಾಗಮ ; ಅಲ್ಲಿ ನನ್ನ ಉಪಾಸನೆ-ಎಲ್ಲವೂ ಚಿರಸ್ಮರಣೀಯವಾದವು.

“ ಬೆಳಗಿನ ಪಾರ್ಥನೆ ಸರಿಯಾಗಿ ನಾಲ್ಕು ಗಂಟೆಗೆ ನಡೆಯುತ್ತಿತ್ತು. ಸಾಧಕ ಸಜ್ಜನರ ಸಂಗತಿ ಸಿಗುತ್ತಿತ್ತು. ಅಲ್ಲಿ ತುಲಸೀದಾಸರ ‘ವಿನಯ ಪತ್ರಿಕೆ’ಯ ಅಮೃತ ಮಧುರ ಭಜನೆಗಳ ಚಿಂತನವನ್ನು ನಾನು ಮಾಡಿದೆ. ಆದ್ದರಿಂದ ಇಡೀ ದಿವಸ ಕಾರ್ಯಕ್ರಮದ ಗಜಿಬಿಜಿಯಲ್ಲಿ ವಿಶ್ರಾಂತಿ ಪಡೆಯದಿದ್ದರೂ ವಿಶ್ರಾಂತಿ ದೊರೆಯುತ್ತಿತ್ತು. ಸಂಜೆಗೆ ರಾಜಘಾಟ್ ಪದ್ಧತಿಯಂತೆ ಸಾರ್ವಜನಿಕ ಪ್ರಾರ್ಥನೆ ನಡೆಯುತ್ತಿತ್ತು. ಪ್ರಾರ್ಥನಾನಂತರ ಆಯಾ ದಿನ ಹೊಳೆದ ವಿಚಾರಗಳನ್ನು ಸಂಗ್ರಹವಾಗಿ ತಿಳಿಸಿ ಹೇಳುತ್ತಿದ್ದೆ. ಆದರಿಂದ ಭೂದಾನ ಯಜ್ಞದ ಬಗ್ಗೆಯೂ ಸ್ವಲ್ಪ ಸ್ಪಷ್ಟೀಕರಣವಾಯಿತು.”

ದಿಲ್ಲಿಯ ಅನೇಕ ಸುಖ-ಸವಿ ನೆನಪು ಬುತ್ತಿ ಕಟ್ಟಿಕೊಂಡು ವಿನೋಬಾ ೨೪ರ ಬೆಳಿಗ್ಗೆ ಯಾತ್ರೆ ಹೊರಟರು. ಬಾಪೂನ ಸಮಾಧಿಯ ಬಳಿ ಅವರು ೧೧ ದಿನ ಇದ್ದರು. ವ್ಯಕ್ತಕ್ಕಿಂತಲೂ ಅವ್ಯಕ್ತ ಸಾನಿಧ್ಯ ಹೆಚ್ಚು ಪ್ರಭಾವಶಾಲಿ. ಅವರಿಬ್ಬರ ನಡುವೆ ಎಷ್ಟು ಮಾತುಕತೆಯಾಯಿತೋ ಏನೋ! ರಾಜಘಾಟನ್ನು ತಲಪಿದಾಗ ವಿನೋಬಾಜೀಯ ಕಣ್ಣಿಂದ ಗಂಗೆ-ಯಮುನೆಯರು ಹರಿದುದನ್ನು ಎಲ್ಲರೂ ಕಂಡರು. ಈ ದಿನ ಮುಂಜಾನೆಯ ಬೀಳ್ಕೊಡಿಗೆ ಎಲ್ಲರನ್ನೂ ಅಂತರ್ಮುಖರಾಗಿ

ಮಾಡಿತು. ಒಂದು ಮಹಾ ಸಂಕಲ್ಪ ವಿನೋಬಾಜೀಯನ್ನು ರಾಜ ಘಾಟಿನಿಂದ ದೂರ ಒಯ್ಯುತ್ತಿತ್ತು. ಮತ್ತೆ ಯಾವಾಗಲೋ ಏನೋ ಹಿಂದಿರುಗುವುದು !

ದಿಲ್ಲಿಯ ೧೧ ದಿನದ ಸತ್ಸಂಗ ಅನೇಕ ದೃಷ್ಟಿಗಳಿಂದ ಮಹತ್ವ ಪೂರ್ಣವಾಗಿತ್ತು. ಬಾಪೂವೇ ಮತ್ತೆ ತಮ್ಮ ನಡುವೆ ಬಂದಂತೆ ಜನರಿಗೆ ಅನಿಸಿತು. ಎಷ್ಟೇ ಕೆಲಸ ಇದ್ದರೂ ವಿನೋಬಾಜೀಯ ಭೂದಾನದ ಚಿಂತನ ನಡದೇ ಇತ್ತು. ಪಂಡಿತ ಸಿತಾರಾಮ ಶರಣರ ಪತ್ರಕ್ಕೆ ಉತ್ತರ ಬರೆಯುತ್ತ ವಿನೋಬಾಜೀ–'ಭೂದಾನ ಯಜ್ಞದಿಂದ ನನಗೆ ಸಿಗುವ ಮಹತ್ತರ ಸ್ಫೂರ್ತಿ ನನಗೆ ನಿತ್ಯ ನವೋನವ ರಸವನ್ನು ಊಡಿಸುತ್ತಿದೆ ಯಾರಾದರೂ ಪ್ರತಿಭಾವಂತ ಕವಿ ಹೊಸದೊಂದು ಮೇಘದೂತವನ್ನೇ ಇದರಿಂದ ರಚಿಸಬಹುದು' ಎಂದು ಬರೆದರು.

ಇದೇ ಪತ್ರದಲ್ಲಿ ಈಶಾವಾಸ್ಯದ ಹಿಂದೀ ಅನುವಾದದ ಬಗ್ಗೆ 'ನನಗೆ ಇದು ಬಹಳ ಒಪ್ಪಿಗೆಯಾಗಿದೆ ನಾನು ಇದನ್ನು ಹರಡುತ್ತೇನೆ' ಎಂದು ಬರೆದರು ದಿಲ್ಲಿಯ ಜನಕ್ಕೆ, ಅದರಲ್ಲೂ ಹಿಂದೀ ಜನಕ್ಕೆ ಈ 'ಈಶಾವಾಸ್ಯ' ಒಂದು ಅಮೌಲ್ಯ ದಾನ. ಈಗ ಬೆಳಗಿನ ಪ್ರಾರ್ಥನೆಯಲ್ಲಿ ಇದನ್ನೇ ಹೇಳುತ್ತಾರೆ. ಜನಕ್ಕೆ ಇದು ಹಿಡಿಸುತ್ತಿದೆ. ಇದನ್ನೇ ಹೇಳಿ ವಿನೋಬಾಜೀ ಮುಂಜಾನೆ ೪–೧೫ಕ್ಕೆ ಹೊರಟರು. ದಿಲ್ಲಿಯ ಗೆಳೆಯರು ಅನೇಕರು ೩–೪ ಮೈಲಿ ಜೆತೆಗೆ ನಡೆದು ಬಂದರು. ಹಲವರು ಸಾಹಿತ್ಯ ಸೇವಕರೂ ಬಂದರು. ಇವರೆಲ್ಲ ಭೂದಾನ ಯಜ್ಞದಲ್ಲಿ ತನ್ಮಯರಾಗಿದ್ದರು. ಇವತ್ತು ೧೫ ಮೈಲಿ ನಡೆಯಬೇಕಾಯಿತು. ಬಿಡದಿ ಸಿರೋಲಿಯಲ್ಲಿ ೩-೪ ಮೈಲಿ ಒಳ್ಳೆಯ ದಾರಿ. ಮುಂದೆ ಕಚ್ಚಾದಾರಿ. ಕಾಲುವೆಯ ದಂಡೆ, ಚಳಿಗಾಲ, ಕೊರೆಯುವ ಚಳಿ. ೬-೩೦ ಗಂಟೆ ಆಗಿರಬೇಕು ಎಂದರು ವಿನೋಬಾಜೀ ಸಹಜವಾಗಿ. ಕಾಲುವೆಯ ದಂಡೆಯ ಮೇಲೆ ಕುಳಿತು

ಉಪಾಹಾರ ಮಾಡಿದೆವು. ದಿಲ್ಲಿಯಿಂದ ನಮ್ಮ ಜತೆಗೆ ಒಬ್ಬ ಅಮೇರಿಕನ್ ಪತ್ರಿಕೋದ್ಯೋಗಿ ಬಂದಿದ್ದ. ಆತ ಬಹಳ ಹಿಗ್ಗಿನಲ್ಲಿದ್ದ. ಕಾಲು ಗಂಟೆ ಬಿಟ್ಟು ಮತ್ತೆ ಮುಂಬರಿದೆವು.

ಇಷ್ಟರಲ್ಲಿ ಮಳೆ ಹನಿಯತೊಡಗಿತು ಮಳೆಗಾಗಿ ಕಾದಿದ್ದ ಜನ ಹಿಗ್ಗಿದರು. ದಾರಿಯಲ್ಲಿ ಎರಡು ಕಡೆ ಹಳ್ಳಿಯ ಜನ ನಮ್ಮನ್ನು ನಿಲ್ಲಿಸಿ ಪ್ರೀತಿಯ ಮಾತು ಆಡಿ ಕಳಿಸಿದರು. ಬಿಡದಿಗೆ ತಲಪಿದ ಮೇಲೆ ವಿನೋಬಾಗೆ ಜ್ವರ ಬಂದಿದೆಯೆಂದು ತಿಳಿಯಿತು. ಬೆಳಗಿನಿಂದಲೇ ಜ್ವರವಿತ್ತು. ಉಪಹಾರದಲ್ಲಿ ಅವರು ಬಹಳ ಸ್ವಲ್ಪ ಮೊಸರು ತೆಗೆದುಕೊಂಡರು. ಅದರ ಕಾರಣ ಈಗ ತಿಳಿಯಿತು. ಮೊದಲೇ ಗೊತ್ತಾಗಿದ್ದರೆ ದಿಲ್ಲಿಯಲ್ಲೇ ಉಳಿದುಬಿಡುವ ಪ್ರಯತ್ನ ನಡೆಯುತ್ತಿತ್ತು. ವಿನೋಬಾಜೀ ಹಾಗೆ ನಿಲ್ಲುತ್ತಿದ್ದರೋ ಇಲ್ಲವೋ ತೆಲಂಗಾಣದ ಅನುಭವ ಸಂದೇಹ ಹೇಳುತ್ತಿತ್ತು.

ದಿಲ್ಲಿಯಲ್ಲಿ ನಿನ್ನೆ ಕಮ್ಯುನಿಸ್ಟ್ ನಾಯಕರಾದ ಶ್ರೀ ಘೋಷ್, ಡಾ|| ಜಯಸೂರ್ಯ ಬಂದಿದ್ದರು. ನಿನ್ನೆ ಮಾತು ಮುಗಿಯಲಿಲ್ಲ. ಆದ್ದರಿಂದ ಇವತ್ತೂ ಬಂದಿದ್ದರು, ಸ್ವಸ್ಥವಿಲ್ಲದಿದ್ದರೂ ಅವರಿಗೆ ಬಹಳ ಹೊತ್ತು ಕೊಟ್ಟರು ವಿನೋಬಾ. ೨ ಗಂಟೆಗಿಂತ ಹೆಚ್ಚು ಮಾತುಕತೆಯಾಯಿತು. ತೆಲಂಗಾಣದ ಯಾತ್ರೆಯಲ್ಲಿ ಸಾರ್ವಜನಿಕವಾಗಿ, ಖಾಸಗಿಯಾಗಿ, ಜೈಲಿನ ಭೇಟಿಗಳಲ್ಲಿ ವಿನೋಬಾ ಸ್ಪಷ್ಟಗೊಳಿಸಿದ್ದರು— ಕಮ್ಯೂನಿಸ್ಟರು ಹಿಂಸೆಯ ಚಳುವಳಿ ಬಿಟ್ಟು ಸರಕಾರಕ್ಕೆ ಶಸ್ತ್ರಗಳನ್ನೊಪ್ಪಿಸಿದರೆ ಕಮ್ಯೂನಿಸ್ಟರು ತಮ್ಮ ಜತೆಗೆ ಸೇರಿ ಕೆಲಸಮಾಡಬಹುದು ಎಂದು. ಅವರು ಈ ಮಾತಿಗೆ ಒಪ್ಪಿದರೆ ಹೈದರಾಬಾದಿನಲ್ಲಿ ಅವರ ಸಮಸ್ಯೆ ಎಂದೋ ಮುಗಿದುಹೋಗುತ್ತಿತ್ತು

ದಿನವೂ ೩-೩೦ ಗಂಟೆಗೆ ಸೂತ್ರಯಜ್ಞವಾಗುತ್ತದೆ. ಬೆಳಗಿನಿಂದಲೂ ಸಣ್ಣಗೆ ಹನಿಯುತ್ತಿತ್ತು. ೩ ಗಂಟೆಗೆ ಮಳೆ ಬಲವಾ

ಯಿತು. ಜನರ ಗುಂಪು ನಾವು ತಂಗಿದ್ದ ಬಂಗಲೆಯೊಳಕ್ಕೆ ನುಗ್ಗಿತು. ನೂಲುವುದು ಬಹಳ ಕಷ್ಟವಾಯಿತು. ಸಭೆ ನಡಸುವುದು ಅಸಾಧ್ಯವಾಯಿತು. ಆದರೂ ಜನರು ಪ್ರಸನ್ನರಾಗಿಯೇ ಇದ್ದರು. ತಮ್ಮ ಊರಿಗೆ ಋಷಿವರ್ಯ ಬಂದ, ದೇವರೂ ಕಣ್ತೆರದ. ೫ ತಿಂಗಳಿಂದ ಮಳೆಯ ಹನಿಗಾಗಿ ಜನ ಕಾದಿದ್ದರು. ಇಂದು ಎರಡು ಬಗೆಯ ಲಾಭ–ಶರಣ ದರ್ಶನ, ಜೀವನ ಲಾಭ. ಜನರು ವಿನೋಬಾಜಿಗೆ ಬಹಳ ಕೃತಜ್ಞರಾದರು. ಸೂತ್ರಯಜ್ಞ ಮುಗಿದಮೇಲೆ ಸ್ವಲ್ಪ ಹೊತ್ತು ಮಳೆ ನಿಂತಿತು. ಅಲ್ಲೆಲ್ಲಾ ಬಯಲಿನಲ್ಲಿ ಕೆಸರಾಗಿದ್ದರೂ ಜನರು ಬಂದು ಸೇರಿದರು. ವಿನೋಬಾಜಿಯ ಪ್ರವಚನವಾಯಿತು. 'ಮಳೆಯ ಹನಿಯಾಗಿ ದೇವರ ಕರುಣೆ ಸುರಿಯುತ್ತಿದೆ. ನೀನು ಮಾಡುವ ಕೆಲಸ ಸರಿಯೆಂದು ದೇವರು ಹೇಳುತ್ತಿದಾನೆ. ದಿನೇ ದಿನೇ ನಿನ್ನ ಕೆಲಸ ಬೆಳೆಯುತ್ತದೆ, ಬೆಳೆಯುತ್ತಾ ಹೋದೀತು, ಎನ್ನುತ್ತಿದಾನೆ.' ಮಳೆಯ ದೃಷ್ಟಾಂತವನ್ನೇ ಮುಂಬರಿಸಿ ಮತ್ತೆ ಹೇಳಿದರು. ; 'ದೇವರು ಬಡವರ ಹೊಲದಮೇಲೆ ಮಳೆ ಕರೆಯಬಾರದು, ಭಾಗ್ಯವಂತರ ಹೊಲದ ಮೇಲೆ ಸುರಿಸಬೇಕು ಎಂದು ಯೋಚಿಸಿಲ್ಲ. ಎಲ್ಲರಿಗೂ ಸಮಾನವಾಗಿಕೊಡುತ್ತಾನೆ. ಹೊಲವೂ ಅವನು ಕೊಟ್ಟದ್ದೇ. ನಮ್ಮದೇನು ಶಕ್ತಿ ? ಒಂದು ಗೇಣು ನೆಲವನ್ನಾದರೂ ನಾವು ಸೃಷ್ಟಿಸಬಲ್ಲವೇ ? '

ತಮ್ಮ ಉದ್ದೇಶ್ಯದ ಬಗ್ಗೆ-'ನಾನು ತಿಳಿಸಿ ಹೇಳುತ್ತಿರುವ ಸರ್ವ ವಿಚಾರವೂ ಪ್ರೇಮಕ್ಕಾಗಿ – ಲೋಕದಲ್ಲಿ ಪ್ರೇಮ ಬೆಳೆಯಲೆಂದು. ಪಶುಜೀವನ ಮನುಷ್ಯಜೀವನಗಳಲ್ಲಿ ಭೇದವಿದೆ. ಇದು ಎಲ್ಲರಿಗೂ ತಿಳಿದಿದೆ. ಹಸಿದವನ ಮುಂದೆ ತನ್ನ ಪಾಲಿನ ಅನ್ನವನ್ನು ಬಡಿಸಬಲ್ಲ ಸುಖ ಮನುಷ್ಯನಿಗೆ ಮಾತ್ರವೇ ಗೊತ್ತು. ಪಶುವಿಗೆ ಇದರ ಕಲ್ಪನೆಯೇ ಬಾರದು. ಎಲ್ಲ ಮಾನವರಲ್ಲೂ ಈ ಭಾವನೆಯನ್ನು ಎಚ್ಚರ

ಗೊಳಿಸುವುದು ನನ್ನ ಕೆಲಸ. ಯಾರೂ ಹಸಿವಿನಿಂದ ಬಳಲದಂಥ ದಿನ ಬರಲಿ ಎಂಬುದು ನನ್ನ ಆಶೆ. ತೇವರಿಗೆ ಯಾವುದಾದರೂ ರೂಪ ಇದ್ದರೆ ಅದು ಪ್ರೇಮ. ಇಲ್ಲಿ ಹೊಲ ಕಡಿಮೆ ಇದೆ—ನಾನು ಬಲ್ಲೆ. ಸರಾಸರಿ ತಲೆಗೆ ಒಂದು ಗುಂಟೆ ಕೂಡ ಇಲ್ಲ. ಆದರೆ ಇವೊತ್ತು ನೀಡುವ ದಿನ ಅಲ್ಪ ಸ್ವಲ್ಪವಾದರೂ ನೀಡಿ' ಎಂದರು.

ಪ್ರವಚನ ಮುಗಿದೊಡನೇ ಮಳೆ ಬಂತು. ಆದಕ್ಕಾಗಿಯೇ ನಿಂತಿತ್ತೊ ಏನೋ! ಒಟ್ಟು ೧೩ ಎಕರೆ ಸಿಕ್ಕಿತು. ಇಲ್ಲಿನ ಹೊಲ ಗುಂಟೆಗೆ ಒಂದು ಸಾವಿರದ್ದು. ಗುಂಪಿನಲ್ಲಿ ಒಬ್ಬ ಎದ್ದುನಿಂತು 'ಸ್ವಾಮಿ, ಸ್ಮಶಾನಕ್ಕಾಗಿ ೧ ಗುಂಟೆ ನೆಲ ಬೇಕೆಂದು ಬಹಳ ದಿನ ದಿಂದ ಪ್ರಯತ್ನ ಮಾಡಿದರೂ ಸಿಕ್ಕಿಲ್ಲ ಆದರೆ ನಿಮ್ಮ ಮಾತು ಕೇಳಿ ನಾವು ತಡೆಯಬಲ್ಲೆವೇ? ನಿಮ್ಮನ್ನು ಸತ್ಕರಿಸುವ ಯೋಗ್ಯತೆ ನಮಗಿಲ್ಲ. ನಾವು ಕೊಟ್ಟದ್ದು ಹೊಲವಲ್ಲ, ಹೂವಿನ ಎಸಳು. ಆದನ್ನೇ ಒಪ್ಪಿ ಕೊಳ್ಳಬೇಕು' ಎಂದ ಈತ ತಾನೂ ಒಂದು ಎಕರೆ ಕೊಟ್ಟದ್ದ. ಮೂವರು ಅಣ್ಣತಮ್ಮಂದಿರು ಸೇರಿ ಮೂರು ಎಕರೆ.

ಸಂಜೆಗೆ ದಿಲ್ಲಿಯಿಂದ ಒಬ್ಬ ತನ್ನ ಸಂದೇಹ ನಿವಾರಣೆಗಾಗಿ ಬಂದ. 'ದೇವರ ಹೆಸರು ಹಲವು ಇವೆ. ನಾವು ಯಾವುದನ್ನು ಹೇಳೋಣ?' ಅವನ ಪ್ರಶ್ನೆ

'ದೇವರ ಗುಣಗಳು ಅನೇಕ ಇವೆ. ನಮಗೆ ಯಾವ ಗುಣ ಕಡಮೆಯಿದಿಯೋ ಅದನ್ನು ಸೂಚಿಸುವ ಹೆಸರನ್ನು ಹೇಳಿ. ನಮಗೆ ದಯಾಗುಣ ಕಡಮೆ. ದೇವರನ್ನು ದಯಾಳು—ರಹೀಂ ಎಂದು ನೆನೆಯಿರಿ ನಮ್ಮಲ್ಲಿ ಸತ್ಯ ಕಡಮೆ. ದೇವರು ಸತ್ಯ ಸ್ವರೂಪ-ಹಕ್ ಎಂದು ತಿಳಿಯಿರಿ. ಹೀಗೆ ರಾಮ ಎಂದರೆ ಎಲ್ಲರಲ್ಲೂ ರಮಿಸುವ ವ್ಯಾಪಕತೆ. ಕೃಷ್ಣ ಎಂದರೆ ಎಲ್ಲರನ್ನೂ ಸೆಳೆವ ಪ್ರೇಮಮೂರ್ತಿ. ಯಾವ ಗುಣದ ಉಪಾಸನೆ ಆಗತ್ಯವೋ ಆ ಹೆಸರನ್ನು ಹೇಳಿ.'

" ಮಾಂಸಹಾರ, ಶಾಕಾಹಾರ ಎರಡನ್ನೂ ನೀಡುವ ಹೋಟಲಿನಲ್ಲಿ ಊಟಮಾಡಬಹುದೇ ? ''

" ಊಟಮಾಡುವವರನ್ನು ನೀವು ತಡೆಯಬೇಡಿ. ನಿಮ್ಮ ನಿರ್ಣಯ ನೀವು ಮಾಡಿಕೊಳ್ಳಿ ಮಾಂಸ ಎಂದರೆ ಅರ್ಥ ಗೊತ್ತೆ? ' ಮಾಂ-ಸಃ ' ನಾನು ಈಗ ತಿನ್ನುತ್ತಿರುವುದು ನನ್ನನ್ನೇ ತಿಂದೀತು. ಕರ್ಮಫಲ ನ್ಯಾಯದಂತೆ ಅದರ ಫಲವನ್ನು ಭೋಗಿಸಲೇ ಬೇಕಲ್ಲ.''

" ಕಾಂಚನ ಮುಕ್ತಿಯನ್ನು ಸಾಧಿಸುವುದು ಹೇಗೆ? ನಾನೊಬ್ಬನೇ ಗಳಿಸುವವನು. ಮನೆಯಲ್ಲಿ ೧೧ ಜನ ಇದಾರೆ.

''ರಾಮೇಶ್ವರಕ್ಕೆ ಹೋಗಬೇಕೆಂದು ಮನಸ್ಸು ಮಾಡಿದರೆ ಹರಿದ್ವಾರದ ಕಡೆ ಮುಖ ಮಾಡುವುದು ಅಸಂಭವ. ಮೊದಲು ನೌಕರರನ್ನು ಕಡಮೆ ಮಾಡು ಕ್ರಮೇಣ ಅವರನ್ನು ತೆಗೆದು ಹಾಕು. ಆಮೇಲೆ ನೂಲಲು ಮೊದಲಿಡು. ಮನೆಗೆಲಸದಲ್ಲಿ ನೆರವಾಗು ಅಡಿಗೆ ಮಾಡು. ಹಿತ್ತಿಲಲ್ಲಿ ಕಾಯಿಪಲ್ಯ ಬೆಳೆಸು. ಹೀಗೆ ಸ್ವಲ್ಪಸ್ವಲ್ಪವಾಗಿ ೮ ಆಣೆ ಕಾಂಚನ ಮುಕ್ತಿಯನ್ನಾದರೂ ಸಾಧಿಸು. ''

'' ಸ್ಮೃತಿಗಳು ಬಾಲ್ಯವಿವಾಹವನ್ನು ಹೇಳುತ್ತವೆಯಲ್ಲ, ನಿಮ್ಮ ಅಭಿಪ್ರಾಯವೇನು. ''

'' ಸ್ಮೃತಿಗಳು ಕಾಲಕಾಲಕ್ಕೆ ಬದಲಾಗಿವೆ. ಪರಸ್ಪರ ಭಿನ್ನವಾಗಿವೆ. ಮಾಂಸಹಾರವನ್ನು ಪೂರ್ತಿ ನಿಷೇಧಿಸಿದ್ದರೂ ಇಂಥ ಮಾಂಸ ತಿಂದರೆ ಚಿಂತೆಯಿಲ್ಲ ಎಂದಿದ್ದಾರೆ. ಇಂಥ ವೇಳೆಯಲ್ಲಿ ತಿಂದರೆ ಚಿಂತೆಯಿಲ್ಲ ಎಂದಿದಾರೆ. ಹೀಗಿದೆ ಈ ವಿವಾದ ಕೇಳುವುದರಲ್ಲೂ ಹೇಳುವುದರಲ್ಲೂ ವ್ಯತ್ಯಾಸವಾಗುತ್ತಿದೆ. ಶ್ರುತಿಗಳಲ್ಲಿ ಎಲ್ಲೂ ಬಾಲ್ಯವಿವಾಹದ ಪಕ್ಷವಾಗಿ ಬರೆದಿಲ್ಲ, ಸ್ಮೃತಿಗಳಂತೂ ಕೇಳಿ ಬರೆದವು. ಅದರ ಬಗ್ಗೆ ವಿವೇಕದಿಂದ ನಡೆಯಬೇಕು.

ವಿನೋಬಾ ಜ್ವರದಲ್ಲಿಯೇ ಹೇಳುತ್ತಿದ್ದರು. ಇದಿರಿನಲ್ಲಿ ಅಗ್ಗಿ

ಷ್ಟಿಕೆಯಿತ್ತು. ಮೈ ಬೆವರುತ್ತಿತ್ತು. ನೀರು ಕುಡಿಯುತ್ತ ಮೈ ಕಾಸುತ್ತ ಇದ್ದರು. ಬೆವರೂ ಸುರಿಯುತ್ತಿತ್ತು. ಪ್ರಕೃತಿ ಚಿಕಿತ್ಸೆಯ ಪ್ರಯೋಗ ಹೀಗೆ ನಡೆದಿತ್ತು ಮಲಗುವಾಗ ನೋಡಿದರೆ ಜ್ವರ ೧೦೦ ಡಿಗ್ರಿ ಇತ್ತು.

## ೧೩ ಹುಚ್ಚರ ಪಂಥ

ಇವತ್ತು ೧೨ ಮೈಲಿ ಪ್ರಯಾಣ. ಇವತ್ತು ಕಾಲುವೆಯ ದಂಡೆಯ ಮೇಲೆ ಹೋದೆವು. ತುಂಬಾ ಚಳಿ. ಆದರೂ ವಿನೋಬಾ ಚಪ್ಪಲಿ ತೆಗೆದಿಟ್ಟರು. ಚಪ್ಪಲಿ ಕಾಲಿಗೆ ಭಾರವಾಗುತ್ತಿತ್ತು. ಒಂದು ಗುಳ್ಳೆಯೂ ಆಗಿತ್ತು. ಜ್ವರದ ಶಮನಕ್ಕಾಗಿ ೨ ದಿನ ಒಂದು ಕಡೆ ನಿಲ್ಲೋಣ ಎಂದು ನಾನು ಹೇಳಿದೆ ಅದಕ್ಕೆ "೨ ದಿನದಲ್ಲಿ ಜ್ವರ ಆರಿಹೋದೀತು. ತೆಲಂಗಾಣದಲ್ಲಿ ನನಗನುಭವವಾಗಿದೆ. ಗಂಟಲು ಶುದ್ಧವಾಗಿದೆ. ಹೊಟ್ಟೆ ಶುದ್ಧವಾಗಿದೆ. ಆದ್ದರಿಂದ ಇದು ಇನ್‌ಫ್ಲುಯಂಜಾ ಅಲ್ಲ. ಮಲೇರಿಯಾ ಇರಬೇಕು'' ಎಂದರು.

ದಿಲ್ಲಿಯಿಂದ ಒಬ್ಬ ತಂಗಿ ನಮ್ಮ ಜತೆಗೆ ಬಂದಿದ್ದಳು. ಮುಂದೆ ಬರಲಾರದೆ ಹಿಂದಿರುಗಿದಳು ಆಕೆಯ ಬಗ್ಗೆ ಚರ್ಚೆಯಾಯಿತು. ಮೊನ್ನೆ ತಾನೆ ಬಿ. ಎ. ಮಾಡಿದ್ದಳು. ಕೆಲವು ಕಾಲ ವಿನೋಬಾ ಬಳಿ ಇದ್ದು ಆಮೇಲೆ ಭೂದಾನದ ಕೆಲಸ ಮಾಡಬೇಕೆಂದು ಆಕೆಯ ಇಚ್ಛೆ. ಆದರೆ ಪ್ರಯಾಣ ಒಂಟಲಿಲ್ಲ ವಿನೋಬಾ ಹೇಳಿದರು 'ಅವಳ ಆಯುಸ್ಸಿನಲ್ಲಿ ನಿನ್ನೆಯೇ ಮೊಟ್ಟಮೊದಲು ಅವಳು ೧೪ ಮೈಲಿ ನಡೆದದ್ದು. ಕಾಯಿಲೆಯಾಯಿತು. ಮಕ್ಕಳಿಗೆ ಬರೀ ಪುಸ್ತಕ ಶಿಕ್ಷಣ ಕೊಡುವುದರಿಂದ ಬಹಳ ತಪ್ಪಾಗುತ್ತದೆ. ಹುಡುಗರಿಗೆ ವ್ರತನಿಷ್ಠೆ ಬೇಕು. ಶರೀರ ಶ್ರಮ ಬೇಕು. ಅದರ ಜತೆಗೆ ಎಷ್ಟು ಅಧ್ಯಯನ ಸಾಧ್ಯವೋ ಅಷ್ಟೂ ಆಗಲಿ. ಅಧ್ಯಯನ ಸ್ವಲ್ಪ ಕಡಮೆಯಾದರೂ ಚಿಂತೆಯಿಲ್ಲ. ಆದರೆ ಶರೀರ ಶ್ರಮ, ವ್ರತನಿಷ್ಠೆ ಇಲ್ಲದೆ ಹೇಗೆ ನಡೆಯಬೇಕು ? ಆದ್ದರಿಂದಲೇ ಓದುಬರಹದ ಪದ್ಧತಿಯನ್ನು ಬದಲಿಸುವುದು ಆಗದಿದ್ದರೆ ಕಡೆಗೆ ಒಂದು ವರ್ಷ ಶಾಲೆಕಾಲೇಜುಗಳನ್ನೆಲ್ಲ ಮುಚ್ಚಿ

ಬಿಡಿ, ಮಕ್ಕಳು ಆಟವಾಡಲಿ ಎಂದದ್ದು. ಅದರಿಂದಲೂ ದೇಶಕ್ಕೆ ಲಾಭವಾದೀತು. ಈ ಓದು ಮಾತ್ರ ಖಂಡಿತ ಹೀಗೆ ನಡೆಯಬಾರದು'

ಇವೊತ್ತು ೭-೩೦ಕ್ಕೆ ಬದಲು ೭ಕ್ಕೆ ಉಪಾಹಾರ . ಈಗ ಸೂರ್ಯೋದಯ ನಿಧಾನ. ಆ ಹೊತ್ತಿಗೆ ಹಳ್ಳಿಯವರೆಲ್ಲ ಸೇರಿದರು. ಅವರನ್ನು ನೋಡಿ ವಿನೋಬಾ, "ನೀವೇನೋ ನಮಗೆ ಮೊಸರು ತಿನಿಸುತ್ತೀರಿ. ಆದರೆ ನನಗೆ ಮಣ್ಣಿನ ಹಸಿವಾಗಿದೆ" ಎಂದರು ಮತ್ತೆ- "ನನ್ನ ಮಾತು ನಿಮ್ಮ ವರೆಗೆ ಮುಟ್ಟಿತೋ ಇಲ್ಲವೋ" ಎಂದು ಕೇಳಿದರು. ಜನರು "ಮುಟ್ಟಿದೆ" ಎಂದು ಹೇಳಿದರು. ಮುಂದಿನ ಬಿಡಾರಕ್ಕೆ ಸಂಜೆಗೆ ಬನ್ನಿ ಎಂದು ಎಲ್ಲರಿಗೂ ವಿನೋಬಾ ತಿಳಿಸಿದರು ಉಪಾಹಾರ ಮುಗಿದಮೇಲೆ ಮುನ್ನಡೆದಾಗ ಬಲಗಡೆಗೆ ಐದು ಕೋತಿಗಳು ಒಂದೊಂದು ತಬ್ಬಿಕೊಂಡು ಗುಂಪಾಗಿ ಕುಳಿತಿದ್ದುವು ಒಂದರ ಮೈಯ ಶಾಖ ಇನ್ನೊಂದಕ್ಕೆ ತಗುಲಲಿ ಎಂದು. ಸೊಗಸಾದ ನೋಟ! ಪಶುಗಳಲ್ಲಿ ಇಷ್ಟು ವಿಕಸಿತ ಮನಸ್ಸು ಕಾಣುವುದು ಬಹಳ ಕಡಮೆ ಹುಲಿಯಿಂದ ರಕ್ಷಿಸಿಕೊಳ್ಳಲು ಹಸುಗಳು ಗುಂಪು ಕಟ್ಟುತ್ತವೆ ಕರುಗಳನ್ನು ನಡುವೆ ಸೇರಿಸಿಕೊಳ್ಳುತ್ತವೆ. ಕೊಂಬು ಮುಂದೆಮಾಡಿ ಕೊಡುತ್ತವೆ. ಹುಲಿ ಅವನ್ನು ಕೆಣಕಲಾರದು. ತಮ್ಮ ಕೊಂಬಿನ ಬಲದಿಂದ ಹಸುಗಳು ಹುಲಿಯನ್ನು ಓಡಿಸುತ್ತವೆ

ದಾರಿಯುದ್ದಕ್ಕೂ ಬಹಳ ಕೋತಿಗಳಿದ್ದುವು. ೧೦ ಗಂಟೆಗೆ ಬಿಡಾರ ಸೇರಬೇಕಿತ್ತು ಆದರೆ ೯ ಗಂಟೆಗೇ ತಲಪಿದೆವು ಜ್ವರವಿದ್ದುದರಿಂದ ಹೆಚ್ಚು ಏನೂ ಮಾತಾಡಲಿಲ್ಲ. ಇಡೀ ದಿನ ಭೂದಾನ ಯಜ್ಞದ ಕೆಲಸ ಮಾಡಿ ಎಂದು ಕೆಲಸಗಾರರಿಗೆ ಹೇಳಿದರು. ಇಲ್ಲಿ ಅಜಗರ ಪಕ್ಷ ಇದೆ. ಅಜಗರ ಎಂದರೆ ಸನಾತನಿ, ಜಮೀನುದಾರರು ಮುಂತಾದವರ ಗುಂಪು. ಇವರು ಕಾಂಗ್ರೆಸ್ಸಿನ ವಿರೋಧದ ಗುತ್ತಿಗೆ

ಹೊತ್ತಿದ್ದಾರೆ. ವಿನೋಬಾ ಕಾಂಗ್ರೆಸ್ಸಿಗರು ಎಂದ ತಿಳಿದು ಅವರು ಈ ಕಾರ್ಯಕ್ರಮದಲ್ಲಿ ಪಾಲುಗೊಳ್ಳಬಾರದೆಂದು ನಿಶ್ಚಯಿಸಿದ್ದರು. ವಿನೋಬಾ ಯಾವ ಪಕ್ಷದವರೂ ಅಲ್ಲ ಎಂದು ಕರ್ಣಭಾಯೀ ತಿಳಿಸಿದರು ವಿನೋಬಾ ಎಲ್ಲರನ್ನೂ ತಮ್ಮವರು ಎನ್ನುತ್ತಾರೆ. ತಾವು ಎಲ್ಲರಿಗೂ ಸೇರಿದವರು. ಆಮೇಲೆ ಹಲವು ಜನ ಬಂದರು. ಮಧ್ಯಾಹ್ನ ೨-೩೦ ಗಂಟೆಗೆ ಬಲವಾದ ಮಳೆ ಬಂತು. ನಿನ್ನೆಯಂತೆ ಇವೊತ್ತೂ ಜನರು ಬಿಡದಿಯ ಬಂಗಲೆಯೊಳಕ್ಕೆ ನುಗ್ಗಿಬಿಟ್ಟಿದ್ದರು. ಒಳಗಡಯೇ ನೂಲುವುದು ನಡೆಯಿತು. ನಿತ್ರಾಣದಿಂದ ವಿನೋಬಾ ಇಂದು ನೂಲಲು ಬರಲಿಲ್ಲ

ಪ್ರವಚನದ ಪೂರ್ತಿಗೆ ಬಿಸಿಲು ಬಂತು. ಇದು ದೇವರ ಪ್ರಸಾದವೆಂದು ಜನರು ಹರ್ಷವನ್ನು ಪ್ರಕಟಿಸಿದರು ವಿನೋಬಾ ಹೇಳಿದರು 'ವಿನೋಬಾ ಯಾವ ಪಕ್ಷವೆಂದು ಜನರು ಕೇಳುತ್ತಾರೆ. ನನ್ನ ಪಂಥವನ್ನು ನಿಮಗೆ ತಿಳಿಸುತ್ತೇನೆ. ನನ್ನದು ಹುಚ್ಚರ ಪಂಥ. ನಾನೇ ಹುಚ್ಚ ಎಲ್ಲರಿಗೂ ಹುಚ್ಚು ಹಿಡಿಸಬೇಕು ಎಂಬುದು ನನ್ನ ಉದ್ದೇಶ. ವಿನೋಬಾ ಕಾಂಗ್ರೆಸ್ ಪ್ರಚಾರ ಮಾಡಲು ಬಂದಿದಾರೆ ಎನ್ನುತ್ತಾರ ಕೆಲವರು. ಕಿಸಾನ್ ಮಜ್ದೂರ್ ಪ್ರಜಾ ಪಕ್ಷದವರು ಅವರ ಜತೆಗಿದಾರ ಅವರು ತಮ್ಮ ಪಕ್ಷದ ಪ್ರಚಾರಕ್ಕೆ ಬಂದಿದಾರೆ ಎನ್ನುವವರು ಕೆಲವರು. ಇದೆಲ್ಲವೂ ಬರೀ ಭ್ರಮೆ. ಕಾಂಗ್ರೆಸ್ಸಿನವರಾಗಲಿ, ಪ್ರಜಾಪಕ್ಷದವರಾಗಲಿ ತಮ್ಮ ಕೆಲಸಕ್ಕಾಗಿ ನನ್ನ ಜತೆಗೆ ತಿರುಗಾಡುವಷ್ಟು ಹುಚ್ಚರಲ್ಲ. ಅದಕ್ಕಾಗಿ ಅವರ ಬಳಿ ಮೋಟಾರು, ವಿಮಾನ ಬೇಕಾದಷ್ಟು ಬಿದ್ದಿವೆ. ನನ್ನಂತೆಯೇ ಹುಚ್ಚರಾದವರು ಮಾತ್ರ ನನ್ನ ಜತೆಗೆ ಬಂದಾರು. ನಾನು ಹೊಲ ಬೇಡುತ್ತಿದೇನೆ ಎಂದು ನನ್ನನ್ನು ಹುಚ್ಚ ಎನ್ನುತ್ತಾರೆ. ನಾನು ಬೇಡಿದರೆ ಕೊಡುವವರು ಕೊಡುತ್ತಿದಾರಲ್ಲ. ಕೊಡುವವರಲ್ಲೂ ಹುಚ್ಚರಿದಾರೆ

ಎನ್ನೋಣವೆ? ಅವರು ಹುಚ್ಚರಲ್ಲ. ಬಹಳ ಜನಕ್ಕೆ ಹೊಲವಿಲ್ಲದಂತೆ ಮಾಡಿದರೆ ಲೋಕದಲ್ಲಿ ದುಃಖ ಹೆಚ್ಚುತ್ತದೆ ಕಳ್ಳತನ ಹೆಚ್ಚುತ್ತದೆ. ಶಾಂತಿ, ಪ್ರೇಮಗಳ ಗಾಳಿ ಬೀಸದಂತಾಗುತ್ತದೆ. ಆದ್ದರಿಂದ ಹಳ್ಳಿಗಳಲ್ಲಿ ಹಿತವಾದ ಗಾಳಿ ಬೀಸಬೇಕಾದರೆ ಯಾರೂ ಭೂಮಿಹೀನರಾಗಿರಬಾರದು ಎಂಬುದನ್ನು ಅವರು ತಿಳಿದುಕೊಂಡಿದ್ದಾರೆ. ನಾನು ಹುಚ್ಚ, ನನ್ನದು ಹುಚ್ಚರ ಪಂಥ ಎಂದು ಹೇಳಿದರೂ ತುಳಸೀದಾಸರು ಹುಚ್ಚರೆಂದು ಯಾರೂ ಹೇಳರು'

ದಿನವೆಲ್ಲ ಜನರ ಗುಂಪು ಇದ್ದೇ ಇತ್ತು ಕೊಠಡಿಯೊಳಗೆ ಹೋಗಿ ಜನ ದರ್ಶನಮಾಡಿಕೊಂಡು ಬರುತ್ತಿದ್ದರು 'ನಿಮಗೆ ನನ್ನ ದರ್ಶನ ಹೇಗೆ ಬೇಕು ಎನಿಸುತ್ತದೋ ನನಗೂ ನಿಮ್ಮ ದರ್ಶನದ ಆಸೆಯಾಗುತ್ತದೆ ನೀವು ನನ್ನ ದೇವರು. ದೇವರು ಬರೀ ಕಾಶಿ ರಾಮೇಶ್ವರದಲ್ಲಿಲ್ಲ ಈ ಎಲ್ಲ ಅಣ್ಣತಂಪುಂದಿರಲ್ಲಿ ಇದ್ದಾನೆ ನಿಮ್ಮ ದರ್ಶನಕ್ಕಾಗಿ ನಾನು ಬಹಳ ಆತುರನಾಗಿದ್ದೇನೆ ಇಲ್ಲವಾದರೆ ಯಾರು ಹೀಗೆ ಬರಿದೇ ತಿರುಗಾಡುವಂಥ ಹುಚ್ಚುತನ ಮಾಡಿಯಾರು' ಎಂದು ಹೇಳಿದರು. ಭೂಮಿಯ ಬಗ್ಗೆ ಹೇಳುತ್ತ 'ಈ ಯಾತ್ರೆಯಲ್ಲಿ ನಾನು ಹೊಲ ಬೇಡುತ್ತಿರುವುದು ಎಲ್ಲರಲ್ಲಿಯೂ ಹುದುಗಿರುವ ಪ್ರೇಮ ಹೊರಚಿಮ್ಮಲಿ, ಲೋಭ ಕಾಮ ಕ್ರೋಧಗಳೆಲ್ಲ ಅಳಿದುಹೋಗಲಿ, ಕೇವಲ ಪ್ರೇಮದ ರಾಜ್ಯವಾಗಲಿ ಎಂದು'

ಆರೋಗ್ಯದ ವಿಷಯ ಕೇಳಿದುದಕ್ಕೆ ನಿನ್ನೆಯಿಂದ ಚೆನ್ನಾಗಿದೆ. ನಿನ್ನೆ ಚಪ್ಪಲಿ ಎತ್ತಲೂ ಆಯಾಸವಾಗುತ್ತಿತ್ತು. ಇವೊತ್ತು ಅಷ್ಟು ಇಲ್ಲ. ಆದರೂ ಸ್ವಲ್ಪ ಹೊತ್ತಾದಮೇಲೆ ಕಾಲಿನಿಂದ ಚಪ್ಪಲಿ ತೆಗೆಯಬೇಕಾಯಿತು ಕಡೆಕಡೆಗೆ ಸ್ವಲ್ಪ ದಣಿವೂ ಆಯಿತು ಎಂದರು. ಇವತ್ತು ಅಡವಿಯಲ್ಲಿ ಉಪಾಹಾರ. ಆಗ ೭ ಗಂಟೆಯಾಗಿತ್ತು. ಸೂರ್ಯ ಹುಟ್ಟಿದ್ದ ಹುಟ್ಟುವ ಮೊದಲು ಬಹಳ ಹೊತ್ತು ಮೋಡಗಳ

ಹಿಂದೆ ಅವಿತಿದ್ದ. ಕ್ಷಿತಿಜದಮೇಲೆ ಮೋಡ ಅಡ್ಡ ಬಂದುದರಿಂದ ಸೂರ್ಯನ ಕಿರಣ ಗುಡ್ಡ, ಬೆಟ್ಟಗಳ ಶಿಖರಗಳಮೇಲೆ ಬಗೆಬಗೆಯಾದ ಬಣ್ಣ ಬೀರುತ್ತ ಮೇಲೇರುತ್ತಿದ್ದುವು ಆ ಪ್ರಕಾಶದಲ್ಲಿ ಆ ಬಣ್ಣ ಬಣ್ಣದಲ್ಲಿ ಸೂರ್ಯ ಇದಾನೆಯೋ ಬರೀ ಬೆಳಕೇ ಇದೆಯೋ ಎಂಬುದು ತಿಳಿಯುತ್ತಿರಲಿಲ್ಲ ಎಲ್ಲರೂ ಉಪಾಹಾರಕ್ಕೆ ಕೂತಾಗ "ಸೂರ್ಯನ ಕೋಮಲ ಕಿರಣಗಳ ಕಡೆ ನೋಡಲು ಮನಸ್ಸೇನೋ ಆಗುತ್ತದೆ. ಆದರೆ ಒಡನೆಯೇ ಕಣ್ಣಿನ ಮೇಲೆ ಪರಿಣಾಮವೂ ಆಗುತ್ತದೆ' ಎಂದರು ವಿನೋಬಾ

ಬಾಬಾ ರಾಘವದಾಸರು ಚರ್ಚೆ ಮೊದಲಿಟ್ಟರು. 'ಗೆಳೆಯರೊಬ್ಬರೊಡನೆ ಮಾತು ನಡದಿತ್ತು ಈಗ ೩೫ ಸಾವಿರ ಎಕರೆ ಸಿಕ್ಕಿದೆ. ೩೫ ಲಕ್ಷ ರೂಪಾಯಿ ಆಯಿತು, ಎಂದ 'ನಮಗೆ ರೂಪಾಯಿಯ ಲೆಕ್ಕ ಗೊತ್ತಿಲ್ಲ: ೩೫ ಲಕ್ಷ ಎಂದರಷ್ಟು?' ಎಂದೆ. ಆತ ಹೊಲದ ಬೆಲೆಯ ಲೆಕ್ಕ ನೋಡಿ ಅದರ ಬಗ್ಗೆ ಒಂದು ಲೇಖನ ಬರೆಯುತ್ತಾನಂತೆ!

ವಿನೋಬಾ ಹೇಳಿದರು 'ಪಟ್ಟಣದವರಿಗೆ ಪ್ರತಿಯೊಂದರಲ್ಲೂ ದುಡ್ಡಿನದೇ ಲೆಕ್ಕ ಅವರಿಗಿದು ರೂಢಿಯಾಗಿ ಹೋಗಿದೆ. ಕೆಲವು ಸಲ ಹಣದ ಲೆಕ್ಕ ಹಾಕುವುದು ತಪ್ಪಾಗುತ್ತದೆ. ಅಷ್ಟೇ ಅಲ್ಲ, ಅವಮಾನಕರವೂ ಆಗುತ್ತದೆ. ನೀರಿನೊಳಕ್ಕೆ ಧುಮುಕಿ, ನೀರಿನಲ್ಲಿ ಮುಳುಗುತ್ತಿರುವವನನ್ನು ಎಳೆದು ತಂದು ಬದುಕಿಸುವ ಧೀರನ ಕೆಲಸಕ್ಕೆ ಗಂಟೆಗೆ ೪ ಆಣೆಯಂತೆ ಲೆಕ್ಕಹಾಕಿ, ಆ ಕಾಲು ಗಂಟೆಗೆ ಒಂದಾಣೆ ಕೊಟ್ಟರೆ ಅದನ್ನು ಯಾರಾದರೂ ಮೆಚ್ಚಿಯಾರೆ? ಇದನ್ನು ಹೀಗೆ ಅಳೆಯಲು ಸಾಧ್ಯವೆ? ಭೂದಾನ ಯಜ್ಞದ ಕೆಲಸವೂ ಹಾಗೆಯೆ. ಸಾವಿರಾರು ಜನಕ್ಕೆ ಬಾಳುಬದುಕಿಗೆ ದಾರಿಮಾಡಿ ಜೀವನ ದಾನ ಮಾಡುವ ಪದಾರ್ಥದ ಬೆಲೆ ಹಣದಲ್ಲಿ ಲೆಕ್ಕ ಹಾಕಲು

ಬಂದೀತೆ? ಅದು ಬರೀ ಮೂರ್ಖತನ ೩೫ ಲಕ್ಷ ಎಂದು ಒಪ್ಪಿದರೂ ಅದು ಈ ೩೫ ಸಾವಿರ ಎಕರೆ ಹೊಲ, ೩೫ ಸಾವಿರ ಜನಕ್ಕೆ ಜೀವನ ನಿರ್ವಾಹ ಸಾಧನವಾಗುವಂತೆ ಆದೀತೇನು? ಉತ್ಪಾದನದ ಸಾಧನವನ್ನು ಪಡೆಯುವ ಮಾತು ಬೇರೆ; ಹಣವನ್ನು ಗಳಿಸುವ ಮಾತು ಬೇರೆ ಎರಡರಲ್ಲೂ ಹೋಲಿಕೆಯೇ ಇಲ್ಲ.'

ಹಿಂಡಾನ್ ನದಿಯನ್ನು ದಾಟಿದೆವು ಇಲ್ಲಿಂದ ಮೀರತ್ ಜಿಲ್ಲೆ ಮೊದಲು. ಹಳ್ಳಿ ಹತ್ತಿರ ಬಂತು ಅಲ್ಲಲ್ಲಿ ಸ್ವಾಗತ, ಜಯಕಾರ ಮೊದಲಾಯಿತು ದೊಡ್ಡದೊಂದು ಗುಂಪು ಸ್ವಾಗತ ನೀಡಿತು. ಹಳ್ಳಿ ದೊಡ್ಡದು ಜನ ಹೆಚ್ಚಾಗಿ ಸೇರಿದ್ದರು ಆದರೆ ವಿನೋಬಾಗೆ ಹೊಲದ ದಾಹ 'ಈ ಹೂಮಾಲೆ ಪಡೆಯಲು ನಾ ಬಂದೆನೆ? ನಾನು ಏಕೆ ಬಂದಿದ್ದೇನೋ ನಿಮಗೆ ಗೊತ್ತಿದೆಯಷ್ಟೆ' ಎಂದರು ನೆರೆದಿದ್ದವರು ಗೊತ್ತಿದೆ ಎಂದರು 'ಹಾಗಾದರೆ ಹೊರಡಿ ದಿನವೆಲ್ಲ ಶ್ರಮಪಟ್ಟು, ೩ ಗಂಟೆಗೆ ಹೊಲ ಪಡೆದು, ಕೊಂಡು ಬನ್ನಿ' ಎಂದು ಹೇಳಿದರು ದಾರಿಯಲ್ಲಿ ಎರಡೂ ಕಡೆ ಕಬ್ಬಿನ ಬೆಳೆ ಸೊಗಸಾಗಿತ್ತು. ಸಾವಿರಾರು ಎಕರೆ ಕಬ್ಬು ಕಾಲುವೆಯ ನೀರೆಲ್ಲ ಇದಕ್ಕಾಗಿಯೇ. ರೈತರ ಸಂಸಾರದ ಆರ್ಥಿಕ ಸ್ಥಿತಿ ಇದರಿಂದ ಕೆಟ್ಟುಹೋಗಿತ್ತು. ಅದಲ್ಲದೆ ಧಾನ್ಯದ ಬೆಳೆ ಕಡಮೆ ಮಾಡಲು ಕಬ್ಬು ಬಹಳ ಸಹಾಯವಾಗಿತ್ತು. ಹಣದ ಮಾಯೆ ಈ ಕಬ್ಬಿನ ಮೋಹ ತಂದೊಡ್ಡಿದೆ. ಇದೆಲ್ಲ ನೆಲ ಗೋಧಿ ಬೆಳೆದರೆ ನಾವು ಅಮೆರಿಕಾವನ್ನು ತಿರುಪೆ ಬೇಡಲೇಕೆ?

ಜಾನೀ ಗ್ರಾಮ ೩ ಫರ್ಲಾಂಗು ಉಳಿದಿತ್ತು ಆಗ ಗಂಗಾ ಮಾತೆಯ ಪ್ರಥಮ ದರ್ಶನವಾಯಿತು. ಗುಂಗುಂ ಗುಣುಗುಣಿಸುತ್ತ ಗಂಗೆ ಎಡದಿಂದ ಬಲಕ್ಕೆ ವೇಗವಾಗಿ ಹರಿಯುತ್ತಿದ್ದಳು. ಕಣ್ಣಿನ ಹಬ್ಬಕ್ಕೆ ಮಿತಿಯೇ ಇಲ್ಲ. ಭಗೀರಥ ಪ್ರಯತ್ನವನ್ನು ನೆನಪಿಗೆ ತರುವ

ಈ ಮಹಾ ವಿಭೂತಿ ಈ ದೇಶಕ್ಕೇ ಎಷ್ಟು ಒಲವಿನದು ! ಗಂಗೆಯನ್ನು ಕಂಡೊಡನೆ ಗೋದೆ, ನರ್ಮದೆ, ಯಮುನೆ ಎಲ್ಲ ನದಿಗಳ ನೆನಪೂ ಆಯಿತು. ಒಂದೊಂದಾಗಿ ಅದೆಷ್ಟು ನದಿಗಳನ್ನು ನಾವು ದಾಟಿ ಬಂದಿದೇವೆ.

ಮಧ್ಯಾಹ್ನ ಜಲೇಶ್ವರಜೀ ಒಬ್ಬ ವ್ಯಕ್ತಿಯನ್ನು ಕರೆತಂದರು. ಆತ ಅತ್ಯಂತ ನಮ್ರತೆಯಿಂದ ಒಂದು ಕಾಗದವನ್ನು ವಿನೋಬಾಜೀಯ ಇದಿರಿಗೆ ಇಟ್ಟ. ಅದು ೨೦೦ ಎಕರೆಯ ದಾನ ಪತ್ರ. ಹಿಸ್ಸಾರಿನಿಂದ ಭೂದಾನ ಕೊಡಲು ಆತ ಇಲ್ಲಿಗೆ ಬಂದಿದ್ದ.

'ತಾವು ಪಂಜಾಬಿಗೆ ಬರಬೇಕು. ೧೦,೦೦೦ ಎಕರೆ ತಮ್ಮ ಪದತಲದಲ್ಲಿ ಅರ್ಪಿಸುವ ಬಯಕೆಯಿದೆ ಇತರರನ್ನು ಭೂದಾನ ಕೇಳುವ ಮೊದಲು ನಾನು ಏನಾದರೂ ಕೊಡಬೇಕಲ್ಲ. ಒಂದು ತಿಂಗಳ ಹಿಂದೆ ಈ ಹೊಲ ನನಗೆ ಸಿಕ್ಕಿತು. ಇದನ್ನು ಯಾವುದಾದರೂ ಸತ್ಕಾರ್ಯದಲ್ಲಿ ಉಪಯೋಗಿಸಬೇಕೆಂದು ಯೋಚಿಸುತ್ತಿದ್ದೆ ಭೂದಾನ ಯಜ್ಞಕ್ಕಿಂತ ಹೆಚ್ಚಿನ ಸತ್ಕಾರ್ಯ ಇಲ್ಲವೆಂದು ಎಲ್ಲವನ್ನೂ ತಮಗೆ ಧಾರೆಯರೆದಿದೇನೆ' ಎಂದು ಆತ ಹೇಳಿದ ಆತನ ನಮ್ರತೆ, ನಿರಹಂಕಾರವನ್ನು ಹೇಳಲು ಬಾರದು ಎಲ್ಲಾದರೂ ಕಳ್ಳ ಎಂದು ಯಾರಾದರೂ ಹಿಡಿದುಕೊಂಡಾರೋ ಏನೋ ಎಂಬಷ್ಟು ಸಂಕೋಚ.

## ೧೪ ಸರ್ವತೋ ಭದ್ರ

**ಖರಖೌಂಡಾ** ೧೫ ಮೈಲಿ ದಾರಿ ರಾತ್ರಿ ಮಳೆ ಬಂದು ದಾರಿ ಕೆಟ್ಟಿತ್ತು. ದಾರಿ ಸ್ವಲ್ಪ ಬದಲಿಸಬೇಕಾಯಿತು. ದಾರಿ ತೋರಿಸುವವನಿಗೆ ದಾರಿ ಸರಿಯಾಗಿ ತಿಳಿದಿರಲಿಲ್ಲ ಆದ್ದರಿಂದ ದಾರಿ ಬೆಳೆದು ೧೭ ಮೈಲಿ ಆಯಿತು. ಇವೊತ್ತು ಜ್ವರವಿರಲಿಲ್ಲ. ಆದ್ದರಿಂದ ಬಹಳ ನಿತ್ರಾಣ ಈ ಖರಖೌಂದಾ ಮುಜಲನ್ನು ಬಿಟ್ಟು ನೆಟ್ಟಗೆ ಮೀರತ್ತಿಗೇ ಬನ್ನಿ ಎಂದು ಕರ್ಣಭಾಯಿ ಹೇಳಿದ್ದರು. ಅಲ್ಲಿ ಒಂದು ದಿನ ಬಿಡುವು ಆಗುತ್ತಿತ್ತು ಆದರೆ ಒಮ್ಮೆ ನಿರ್ಧರಿಸಿದ ಕಾರ್ಯವನ್ನು ನಡಸದಿದ್ದರೆ ಸತ್ಯನಿಷ್ಠೆಗೆ ಭಂಗಬರುತ್ತದೆ ಎಂದು ವಿನೋಬಾ ಇಲ್ಲಿ ಬರಲು ಒತ್ತಾಯ ಮಾಡಿದರು ಪೂರಾ ದಕ್ಷಿಣಕ್ಕೆ ಬಂದು ಮತ್ತೆ ಪಶ್ಚಿಮಕ್ಕೆ ತಿರುಗಬೇಕಿತ್ತು ಊರು ಮುಟ್ಟಿದಾಗ ೧೧ ಗಂಟೆ ಉಪಾಹಾರದ ವೇಳೆ ನಿನ್ನೆಯಂತೆ ಬಣ್ಣಬಣ್ಣವಾಗಿ ರಂಜಿಸಲಿಲ್ಲ ಸೂರ್ಯ. ನಿರ್ಮಲ ನಿರಭ್ರ ಆಕಾಶದಲ್ಲಿ ಕೆಂಪು ತೋರುತ್ತ ರವಿ ಬರುತ್ತಿದ್ದ ವಿನೋಬಾ ಮುಗ್ಧಮನದಿಂದ ಅದನ್ನು ಸವಿಯುತ್ತಿದ್ದರು ಸಹಜ ಧ್ಯಾನ ನಡದಿತ್ತು ದಾರಿಯಲ್ಲಿ ಹಲವು ಕಡೆ ನೀರು, ಕೆಸರು ದಾಟಿ ಬರಬೇಕಾಯಿತು ಕೆಲವು ಕಡೆ ತೀರ ಕಿರಿದಾದ ಕಾಲು ದಾರಿಯಲ್ಲಿ, ಕಾಲುವೆಯ ಕಿರಿದಂಡೆಯ ಮೇಲೆ ಹೋದೆವು

ಇಂದಿನ ವ್ಯಾಖ್ಯಾನದಲ್ಲಿ ಮಹಾಭಾರತದ ಯುಧಿಷ್ಠರ: ಯಕ್ಷ ಪ್ರಶ್ನಗಳ ಪ್ರಸ್ತಾವವೆತ್ತಿ, ನಕುಲನಂತೆ ಸಾವೂ ತೀರ ಕಿರಿಯ ತಮ್ಮನನ್ನು ಕಾಪಾಡಿದರೆ, ಹೊಲವಿಲ್ಲದವನಿಗೆ ಹೊಲ ಕೊಟ್ಟರೆ, ಎಲ್ಲರನ್ನೂ ಮೇಲೆತ್ತಬಹುದು ಎಂದರು ವಿನೋಬಾ. ಭೂದಾನ

ಯಜ್ಞದ ಬಗ್ಗೆ, 'ಕಡಲಿಗೆ ಹರಿಯಲು ಗಂಗೆ ನಿರ್ಧರಿಸಿದ ಮೇಲೆ ಎಲ್ಲಾ ಹೊಳೆ–ಹಳ್ಳಗಳೂ ಅತ್ತ ಕಡೆಯೇ ಹರಿದು ಗಂಗೆಯಲ್ಲಿ ಸೇರಬೇಕು. ಭೂದಾನ ಯಜ್ಞದ ಗಂಗೆಯ ಗುರಿ ನಿರ್ಧಾರವಾಗಿದೆ. ೩೫ ಸಾವಿರ ಎಕರೆ ಹೊಲ ಸಿಕ್ಕಿಯೂ ಇದೆ. ಅದನ್ನು ಹಂಚುವ ಕೆಲಸವೂ ನಡೆದಿದೆ. ಈಗ ಈ ಕೆಲಸ ಬೆಳೆಯುತ್ತದೆ. ಆದ್ದರಿಂದ ನಾವೇ ಎಲ್ಲೆಡೆಗೂ ಹೋಗಬೇಕಾಗಿಲ್ಲ. ಎಲ್ಲರೂ ಅಲ್ಲಲ್ಲೇ ಕೆಲಸ ಮಾಡಬಹುದು.

**೨೮-೧೧-೫೨ :** ಉಪಾಹಾರದ ಸ್ಥಳಕ್ಕೆ ಗಾಂಧೀ ಆಶ್ರಮ ದಿಂದ ಸುಮಾರು ೩ ಜನ ಕೆಲಸಗಾರರು ರಾಮಭಜನೆ ಮಾಡುತ್ತಾ ಬಂದರು. ಮೀರತ್ತಿನ ವರೆಗೆ-- ಜನಗಂಗೆಯ ತರಂಗ ಉಕ್ಕಿ ಹರಿದಿತ್ತು. ಹೆಂಗಸರೂ ಹೆಚ್ಚಾಗಿಯೇ ಇದ್ದರು. ಗಾಂಧೀ ಆಶ್ರಮ ಮುಟ್ಟಿ ದಾಗ ನೂಲಿನ–ಹೂವಿನ ಮಾಲೆಗಳ ಮಳೆಗರೆಯಿತು ವಿನೋಬಾಗೆ ೨ ದಿನದಿಂದ ಜ್ವರ ಇರಲಿಲ್ಲ. ಆದರೂ ಬಹಳ ನಿತ್ರಾಣ. ಆದರೆ ಚಿತ್ತ ಪ್ರಸನ್ನವಾಗಿತ್ತು. ಪ್ರಾಸ್ತಾವಿಕ ಭಾಷಣದಲ್ಲೇ ಅದನ್ನು ಹೊರಗೆಡಹದ ಇರಲಿಲ್ಲ. ಸ್ವಾಗತ ಗೀತೆಯಲ್ಲಿ ಅವರನ್ನು ಶಾಂತಿ ದೂತ, ಕ್ರಾಂತಿ ದೂತ ಎಂದು ಕರೆದಿದ್ದರು. 'ಎರಡೂ ಸರಿ. ನಾನು ಶಾಂತಿಯನ್ನೂ ಕಳೆದುಕೊಳ್ಳಬಯಸೆ. ಕ್ರಾಂತಿಯನ್ನೂ ತಡೆಯ ಬಯಸೆ. ಅಂತೆಯೇ ಈ ಭೂದಾನ ಯಜ್ಞ ಪ್ರಾರಂಭವಾಗಿದೆ ಇದರಲ್ಲಿ ನನಗೆ ನಿತ್ಯ ನವ ಆನಂದ ಸಿಗುತ್ತಿದೆ' ಎಂದರು ವಿನೋಬಾ.

ಮೀರತ್ತಿನಲ್ಲಿ ಪತ್ರಿಕೋದ್ಯೋಗಿಗಳ, ವಿದ್ಯಾರ್ಥಿಗಳ ಸಂಗಡ ವಿವಿಧ ಪ್ರಶ್ನೋತ್ತರ ನಡೆಯಿತು ಕೆಲವು ಮಹತ್ವದವು.

ಪ್ರಶ್ನೆ . ಕಮ್ಯುನಿಸ್ಟರು ನೀವು ತೆಲಂಗಾಣದಲ್ಲಿ ಬರೀ ೧೫ ಸಾವಿರ ಎಕರೆ ಸಂಪಾದಿಸಿದಿರಿ, ತಾವು ಸಾವಿರಾರು ಎಕರೆ ಹಂಚಿ ಬಿಟ್ಟಿದ್ದೇವೆ ಎನ್ನುತ್ತಿದ್ದಾರೆ.

ಉತ್ತರ· ಮನೆ ಕಟ್ಟುವವನಿಗೂ ಮನೆ ಸುಡುವವನಿಗೂ ಎಲ್ಲಿಯ ಹೋಲಿಕೆ?

ಪ್ರಶ್ನೆ : ಹೀಗೆ ನಿಮ್ಮ ೫ ಕೋಟಿ ಎಕರೆಯ ಸಂಕಲ್ಪ ಪೂರ್ತಿಯಾದೀತೆ?

ಉತ್ತರ ಎಲ್ಲರೂ ಇದರಲ್ಲಿ ಸಹಕರಿಸಿದರೆ ಏಕಾಗಬಾರದು?

ಪ್ರಶ್ನೆ. ನೀವು ಸ್ವಲ್ಪ ದಾನವನ್ನೂ ತೆಗೆದುಕೊಳ್ಳುತ್ತೀರಿ.

ಐದ್ಹೈದು ಎಕರೆ ಹಂಚುತ್ತೀರಿ ಇದು 'ಎಕನಾಮಿಕ್ ಹೋಲ್ಡಿಂಗ್' (ಪರ್ಯಾಪ್ತ ಹಿಡುವಳಿ) ಆದೀತೆ?

ಉತ್ತರ ಈ ಹಿಡುವಳಿ ಎಂಥದೋ, ಯಾವುದು ಅಲ್ಲವೋ ಎಂಬುದು ವಿವಾದಾಸ್ಪದ. ಇದರ ಬಗ್ಗೆ ದಿಲ್ಲಿಯಲ್ಲಿ ಬೇಕಾದಷ್ಟು ಹೇಳಿದೇನೆ. ನೀರಿದ್ದರೆ ಒಂದು ಗುಂಟೆಯೂ ಲಾಭಕರ ಹಿಡುವಳಿಯೇ.

ಪ್ರಶ್ನೆ. ಸರಕಾರ ನಿಮಗೆ ಒಂದು ಕೋಟಿ ಎಕರೆ ಹೊಲ ಕೊಡುವಂತಿದ್ದರೆ ಮೊದಲು ಅದನ್ನೇ ಏಕೆ ತೆಗೆದುಕೊಳ್ಳಬಾರದು?

ಉತ್ತರ ನನಗೆ ಅದು ಅಗತ್ಯವೇ ಇಲ್ಲ. ಆದರೂ ೧೦ ಲಕ್ಷ ಎಕರೆ ಸಾಕು ಎಂದು ಮುನ್ಷೀಗೆ ಹೇಳಿದೇನೆ ಅದರಲ್ಲಿ ನೀರಿನ ಅನುಕೂಲವಾಗಬೇಕು ಅದೇ ಕರಾರು. ಹಾಗಲ್ಲದೆ ನನಗದು ಬೇಡ. ಹೇಗೋ ಒಂದು ರೀತಿ ಜನಗಳಿಗೆ ಭಿಕ್ಷೆ ನೀಡುವುದಲ್ಲ ನನ್ನ ಕೆಲಸ. ನನ್ನ ಕೆಲಸ ಒಂದು ಗಾಳಿ ಹುಟ್ಟಿಸುವುದು ಅದು ತಳಹದಿಯ ಕೆಲಸ, ಕ್ರಾಂತಿಯ ಕೆಲಸ ಇದಾದ ಮೇಲೆ ಉಳಿದಿರುವ ಕೆಲಸವನ್ನು - ಕಾನೂನು ಮಾಡುವ, ಸಹಾಯ ನೀಡುವ ಕೆಲಸವನ್ನು ಶಾಸನ ಸಭೆಯವರು ಮಾಡಲಿ. ಜನರ ಸದ್ಭಾವನೆ ಎಚ್ಚರಿಸುವುದು ನನ್ನ ಕೆಲಸ. ಗಂಗೆ ಕಡಲಿಗೆ ಹರಿಯುವಂತೆ ಭೂಮಿ ನನ್ನ ಕಡೆ ಹರಿದು ಬರುತ್ತಿದೆ.

ಪ್ರಶ್ನೆ: ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸು ಅನೇಕ ತಪ್ಪು ಮಾಡಿದೆ. ಅದಕ್ಕೇನು ಹೇಳುತ್ತೀರಿ?

ಉತ್ತರ: ಅನುಭವವಿಲ್ಲದೆ ಎಲ್ಲರೂ ತಪ್ಪು ಮಾಡುತ್ತಾರೆ. ಅಧಿಕಾರ ಪಡೆದವರು ತಪ್ಪು ಮಾಡಿದರು, ಆದರೆ ಈಗ ಅಧಿಕಾರ ಇಲ್ಲದವರಿಗೆ ನಾಳೆ ಅದು ಬಂದರೆ ಅವರು ತಪ್ಪುಮಾಡರು ಎಂಬುದಕ್ಕೆ ಯಾವ ಕಾರಣವೂ ಇಲ್ಲ.

ಪ್ರಶ್ನೆ. ನೀವು ಜನರಿಂದ ಹೊಲ ಕಸಿದುಕೊಳ್ಳುತ್ತಿದೀರಿ. ಗಾಂಧೀಜೀ ಹೀಗೆ ಮಾಡಲು ಹೇಳಲಿಲ್ಲ

ಉತ್ತರ ಕಸಿದುಕೊಳ್ಳುವುದು--ಎಂಬ ಶಬ್ದ ತಪ್ಪು. ನಾನು ಕಸಿದುಕೊಳ್ಳುತ್ತಿಲ್ಲ, ಪ್ರೀತಿಯಿಂದ ನಮ್ರತೆಯಿಂದ ಬೇಡುತ್ತಿದೇನೆ. ಕಸಿದುಕೊಳ್ಳುವ ಮಾತು ಸರಕಾರಕ್ಕೆ ಅಥವಾ ಕಮ್ಯುನಿಸ್ಟರಿಗೆ ಸೇರಿದ್ದು. ಒತ್ತಾಯಕ್ಕೆ ಯಾರಾದರೂ ಹೊಲ ಕೊಟ್ಟರು ಎಂದು ತಿಳಿದುಬಂದರೆ ಆ ದಾನಪತ್ರ ಶಾಸನ ಬದ್ಧವಾದರೂ ಅದನ್ನು ನಾನು ಹರಿದುಹಾಕುತ್ತೇನೆ

ಗಾಂಧೀಜೀಯ ಹೆಸರು ಹೇಳಿ ನಾನು ಯಾವಾಗಲೂ ತೆಗೆದುಕೊಳ್ಳಲಿಲ್ಲ ನಾನು ಹೇಳುವುದು ಸದ್ವಿಚಾರದ ಮಾತು ದೇವರು ಕೊಟ್ಟ ಹೊಲ ಒಬ್ಬೊಬ್ಬ ವ್ಯಕ್ತಿಯ ಸೊತ್ತು ಹೇಗಾದೀತು? ಎಲ್ಲರಿಗಾಗಿ ಇರುವ ವಸ್ತು ನಾಲ್ಕೇ ಜನರ ಕೈಯಲ್ಲಿ ಇರುವುದು ಶಾಸನಕ್ಕೆ ಮಾತ್ರ ಸಮ್ಮತವಾದೀತೆ? ಗಾಂಧೀಜೀಯ ಹೆಸರು ಎತ್ತುವ ಜನ ನೆನಸಿಡಲಿ - ಎಲ್ಲರೂ ವಿಶ್ವಸ್ತ(ಟ್ರಸ್ಟೀ)ರಾಗಬೇಕೆಂದು ಗಾಂಧೀಜೀ ಹೇಳುತ್ತಿದ್ದರು ಒಡೆಯರಾಗಬೇಕೆಂದಲ್ಲ. ಟ್ರಸ್ಟೀಗೆ ಪರಿಹಾರ ಕೊಡುವ ಮಾತೆಲ್ಲಿ? ಈ ಪರಿಹಾರದ ಮಾತೇ ತಪ್ಪು. ತನ್ನ ಬಳಿ ಇರುವ ವಸ್ತುವನ್ನು ಅವನು ಹಂಚಿಬಿಡಬೇಕು. ತನಗೆ ಉಳಿಸಿಕೊಳ್ಳಬಾರದು. ಯಾವ ಪರಿಹಾರವನ್ನೂ ಬೇಡಬಾರದು.

ಆದರೆ ಇವರು ನಮ್ಮ ಅಣ್ಣ ತಮ್ಮಂದಿರು. ಅವರ ಹೊಟ್ಟೆಯು ಪಾಡೂ ನಡೆಯಬೇಕು. ಅದಕ್ಕಾಗಿ ಅವರಿಗೆ ಏನಾದರೂ ಸಿಗಬೇಕು. ಆದ್ದರಿಂದ ನಾನು ಇಡೀ ಹೊಲ ಬೇಡುತ್ತಿಲ್ಲ. ದರಿದ್ರನಾರಾಯಣನ ಪಾಲು ಮಾತ್ರ ಬೇಡುತ್ತಿದೇನೆ. ನ್ಯಾಯ-ಪ್ರೇಮ ಎರಡನ್ನೂ ಬೆರೆಸಲು ನನ್ನ ಪ್ರಯತ್ನ. ಇದನ್ನೇ ಸೂರ್ಯ - ಚಂದ್ರ ಎನ್ನುತ್ತಾರೆ. ಎರಡೂ ಈಶ್ವರನ ಕಣ್ಣು - ಎರಡೂ ಸೇರಿ ತೇಜಸ್ಸು ಪರಿಪೂರ್ಣ ವಾಗುತ್ತದೆ

ಪ್ರಶ್ನೆ; ಈಗಿನ ಬಂಡವಾಳ ಶಾಹಿಯಲ್ಲಿ ಪ್ರತಿ ಗಳಿಗೆಯಲ್ಲೂ ಹಿಂಸೆ ಯಾಗುತ್ತಿಲ್ಲವೆ?

ಉತ್ತರ. ಈಗಿನ ವ್ಯವಸ್ಥೆಯಲ್ಲಿ ಪ್ರತಿ ಗಳಿಗೆಯಲ್ಲೂ ಹಿಂಸೆ ನಡೆದಿದ್ದರೆ ನೀವು ಎಂದೋ ಕೊಲೆಯಾಗುತ್ತಿದ್ದಿರಿ. ಹಾಗಾಗಿಲ್ಲ ಇದು ಬಂಡವಾಳ ಶಾಹಿಯೂ ಅಲ್ಲ. ಎಲ್ಲರಿಗೂ ಓಟಿನ ಅಧಿಕಾರ ಸಿಕ್ಕಿದೆ ಈ ವ್ಯವಸ್ಥೆ ಚೆನ್ನಾಗಿಲ್ಲ ಎನ್ನಬಹುದು, ಅಷ್ಟೆ. ಅದನ್ನು ಬದಲಿಸಲು ಸಾಮಗ್ರಿ ಸಿದ್ಧವಾಗಿದೆ

ಪ್ರಶ್ನೆ ಹೊಲವಿಲ್ಲದವರಿಗೆ ಹೊಲ ಕೊಡಿಸುತ್ತೀರಿ. ಮನೆ ಯಿಲ್ಲದವನಿಗೆ ಮನೆ ಕೊಡಿಸಬಾರದೆ?

ಉತ್ತರ ಎಲ್ಲಾ ಕೆಲಸ ಮಾಡುವ ಗುತ್ತಿಗೆ ನಾನು ಕೊಂಡಿಲ್ಲ ಆದರೂ ಈ ಹೊಲವಿಲ್ಲದವರ ಸಮಸ್ಯೆ ಪರಿದರೆ ಅನೇಕ ಮಾತು ತಾವೇ ತೀರ್ಮಾನವಾಗುತ್ತವೆ

ಪ್ರಶ್ನೆ ಭಾರತೀಯ ಸಂವಿಧಾನ ಹೇಗಿದೆ?

ಉತ್ತರ ಇಷ್ಟು ಕಷ್ಟಪಟ್ಟು ರಚಿಸಿದ ವಿಧಾನದ ಬಗ್ಗೆ ಇಷ್ಟು ಆತುರವಾಗಿ, ಇಷ್ಟು ಬೇಗ ನನ್ನ ಅಭಿಪ್ರಾಯ ತಿಳಿಯ ಬಯಸುತ್ತೀರಿ. ಅದನ್ನು ರಚಿಸಿದ ಸ್ಥಿತಿಯಲ್ಲಿ ಅದಕ್ಕಿಂತ ಉತ್ತಮವಾದುದು ಸಾಧ್ಯ ವಿರಲಿಲ್ಲ. ಇದರಲ್ಲಿ ಒಳ್ಳೆಯ ಅಂಶವೂ ಇದೆ. ಪಾಶ್ಚಾತ್ಯರ ಅನು

ಕರಣವೂ ಇದೆ. ಅದನ್ನು ಇಂಗ್ಲೀಷಿನಲ್ಲಿ ಬರೆಯದಿದ್ದರೆ ಪರಿಪೂರ್ಣವಾಗುತ್ತಿತ್ತು. ಆದರೂ ಆಗಿರುವಷ್ಟು ಒಳ್ಳೆಯದೇ ಆಗಿದೆ. ಇದಕ್ಕಿಂತ ಒಳ್ಳೆಯದರ ನಿರೀಕ್ಷೆ ನನಗಿಲ್ಲ.

ಪ್ರಶ್ನೆ : ಹಿಂದುಸ್ಥಾನದಲ್ಲಿ ಸಾಮ್ಯವಾದ ಹರಡದೇ ನಿಂತೀತೇ? ಹೇಗೆ ನಿಂತೀತು !

ಉತ್ತರ : ಇದನ್ನು ತಿಳಿಸಿ ಹೇಳಲು ನಾಲ್ಕೈದು ಭಾಷಣ ಕೊಡಬೇಕಾದೀತು. ಇಷ್ಟು ಹೇಳುತ್ತೇನೆ : ಭೂದಾನ ಯಜ್ಞವನ್ನು ಎಷ್ಟು ತ್ವರಿತವಾಗಿ ಸಫಲಗೊಳಿಸಿದರೆ ಅಷ್ಟು ತ್ವರಿತವಾಗಿ ಸಾಮ್ಯವಾದವನ್ನು ತಡೆಯಬಹುದು. ಇಲ್ಲದಿದ್ದರೆ ಹಿಂದುಸ್ಥಾನವೇಕೆ ? ಲೋಕದಲ್ಲಿ ಬಡವರಿದ್ದಲ್ಲೆಲ್ಲ ಸಾಮ್ಯವಾದ ಬಂದೇ ಬರುತ್ತದೆ ಇದಕ್ಕೆ ಹೊರಗಿನವರ ದಾಳಿ ಬೇಕಾಗಿಲ್ಲ. ಸಾಮ್ಯವಾದವನ್ನು ತಡೆಯಬೇಕಾದರೆ, ಬಡವರ ಸಮಸ್ಯೆಯನ್ನು ಪರಿಹರಿಸಲು, ಬಡವರ ಸೇವೆ ಮಾಡಲು ಪ್ರಾರಂಭ ಮಾಡಬೇಕು.

ತಮ್ಮ ಪ್ರವಚನದಲ್ಲಿ ವಿನೋಬಾ ಭೂದಾನದ ಮೂಲಕ ಶ್ರಮದ ಗೌರವ ಹೆಚ್ಚಿಸುವ ಮಾತನ್ನು ಒತ್ತಿ ಹೇಳಿದರು. ಬುದ್ಧಿಜೀವಿಗಳನ್ನು ಟೀಕಿಸಿದರು. ಇದರ ಬಗ್ಗೆ ಒಬ್ಬ ತಮ್ಮ ಪ್ರಶ್ನೆ ಕೇಳಿದ.

ಉತ್ತರ : ಬುದ್ಧಿಜೀವಿಗಳ ಗೌರವವನ್ನು ಯಾರೂ ಕಡಮೆ ಮಾಡಲಾರರು. ಅವರು ಬುದ್ಧಿಜೀವಿಗಳಾಗಿರಬೇಕು. ನನಗೆ ಅಂಥವರು ಯಾರೂ ಕಾಣಬಾರರು. ಎಲ್ಲರೂ ಅನ್ನ - ಜೀವಿಗಳೇ ಶಂಕರಾಚಾರ್ಯರನ್ನು ಬುದ್ಧಿಜೀವಿ ಎನ್ನಬಹುದು. ಹೆಸರಿಗೆ ಮಾತ್ರ ಬುದ್ಧಿಜೀವಿ ಆದರೆ ಗೌರವ ದಕ್ಕೀತೆ ? ಗುಮಾಸ್ತ ಬುದ್ಧಿಜೀವಿಯೆ ? ಅಧಿಕಾರಿ ಬುದ್ಧಿಜೀವಿಯೆ? ಮಂತ್ರಿಗಳು ಬುದ್ಧಿಜೀವಿಗಳೆ ? ಈಗಂತೂ ಮಂತ್ರಿಗಳಿಗೆ ಆಲೋಚನೆಗೂ ಬಿಡುವಿಲ್ಲ. ಇವರು ಮಂತ್ರಿಗಳಲ್ಲ, ತಂತ್ರಿಗಳು. ಪ್ರತಿಯೊಂದು ಮಾತಿನ ಬಗ್ಗೆಯೂ ಹೊಸಹೊಸದಾಗಿ

ಯೋಚಿಸಬಲ್ಲವ ಮಂತ್ರಿ. ವರ್ಷಗಟ್ಟಲೆ ಒಂದೇ ವಿಷಯ ಪಾಠ ಹೇಳುವ ಪ್ರಾಧ್ಯಾಪಕನೂ ಬುದ್ಧಿಜೀವಿಯಲ್ಲ. ಗಣಿತ ಹೇಳುವಾಗ ಅಧ್ಯಾಪಕ ನಿದ್ದೆಮಾಡುವುದನ್ನು ನಾನು ನೋಡಿದ್ದೇನೆ. 'ಇಂಡಿಯನ್ ಪೀನಲ್‌ಕೋಡ್' ಅಥವಾ 'ಟೈಮ್ಸ್ ಆಫ್ ಇಂಡಿಯಾ' ಓದುತ್ತ ಕೂಡುವ ವಕೀಲ ಬುದ್ಧಿಜೀವಿಯೇ? ನಾನು ಯಾರನ್ನೂ ನಿಂದಿಸೆ. ಬುದ್ಧಿಜೀವಿಗಳ ಗೌರವ ತಗ್ಗಿಸಲೂ ಬಯಸೆ. ಶ್ರಮದ ಗೌರವವನ್ನು ತಿಳಿಸಬಯಸುತ್ತೇನೆ. ಅದು ಸ್ವಯಂ ಪ್ರತಿಷ್ಠಿತ ಅದರಿಂದ ನಮ್ಮ ಪ್ರತಿಷ್ಠೆ ಬೆಳೆಯುತ್ತದೆ. ಈ ದೃಷ್ಟಿಯಿಂದ ನೋಡಿ ಈ ಭೂದಾನ ಯಜ್ಞದ ಕೆಲಸದಲ್ಲಿ ಸಮಾಜ ರಚನೆ ಬದಲಿಸುವ ಶಕ್ತಿ ಇದೆ ಇದು ಕ್ರಾಂತಿಕಾರಿ ಎಂಬ ಕೀರ್ತಿ ಸಿಗದಿರಬಹುದು. ಶಾಂತಿಯ ಕಾರ್ಯಕ್ರಮ ಇದರಿಂದ ಆಗಿ ತೀರುತ್ತದ. ನೀವು ಚಿಕ್ಕ ಮನಸ್ಸು ಮಾಡಬೇಡಿ ನಮ್ಮ ದೇಶದ ಸಂಸ್ಕಾರ ಬಹಳ ಹಿರಿದು ಇಂಥ ಆಪತ್ಕಾಲದಲ್ಲೂ ದಯಾನಂದ, ರಾಮಕೃಷ್ಣ, ತಿಲಕ್, ಅರವಿಂದ, ಗಾಂಧೀ ಇಂಥ ಮಹಾಪುರುಷರು ಹುಟ್ಟಿದರು. ಇನ್ನೆಷ್ಟು ಹೆಸರು ಹೇಳಲಿ? ಇದು ವೀರಭೂಮಿ. ಆದ್ದರಿಂದಲೇ ನನ್ನಂಥ ತುಚ್ಛ ವ್ಯಕ್ತಿಯ ಮುಖದಿಂದಲೂ ಮಹಾವಾಕ್ಯ ಹೊರಡುತ್ತಿವೆ.'

೭-೩೦ ಗಂಟೆಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶ್ರೀ ಗೋಲವಾಲಕರ್ ಗುರೂಜೀ ನೋಡಲು ಬಂದರು. ಭೂದಾನ ಯಜ್ಞದ ಬಗ್ಗೆ ತಮ್ಮ ಸಂತೋಷ ತಿಳಿಸಿದರು. 'ಈಶಾವಾಸ್ಯದ ಮೊದಲನೆಯ ಮೂರು ಶ್ಲೋಕ ಮೊದಲಿಂದಲೂ ನನ್ನನ್ನು ಸೆಳೆದಿವೆ. ನಿಮ್ಮ ಈ ಕೆಲಸ ಆ ಶ್ಲೋಕಗಳ ತಳಹದಿಯ ಮೇಲೆ ನಡೆದಿದೆ' ಎಂದರು.

ದಿಲ್ಲಿಯಿಂದ ಸೀತಾಪುರದ ವರೆಗೆ ೧೯ ಜಿಲ್ಲೆಗಳಲ್ಲಿ ೧,೭೪೭ ಜನ ದಾನಿಗಳು ೨೮,೩೦೮ ಎಕರೆ ಹೊಲ ಕೊಟ್ಟರು. ಸೀತಾಪುರ

ದಿಂದ ಬಲಿಯಾದ ವರೆಗೆ ಏಳೇ ಜಿಲ್ಲೆ. ಮೂರರಲ್ಲೊಂದು ಭಾಗ ದಷ್ಟು. ಆದರೆ ೧,೭೮ಳ ಜನ ದಾನಿಗಳು. ಹೆಚ್ಚು ಜನಕ್ಕೆ ಈ ಸಂದೇಶ ಮುಟ್ಟಿದೆ ಎಂದು ಅರ್ಥ. ಅಲ್ಲದೆ ಈ ಜಿಲ್ಲೆಯಲ್ಲಿ ಜನ ವಸತಿಯೂ ಹೆಚ್ಚು.

ಎಲ್ಲಿ ನಿಂತು ನೋಡಿದರೂ ೮-೧೦ ಹಳ್ಳಿಗಳನ್ನು ಎಣಿಸಬಹುದು. ನೀರಿನ ಸೌಕರ್ಯವಿದ್ದಿದ್ದರೆ, ಒಂದು ಹಳ್ಳಿಯಲ್ಲಿ ಬಿಡಾರ, ಇನ್ನೊಂದ ರಲ್ಲಿ ಸ್ನಾನ, ಮೂರನೆಯದರಲ್ಲಿ ಕೆಲವರ ಊಟ, ೪ ನೆಯದರಲ್ಲಿ ಕೆಲವರದು, ೫ ನೆಯದರಲ್ಲಿ ಹಲವರದು ಆಗಬಹುದಿತ್ತು. ಪ್ರಚಾರಕ್ಕೆ ಹೊರಟರೆ ೧೦-೧೨ ಹಳ್ಳಿಗಳಲ್ಲಿ ಸಹಜವಾಗಿಯೇ ಪ್ರಚಾರ ಮಾಡ ಬಹುದು ಇಲ್ಲಿ ನೆಲ ಬಹಳ ಬೆಲೆಯುಳ್ಳದ್ದು. ಒಂದೊಂದು ಕಡೆ ಒಂದೊಂದು ಗುಂಟೆಗೆ ನೂರು ರೂಪಾಯಿ ಗುತ್ತಿಗೆ ಕೊಡುತ್ತಾನೆ ರೈತ. ಅದಕ್ಕೆ ಜಮೀನುದಾರ ಕೊಡುವ ಕಂದಾಯ ಒಂದುರೂಪಾಯಿ. ಬಲಿಯಾದಲ್ಲಿ ಈ ಸ್ಥಿತಿ ಹೆಚ್ಚು. ಇದು ಪರ್ಮನೆಂಟ್ ಸೆಟ್ಲ್‌ಮೆಂಟ್ ಪದ್ಧತಿ

ಹೊಲ ಬಹಳ ತುಟ್ಟಿ ಸರಾಸರಿ ತಲಾ ಬಹಳ ಕಡಮೆ. ಎಕರೆ ಗಟ್ಟಲೆ ಅಲ್ಲ; ಗುಂಟೆ. ಅದಕ್ಕಿಂತ ಕಡಮೆ - ನೂರು ಗಟ್ಟಲೆ, ಗಜಗಟ್ಟಲೆ. ಸರಕಾರದ ಲೆಕ್ಕ ಅಲ್ಲೆಲ್ಲ ಸೆಂಟುಗಳ ಪ್ರಕಾರ ಎಂದರೆ ಎಕರೆಗೆ ನೂರು ಸೆಂಟು. ಜನರಲ್ಲಿ ಇನ್ನೂ ದೇಶೀ ಪರಿಭಾಷೆಯೇ ಇದೆ. ಇಲ್ಲಿನ ಜಮೀನುದಾರಿಗಳೂ ಬಹಳ ಹಂಚಿಹೋಗಿವೆ. ಉತ್ತರ ಪ್ರದೇಶದಲ್ಲಿ ಒಟ್ಟು ೫ ಲಕ್ಷ ಜಮೀನುದಾರರು. ಅದರಲ್ಲಿ ಒಂದೂ ಕಾಲು ಲಕ್ಷ ಬಸ್ತೀ ಜಿಲ್ಲೆಯ ಒಂದು ತಾಲೂಕಿನಲ್ಲಿ ಇದಾರೆ. ಅವರ ಪಾಲುಗಳು ಎಂಟಾಣೆ, ನಾಲ್ಕಾಣೆ, ಒಂದಾಣೆ, ಅರ್ಧಾಣೆಯಲ್ಲ; ಕಾಸಿಗಿಂತ ಕಡಮೆ, ಅರೆಕಾಸು. ಅಲ್ಲಿಂದ ಹಾಥ್, ಸಾತ್, ಕೋತ್, ಪಾತ್, ರೇನ್, ಫೇನ್, ಕಡೆಗೆ ಕೇನ್—ಹೀಗೆ ಭಾಗ. ಕೇನ್ ಎಂದರೆ

ಒಂದು ರೂಪಾಯಿಯಲ್ಲಿ ೨ ಅರ್ಬುದ ೫೮ ಕೋಟಿ ೬೯ ಲಕ್ಷ ೧೮ ಸಾವಿರ ೪ ನೂರರಲ್ಲೊಂದು ಪಾಲು! (೨,೫೮,೬೯,೧೮,೪೦೦)ಹೀಗೆ ಗೋಷ್ಪಾದದಷ್ಟು, ಗುದ್ದಲಿಯ ತಲೆಯಷ್ಟು ಅಗಲದ ನೆಲದ ಭಾರಿ ಜಮೀನುದಾರರು ಇದಾರ. ರೂಪಾಯಿಗೆ ೧೯೨ ಕಾಸು. ಅದರಲ್ಲಿ ಒಂದು ಕಾಸಿನ ಜಮೀನುದಾರ ಬಾಂಸಡಾ ತಾಲೂಕಿನಲ್ಲಿದಾನೆ. ಈ ಕಂದಾಯಗಳನ್ನೆಲ್ಲಿ ಹೇಗೆ ವಸೂಲು ಮಾಡುತ್ತೀರಿ ಎಂದು ಒಬ್ಬ ಶಾನುಭೋಗನನ್ನು ಕೇಳಿದೆ ಒಬ್ಬ ದೊಡ್ಡ ಜಮೀನುದಾರನಿಂದ ಒಂದು ರೂಪಾಯಿ ಹೆಚ್ಚಾಗ ತೆಗೆದುಕೊಂಡು ಈ 'ಕಾಸಿ' ನವರ ದನ್ನೆಲ್ಲ ಕೊಟ್ಟುಬಿಡುತ್ತೇವೆ ಎಂದ ಇದರಿಂದ ಅವರ ವರಮಾನವೂ ವರ್ಷಕ್ಕೆ ನೂರು-ನೂರ್ರವತ್ತು ಆಗಿದೆ ಐದಾರು ಜನರದು ಒಂದು ಸಂಸಾರವಾದರೆ ಅವನ ಬದುಕು ಹೇಗೆ ನಡೆಯಬೇಕು ಇದರಲ್ಲಿ? ಆದ್ದರಿಂದ ನೂರಾರು ಜನ ಹೊಟ್ಟೆ ಹೊರೆಯಲು ಬರ್ಮಾ, ಸಯಾಂ, ಸಿಂಗಪೂರ್, ಆಫ್ರಿಕಾ, ಚಿಲೀ ಮೊದಲಾದ ದೇಶಗಳಿಗೆ ಹೋಗಿದಾರೆ. ಯುದ್ಧದ ಕಾಲದಲ್ಲಿ ಭಾರತದಲ್ಲಿ 'ಲೇಬರ್ ಡಿಪೋ'ಗಳನ್ನು ತೆಗೆದಿದ್ದರು ಈಗ ಇಲ್ಲಿ ಗೋರಖಪುರದಲ್ಲಿ ಈಗಲೂ ನಡೆಯುತ್ತಿದೆ. ಈಗಲೂ ಅಲ್ಲಿನ ಕೂಲಿಗಾರರು ಧನಬಾದಿನ ಇದ್ದಲು ಗಣಿಗಳಲ್ಲಿ, ಮೀರತ್ತಿನ ಸಕ್ಕರೆ ಗಿರಣಿಗಳಲ್ಲಿ ಕೆಲಸ ಮಾಡಲು ಹೋಗುತ್ತಾರೆ. ಚೀನಾ ಭಾರತಗಳನ್ನು ಕಲೆಸುವ ರಸ್ತೆ ಇವರಿಂದಲೇ ಆದದ್ದು. ಅವರು ಮಾಡಿದ ಈ ಐತಿಹಾಸಿಕ ಕಾರ್ಯಕ್ಕಾಗಿ ಇನಾಮು ಸಿಗುವುದಿರಲಿ, ಕರೀಜ್ವರದಂಥ ಭಯಾನಕ ರೋಗವೇ ಅವರ ಪಾಲಿಗೆ ಬಂದದ್ದು. ಕರೀಜ್ವರದ ಬಗ್ಗೆ ಭಾರತ ಸರಕಾರ ಚಲಚ್ಚಿತ್ರ ತೆಗೆದಾಗ ಈ ದೇವರಿಯಾ ಜಿಲ್ಲೆಯ ಕಸಿಯಾ ಆಸ್ಪತ್ರೆಯಲ್ಲಿ ತೆಗೆದರು. ಅಲ್ಲಿ ಆಗ ಶೇ. ೩೬ ರಷ್ಟು ರೋಗಿಗಳು ಕರೀಜ್ವರದಿಂದ ನರಳುತ್ತಿದ್ದರು. ಈಗಲೂ ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡಲು ಹೋದವರು ಕಣ್ಣು

ಕಳೆದುಕೊಂಡು ಬರುತ್ತಾರೆ. ಭಾರತದಲ್ಲಿ ಎಲ್ಲೆಡಗಿಂತ ಹೆಚ್ಚು ಸಕ್ಕರೆ ಗಿರಣಿ ಇಲ್ಲಿವೆ ದೇವರಿಯಾ ಜಿಲ್ಲೆಯೊಂದರಲ್ಲೇ ೧೪ ಗಿರಣಿ ಇವೆ ಕೋಟ್ಯಂತರ ರೂಪಾಯಿ ಸಕ್ಕರೆ ಹೊರಗೆ ಹೋಗುತ್ತದೆ. ಎಕ್ಸೈಜ್ ತೆರಿಗೆಯ ರೂಪದಲ್ಲಿ ಕಳೆದ ೮-೯ ವರ್ಷಗಳಲ್ಲಿ ಭಾರತ ಸರಕಾರಕ್ಕೆ ೬ ಕೋಟಿಗಿಂತ ಹೆಚ್ಚು ವರಮಾನ ಬಂದಿದೆ ಇವು ಗಳಿಂದ ಪ್ರಾಂತೀಯ ಸರಕಾರಕ್ಕೂ ಲಕ್ಷಾಂತರ ತೆರಿಗೆ ಬಂದಿದೆ. ಗಿರಣಿ-ಕಬ್ಬು ನೆಲವನ್ನು ನಿಸ್ಸತ್ವಗೊಳಿಸುತ್ತಿದೆ ಇಲ್ಲಿರುವ ರೈಲು ಭಾರತ ಸರಕಾರದ ಅಧೀನ. ಆದರೂ ನೀರಾವರಿ ಕೆಲಸದಲ್ಲಿ ನೆರ ವಾಗುತ್ತಿಲ್ಲ ಗಾಜೀಪುರ ಜಿಲ್ಲೆಯಲ್ಲಿ ೧ ಸಾವಿರ ಬಾವಿ ಈ ವರ್ಷ ಆಗಬೇಕು. ೧೨ ಬಾವಿ ಮಾತ್ರ ಆಗೆಯಲು ಸಾಕಾಗುವಷ್ಟು ಕಲ್ಲಿದ್ದಲು ಬಂತು ರೈಲಿನಲ್ಲಿ.

ಈ ಪ್ರಾಂತ್ಯದಲ್ಲಿ ಮುಸಲ್ಮಾನರು ಹೆಚ್ಚು ಇದೊಂದು ವಿಶೇಷ. ಅವರೆಲ್ಲರೂ ಮನಸ್ಸು ಬಿಚ್ಚಿ ಈ ಚಳುವಳಿಯಲ್ಲಿ ಪಾಲುಗೊಂಡಿ ದ್ದಾರೆ ಗೊಂಡಾ ಜಿಲ್ಲೆಯ ಒಂದು ಹಳ್ಳಿಯಲ್ಲಿ ೧೦೧ ಜನ ದಾನ ಕೊಟ್ಟರು. ಅವರಲ್ಲಿ ೫೦ ಜನ ಮುಸ್ಲಿಮರು ಪಂಚಪಡುವಾದಲ್ಲಿ ೬೦ ಜನರಲ್ಲಿ ಮೂವತ್ತೊಂದು ಜನ ಮುಸಲ್ಮಾನರು ಪೀಪರ್ ಗ್ರಾಮದ ದಾತೃಗಳಲ್ಲಿ ನಲ್ವತ್ತು ಮುಸಲ್ಮಾನರು ಘೋಸಿಯಲ್ಲಿ ೧೫೦ ರಲ್ಲಿ ೫೦, ಪಂಚಪಡುವಾ, ಈಟಗಂಯಾ ರಾಮಪುರದಲ್ಲಿ ಮುಸ ಲ್ಮಾನ ಗೆಳೆಯರ ಆತಿಥ್ಯ. ಬಸ್ತಿ ಜಿಲ್ಲೆಯಲ್ಲೂ ಅದೇ ರೀತಿ. ಬಸ್ತಿ ಜಿಲ್ಲೆಯ ಭೂದಾನ ಸಮಿತಿಯ ಸಂಚಾಲಕ ಒಬ್ಬ ಮುಸಲ್ಮಾನ. ಬಲಿಯಾದ ಒಬ್ಬ ಮುಸಲ್ಮಾನ ಅಮಲ್ದಾರ ಭೂದಾನ ಯಜ್ಞದಲ್ಲಿ ಬಹಳ ಅಭಿರುಚಿ ತೋರಿಸಿದ. ಬಹಳ ಕಷ್ಟಪಟ್ಟ ಬಲಿಯಾ ಜಿಲ್ಲೆಯ ಕಲೆಕ್ಟರ್ ಸಿದ್ದೀಕಿ ವಿನೋಬಾಜೀ ಬರುವ ಮೊದಲೇ ಇಡೀ ಜಿಲ್ಲೆಯ ವಾತಾವರಣವನ್ನು ಸಿದ್ಧಗೊಳಿಸಿ ಹೆಚ್ಚು ನೆಲ ಕೊಡಿಸಿದ.

ಈ ಪ್ರಾಂತದಲ್ಲಿ ಹಿಂದೂ ಮುಸಲ್ಮಾನರು ಪರಸ್ಪರ ಗೆಳೆತನದಲ್ಲಿ ನಡೆದುಕೊಳ್ಳುವ ರೀತಿ ಕಂಡರೆ ಪಾಕಿಸ್ಥಾನದ ನಿರ್ಮಾಪಕರು ಈ ಉತ್ತರ ಪ್ರದೇಶದಲ್ಲಿ ಹುಟ್ಟಿದವರೇ ಎನಿಸುತ್ತದೆ. ಜನಸಾಮಾನ್ಯರಲ್ಲಿ ಕಾಣುವ ಈ ಅಭೇದ ಮುಖಂಡರಲ್ಲಿ ಇರಲಿಲ್ಲ. ಅದರಿಂದ ಈ ವಿಭಾಗ ಆಯಿತು. "ತಪ್ಪು ಇತಿಹಾಸ ಓದಿದ್ದರ ಪರಿಣಾಮವಾಗಿ ಅಣ್ಣತಮ್ಮಂದಿರು ಬೇರೆ ಬೇರೆಯಾದರು" ಎಂದರು ವಿನೋಬಾ.

ವಿನೋಬಾಜೀಯ ಬಗ್ಗೆ ಮುಸಲ್ಮಾನರಿಗೆ ಎಷ್ಟು ಪ್ರೇಮ-ಆದರ ಇದೆಯೋ ಅದು ಈ ಪ್ರವಾಸದಲ್ಲಿ ಅನುಭವವಾಯಿತು. ಹೊರಗಿನ ಮುಸಲ್ಮಾನರೂ ಒಳಗಿನವರೂ ಸೇರುವ ಅಜಮೀರದಲ್ಲಿ ಮೊಟ್ಟ ಮೊದಲನೆಯ ಸಲ ಮುಸಲ್ಮಾನರಿಗೆ ನಮಗೊಬ್ಬ ಗೆಳೆಯ ದೊರೆತ ಎನಿಸಿತು. ಮೇವಾ ಜನರ ನಡುವೆ ಆದ ಕಾರ್ಯದ ಪರಿಣಾಮವೂ ಮುಸಲ್ಮಾನರ ಮೇಲೆ ಆಗಿದೆ ಇದೆಲ್ಲಕ್ಕೂ ಮೊದಲು ಕುರಾನ್ ಅಧ್ಯಯನದಿಂದ ವಿನೋಬಾಜೀ ಮುಸಲ್ಮಾನ ತಮ್ಮಂದಿರ ಹೃದಯ ವನ್ನು ಸೂರೆಗೊಂಡಿದಾರೆ. ಈ ಅವ್ಯಕ್ತ ಸಂಬಂಧ ಅಧಿಕ ಪ್ರಭಾವ ಶಾಲಿಯಾಗಿತ್ತು

ಈಗಂತೂ ಕೆಲಸ ಬಹಳ ಹೆಚ್ಚು. ಆದರೂ ವಿನೋಬಾ ತಮಿಳು ವೇದದ ಅಧ್ಯಯನದಲ್ಲಿ ಮುಳುಗಿದಾರೆ. ತಮಿಳುನಾಡಿನ ರಚನಾತ್ಮಕ ಕೆಲಸಗಾರರ ಮುಖಂಡ ಶ್ರೀ ಜಗನ್ನಾಥ್ ನಮ್ಮ ಜೊತೆ ಯಲ್ಲಿದಾರೆ ಅವರು ವಿನೋಬಾಜೀಯನ್ನು ದಕ್ಷಿಣ ಭಾರತಕ್ಕೆ ಕರೆದುಕೊಂಡು ಹೋಗಲು ಬಯಸುತ್ತಿದಾರೆ. ಯಾವಾಗ ಹೋಗು ತ್ತಾರೋ ಅಂತೂ ದಕ್ಷಿಣದೊಡನೆ ಅವರಿಗೆ ಉತ್ಕಟವಾದ ಹಾರ್ದಿಕ ಸಂಬಂಧ ಎಂದೋ ಬೆಳೆದುಹೋಗಿದೆ ದಿನ ದಿನವೂ ಅದು ಹೆಚ್ಚು ತ್ತಿದೆ. ಈಗ ಉತ್ತರಭಾರತದಲ್ಲಿ ಇರುವುದರಿಂದ ತುಲಸೀದಾಸರ ಗ್ರಂಥಗಳನ್ನು ಎಷ್ಟೋ ಪಾರಾಯಣ ಮಾಡಿದಾರೆ. . ಸದಾ ಅವರ

ಬಳಿ ತುಲಸೀದಾಸರ "ವಿನಯ ಪತ್ರಿಕೆ" ಇರುತ್ತದೆ. ಅದರ ಚಿಂತನದಿಂದ ಅವರಿಗೆ ಹೊಸ ಹೊಸ ಪ್ರೇರಣೆ ಸಿಗುತ್ತದೆ

ಸದ್ಭಾವನೆಯನ್ನು ಸಾಕ್ಷಾತ್ಕರಿಸುತ್ತಾ ಚಿಕ್ಕಚಿಕ್ಕ ಜನ ಮಾಡಿದ ಮಹಾ ಮಹಾ ದಾನದ ಕೆಲವು ಕಥೆ ಈಗಾಗಲೇ ಹೇಳಿದೇನೆ. ದಿನವೂ ಇಂಥ ಪ್ರಸಂಗ ನಡೆಯುತ್ತಲೇ ಇರುತ್ತದೆ. ಒಬ್ಬ ತಮ್ಮ ಬಂದು ತನ್ನ ೨೧ ಎಕರೆ ದಾನಕೊಟ್ಟ ಅದರಲ್ಲಿ ಹತ್ತೂವರೆ ಎಕರ ತೆಗೆದುಕೊಂಡು ಉಳಿದುದನ್ನು ಅವನಿಗೆ ಕೊಟ್ಟುಬಿಟ್ಟರು ವಿನೋಬಾ. ಅವನ ಬಳಿಯೂ ೨೧ ಎಕರೆಯಿತ್ತು. ಅವನು ಹತ್ತೂವರೆ ಎಕರೆ ಕೊಟ್ಟ. ಗೊಂಡ್ವಾನದ ಶ್ರೀ ನವರಂಗರಾಯ್ ತಮ್ಮ ಜಮೀನುದಾರಿಯ ಇಡೀ ಪರಿಹಾರ ದ್ರವ್ಯವನ್ನು ಕೊಟ್ಟುಬಿಟ್ಟರು. ಬರಹಜ್‌ದ ಸ್ವಾಮಿ ಸತ್ಯವ್ರತರು ತಮ್ಮ ಇಡೀ ೧೩ ಎಕರೆ ಹೊಲವನ್ನು ಕೊಟ್ಟರು. ಅವರ ಸಂಗಾತಿ ಶ್ರೀ ತ್ರಿಪಾರಿ ತಮ್ಮ ೧೪ ಗುಂಟೆ ಪೂರಾ ಕೊಟ್ಟುಬಿಟ್ಟರು. ನಮ್ಮ ಸಹಯಾತ್ರಿಯಾದ ಜಲೇಶ್ವರಜೀ ಮಧುರಾದಲ್ಲಿ ೧ ಎಕರೆ ಕೊಟ್ಟರು ಕೀಲೂದಲ್ಲಿ ೭೫ ಎಕರೆ ಕೊಟ್ಟರು. ಬಲಿಯಾದಲ್ಲಿ ಅವರ ಕುಟುಂಬದ ೧೫ ಜನ ವಿನೋಬಾಜೀಯನ್ನು ೧೬ ನೆಯವರೆಂದು ತಿಳಿದು ಅವರಿಗೆ ಅಷ್ಟು ಪಾಲನ್ನು ಕೊಟ್ಟರು ಮೊನ್ನೆ ತಾನೇ ಶಾಸನಸಭಾ ಸದಸ್ಯರಾದ ರಾಮಾನಂದ ಪಾಂಡೇ ತಮ್ಮ ೬. ೭೧ ಎಕರೆ ಕೊಟ್ಟುಬಿಟ್ಟರು. ಇವೆಲ್ಲಾ ದಾನಗಳಿಗೆ ಗೋಪುರವಿಟ್ಟಂತೆ ಕೀಥಾದ ಪಂಚಾಯಿತೀ ಅಧಿಕಾರಿ ತೇಜಸಿಂಹ ಬಂದು ಪತ್ರ ಬರೆದು ತನ್ನ ಸರ್ವಸ್ವವನ್ನೂ—೨೫ ಗುಂಟ ಹೊಲ, ಮನೆ, ಜಮೀನುದಾರಿಯ ಪೂರಾ ಪರಿಹಾರ ಧನ, ಯಾರಿಗಾದರೂ ತನ್ನಲ್ಲಿ ನೌಕರಿ ಬೇಕಾದರೆ ಅದೂ ಕೂಡಾ—ದಾನ ಬರೆದುಕೊಟ್ಟರು

ಬರಹಜ್ ದಾರಿಯಲ್ಲಿ ನಮ್ಮ ಜೊತೆಯ ಯಾತ್ರಿಕರಾದ ಹರೀಶ್‌ಭಾಯಿಯ ಹಳ್ಳಿಯ ಬಳಿ ೫ ನಿಮಿಷ ನಿಂತೆವು. ಹಳ್ಳಿಯ

ಹೆಂಗಸರು ಹಾಡು ಹಾಡಿ ಆರತಿ ಎತ್ತಿದರು. ಹರೀಶ್ ನ ತಾಯಿ ಮುಂದೆ ಬಂದು ಪ್ರಣಾಮ ಮಾಡಿದರು. ಏನೋ ಮಾತನಾಡಲು ಆಕೆಗೆ ಬಯಕೆಯಿತ್ತು. ಆದರೆ ಮಾತು ಹೊರಡಲಿಲ್ಲ. ಏನಾದರೂ ಹೇಳಬೇಕೆ ಎಂದು ವಿನೋಬಾಜೀಯೇ ಕೇಳಿದರು. "ಹನ್ನೆರಡು ಗುಂಟೆ ಹೊಲ ಇದೆ. ಮನೆಯಲ್ಲಿ ೫ ಜನ ಇದ್ದಾರೆ. ನೀವು ೬ ನೆಯವರು. ಎರಡು ಗುಂಟೆ ಹೊಲ ಸ್ವೀಕರಿಸಬೇಕು" ಎಂದಳು ಆ ತಾಯಿ. ಕುಚೇಲನ ಅವಲಕ್ಕಿ ಇದ್ದಂತೆ! ಸಂಜೆಯ ಪ್ರಾರ್ಥನೆಯಲ್ಲಿ ವಿನೋಬಾ ಹೇಳಿದರು—"ಈ ಎರಡು ಗುಂಟೆ ನನಗೆ ಎರಡು ಲಕ್ಷಕ್ಕೆ ಸಮ. ನನ್ನ ಕೆಲಸಕ್ಕೆ ಆ ತಾಯಿ ಮಾಡಿದ ಆಶೀರ್ವಾದ ಇದು."

ಗೋರಖಪುರದಿಂದ ಮುಂದೆ ಹೋಗುತ್ತಿದ್ದಾಗ ದಾರಿ ತೋರಿಸಲು ನಮ್ಮ ಸಾಮಾನಿನ ಗಾಡಿಯ ಜೊತೆಯಲ್ಲಿ ಒಬ್ಬ ಹರಿಜನ ಹುಡುಗ ಬರುತ್ತಿದ್ದ. ಬಹಳ ಸಂತೋಷದಿಂದ ಅಂಜುತ್ತಾ "ನಾನೂ ಸ್ವಲ್ಪ ಭೂದಾನ ಮಾಡಬಹುದೇ?" ಎಂದು ಕೇಳಿದ. "ನಮ್ಮ ಮನೆಯಲ್ಲಿ ನಾವು ೧೨ ಜನ. ನಮಗೆ ೪ ಗುಂಟೆ ಹೊಲವಿದೆ. ನಾವು ಕೂಲಿಮಾಡದೆ ಬರೀ ಇದರಲ್ಲಿ ಜೀವನ ಮಾಡಲಾರೆವು. ಆದ್ದರಿಂದ ನಾನೂ ಸ್ವಲ್ಪ ಏಕೆ ಕೊಡಬಾರದು? ಒಂದೆರಡು ಗುಂಟೆ ಕೊಟ್ಟರೆ ಬಹಳ ಕಡಮೆ ಎನಿಸುತ್ತದೆ. ನನಗೆ ಏನೂ ಹೊಳೆಯುತ್ತಿಲ್ಲ. ತಾವೇನಾದರೂ ಸಲಹೆ ಕೊಡುತ್ತೀರಾ" ಎಂದು ನನ್ನನ್ನು ಕೇಳಿದ. ಏನು ಹೇಳಲಿ? ಅವನ ಕಾಲಿಗೆ ಎರಗಿದೆ. ಇದು ನಿಜವಾದ ಭಾರತ—ಮಹಾನ್, ಉದಾರ, ಸಹಜ ತಪಸ್ವೀ ಭಾರತ! ಆ ಹುಡುಗನ ಸಂತೋಷಾರ್ಥ ಒಂದೆರಡು ದಶಮಾಂಶ (ಡಿಸಿಮಿಲ್) ಎಕರೆ ತೆಗೆದುಕೊಂಡರು ವಿನೋಬಾ. ಊಟಮಾಡುವಾಗ ಈ ಹುಡುಗನ ಮಾತನ್ನು ಗಾಡಿ ಹೊಡೆಯುವವನಿಗೆ ಹೇಳಿದೆ. "ನಾನೂ ಒಂದು ದಾನ ಪತ್ರ ಬರೆಸುತ್ತೇನೆ" ಎನ್ನುತ್ತಾ ಅವನು ತನ್ನ ಪ್ರೇಮದ ಕುರುಹು ಎಂದು

ಒಂದು ದಶಮಾಂಶ ಹೊಲವನ್ನು ಕೊಟ್ಟ.

ಇನ್ನೊಂದು ಕಡೆ ನಮ್ಮ ಜೊತೆಯ ಬಾಲಯಾತ್ರಿಕ ಗೌತಮ ಬಜಾಜ್, ಮಂಗರೂ ಎಂಬ ಹರಿಜನನನ್ನು ವಿನೋಬಾಜೀಯ ಬಳಿ ಕರೆತಂದ. ಅವರ ಕೊಠಡಿಯಲ್ಲಿ ದರ್ಶನಾರ್ಥಿಗಳ ಗುಂಪು ನೆರೆದಿತ್ತು. ಅದರಲ್ಲಿ ಕೆಲವರು ಜಮೀನುದಾರರು, ಕೆಲವರು ಸಾಹುಕಾರರು, ಕೆಲವರು ನಿರಾಶ್ರಿತರು. ಗೌತಮ ಬಂದು "ತಾತಾ, ಈ ಅಣ್ಣನ ಬಳಿ ೨೧ ದಶಮಾಂಶ ಮಾತ್ರ ಹೊಲವಿದೆ ನಾನು ಎಷ್ಟೋ ತಿಳಿಸಿ ಹೇಳಿದರೂ ಒಪ್ಪದೆ ಅದನ್ನು ಪೂರಾ ಕೊಡುತ್ತೇನೆ ಎನ್ನುತ್ತಿದ್ದಾನೆ" ಎಂದು ದೂರು ಹೇಳಿದ ತನ್ನ ಸರ್ವಸ್ವವನ್ನು ಸಮರ್ಪಣ ಮಾಡುವ ಈ ಮಹಾದಾನಿಯನ್ನು ಕಂಡು ವಿನೋಬಾ ಕೃತಜ್ಞತಾ ಪೂರ್ಣ ಪ್ರಸನ್ನ ದೃಷ್ಟಿಬೀರಿದರು. ಆತ ವಿನೋಬಾಜೀಯ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡ. "ಮಹಾತ್ಮಾ, ಈ ಅಲ್ಪಕಾಣಿಕೆಯನ್ನು ಒಪ್ಪಿಕೊಳ್ಳಬೇಕು" ಎಂದು ಕೇಳಿಕೊಂಡ

"ಹಾಗಾದರೆ ನಿನಗೆ ಏನೂ ಉಳಿಯುವುದಿಲ್ಲವಲ್ಲಾ ?"

"ಹೇಗಾದರೂ ನನಗೆ ಗಿರಣಿ ಕೂಲಿ ಮಾಡುವುದು ತಪ್ಪದು. ಈ ಹೊಲದಿಂದ ನನ್ನ ಹೊಟ್ಟೆಯ ಪಾಡು ನಡೆಯುವುದಂತೂ ಇಲ್ಲ. ಮನೆಯಲ್ಲಿ ೫–೬ ಜನ ಇದೇವೆ."

"ಈಗ ಆ ಹೊಲದಲ್ಲಿ ಏನು ಬೆಳೆಯುತ್ತದೆ ?"

"ಸ್ವಲ್ಪ ಧಾನ್ಯ ಬಿತ್ತಿದ್ದೆ. ಅದನ್ನು ಕುಯಿದುಕೊಂಡಿದೇನೆ."

"ನಿನ್ನ ಭಾವನೆ ಕಂಡು ಬಹಳ ಹರ್ಷವಾಗಿದೆ ಸಾಕು ! ಈ ಹೊಲ ಇರಲಿ, ಬಿಡು"

ಎಷ್ಟು ಹೇಳಿದರೂ ಮಂಗರೂ ಕೇಳಲಿಲ್ಲ. "ನಾನು ದಾನ ಕೊಡಲು ನಿಶ್ಚಯಿಸಿಬಿಟ್ಟಿದೇನೆ. ನನ್ನನ್ನು ಅನುಗ್ರಹಿಸಬೇಕು" ಎಂದ. ಆಗ ವಿನೋಬಾಜೀ ಅವನ ದಾನಪತ್ರ ತೆಗೆದುಕೊಂಡು ಅದರ ಮೇಲೆ

"ಈ ಮನುಷ್ಯನ ಮನೆಯ ಪರಿಸ್ಥಿತಿ ನೋಡಿದರೆ ಈ ಹೊಲವನ್ನು ಅವನಿಗೇ ಕೊಡಬೇಕು. ಅವನ ಒತ್ತಾಯದಿಂದ ಅವನಿಗೆ ಸಮಾಧಾನವಾಗಲಿ ಎಂದು ನಾನಿದನ್ನು ತೆಗೆದುಕೊಂಡೆ. ಪ್ರಸಾದ ಎಂದು ಅವನಿಗೆ ಇದನ್ನು ಹಿಂದಕ್ಕೆ ಕೊಡುತ್ತೇನೆ" ಎಂದು ಬರೆದರು. ಮಂಗರೂ ಗದ್ಗದ ಹೃದಯದಿಂದ ಆ ಪ್ರಸಾದವನ್ನು ತೆಗೆದುಕೊಂಡ. ಮತ್ತೆ ವಿನೋಬಾಜೀಯ ಕಾಲಿಗೆ ಹಣೆಯೊತ್ತಿದ. ಅವನ ಪ್ರಸನ್ನ ಗಂಭೀರ ಮುಖಮುದ್ರೆಯಿಂದ ಇಡೀ ಗಾಳಿಯೇ ಪುಲಕಿತವಾಯಿತು.

ಹೀಗೆ ಇನ್ನೊಂದು ಕಡೆ ಒಬ್ಬ ಮುದುಕಿ. ಆ ದಾನದ ಅದ್ಭುತವನ್ನು ಕಂಡು ವಿನೋಬಾಜೀ ಸ್ವಯಂ ಗದ್ಗದಿತರಾದರು. ಆ ದಿನದ ಪ್ರವಚನವೆಲ್ಲಾ ಆಕೆಯ ಮಾತೇ. ಇವು ಕೇವಲ ಒಂದೆರಡು ದೃಷ್ಟಾಂತ ಈ ಬೃಹತ್ ಸಾಗರದಲ್ಲಿ ಎಷ್ಟು ರತ್ನಗಳೋ !

ಪೂರ್ವದಲ್ಲಿ ಭಕ್ತಿಭಾವ ಹೆಚ್ಚು. ೧೮೫೭ ರಿಂದ—೧೯೪೨ ರ ವರೆಗೆ ನಡೆದ ಎಲ್ಲ ರಾಷ್ಟ್ರೀಯ ಚಳುವಳಿಗಳಲ್ಲಿ ಪೂರ್ವ ಭಾಗವೇ ಮುಂದೆ. ದಾರಿಯುದ್ದಕ್ಕೂ ನೂರಾರು ಜನ ಗುಂಪಾಗಿ ವಿರಾಟ್—ಮಾನವನ ದರ್ಶನ ಮಾಡಿಸುತ್ತಿದ್ದರು ಎಲ್ಲ ಜಿಲ್ಲೆಗಳಲ್ಲೂ ಜನ ಉಕ್ಕಿ ತುಳುಕಿದರು ಈ ಗುಂಪು ಬರೀ ಪ್ರೇಕ್ಷಕರದಲ್ಲ. ಅದರಲ್ಲಿ ಅನೇಕರು ದಾನಕೊಡಲು ಬಂದವರಲ್ಲ. ಯಾರ ಪರವಾಗಿ ಈ ಬೈರಾಗಿ "ಏಕಲಾ ಚಲೋ" ಎಂಬ ನಿಷ್ಠೆಯಿಂದ "ಚರೈವೇತಿ" ಎಂಬ ಮಂತ್ರದಂತೆ ನಡೆಯುತ್ತಾ ಹೋಗುತ್ತಿದ್ದಾರೋ ಆ ವಿರಾಟ್—ಮಾನವ ಸಮೂಹ ಇದು ತಮ್ಮ ಬಯಕೆಯ ಬಯಕೆ, ತಮ್ಮ ಉಸುರಿನ ಸೊಲ್ಲು, ತಮ್ಮ ಮೆಲುದನಿಯ ಮಹದ್ಘೋಷಣೆ ಆದ ಈ ಮೂರ್ತಿಯನ್ನು ಕಣ್ಣಾರೆ ನೋಡಲು ಬಂದ ಜನರ ಗುಂಪು ಅದು. ಆ ದುಃಖಿತ - ಪೀಡಿತರೂ ತಮ್ಮ ಕೈಲಾದುದನ್ನು ತಾವು ಕೊಟ್ಟರು. ಈ ಬೈರಾಗಿಯ ಜೋಳಿಗೆ ತುಂಬಿದರು. ಪೂರ್ವಭಾಗದಲ್ಲಿ ಅನೇಕ

ಕಡೆ ಗಂಗಾ, ಘಾಗ, ಶಾರದಾಗಳ ಪ್ರವಾಹದಿಂದ ವರುಷ ವರುಷವೂ ಸಾವಿರಾರು ಎಕರೆ ನಷ್ಟವಾಗುತ್ತದೆ. ಗೊಂಡಾ, ಬಲಿಯಾ ಜಿಲ್ಲೆಗಳಲ್ಲಿ ಸದಾ ಈ ಭಯ ಇದ್ದೇ ಇದೆ. ಬಲಿಯಾ ಪಟ್ಟಣ ಈ ವೇಳೆಗೆ ಮೂರು ಸಲ ಕೊಚ್ಚಿಹೋಗಿದೆ ಆದರೆ ಈ ಎರಡು ಜಿಲ್ಲೆಗಳಲ್ಲೇ ಬಹಳ ಹೆಚ್ಚು ಹೊಲ ಸಿಕ್ಕದ್ದು. ಗೊಂಡಾ ಜಿಲ್ಲೆಯಲ್ಲಂತೂ ಅದ್ಭುತ ದರ್ಶನವಾಯಿತು. ಇಡೀ ಜಿಲ್ಲೆಯಲ್ಲಿ ವಿನೋಬಾಜೀ ಎಲ್ಲೆಲ್ಲಿ ದಾರಿ ನಡೆದರೋ ಅಲ್ಲಿ ಬಡವರ ಬಂಧು ಯಾರೋ ಹೋಗುತ್ತಿದಾರೆ ಎಂದು ಒಂದೊಂದು ಅಂಗ್ಯೆ ಅಗಲದ ನೆಲವೂ ಎದ್ದೆದ್ದು ಸ್ವಾಗತಿಸುತ್ತಿದ್ದಂತಿತ್ತು. ಮನುಷ್ಯರು ಮಾತ್ರವಲ್ಲ, ಚರಾಚರಕ್ಕೂ ಯಾರೋ ಮಹಾತ್ಮರು ಬರುತ್ತಿದಾರೆ ಎಂದು ತಿಳಿದಂತಿತ್ತು. ಕೆಲಸಗಾರರು ಬಹಳ ತಲ್ಲೀನತೆಯಿಂದ ಪರಿಶ್ರಮದಿಂದ ನಿಷ್ಠೆಯಿಂದ ಹಗಲಿರುಳೆನ್ನದೆ ಜನತೆಯಲ್ಲಿ ಭೂದಾನದ ಸಂದೇಶ ಹರಡಿದ್ದರು. ಈ ಯಾತ್ರೆಯ ಸಮಯದಲ್ಲೇ ೫,೦೦೦ ಕ್ಕಿಂತ ಹೆಚ್ಚು ದಾನ ಪಡೆದರು. ೨೦,೦೦೦ ಎಕರೆ ದಾನ ಗಳಿಸುವ ಸಂಕಲ್ಪ ಮಾಡಿದರು. ಎಲ್ಲಾ ನೋಟವೂ ದರ್ಶನೀಯ ಅನುಕರಣೀಯ ಆಗಿತ್ತು. ಇದೆಲ್ಲದರ ಫಲವಾಗಿ ಎಂದು ಶ್ರೀ ನವರಂಗ ರಾಯ್‌ಗೂ ಅವರ ಜತೆಗಾರರಿಗೂ ದರಿದ್ರನಾರಾಯಣನ ಆಶೀರ್ವಾದ ದೊರೆಯದೆ ಇದ್ದೀತೆ? ಜಿಲ್ಲೆಯ ಯಾತ್ರೆ ಮುಗಿದಾಗ ತಮ್ಮ ಬೀಳ್ಕೊಡಿಗೆಯ ಭಾಷಣದಲ್ಲಿ ವಿನೋಬಾಜೀ ಹೇಳಿದರು. "ಗೊಂಡಾ ಜಿಲ್ಲೆ ಪ್ರೀತಿಪೂರ್ಣ ಸಜ್ಜನ ಕೆಲಸಗಾರರ ಜಿಲ್ಲೆ. ಸಜ್ಜನರೊಡನೆ ಸಪ್ತ ಪದೇನ ಸಖ್ಯಂ—ಏಳು ಹೆಜ್ಜೆ ಹಾಕಿದರೆ ಗೆಳೆತನ ಆಗುತ್ತದೆ ಏಳು ಹೆಜ್ಜೆಯಲ್ಲ, ಏಳು ದಿನ ಇವರ ಜೊತೆಗೆ ನಾನು ಕಳೆದಿದ್ದೇನೆ ಬೀಳ್ಕೊಡಿಗೆಯ ನಿಮಿತ್ತ ಅವರು ಹೇಳಿದ ನಾಲ್ಕು ಮಾತು ಅವರ ಮನಸ್ಸಿನ ಸ್ನೇಹ ಭಾವವನ್ನು ಹೇಗೆ ತಿಳಿಸುತ್ತದೊ ನೋಡಿದೀರಿ ನಾನು ಕೈಹಿಡಿದ ಕೆಲಸ ಈ ಜಿಲ್ಲೆ

ಮಾತ್ರವಲ್ಲ, ಬರೀ ಹಿಂದೂಸ್ತಾನವಲ್ಲ, ಇಡೀ ಜಗತ್ತಿಗೇ ಮಹತ್ವ ಪೂರ್ಣವಾದ್ದು ಎಂಬುದನ್ನು ಅವರು ಮನಗಂಡಿದಾರೆ. ಇದನ್ನು ನಾವು ಸಫಲವಾಗಿಸದಿದ್ದರೆ ನಮ್ಮ ಬಾಳು ಭೀಷಣವಾದೀತು. ನಾವು ಸಫಲರಾದರೆ ಹಿಂದುಸ್ತಾನದ ಜನರ ಆರ್ಥಿಕ, ಅಷ್ಟೇ ಅಲ್ಲ, ಆಧ್ಯಾತ್ಮಿಕ ಉನ್ನತಿಯೂ ಆದೀತು ಬಹುಕಾಲದಿಂದ ನಡೆದು ಬಂದ ನಮ್ಮ ಸಭ್ಯತೆಯ ಸಂದೇಶವೇ ಅದು ಧರ್ಮ—ಅರ್ಥ ಎರಡನ್ನೂ ಒಟ್ಟಿಗೆ ನಡೆಸಬಹುದು. ಅರ್ಥವನ್ನು ನಿಯಮನ ಮಾಡಲಾರದ, ಸಮಾಜವನ್ನು ನಿಗ್ರಹಿಸಲಾರದ ಧರ್ಮ, ಧರ್ಮವಲ್ಲ. ಧರ್ಮಬುದ್ಧಿಯನ್ನು ಸ್ಥಿರಗೊಳಿಸಲಾರದ, ಅದನ್ನು ನಷ್ಟಗೊಳಿಸುವ ಅರ್ಥ, ಅರ್ಥವಲ್ಲ ಆದ್ದರಿಂದ ಧರ್ಮವಿರುದ್ಧ ಅರ್ಥ ಅರ್ಥವಲ್ಲ. ಅರ್ಥ ವಿರುದ್ಧ ಧರ್ಮ ಧರ್ಮವಲ್ಲ.

"ಇದು ಸರ್ವತೋಭದ್ರಕಾರ್ಯ. ಯಾವ ದೃಷ್ಟಿಯಿಂದ ನೋಡಿದರೂ ಇದರಿಂದ ಒಳಿತೇ ಆದೀತು. ಶುಭಕಾರ್ಯ ಎಲ್ಲದರಲ್ಲೂ ಹೀಗಿರದು ಒಳಿತಿನಲ್ಲಿ ಸ್ವಲ್ಪ ಕೆಡುಕು ಇರುತ್ತದೆ. ಅವು ಭದ್ರ, ಸರ್ವತೋಭದ್ರವಲ್ಲ ಆದರೆ ಇದು ಕೇವಲ ಭಕ್ತಿಯ ಕೆಲಸ. ಭಕ್ತಿಯಲ್ಲಿ ಪ್ರಯತ್ನಿಸಿದರೂ ಕೆಡುಕು ಬಾರದು ಇದು ಕೇವಲ ಶುದ್ಧ ಸ್ವರೂಪದ ಕಾರ್ಯ, ಅಂತೇ ಭಕ್ತಿಯ ಕಾರ್ಯ. ಈ ಕೆಲಸ ಸಫಲವಾಗುವ ಮಾರ್ಗವೂ ಸರ್ವತೋಭದ್ರ. ಈ ಕೆಲಸದ ಗಜಿಬಿಜಿಯಲ್ಲಿಯೂ ನನಗೆ ಚಿಂತನೆಗೆ ಹೊತ್ತು ಸಿಗುತ್ತಿದೆ, ನನ್ನ ಭಾಗ್ಯ. ಶಬ್ದ ತಾವೇ ಹೊಳೆಯುತ್ತವೆ. ಗೊಂಡಾ ಜಿಲ್ಲೆಯ ಕಾರಣ ಈಗಲೇ ಒಂದು ಶಬ್ದ ಹೊಳೆಯಿತು ಈ ಶಬ್ದವೇ ನನ್ನ ಸಂದೇಶ ಈ ಕೆಲಸ "ಸರ್ವತೋಭದ್ರ" ಎಂದು ಎಲ್ಲರೂ ಅರಿಯಲಿ ಇದರಲ್ಲಿ ತೊಡಗಲಿ. ಈ ಕಾರಣದಿಂದ ಬಾಳಿನಲ್ಲಿ ಪರಿವರ್ತನೆ ಆಗುವಂತಿದ್ದರೆ ಆಗಿಬಿಡಲಿ. ಬಡವರಿಗಾಗಿ ಬದುಕು ಮೀಸಲಾಗಲಿ."


**ವೈದಿಕ ವಿಶ್ವಾತ್ಮಭಾವ :** ಈ ಸಲ ವಿನೋಬಾಜೀ ಒಂದು ಹೊಸ ಮಾತು ಮೊದಲಿಟ್ಟರು. ಒಂದು ಕಡೆ ಅವರಿಗಾಗಿ ಹಾಲು-ಹಣ್ಣಿನ ವ್ಯವಸ್ಥೆ ಮಾಡಿದರು. ಅದಕ್ಕಾಗಿ ತಂದಿದ್ದ ಹಣ್ಣುಹಂಪಲು ಎಲ್ಲವನ್ನೂ ಸೇರಿದ್ದ ಜನರಿಗೆ ಹಂಚಿ ಅವರಿಂದ ಹೊಲ ಬೇಡಿದರು.

ಹೀಗೆ ಪ್ರಸಾದ ತೆಗೆದುಕೊಳ್ಳುವ-ಹೊಲ ನೀಡುವ ಒಂದು ಪದ್ಧತಿ ಮೊದಲಾಯಿತು. ಇಲ್ಲಿಂದ ಮುಂದೆ ಜನ ಪ್ರಸಾದ ತಂದಿಡುತ್ತಿದ್ದರು. ಅದನ್ನು ಹಂಚಿದಾಗ ಪ್ರಸಾದ ಪಡೆದು ಹೊಲವನ್ನು ನೀಡುತ್ತಿದ್ದರು. ಮೊದಲು ಎರಡು ಎಕರೆ ಸಿಕ್ಕಿದ ಕಡೆ ಈ ಪ್ರಸಾದದ ದೆಸೆಯಿಂದ ೨೦ ಎಕರೆ ಸಿಕ್ಕಿತು. ಏನೂ ಸಿಗದಿದ್ದ ಕಡೆ ಸಹಜವಾಗಿಯೇ ಹತ್ತು-ಹನ್ನೆರಡು ಎಕರೆ ದೊರೆತವು. ಇದರಿಂದ ಪ್ರತಿಯೊಂದು ಸ್ಥಳದಲ್ಲೂ ವಿನೋಬಾ ೮-೧೦ ನಿಮಿಷ ನಿಲ್ಲಬೇಕಾಗುತ್ತಿತ್ತು. ಬಿಡಾರ ಸೇರುವ ಹೊತ್ತಿಗೆ, ಗಂಟೆ ಎರಡು ಗಂಟೆ ತಡವಾಗುತ್ತಿತ್ತು. ಬಿಸಿಲು ಮೇಲೇರುತ್ತಿತ್ತು. ಆಯಾಸ ಆಗುತ್ತಿತ್ತು. ಆದರೆ ಒಂದು ಗುಂಟೆ ಹೊಲ ಸಿಕ್ಕರೂ ಒಬ್ಬ ಮನುಷ್ಯನಿಗೆ ಜೀವನದಾನ ಸಿಕ್ಕಂತೆ ಅಂಥದರಲ್ಲ ದರಿದ್ರನಾರಾಯಣ ಸೇವೆಯಲ್ಲಿ ವಿನೋಬಾ ಕಿಂಚಿತ್ತಾದರೂ ಅಸಡ್ಡೆ ಮಾಡಿಯಾರೆ? ಬಾಪೂ ಒಂದೊಂದು ಕಾಸಿಗೂ ಕೈಯೊಡ್ಡುತ್ತಿದ್ದರು. ವಿನೋಬಾಗೆ ಇಷ್ಟೇಕೆ ಹೊಲದ ಹಸಿವು? ಅವರ ಹೊಟ್ಟೆ ತೀರಾ ಚಿಕ್ಕದು. ಆದರೆ ರುದ್ರಸೂಕ್ತದಲ್ಲಿ ಋಷಿ ಬೇಡಿಲ್ಲವೆ "ಯವಾಶ್ಚಮೇ ತಿಲಾಶ್ಚಮೇ ಗೋಧೂಮಾಶ್ಚಮೇ"—ನನಗೆ ಜವೆ ಕೊಡು, ಎಳ್ಳು ಕೊಡು, ಗೋಧಿ ಕೊಡು. ಆ ಋಷಿಯ ಹೊಟ್ಟೆ ಚಿಕ್ಕದೇ. ಆದರೆ ಬೇಡುವಾಗ ಅವನ ಆತ್ಮ ವಿಶ್ವಾಕಾರವಾಗಿ ಬೇಡುತ್ತಿತ್ತು. ಇದೇ ವೈದಿಕ ವಿಶ್ವಾತ್ಮಭಾವ ಎಂದರು ವಿನೋಬಾ.

## ೧೫ ಮಂತ್ರದಿಂದ ಕ್ರಾಂತಿ

**ಅಧಿಕಾರಿಗಳು ಖಾದಿ ಉಡಲಿ** : ಪೂರ್ವದ ಜಿಲ್ಲೆಗಳಲ್ಲಿ ಕೆಲವು ವರುಷದಿಂದ ಮಳೆ ಸರಿಯಾಗಿ ಬಿದ್ದಿಲ್ಲ ಜನ ಬರದ ಚಿಂತೆಯಲ್ಲಿದ್ದಾರೆ. ಈ ಬರದ ಕಾಟವನ್ನು ಇದಿರಿಸಲು ವಿನೋಬಾ ಚತುರ್ವಿಧ ಕಾರ್ಯಕ್ರಮ ಹೇಳಿದರು. ಅದರಲ್ಲಿ ಸಾರಸ್ವತ ಪ್ರಯತ್ನವೂ ಒಂದು. ನೆಲದ ಒಳಗೆ ಅಡಗಿರುವ ಗುಪ್ತ ಸರಸ್ವತಿಯನ್ನು-ನೀರಿನ ಸಂಗ್ರಹವನ್ನು-ಮೇಲೆ ಚಿಮ್ಮಿಸಬೇಕು. ಪ್ರತಿ ಹೊಲದಲ್ಲೂ, ಪ್ರತಿ ಹಳ್ಳಿಯಲ್ಲೂ ಬಾವಿ ತೋಡಬೇಕು ಬಾವಿ ತೋಡಲು ನಮಗೆ ಸಾಕಷ್ಟು ಶ್ರಮಬಲ—ಆಳುಬಲ ಇದೆ ಜನ ಸಿದ್ಧವಾಗಿದ್ದಾರೆ ಆದರೆ ಸಿಮೆಂಟ್, ಕಲ್ಲಿದ್ದಲು ಮೊದಲಾದವು ಬೇಕು ಸರಕಾರ ಕೊಟ್ಟರೆ ಇವು ಉಂಟು. ಅದಕ್ಕಾಗಿ ಸರ್ಕಾರಕ್ಕೆ ತಮ್ಮ ಭಾಷಣದಲ್ಲಿ ವಿನೋಬಾ ಬಿನ್ನಹ ಮಾಡಿದರು. ಚತುರ್ವಿಧ ಕಾರ್ಯಕ್ರಮದಲ್ಲಿ ಖಾದೀ-ಗ್ರಾಮೋದ್ಯೋಗಗಳನ್ನು ತಿಳಿಸುತ್ತಾ ಸರಕಾರಿ ಅಧಿಕಾರಿಗಳೂ ಕೂಡಾ ಖಾದಿ ಧರಿಸಬೇಕು ಎಂದರು. ಖಾದಿ ಒಂದು ಸಭ್ಯ ಉಡುಗೆ. ನಮ್ಮ ದೇಶದ ಕೋಟಿಗಟ್ಟಲೆ ಬಡ ಜನ ಮಾಡಿದ ಬಟ್ಟೆಯನ್ನು ಉಡಲು-ತೊಡಲು ನಮಗೆ ಅಭಿಮಾನ, ಹೆಮ್ಮೆ ಎನಿಸಬೇಕು ಹೀಗೆ ಸಾರ್ವಜನಿಕವಾಗಿ ಈ ಉಡುಗೆ ತೊಡಿಗೆಯ ಮಾತನ್ನು ಇದುವರೆಗೆ ವಿನೋಬಾಜೀ ಆಡಿರಲಿಲ್ಲ ದಿಲ್ಲಿಯಲ್ಲಿ ಯೋಜನಾ ಸಮಿತಿಯೊಡನೆ ಚರ್ಚಿಸುವಾಗ ಇದನ್ನು ಒತ್ತಿ ಹೇಳಿದ್ದರು ಇವರ ತರ್ಕವನ್ನು ಅವರೂ ಅರಿತುಕೊಂಡರು ಆದರೆ ಈ ಸಲ ಸ್ಪಷ್ಟವಾಗಿಯೇ ಸರಕಾರಿ ಅಧಿಕಾರಿಗಳು ಖಾದಿ ತೊಡಬೇಕೆಂದು ಸೂಚನೆ ಕೊಟ್ಟರು.


**ವಿಚಾರವೇ ಶಸ್ತ್ರ, ತಂತ್ರ, ಮಂತ್ರ** ಇಲ್ಲಿ ಗ್ರಾಮೋ



ಹಳ್ಳಿಯ ಬಡವನೊಬ್ಬನ ಗುಡಿಸಲಲ್ಲಿ ವಿನೋಬಾ ಯೋಗಕ್ಷೇಮ ವಿಚಾರಣೆ



ಹಳ್ಳಿಯಲ್ಲಿ ಒಂದು ಸಭೆ—ವಿನೋಬಾ ಭೂದಾನ ವಿಚಾರವನ್ನು ವಿವರಿಸುತ್ತಿದ್ದಾರೆ



ಒಂದು ಏರಿಯನ್ನು ಏರುತ್ತಿದ್ದಾರೆ

ದ್ಯೋಗ ಇಲ್ಲವೇ ಇಲ್ಲ. ಗಾಣದ ಸಕ್ಕರೆ ಆಗುತ್ತಿತ್ತು ಗಿರಣಿ ಬಂದು ಅದು ನಿಂತುಹೋಯಿತು. ಉಳಿದುಕೊಂಡಿರುವ ಅಲ್ಪಸ್ವಲ್ಪ ಹೇಗೂ ಉಳಿದುಕೊಂಡಿದೆ. ಹಿಂದೆ ದೇವರಿಯಾ ಒಂದರಿಂದಲೇ ಒಂದು ಕೋಟಿ ರೂಪಾಯಿನ ಕೈಸಕ್ಕರೆ ಹೊರಗೆ ಹೋಗುತ್ತಿತ್ತು. ಭೂದಾನ ಯಜ್ಞ ಸಫಲವಾದರೂ ಬರೀ ಭೂಮಿಯಿಂದಲೇ ದೇಶದ ಪ್ರಶ್ನೆ ಬಗೆಹರಿಯದು. ಆದ್ದರಿಂದ ವಿನೋಬಾಜೀ ಹೋದಲ್ಲೆಲ್ಲಾ ಗ್ರಾಮೋದ್ಯೋಗದ ಮಾತನ್ನು ಒತ್ತಿಹೇಳುತ್ತಾರೆ. ಯಾತ್ರೆಯಲ್ಲಿ ನಿತ್ಯವೂ ನೂಲುವ ಕಾರ್ಯಕ್ರಮು ಇದ್ದೇ ಇದೆ. ಆ ಹಳ್ಳಿಗೆ ಅದೊಂದು ಪ್ರಭಾವಕಾರಿ ಪ್ರದರ್ಶನವೇ ಆಗುತ್ತದ. ನಾಲದ್ದಕ್ಕೆ ವಿನೋಬಾಜೀ ಅದರ ಬಗ್ಗೆ ಮಾತೂ ಆಡುತ್ತಾರೆ. "ನಮ್ಮ ಕೊರಡಿಯಲ್ಲಿ ನಾವು ನೂಲಲಾರೆವೇ? ನಾವು ಇದನ್ನು ನೋಡಿ ವಿಚಾರಮಾಡಿ ನೂಲಲು ತೊಡಗಬೇಕು ಎಂದು ಇಲ್ಲಿ ನೂಲುತ್ತೇವೆ ನಿಮ್ಮ ಹಳ್ಳಿಯಲ್ಲೇ ನಿಮ್ಮ ಹತ್ತಿಯಿಂದಲೇ ನಿಮ್ಮ ಬಟ್ಟೆ ಪೂರ್ಣವಾಗಿ ತಯಾರಾಗಬೇಕು. ಬಟ್ಟೆಯ ರೂಪದಲ್ಲಿ ನಾವೀಗ ಒಬ್ಬೊಬ್ಬರೂ ತಲೆಗಂದಾಯ ಕೊಡುತ್ತಿದೇವೆ ಇದು ನಿಲ್ಲಬೇಕು." ಊಟ- ತಿಂಡಿಯ ವಿಷಯದಲ್ಲೂ ಯಾತ್ರಿಕರಿಗೆ- ತಮ್ಮ ಗುಂಪಿನವರಿಗೆ–ಗ್ರಾಮೋದ್ಯೋಗದ ಪದಾರ್ಥಗಳೆ ಬೇಕು ಎನ್ನುತ್ತಾರೆ ವಿನೋಬಾ. ಕೈಯಿಂದ ಬೀಸಿದ ಹಿಟ್ಟು, ಒನಕೆಯಿಂದ ಕುಟ್ಟಿದ ಅಕ್ಕಿ, ಇವನ್ನು ಪ್ರೀತಿಯಿಂದ ಸಮುಗಾಗಿ ಹಳ್ಳಿಯವರು ಸಿದ್ಧಗೊಳಿಸುತ್ತಾರೆ. ಇತ್ತೀಚೆಗೆ ನಾವು ಬಿಡಾರದಲ್ಲಿ ಊಟ ಮಾಡುವುದಿಲ್ಲ. ಹಳ್ಳಿಯಲ್ಲಿ ಒಬ್ಬೊಬ್ಬರು ಒಂದೊಂದು ಮನೆಗೆ ಹೋಗುತ್ತೇವೆ. ಇದರಿಂದ ಜನರ ಸಂಪರ್ಕ ಬೆಳೆಯುತ್ತದೆ. ವಿಚಾರಕ್ಕೆ ಇಂಬು ದೊರೆಯುತ್ತದೆ. ವಿನೋಬಾಜೀ ಹೇಳುವಂತೆ, "ವಿಚಾರವೇ ನಮ್ಮ ಶಸ್ತ್ರ, ವಿಚಾರವೇ ನಮ್ಮ ಶಾಸ್ತ್ರ, ವಿಚಾರವೇ ಯಂತ್ರ–ತಂತ್ರ. ವಿಚಾರವಲ್ಲದೆ ನಮ್ಮಲ್ಲಿ ಮತ್ತಾವ ಶಕ್ತಿಯೂ ಇಲ್ಲ."

**ಶವವನ್ನಲ್ಲ ಶಿವನನ್ನು ನೋಡಿ**: ಪೂರ್ವ ಜಿಲ್ಲೆಗಳಲ್ಲಿ ಹೆಂಗಸರ ಸಮಸ್ಯೆ ಬಹಳ ದುಃಖಕರವಾಗಿದೆ. ವಿನೋಬಾಜೀಯ ಭೇಟಿಮಾಡಲು ಹೆಂಗಸರಿಗೆ ಬಹಳ ಕುತೂಹಲ. ಹಗಲು ಬರುವಂತಿಲ್ಲ ಆದ್ದರಿಂದ ರಾತ್ರಿ ಬರುತ್ತಿದ್ದರು. ಮೊಹಮದಾಬಾದಿನಲ್ಲಿ ರಾತ್ರಿ ಹೊತ್ತು ಒಂದು ಮೈಲಿ ದೂರದಿಂದ ನಮ್ಮ ಬಿಡಾರಕ್ಕೆ ಬಂದರು. ಹಗಲು ಬರಲು ಪರದೆ ಅವರಿಗೆ ಅಡ್ಡಿ. ನಗರಾದಲ್ಲೂ ಹೆಂಗಸರು ರಾತ್ರಿ ಹೊತ್ತು ದರುಶನಕ್ಕೆ ಬಂದರು. ಆಜಂಘಡ, ಮವೂ ಮುಂತಾದಲ್ಲಿಯೂ ಹೀಗೆ ಆಯಿತು. ನರಪೀಯಲ್ಲಿ ರಾತ್ರಿಯೂ ಬರಲು ಅವರಿಗೆ ಬಿಡುವಾಗಲಿಲ್ಲ. ನಸುಕಿನಲ್ಲಿ ಮೂರು ಗಂಟೆಗೆ ಎದ್ದು ವಿನೋಬಾಜೀಯ ಕೊಠಡಿಯಲ್ಲಿ ಬಂದು ಕೂತರು. ನಾಲ್ಕು ಗಂಟೆಯ ಪ್ರಾರ್ಥನೆಯಲ್ಲಿ ಭಾಗವಹಿಸಿ ಪ್ರಣಾಮಮಾಡಿ ಹೊರಟುಹೋದರು. ಶರಣ ದರ್ಶನದಿಂದ ಪುಣ್ಯಸಿಗುತ್ತದೆ ಎಂಬ ಭಾವನೆ ಅವರದು. ಆದ್ದರಿಂದಲೇ ಇಂಥ ವಿಷಮ ಪರಿಸ್ಥಿತಿಯಲ್ಲೂ ಬರುತ್ತಿದ್ದರು. "ಶವದ ದರ್ಶನ ಏನು ಮಾಡುತ್ತೀರಿ? ಶಿವ ಒಳಗಡೆ ಇದಾನೆ. ಅವನ ದರ್ಶನ ಮಾಡಿ. ನನ್ನ ವಿಚಾರದಲ್ಲಿ ಅವನು ಪ್ರಕಟವಾಗುತ್ತಿದಾನೆ. ಆದರೆ ನೀವು ಆ ವಿಚಾರವನ್ನೂ ಕೇಳಲಾರಿರಿ. ಹೋಗಲಿ ನನ್ನ ಪುಸ್ತಕಗಳನ್ನಾದರೂ ಓದಿರಿ" ಎಂದು ವಿನೋಬಾ ಅವರಿಗೆ ಹೇಳಿದರು. ಈ ಬಗೆಯ ವಿಚಾರ ಪ್ರಚಾರದಿಂದಲೇ ಉತ್ತರ ಪ್ರದೇಶದ ಅರ್ಧಬಲವಾದ ನಾರೀಶಕ್ತಿ ಎಚ್ಚರಗೊಳ್ಳಬಲ್ಲದು. ತೆಲಂಗಾಣದಲ್ಲಿ ಕಮ್ಯೂನಿಸ್ಟರ ಪ್ರಚಾರ ಹೆಂಗಸರಲ್ಲಿ ಬಲವಾಗಿ ಹರಡಿದೆ.

**ವಿಚಾರ ಪ್ರಚಾರದ ಮಹತ್ವ**: ಈ ಯಾತ್ರೆಯಲ್ಲಿ ಭೂದಾನ ಯಜ್ಞಕ್ಕಿಂತ ವಿಚಾರ ಪ್ರಚಾರಕ್ಕೆ ಕಡಮೆ ಸ್ಥಾನ ಕೊಟ್ಟಿಲ್ಲ. ಎಷ್ಟೇ ಕೆಲಸವಿರಲಿ, "ಗೀತಾ ಪ್ರವಚನ"ವನ್ನು ಯಾರಾದರೂ ತಂದರೆ

ಅದಕ್ಕೆ ಹಸ್ತಾಕ್ಷರ ಹಾಕಿ ಕೊಡುತ್ತಾರೆ. ಬಲಿಯಾದಲ್ಲಿ ಐದು ನೂರಕ್ಕಿಂತ ಹೆಚ್ಚು ಗೀತಾ ಪ್ರವಚನ ಮಾರಿಹೋದವು. ದಿನವೂ ಒಬ್ಬರಾದರೂ ಸರ್ವೋದಯಕ್ಕೆ ಚಂದಾದಾರರಾಗುತ್ತಾರೆ. ಇದರಿಂದ ಈ ಹಳ್ಳಿಗಳ ಸಂಬಂಧ ನಮಗೆ ಕಡೆತನಕ ಉಳಿಯುತ್ತದೆ.

ಪೂರ್ವದ ಜಿಲ್ಲೆಗಳಲ್ಲಿ ಅಧಿಕಾರಿಗಳು ಚೆನ್ನಾಗಿ ಸಹಕರಿಸಿದರು. ಅಧಿಕಾರಿಗಳು ಎಂದಲ್ಲ ವಿನೋಬಾಜೀ ಹಲವು ಸಾರಿ "ನನಗೆ ಈ ಕೆಲಸದಲ್ಲಿ ಎಲ್ಲರ ಸಹಕಾರವೂ ಬೇಕು. ವೈಯಕ್ತಿಕವಾಗಿ ಬೇಕು. ಕೆಲವರು ಅಧಿಕಾರಿಗಳು ಜಿಲ್ಲೆಯೆಲ್ಲಾ ತಿರುಗಿ ತಮಗೆ ತಿಳಿದವರೆಲ್ಲರಿಂದಲೂ ಭೂದಾನ ಸಂಗ್ರಹಿಸಿದಾರೆ. ಅವರು ಈ ಪ್ರವಾಸಕ್ಕೆ ಟಿ. ಎ ತೆಗೆದುಕೊಳ್ಳಬಹುದಿತ್ತು ಎಷ್ಟೋ ಜನ ಹಾಗೆ ಮಾಡಲಿಲ್ಲ." ಎಂದು ಹೇಳಿದರು. ಬಲಿಯಾ ಜಿಲ್ಲೆಯಲ್ಲಿ ತನ್ನ ನೆರೆಹೊರೆಯ ಹಳ್ಳಿಗಳಲ್ಲಿ ಸಾಧ್ಯವಾದಷ್ಟು ಹೆಚ್ಚು ಭೂದಾನ ಸಂಗ್ರಹ ಮಾಡಬೇಕೆಂದು ಒಬ್ಬ ಶಾನುಭೋಗ ವಿನೋಬಾಜೀ ಬಂದ ದಿನ ಉಪವಾಸ ವ್ರತ ಮಾಡಿದ. ತನ್ನ ಒಂದು ಎಕರೆ ಹೊಲ ನೀಡಿದ. ೬೦ ಜನರಿಂದ ಹೊಲ ನೀಡಿಸಿದ. ಗಾನೀಪುರದ ಒಬ್ಬ ವ್ಯಕ್ತಿ ನಾನೇ ಕೊಡದಿದ್ದರೆ ಇನ್ನೊಬ್ಬರನ್ನು ಹೇಗೆ ಬೇಡಲಿ ಎಂದು ೬ ಎಕರೆ ಹೊಲ ಕೊಟ್ಟ. ಈ ಕೆಲಸ ಸರ್ವತೋಭದ್ರ ಎನ್ನಲು ಇವೇ ದೃಷ್ಟಾಂತ.

ಆದರೆ ಅಧಿಕಾರಿಗಳ ಈ ಸಹಕಾರ ಕಮ್ಯೂನಿಸ್ಟ್ ಗೆಳೆಯರಿಗೆ ಸಹನವಾಗುತ್ತಿಲ್ಲ. ಅದು ಉಚಿತವೇ ಎಂದು ವಿನೋಬಾಜೀಯನ್ನು ಕೇಳಿದರು. ಸಾರ್ವಜನಿಕ ಸಭೆಯಲ್ಲೇ ವಿನೋಬಾಜೀ ಅವರ ಸಂದೇಹ ನಿವಾರಣೆ ಮಾಡಿದರು. 'ಈ ಕೆಲಸ ಎಲ್ಲರ ಸಹಕಾರದಿಂದಲೂ ಆಗಬೇಕು. ಯಾರಿಗೂ ಇದರಲ್ಲಿ ನಿಷೇಧವಿಲ್ಲ' ಎಂದರು. 'ಈ ಅಧಿಕಾರಿಗಳು ಬಲವಂತವಾಗಿ ಹೊಲ ಕೊಡಿಸಿದ್ದರೆ, ನಿಮಗೆ

ಹೇಗೆ ತಿಳಿಯಬೇಕು' ಎಂದು ಒಬ್ಬ ಕೇಳಿದ. ವಿನೋಬಾಜೀ "ನನಗೆ ಬಲವಂತದಿಂದ ಹೊಲ ಬೇಕಾಗಿಲ್ಲ ಎಂದು ಹಲವು ಸಲ ಹೇಳಿದೇನೆ. ದಾನಪತ್ರ ಶಾಸನಬದ್ಧವಾದೀತು. ಆದರೆ ಇದು ಬಲವಂತದ ದಾನ ಎಂದು ನನಗೆ ತಿಳಿದರೆ ಆ ದಾನಪತ್ರವನ್ನು ನಾನು ಹರಿದು ಹಾಕುತ್ತೇನೆ. ಇದುವರೆಗೆ ಅಂಥ ಸಂದರ್ಭ ಬಂದಿಲ್ಲ. ಇದು ಸ್ವರಾಜ್ಯ ಸರ್ಕಾರ. ಇದರಲ್ಲಿ ಅಧಿಕಾರಿಗಳು ಸಹಕಾರ ನೀಡಿದರೆ ನಾನದನ್ನು ಬೇಡವೆನ್ನಲಾರೆ. ಪರದೇಶಿ ಸರ್ಕಾರವಾಗಿದ್ದರೆ ಅವರು ಸಹಕರಿಸುತ್ತಿರಲಿಲ್ಲ ಪೈಶಾಚಿ ಸರಕಾರವಾದರೆ ನನಗೆ ಅಸಹಕಾರ ನೀಡೀತು, ಸ್ವರಾಜ್ಯ ಸರಕಾರವಲ್ಲ."

**ಕಮ್ಯೂನಿಸ್ಟರಿಗೆ ಅನುಕೂಲ ನೆಲ:** ಮೇಲೆ ಕಮ್ಯೂನಿಸ್ಟರ ಮಾತು ಹೇಳಿದೆ. ಇಲ್ಲಿ ಅವರ ವಿಚಾರ ಹರಡಲು ಬಹಳ ಅವಕಾಶವಿದ ಪ್ರಕೃತಿ - ಮನುಷ್ಯ ಇಬ್ಬರೂ ಅವಕಾಶ ಕೊಟ್ಟಿದಾರೆ. ಗಂಗಾ - ಘಾಗರಾ ಆದಿ ನದಿಗಳ ಪ್ರಕೋಪ, ಅತ್ಯಂತ ಅಧಿಕ ಜನವಸತಿ, ನಿರುದ್ಯೋಗ, ಹಳೆಯ ರೈತವರ್ಗದ ಜನರನ್ನು ಕಸಬಿನಿಂದ ಬಿಡಿಸುವಿಕೆ, ಶೋಷಣಪ್ರಧಾನ ಜಮೀನುದಾರಿ, ನಿಷ್ಠಾವಂತ ಕೆಲಸಗಾರರ ಅಭಾವ, ವಿಚಾರ ಪ್ರಚಾರ ಇಲ್ಲದುದು, ಇಂಥ ಅನೇಕ ಕಾರಣಗಳಿಂದ ಪೂರ್ವ ಜಿಲ್ಲೆಗಳಲ್ಲಿ, ಮುಖ್ಯವಾಗಿ ಆಜಂಘಡ-ಬಲಿಯಾ ಜಿಲ್ಲೆಗಳ ಗಡಿಗಳಲ್ಲಿ ಕಮ್ಯೂನಿಸ್ಟರ ಸುಳಿವು ಕಾಣಬರುತ್ತದೆ. ಮಾಸ್ಕೋ, ಸ್ಟಾಲಿನ್‌ಗ್ರಾಡ್ ಮುಂತಾದ ಹೆಸರು ಹಳ್ಳಿಗಳಲ್ಲೂ ಗೊತ್ತಿವೆ ಕೊಲೆ-ಲೂಟಿ, ನಿಷ್ಕರುಣ ಹಿಂಸೆ ನಡೆದಿವೆ. ಏನೇ ಕಾರಣವಿರಲಿ ಈ ಘಟನೆಗಳ ಮೇಲೆ ಕಮ್ಯೂನಿಸ್ಟರ ಮುದ್ರೆ ಬಿದ್ದಿದೆ. ತೆಲಂಗಾಣದಲ್ಲಿ ಎಲ್ಲೆಲ್ಲೂ ನಮಗೆ ಕಮ್ಯೂನಿಸ್ಟರ ಕೆಲಸ ಕಾಣಬರುತ್ತಿತ್ತು. ಆದರೆ ಅಲ್ಲಿ ಪಕ್ಷದ ಶಿಸ್ತು ಪೂರಾ ಇತ್ತು. ಇಲ್ಲಿ ಶಿಸ್ತೇ ಇಲ್ಲ. ಆದ್ದರಿಂದ ನಮ್ಮ ಸಭೆಗಳಲ್ಲಿ ಅಲ್ಲೊಂದು ಇಲ್ಲೊಂದು

ಕೆಂಪು ಬಾವುಟ ಹಾರಿದವು. ಕಮ್ಯೂನಿಸ್ಟ್ ಕೆಲಸಗಾರರು ವಿನೋಬಾ ಭೇಟಿಗೆ ಬಂದರು. ಒಂದು ಕಡೆ ಪತ್ರ ಬರೆದು ತಮ್ಮ ಸಂತೋಷ ಸೂಚಿಸಿದರು. ಅವರ ಪ್ರಶ್ನೆಗಳಿಗೆ ಬಹಿರಂಗವಾಗಿ ಸಭೆಯಲ್ಲಿ ಉತ್ತರ ಕೊಟ್ಟಾಗ ಮರುದಿನ ಕಮ್ಯೂನಿಸ್ಟ್ ಕೆಲಸಗಾರರು ಭೇಟಿಗೆ ಬಂದರು. ಕಡಕಡಗೆ ಬಲಿಯಾದಲ್ಲಿ ಮಾನಪತ್ರವನ್ನು ಕೊಟ್ಟರು. ವಿನೋಬಾಜೀಯ ಕಾರ್ಯದಲ್ಲಿ, ಮಾರ್ಗದಲ್ಲಿ ಸಾನುಭೂತಿ ತೋರಿದರು. ಈ ಮಾರ್ಗ ಸಫಲವಾಗದೇನೊ ಎಂಬ ಸಂದೇಹ ವ್ಯಕ್ತಪಡಿಸಿದರು. ಜನರ ಬುದ್ಧಿ-ಮನಸ್ಸುಗಳಲ್ಲ ಎಂಥ ಪರಿವರ್ತನೆಯಾಗುತ್ತಿದೆಯೋ ನೋಡಿ, ಬನ್ನಿ ಎಂದು ವಿನೋಬಾಜೀ ಅವರನ್ನು ಕರೆದರು ನೀವು ಈ ಚಳುವಳಿ ಸಫಲನಾಗುವಂತೆ ಮಾಡಿದರೆ ಈ ಕಮ್ಯೂನಿಸ್ಟರಿಗೆ ಅನುಮಾನಕ್ಕೆ ಅವಕಾಶವೇ ಇರದು ಎಂದು ಹೊಲವಿದ್ದವರಿಗೆ ಹೇಳಿದರು. ಬಲಿಯಾ ಜಿಲ್ಲೆಯಲ್ಲಿ ಸಜ್ಜನರ ಸಹಕಾರವಿತ್ತು ಅವರು ಹೊಲಕೊಟ್ಟರು, ಕೊಡಿಸಿದರು. ಆದರೆ ಕೆಲಸಗಾರರೇ ಕಡಮ ಇದು ವಿನೋಬಾಜೀಗೆ ತಿಳಿದಾಗ ಒಂದು ದಿನ ಪ್ರಾರ್ಥನೆಯಲ್ಲಿ ಹೀಗೆಂದರು · ' ಇಲ್ಲಿ ಕಮ್ಯೂನಿಸ್ಟರು ಏಕೆ ಹರಡುತ್ತಾರೋ ತಿಳಿಯಿತು. ಇಲ್ಲಿ ಕೆಲಸಗಾರರೇ ಇಲ್ಲ. ಕಮ್ಯೂನಿಸ್ಟರು ಬಡವರ ಸೇವೆ ಮಾಡಬಯಸುತ್ತಾರೆ ಬಡತನ ನೀಗಲು ಬಯಸುತ್ತಾರೆ. ಇಲ್ಲಿ ಸೇವಕರು ಬಂದು ನಿಂತರೆ ಆಮೇಲೆ ಕಮ್ಯೂನಿಸ್ಟರಿಗೇನು ಕೆಲಸ ಇಲ್ಲಿ? '

ಕಮ್ಯೂನಿಸ್ಟರೊಂದಿಗೆ ಚರ್ಚೆ ನಡೆಯಿತು. ಕಮ್ಯೂನಿಸಂ (ಸಾಮ್ಯವಾದ), ಸಾಮ್ಯಯೋಗಗಳ ಮೂಲಭೂತ ವಿಶ್ಲೇಷಣ ಮಾಡಿದರು ವಿನೋಬಾಜೀ. ಕಮ್ಯೂನಿಸ್ಟರ ಮೇಲಂತೂ ಒಳ್ಳೇ ಪರಿಣಾಮವಾಯಿತು. ಜನತೆಗೂ ಇದು ಬಹಳ ಹಿತಕರವಾಯಿತು. ಇದುವರೆಗೆ 'ಬುಡವಿಲ್ಲದ' ಪದಾರ್ಥವೊಂದು ಅವರನ್ನು ಸೆಳೆದಿತ್ತು. ಈಗ

ಸಾಮ್ಯಯೋಗ ಎಂಬುದು ಮತ್ತೊಂದು ಸತ್ಯ ವಿಚಾರ, ಅದನ್ನು ಮಾಡಿತೋರಿಸುವ 'ಭೂದಾನ ಯಜ್ಞ'ದಂಥ ಕಾರ್ಯಕ್ರಮ ಅವರ ಕಣ್ಣಿನ ಮುಂದೆ ಬಂದವು. ತಿಳಿನೀರು ಸಿಕ್ಕಾಗ ಅದನ್ನು ಬಿಟ್ಟು ಯಾರು ತಾನೆ ಕೊಳಕು ನೀರನ್ನು ಕುಡಿಯಲು ಹೋದಾರು?

**ವಿಶ್ವಾಮಿತ್ರನ ಪಾವನ ಭೂಮಿಯಲ್ಲಿ**. ಬಲಿಯಾ ಜಿಲ್ಲೆಯ ಕಡೆಯ ಬಿಡಾರವಾದ ಕೋಟುವಾ ನಾರಾಯಣಪುರ ಗಂಗಾ ತಟದಲ್ಲಿ ಅತ್ಯಂತ ರಮಣೀಯ ಸ್ಥಾನ. ಆದರ ಅತ್ತಣ ದಂಡೆಯಲ್ಲಿ ವಿಶ್ವಾಮಿತ್ರನ ತಪೋಭೂಮಿಯಿದೆ ಇಲ್ಲೀ ಆ ಮುನಿಯ ಯಜ್ಞ ಸಂರಕ್ಷಣೆಗೆಂದು ರಾಮ-ಲಕ್ಷ್ಮಣರು ಬಂದದ್ದು, ತಾಟಕಿಯನ್ನು ಕೊಂದದ್ದು. ಅಹಲ್ಯೆಯನ್ನು ಉದ್ಧರಿಸಿದ್ದು. ಅತ್ತಣ ದಂಡೆಯುದು ಒಂದು ವಿಶೇಷ ನೆನಪು. ಆದರೆ ಇತ್ತಣ ದಂಡೆಯೂ ಹೊಸದೊಂದು ಇತಿಹಾಸವನ್ನೇ ರಚಿಸುತ್ತಿತ್ತು. ಬಿಹಾರದ ಜನ ಅನೇಕರು ಆ ದಿನದ ಪ್ರವಚನಕ್ಕೆ ಬಂದಿದ್ದರು. ಭೂದಾನವನ್ನು ನೀಡಿದರು. ಸಂಜೆಗೆ ಪ್ರಾರ್ಥನೆಯಾದ ಮೇಲೆ ಪ್ರಶ್ನೋತ್ತರವಾಯಿತು.

## ಸಾಮ್ಯಯೋಗ-ಸಾಮ್ಯವಾದ

ಪ್ರಶ್ನೆ: ಸಾಮ್ಯವಾದ ಅಗತ್ಯವೆನಿಸುವುದಿಲ್ಲವೆ ನಿಮಗೆ?

ಉತ್ತರ: ನಾನು ಸಾಮ್ಯವಾದವನ್ನು ಒಪ್ಪುವುದಿಲ್ಲ, ಸಾಮ್ಯಯೋಗವನ್ನು ಒಪ್ಪುತ್ತೇನೆ ಅದು ಅಗತ್ಯ ಎಂದು ನನಗನಿಸುತ್ತದೆ.

ಪ್ರಶ್ನೆ: ಭೂದಾನ ಯಜ್ಞದಿಂದ ಭೂಸಮಸ್ಯೆ ಹರಿದೀತೆ?

ಉತ್ತರ: ಬಗೆಹರಿದೀತು; ಉಳಿದ ಮಾರ್ಗಗಳಿಗಿಂತ ಉತ್ತಮ ರೀತಿ ಇದರಿಂದ ಆದೀತು.

ಪ್ರಶ್ನೆ. ನೀವು ಕಾಂಗ್ರೆಸ್ಸು ಇನ್ನೂ ಇರಬೇಕು ಎನ್ನುತ್ತೀರಾ?

ಉತ್ತರ: ಈ ಮೈಯೇ ಇರಬೇಕಾದ ಅಗತ್ಯವಿಲ್ಲ ಎನ್ನುವವನು ನಾನು. ಆದರೂ ನಾನೇನು ಆತ್ಮಹತ್ಯ ಮಾಡಿಕೊಳ್ಳುವುದಿಲ್ಲ. ಇವೊತ್ತು ದೇಶದಲ್ಲಿ ಕಾಗ್ರೆಸ್ಸು ಇದ. ಅದಕ್ಕೆ ಜನರು ಮತಕೊಟ್ಟಿದಾರೆ. ಯಾವುದು ಇದೆಯೋ, ಪ್ರತಿಷ್ಠಾ ಪೂರ್ವಕ ಇದೆಯೋ ಅದರ ಬಗ್ಗೆ ಪ್ರಶ್ನೆ ಕೇಳಬೇಕೆ?

ಪ್ರಶ್ನೆ. ಚೀನಾದ ಕಮ್ಯೂನಿಸ್ಟ್ ಸರಕಾರ, ಭಾರತದ ಸರಕಾರ, ಎರಡರಲ್ಲಿ ಒಂದನ್ನು ಮೆಚ್ಚುವ ಮಾತು ಬಂದರೆ ನೀವು ಯಾವುದನ್ನು ಮೆಚ್ಚುತ್ತೀರಿ?

ಉತ್ತರ ಮಕ್ಕಳಿಗೆ ತಾಯೇ ಮುದ್ದು. ಚೀನಾದವರಿಗೆ ಆ ಸರಕಾರವೇ ಒಳಿತು. ಭಾರತಕ್ಕೆ ಭಾರತ ಸರಕಾರವೇ ಸರಿ.

ಪ್ರಶ್ನೆ: ನೀವು ಹೊಲವನ್ನು ತುಂಡು ಮಾಡಿ ಹಂಚುತ್ತಿದೀರಿ. ಇದರಿಂದ ಬೆಳೆ ಕಡಮೆಯಾದೀತಲ್ಲ.

ಉತ್ತರ· ಅದು ತಪ್ಪು ಅಭಿಪ್ರಾಯ. ಈ ಬಗ್ಗೆ ಯೋಜನಾ ಸಮಿತಿಗೂ ನನಗೂ ಮಾತು ನಡೆಯಿತು. ನನ್ನ ಮಾತಿಗೆ ಅವರು ಒಪ್ಪಿದರು. ನಮ್ಮ ಪವನಾರ ಆಶ್ರಮದಲ್ಲಿ ಸ್ವಲ್ಪ ನೆಲದಲ್ಲಿ ಆಗಿರುವ ಕೆಲಸವನ್ನು ನೀವು ಬಂದು ನೋಡಿ.

ಪ್ರಶ್ನೆ: ನೀವು ಮಾಡಿದಂತೆ ಮಾಡಿದರೆ ಭೂಸಮಸ್ಯೆ ಬಿಡಿಸಲು ೫೦೦ ವರ್ಷ ಬೇಕು ಎನ್ನುತ್ತಾರೆ ಸಮಾಜವಾದಿಗಳು. ಅದಕ್ಕೆ ನೀವೇನೆನ್ನುತ್ತೀರಿ?

## ಕ್ರಾಂತಿ ಗಣಿತದಿಂದ ಆಗದು

ಉತ್ತರ: ಹೀಗೆಲ್ಲ ಗುಣಾಕಾರ ಮಾಡಿದರೆ ಕ್ರಾಂತಿ ಆಗುತ್ತದೆಯೆ? ಗಾಂಧೀಜೀ ಒಂದೇ ವರ್ಷದಲ್ಲಿ ಸ್ವರಾಜ್ಯ ತರುವ ಮಾತು ಆಡಿದರು. ನಾವು ಅವರ ಮಾತು ಕೇಳಿ ಒಂದು ದಿನಕ್ಕಾಗಿ ನೌಕ

ಬಿಟ್ಟಿದ್ದರೆ, ವಕೀಲರು ಕೋರ್ಟಿಗೆ ಹೋಗದೆ, ವಿದ್ಯಾರ್ಥಿಗಳು ಶಾಲೆಗೆ ಹೋಗದೆ ನಿಂತಿದ್ದರೆ, ಸರಕಾರಿ ನೌಕರರು ತಮ್ಮ ಮನೆಯಲ್ಲಿಯೇ ಕುಳಿತಿದ್ದರೆ ಸ್ವರಾಜ್ಯ ಸಿಕ್ಕೇ ಸಿಕ್ಕುತ್ತಿತ್ತು. ಆದರೂ ೨೫ ವರ್ಷಗಳಲ್ಲಿ ಸಿಕ್ಕೇ ಸಿಕ್ಕಿತು. ಮಹಾತ್ಮಾಜೀಯ ಶ್ರದ್ಧೆಯನ್ನು ಹೇಗೆ ವರ್ಣಿಸಬೇಕು? 'ಬಾಪೂ, ಇನ್ನು ಹದಿನೆಂಟೇ ದಿನ ಉಳಿದಿದೆ' ಎಂದರು ಒಂದು ದಿನ ಗೆಳೆಯರು. 'ಹದಿನೆಂಟು ದಿನದಲ್ಲಿ ಮಹಾಭಾರತ ಯುದ್ಧವೇ ಆಗಿಹೋಯಿತು' ಎಂದರು ಬಾಪೂ. ಆಗ ಸ್ವರಾಜ್ಯ ಸಿಕ್ಕಂತೆಯೇ ಆಗಿತ್ತು ಎಂದು ಇಂಗ್ಲೀಷರು ಬರೆದಿದಾರೆ. ನಾವು ಗಾಂಧೀಜೀಯ ಕಾರ್ಯಕ್ರಮವನ್ನು ಸರಿಯಾಗಿ ನಡಸಲಿಲ್ಲ. ಆದ್ದರಿಂದ ಒಂದಕ್ಕೆ ಬದಲು ೨೫ ವರ್ಷವಾಯಿತು. ಜನತೆಯ ಜೀವನದಲ್ಲಿ ಪರಿವರ್ತನೆ ತರುವ ಮಾತಿನಲ್ಲಿ ಗುಣಾಕಾರದಿಂದ ಕೆಲಸವಾದೀತೆ? ಆಶ್ರಮದಲ್ಲಿ ಸಂಗಾತಿಗಳೊಡನೆ ನಾನು ಒಂದು ವರ್ಷದಲ್ಲಿ ಒಂದು ಬಾವಿ ತೋಡಿದೆ. ವರ್ಷಕ್ಕೆ ಒಂದು ಬಾವಿಯಾದರೆ ನಮಗೆ ಈ ದೇಶದಲ್ಲಿ ಆರು ಕೋಟಿ ಬಾವಿ ತೋಡಲು ಎಷ್ಟು ವರ್ಷ? ಈ ಲೆಕ್ಕ ತಪ್ಪಾಗದೆ ಇದ್ದೀತೆ? ಎಲ್ಲರೂ ತೋಡಿದರೆ ದೇಶವಲ್ಲೆಲ್ಲ ಬಾವಿ. ಹಾಗೇ ಭೂದಾನ ಯಜ್ಞವೂ ನನ್ನೊಬ್ಬನ ಶಕ್ತಿಯಿಂದಲೇ ಕೆಲಸವಾಗಬೇಕು, ನೀವೆಲ್ಲರೂ ಕಾಲುನೀಡಿ ಕುಳಿತುಕೊಳ್ಳಬೇಕು ಎಂದರೆ, ಇಂಥ ಗುಣಾಕಾರ ಮಾಡಿಕೊಳ್ಳಿ. ಈ ಕೆಲಸ ತಾಂತ್ರಿಕವೂ ಅಲ್ಲ, ಯಾಂತ್ರಿಕವೂ ಅಲ್ಲ. ಇದು ಮಾಂತ್ರಿಕ ಕಾರ್ಯ. ಇದಕ್ಕೆ ಒಂದು ಮಂತ್ರವಿದೆ. ಅದೀಗ ಬಯಲಾಗಿದೆ. ಸಮಾಜದಲ್ಲಿ ಮಂತ್ರವೊಂದು ಪ್ರವೇಶಿಸಿದರೆ ಅದು ತೀವ್ರಗತಿಯಿಂದ ಕೆಲಸ ಮಾಡುತ್ತದೆ. ತಡ ಆಗುವುದು ಮಂತ್ರ ಸಿದ್ಧಿಗಾಗಿ. ದೀಪ ಹಚ್ಚುವುದು ತಿಳಿಯದಿರುವ ವರೆಗೆ ಹಚ್ಚಲು ಎಷ್ಟು ಹೊತ್ತು ಬೇಕು ಎಂಬುದು ಲೆಕ್ಕ. ಒಮ್ಮೆ ದೀಪ ಹಚ್ಚಿದ ಕೂಡಲೆ ಲಕ್ಷಾಂ

ತರ ವರ್ಷಗಳ ಕತ್ತಲು ಕಳೆದು ಇಡೀ ಭೂಮಿ ಸರ್ವತ್ರ ಜ್ಯೋತಿ ರ್ಮಯವಾಗಲು ತಡವಿಲ್ಲ. ಗಂಗಾನದಿ ಹರಿಯಲು ಮೊದಲಿಟ್ಟಾಗ ನೆಲ ಕೊರೆದು ಕಲ್ಲು ಸವೆಸಿ ದಾರಿ ಮಾಡಲು ಕಾಲ ಹಿಡಿದದ್ದು ಎಷ್ಟೋ ಅಷ್ಟೇ. ಈಗ ಪೂರ್ಣವೇಗದಿಂದ ಕಡಲಿಗೆ ನುಗ್ಗುತ್ತಿದೆ. ಯೇಸುಕ್ರಿಸ್ತ ಕೆಲಸ ಮಾಡಿದ್ದು ಎರಡೇ ವರ್ಷ. ಆ ಎರಡು ವರ್ಷ ದಲ್ಲಿ ಅವನಿಗೆ ೧೨ ಜನ ಶಿಷ್ಯರು ದೊರೆತರು. ೧೨ ಜನ ಶಿಷ್ಯರಿಗೆ ೨ ವರ್ಷ ಹಿಡಿಯಿತು, ಆದ್ದರಿಂದ ೬೦ ಕೋಟಿ ಜನರಾಗಲು ಎಷ್ಟು ವರ್ಷ ಬೇಕು ಎಂದು ಯಾರಾದರೂ ಗುಣಾಕಾರ ಮಾಡಿದರೆ ಆ ಲೆಕ್ಕ ತಪ್ಪು. ಮಾಂತ್ರಿಕ ವಸ್ತುವಿಗೆ ತಾಂತ್ರಿಕ ಗಣಿತದ ಲೆಕ್ಕಾ ಚಾರ ಹೊಂದುವುದಿಲ್ಲ ಮಂತ್ರವನ್ನು ಮನನ ಮಾಡಲು, ಸಿದ್ಧಿ ಮಾಡಿಕೊಳ್ಳಲು ಹಿಡಿಯುವ ಕಾಲವೇ ಕಾಲ. ಒಮ್ಮೆ ಮಂತ್ರ ಸಿದ್ಧಿಯಾಯಿತೋ ಕೂಡಲೆ ಕೆಲಸವೂ ಆಯಿತು ಎಂದೇ ತಿಳಿಯಿರಿ. ಆದ್ದರಿಂದ ಈ ಕೆಲಸಕ್ಕೆ ಐದು ನೂರು ವರ್ಷವೇಕೆ, ಒಂದೇ ವರ್ಷ ದಲ್ಲಿ ಮುಗಿಯಬಹುದು ನಿಜವಾಗಿ ನೋಡಿದರೆ ಕೆಲಸ ಆಗಿಯೇ ಹೋಗಿದೆ.

ಕೃಷ್ಣ ಹೇಳಲಿಲ್ಲವೆ—ಅರ್ಜುನ, ಇವರೆಲ್ಲ ಎಂದೋ ಸತ್ತು ಹೋಗಿದಾರೆ. ನೀನು ಬರೀ ನಿಮಿತ್ತ ಮಾತ್ರ. ಇದೇ ದೃಷ್ಟಾಂತ ವನ್ನು ಕೊಟ್ಟು ಗೋರಖಪುರದಲ್ಲಿ ವಿನೋಬಾ ಹೇಳಿದರು: 'ಭೂಮಿ ಎಂದೋ ಭೂಮಿ ಹೀನರದು ಆಗಿಹೋಗಿದೆ. ಹೊಲವಿಲ್ಲದವರ ಕೈಸೇರಿಯೂ ಹೋಗಿದೆ. ಜಮೀನುದಾರರೆ, ನೀವು ನಿಮಿತ್ತ ಮಾತ್ರ ರಾಗಬೇಕೆಂದು ಭಗವಂತನ ಇಚ್ಛೆ. ನಿಮಗೆ ಪ್ರೇರಣೆ ಕೊಡಲು ನಾನು ನಿಮಿತ್ತವಾಗಬೇಕೆಂಬುದೂ ಅವನದೇ ಇಚ್ಛೆ.'

## ೧೬ ಬುಂದೇಲ ಖಂಡದ ವೀರಭೂಮಿಯಲ್ಲಿ

ಪುಷ್ಯ-ಮಾಘಗಳ ಕೊರೆಯುವ ಚಳಿಯಲ್ಲಿ ಭೂದಾನ ಯಜ್ಞದ ಕೆಲಸಕ್ಕಾಗಿ ಹಿಮಾಲಯ ಪ್ರಾಂತದಲ್ಲಿ ತಿರುಗಾಡಬೇಕಾಯಿತು. ಅದೇ ವೈಶಾಖ-ಜ್ಯೇಷ್ಠಗಳ ಉರಿಬಿಸಿಲಿನಲ್ಲಿ ಬುಂದೇಲ ಖಂಡದ ಗುಡ್ಡಗಾಡಿನಲ್ಲಿ ಓಡಾಡಬೇಕಾಯಿತು. ಎರಡೂ ಕಡೆಯಲ್ಲೂ ಅವರ ಕೆಲಸ ಗಂಗಾಪ್ರವಾಹದಂತೆ ಅಖಂಡವಾಗಿ, ಭಗವಾನ್-ಸಹಸ್ರ ಕಿರಣದ ರೀತಿ ನಿಯಮಬದ್ಧವಾಗಿ ನಡೆಯಿತು. ಆದರ ದುರ್ಬಲ ಶರೀರ ಈ ಚಳಿ-ಬಿಸಿಲುಗಳ ಆಧಿಕ್ಯವನ್ನು ಸಹಿಸಿ ಸತತವೂ ಕರ್ಮಯೋಗದಲ್ಲಿ ನಿರತವಾಗಿತ್ತು.

ಬುಂದೇಲ ಖಂಡದಲ್ಲಿ ನಾಲ್ಕು ಜಿಲ್ಲೆ ಇವೆ–ಝಾಂಸಿ, ಜಾಲೌನ್, ಹಮೀರಪುರ, ಬಾಂದಾ. ಇದರಲ್ಲಿ ಝಾಂಸಿಯಂತೂ ಉತ್ತರ ಪ್ರದೇಶದ ಹೆಬ್ಬಾಗಿಲೇ ಸರಿ. ಉತ್ತರ ಪ್ರದೇಶದ ಯಾತ್ರೆ ಝಾಂಸಿಯ ವೀರಭೂಮಿಯಿಂದಲೇ ಮೊದಲಾಯಿತು. ಮೊದಲೇ ಇಲ್ಲ ಐದು ಸಾವಿರ ಎಕರೆ ಭೂದಾನ ಸಿಕ್ಕಿತು. ಆ ಸಮಯದಲ್ಲಿ ಈ ಮಹಾ ಯಜ್ಞಕ್ಕೆ ಎಷ್ಟು ಶುಭಶಕುನ ಬೇಕಾಗಿದ್ದುವೋ ಅಷ್ಟೂ ಈ ಜಿಲ್ಲೆಯಲ್ಲೇ ದೊರೆತವು ಲಲಿತಪುರದಲ್ಲಿ ಆಚಾರ್ಯ ವರ್ಣಿಯ ಆಶೀರ್ವಾದ, ಚಿರಗಾಂವದಲ್ಲಿ ರಾಷ್ಟ್ರಕವಿ ಮೈಥಿಲೀ ಶರಣಗುಪ್ತರ, ಇತರ ಸಾಹಿತಿಗಳ ಸಹಕಾರ, ಅವರ ಹರಕೆ, ಝಾನ್ಸಿರಾಣಿ ಲಕ್ಷ್ಮೀಬಾಯಿಯ ಪವಿತ್ರ ಸ್ಮೃತಿಯಿಂದ ದೊರೆತ ಪ್ರೋತ್ಸಾಹ, ಇವೆಲ್ಲವೂ ಸಹಜವಾಗಿಯೇ ಆಗ ನಡೆದುಹೋದರೂ ಈಗ ಯೋಚಿಸಿದರೆ ಎಷ್ಟು ಮಂಗಳ ಮಯ! ಮೊಟ್ಟಮೊದಲಿನ ಈ ಐದುಸಾವಿರ ಎಕರೆಯ ಭೂದಾನವೇ ಮಥುರೆಯಲ್ಲಿ ಕಾರ್ಯಕರ್ತರು ಐದುಲಕ್ಷದ ಸಂಕಲ್ಪ

ಮಾಡುವಂತೆ ಮಾಡಿದ್ದು. ಈ ಪ್ರಾರಂಭ ದಾನದಿಂದ ಕೆಲಸಗಾರರಿಗೆ ಬಹಳ ಹುರುಪು ಸಿಕ್ಕಿತು. ಉತ್ತರ ಪ್ರದೇಶದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಕೆಲಸ ಚೆನ್ನಾಗಿ ನಡದೀತು. ಆದರೆ ಬುಂದೇಲ ಖಂಡದ ವೀರಭೂಮಿ ಅದಕ್ಕೆ ಕಲಶಪ್ರಾಯವಾಗಿದ್ದೀತು ಎಂದು ಝಾನ್ಸಿಯಲ್ಲಿಯೇ ವಿನೋಬಾಜೀಗೆ ಅನಿಸಿತ್ತು. ಆದದ್ದೂ ಹಾಗೆಯೇ. ಬುಂದೇಲ ಖಂಡದ ಜನ ತಮ್ಮ ಇತಿಹಾಸದ ಬಗ್ಗೆ ಬಹಳ ಜಾಗ್ರತರಾಗಿದಾರೆ. ಇಲ್ಲಿ ಕೇನ ನದಿಯ ದಂಡೆಯಲ್ಲಿ ಕಾಲ್ಪಿಯಲ್ಲಿ ವ್ಯಾಸ-ವಾಲ್ಮೀಕಿಗಳ ತಪಸ್ಸು ನಡೆಯಿತು. ಇಲ್ಲಿ ಮಹಾರಾಜ ಛತ್ರಸಾಲ, ಪೃಥ್ವೀರಾಜ, ಅಲ್ಲಾ ಉದ್ದೀನ್, ಮಹಾರಾಣಿ ಲಕ್ಷ್ಮೀಬಾಯಿ ಮುಂತಾದವರು ತಮ್ಮ ಬೀರತನ ಪ್ರಕಟಿಸಿದರು. ೧೮೫೭ರ ದಂಗೆಯ ಸ್ಫೋಟನ ಮೊಟ್ಟ ಮೊದಲು ಬುಂದೇಲ ಖಂಡದಲ್ಲಿ ಆಯಿತು. ಇಂಗ್ಲೀಷರ ಸೈನಿಕ ಕಾರ್ಯಾಚರಣೆ ತೀವ್ರವಾಗಿತ್ತು. ಇಂಥ ಉಜ್ವಲ ಇತಿಹಾಸದ ಸ್ಫೂರ್ತಿದಾಯಕ ಸ್ಮರಣೆ ಇಲ್ಲಿಯ ಗಾಳಿಯಲ್ಲೇ ಬೆರೆತಿದೆ ಇದರ ಜತೆಗೆ ತುಲಸೀದಾಸರ ನೆನಪು ಸಜೀವವಾಗಿ ಹರಡಿತ್ತು. ಮುಖ್ಯವಾಗಿ ಉತ್ತರ ಪ್ರದೇಶ, ಬುಂದೇಲ ಖಂಡಗಳಲ್ಲಿ ಅವರ ಪ್ರಭಾವ ಹೆಚ್ಚು. ಜನ ಕರ್ತವ್ಯಮೂಢರಾದಾಗ ತುಲಸೀದಾಸರು ದೇಶವನ್ನು ಕಾಪಾಡಿದರು. ಇಷ್ಟೆಲ್ಲಾ ಚಮತ್ಕಾರವೂ ಒಂದು ಗ್ರಂಥದಿಂದ ಆಯಿತು. ನಮಗೆ ಕಂಡುಬಂದವರಲ್ಲಿ ಅನೇಕರು ರಾಮಾಯಣದ ಭಕ್ತಿಪ್ರೇರಣೆಗಳಿಂದ ತುಂಬಿಕೊಂಡಿದ್ದರು. ಅವರಿಗೆ ಮತ್ತೇನೂ ತಿಳಿಯದು, ರಾಮಾಯಣ ಬಾಯಿಗೆ ಬರುತ್ತಿತ್ತು, ಅಷ್ಟೆ. ತಮ್ಮ ಇಡೀ ಬದುಕನ್ನು ರಾಮಾಯಣದ ಪ್ರಚಾರಕ್ಕಾಗಿ ಮೀಸಲಿಟ್ಟ ಭಕ್ತಜನರೂ ಇದಾರೆ. ರಾಮಾಯಣ ಓದಿ, ಗದ್ಗದ ಹೃದಯರಾಗುವ ರಸಿಕ ವೃಂದವೂ ಇಲ್ಲಿದೆ. ಇಂಥ ಸುಖಮಯ ವಾತಾವರಣದಲ್ಲಿ ಬುಂದೇಲ ಖಂಡದ ಯಾತ್ರೆ ನಡೆಯಿತು.

**ಹಳ್ಳಿಯ ಸಂಸ್ಕೃತಿಯ ಸಜ್ಜನತೆ:** ಪಟ್ಟಣದ ನಾಗರಿಕ ಸಂಸ್ಕೃತಿಗೆ ಬುಂದೇಲಖಂಡ ಇನ್ನೂ ದೂರವಾಗಿಯೇ ಇದೆ. ಅದರ ಪರಿಣಾಮವಾಗಿ ಭಗವದ್ ಭಕ್ತರಲ್ಲಿ ಇಲ್ಲಿನ ಜನಕ್ಕೆ ಅಪ್ರತಿಮ ಶ್ರದ್ಧೆ ಇದೆ ತೆಲಂಗಾಣದಲ್ಲಿ ಹೇಗಿತ್ತೋ ಹಾಗೆ ಇಲ್ಲೂ ಸ್ವಚ್ಛತೆ, ಹಳ್ಳಿ ಹಳ್ಳಿಯಲ್ಲೂ ಭಾವಪೂರ್ಣ ಸ್ವಾಗತ ಕಂಡುಬಂತು. ಇಲ್ಲಿ ಬಂದಷ್ಟು ಜನ ಹೆಂಗಸರು ವಿನೋಬಾಜೀಯನ್ನು ಸ್ವಾಗತಿಸಲು ಉತ್ತರ ಪ್ರದೇಶ ದಲ್ಲಿ ಇನ್ನೆಲ್ಲೂ ಬರಲಿಲ್ಲ ನಸುಕಿನ ನಾಲ್ಕು ಗಂಟೆಯಿಂದ ಒಂಬತ್ತು ಗಂಟೆಗೆ ಬಿಡಾರ ಸೇರುವವರೆಗೆ ದಾರಿಯಲ್ಲಿ ಹಳ್ಳಿಹಳ್ಳಿಯಲ್ಲೂ ಇಡೀ ಜನ ಓಡಿ ಓಡಿ ದರುಶನಕ್ಕೆ ಬರುತ್ತಿದ್ದರು ಭಜನೆ ಕೀರ್ತನೆ ಹಾಡು ತ್ತಿದ್ದರು ವಿನೋಬಾಜೀ ಮುಂದೆ ಸಾಗಿದರೂ ತಾವು ಅವರ ಹಿಂದೆ ಹಿಂದೆಯೇ ಮೈಲಿ ಮೈಲಿ ನಡೆದು ಬರುತ್ತಿದ್ದರು. ವಿನೋಬಾಜೀ ದಾಟಿ ಹೋದ ಮೇಲೂ ಅದೇ ನಿಟ್ಟಿಗೆ ನೆಟ್ಟ ಕಣ್ಣಿಂದ ನೋಡುತ್ತಾ ನಿಲ್ಲುತ್ತಿದ್ದರು. ಒಂದು ಸಲ ಈ ದೃಶ್ಯ ನೋಡಿ ತಡೆಯಲಾರದೆ ವಿನೋಬಾಜೀಯನ್ನು ಹಿಂದಿರುಗಿ ನೋಡಲು ಹೇಳಿದೆವು ಇಷ್ಟು ದೂರ ಬಂದ ಮೇಲೂ ಇತ್ತಕಡೆಯೇ ಕಣ್ಣುನೆಟ್ಟು ನೋಡುತ್ತಿದ್ದ ಆ ಗುಂಪನ್ನು ಕಂಡು ವಿನೋಬಾಗೆ "ಇದುವೆ ಸಭ್ಯತೆಗೂ ಸಜ್ಜನತೆಗೂ ಇರುವ ಭೇದ ಪಟ್ಟಣಗಳಲ್ಲಿ ನಿಮಗೆ ಸಭ್ಯತೆ ಕಾಣಬರುತ್ತಿದೆ. ಇಲ್ಲಿ ಕಾಣುವುದು ಇಂತಹ ಸಜ್ಜನತೆ" ಎಂದರು ನಮ್ಮೆದಿರು ಒಂದು ಸಮಸ್ಯೆ ಒಡ್ಡಿ ನಿಮಗೇನು ಬೇಕು ಹೇಳಿ "ಸಭ್ಯತೆಯೋ, ಸಜ್ಜನತೆಯೋ?" ಎಂದು ಕೇಳಿದಂತಿತ್ತು

ವೇತ್ರಾವತಿ ನದಿ ದಾಟಿ ಹಮೀರಪುರ ಜಿಲ್ಲೆಗೆ ಬಂದಾಗ ನಾವು ಅಲ್ಲಿ ಕಂಡ ನೋಟ ಅತ್ಯದ್ಭುತವಾಗಿತ್ತು. ತುಲಸೀದಾಸರು ತಮ್ಮ ರಾಮಾಯಣದಲ್ಲಿ ಮಾಡಿದ ವರ್ಣನೆಯೆಲ್ಲವೂ ಈ ಹಳ್ಳಿಗಳಲ್ಲಿ ನಿಜವಾಗಿತ್ತು. ಹಮೀರಪುರ ಜಿಲ್ಲೆಯ ನಮ್ಮ ಮೊದಲನೆಯ

ಬಿಡಾರ ಮಂಗರೋರವಂತೂ ಭೂದಾನ ಯಜ್ಞದಲ್ಲಿ ಒಂದು ಅಜರಾಮರವಾದ ಚಮತ್ಕಾರ ಮಾಡಿ ತೋರಿಸಿತು.

**ಮಂಗರೋರ್**. ಈ ಚಿಕ್ಕ ಹಳ್ಳಿ ಮೊದಲಿನಿಂದಲೂ ಪುರುಷಾರ್ಥವಾದಿ ೧೮೫೭ರ ದಂಗೆಯಲ್ಲಿ ಈ ಹಳ್ಳಿ ಪಾಲುಗೊಂಡಿತ್ತು. ಆಮೇಲೆ ಕ್ರಾಂತಿಕಾರಿಗಳ ಕೇಂದ್ರವಾಯಿತು. ಆಮೇಲೆ ಬಂದ ಬಾಪೂ ಯುಗದಲ್ಲಿ ಸತ್ಯಾಗ್ರಹ ಚಳವಳಿ ಪೂರಾ ಭಾಗವಹಿಸಿ ಕಟ್ಟ ಕಡೆಗೆ ವಿನೋಬಾಜೀಯ ಭೂದಾನ ಯಜ್ಞದಲ್ಲಿ "ನೆಲವೆಲ್ಲ ದೇವರದು' ಎಂಬ ಆದರ್ಶವನ್ನು ಸಫಲಗೊಳಿಸುವ ಶ್ರೇಯಸ್ಸನ್ನು ಸಂಪಾದಿಸಿಕೊಂಡಿತು. ಹಳ್ಳಿಯಲ್ಲಿ ಹೊಲವಿದ್ದವರು ೬೮ ಜನ ಅವರೆಲ್ಲರೂ ತಮ್ಮ ಇಡೀ ೧೩,೦೦೦ ಎಕರ ಭೂಮಿಯನ್ನು ವಿನೋಬಾಜೀಗೆ ಕೊಟ್ಟುಬಿಟ್ಟರು. ಇಷ್ಟೆಲ್ಲವೂ ವಿನೋಬಾಜೀಯ ಸಂದೇಶ ಮಾತ್ರದಿಂದ ನಡೆದುಹೋಯಿತು ವಿನೋಬಾ ಆ ಹಳ್ಳಿಗೆ ಹೋಗಲಿಲ್ಲ. ಹಳ್ಳಿಗೆ ಎರಡು ಮೈಲಿ ದೂರದಲ್ಲಿ ವಿನೋಬಾಜೀ ಹೋಗುವ ದಾರಿ. ಎಲ್ಲರೂ ದರ್ಶನಕ್ಕಾಗಿ ಅಲ್ಲಿಗೇ ಬಂದರು ಉಪಾಹಾರಕ್ಕಾಗಿ ತಮ್ಮ ಕೈಲಾದುದನ್ನು ತಂದು, ಒಂದು ನೂರೊಂದು (೧೦೧) ಎಕರೆ ದಾನವನ್ನು ಅರ್ಪಿಸಿದರು. ಅದನ್ನು ಸ್ವೀಕರಿಸಿ ನಾಲ್ಕು ಮಾತಾಡುತ್ತಾ ಒಂದು ವಿಚಾರವನ್ನು ವಿನೋಬಾ ಅವರಿಗೆ ತಿಳಿಸಿದರು ಭೂಮಿಯೆಲ್ಲವೂ ಭಗವಂತನದು ಇಷ್ಟು ಹೇಳಿ ವಿನೋಬಾಜೀ ಮುಂಬರಿದರು. ಹಳ್ಳಿಯವರು ಹಿಂದಿರುಗಿದರು—ಹಿಂದಿರುಗಿ ತಮ್ಮ ಕರ್ತವ್ಯವೇನು ಎಂದು ಯೋಚಿಸಿದರು ಈ ಹಳ್ಳಿಯ ಸೇವೆಗಾಗಿ ತನುಮನ ಅರ್ಪಿಸಿದ ದಿವಾನ್ ಶತ್ರುಘ್ನಸಿಂಹ ಭೂದಾನ ಯಜ್ಞಕ್ಕಾಗಿ ಹೊರಗೆ ಸಂಚಾರ ಹೊರಟಿದ್ದರು ಊರಿನ ಜನ ಅವರನ್ನು ಕರೆಸಿ ಕೇಳಿದರು. ಅವರು ಬರುವಾಗ ರಾತ್ರಿ ಹನ್ನೊಂದಾಗಿತ್ತು. ಇಡೀ ಹಳ್ಳಿಯೇ ಅವರ ಬರವಿಗಾಗಿ ಕಾದಿತ್ತು ಹಳ್ಳಿಯವರು ತಮ್ಮ ಯೋಜನೆ

ಯನ್ನು ಅವರಿಗೆ ತಿಳಿಸಿದರು ಶತ್ರುಘ್ನಸಿಂಹರು ವಿನೋಬಾಜೀಯ ಪದತಲದಲ್ಲಿ ಇಡೀ ಹೊಲವನ್ನು ಸಮರ್ಪಿಸುವಂತೆ ಅಧಿಕಾರ ಪತ್ರ ಬರೆದುಕೊಟ್ಟರು.

ಈಗ ಮಂಗರೋರದಲ್ಲಿ ಹೊಲವಿಲ್ಲದವರು ಯಾರೂ ಇಲ್ಲ. ಎಲ್ಲರೂ ಕಲಿತು ಬೇಸಾಯ ಮಾಡಬೇಕೆಂದು ನಿಶ್ಚಯಿಸಿದಾರೆ. ಹಳ್ಳಿಯನ್ನು ಆದರ್ಶ ಗ್ರಾಮವಾಗಿ ಮಾಡಲು ವಿನೋಬಾಜೀಯ ಮಾರ್ಗ ದರ್ಶನದಲ್ಲಿ ಕೆಲಸ ಮೊದಲಾಗಿದೆ. ಅಲ್ಲಿಂದ ಮುಂದೆ, ಮಂಗರೋರದ ನೆನಪು ಮಾಡಿಕೊಳ್ಳದ ಸಭೆ, ಹಳ್ಳಿ ಇಲ್ಲವೇ ಇಲ್ಲ ವಿನೋಬಾಗೆ. ಮಂಗರೋರ ಏನು ಕಿನ್ನರ, ಗಂಧರ್ವ ದೇವತೆಗಳ ಹಳ್ಳಿಯೇ? ಅಲ್ಲಿ ಬೇರೆ ಬಗೆಯ ಜನರು ಇದ್ದಾರೆಯೇ? ನಮ್ಮ ಹಾಗೇ ಅಲ್ಲವೆ ಅವರು? ಎಂದು ವಿನೋಬಾಜೀ ಬಂದವರನ್ನು ಕೇಳುತ್ತಿರುತ್ತಾರೆ. ಅವರಿಗೂ ನಮಗೂ ಇಷ್ಟೇ ಭೇದ. ಅಲ್ಲಿ ಒಬ್ಬ ಸೇವಕ ಕೆಲಸ ಮಾಡುತ್ತಿದಾನೆ. ಅದರ ಪ್ರಭಾವ ಅಲ್ಲಿನ ಜನರ ಮೇಲೆ ಆಗಿದೆ. ಇತರ ಹಳ್ಳಿಗಳಲ್ಲಿ ಅಂಥ ಸೇವಕ ಇಲ್ಲ.

**ಇನ್ನು ಲಕ್ಷಗಟ್ಟಲೆ ಮಾತಾಡಿ:** ಬುಂದೇಲಖಂಡದಲ್ಲಿ ವಿನೋಬಾಜೀ ತಮ್ಮ ಬೇಡಿಕೆಯನ್ನು ಮೇಲೇರಿಸಿದರು. ಮೊಟ್ಟ ಮೊದಲು ತೆಲಂಗಾಣದಲ್ಲಿ ದಿನಕ್ಕೆ ಒಂದುನೂರು ಎಕರೆ ಅವರಿಗೆ ದೊರೆಯಿತು. ಆಮೇಲೆ ವರ್ಧಾಕ್ಕೆ ಹಿಂದಿರುಗುವಾಗ ದಿನವೂ ಸರಾಸರಿ ಎರಡು ನೂರು ಎಕರೆ ದೊರೆಯಿತು ಅಲ್ಲಿಂದ ದಿಲ್ಲಿಯ ವರೆಗೆ ದಿನಕ್ಕೆ ೨೫೦ ಎಕರೆ ಆಯಿತು. ಮುಂದೆ ಉತ್ತರ ಪ್ರದೇಶದ ಪಶ್ಚಿಮ ಜಿಲ್ಲೆಗಳಲ್ಲಿ ಮೂರು ನೂರು ಆಯಿತು. ಪೂರ್ವ ಜಿಲ್ಲೆಗಳಲ್ಲಿ ಇನ್ನೂ ಹೆಚ್ಚಾಯಿತು. ಸೇವಾಪುರಿ ಸಮ್ಮೇಳನ ಆದ ಮೇಲೆ ಮತ್ತಷ್ಟು ಹೆಚ್ಚಿ ಕಡೆಗೆ ದಿನಕ್ಕೆ ಸಾವಿರ ಎಕರೆ ಆಯಿತು. ಮೊದಲು ಹತ್ತು ಸಾವಿರ ಎಕರೆ ಬೇಡಿದ ಕಡೆ ಬುಂದೇಲಖಂಡದಲ್ಲಿ ವಿನೋಬಾಜೀ

ಒಂದು ಲಕ್ಷ ಬೇಡಿದರು ಜಾಲೌನದಲ್ಲಿ ಇಪ್ಪತ್ತು ಸಾವಿರ. ಹಮೀರಪುರ ಜಿಲ್ಲೆಗೆ ಮೂವತ್ತನಾಲ್ಕು ಸಾವಿರ. ಬಾಂದ ಜಿಲ್ಲೆ ಒಂದು ಲಕ್ಷ ಎಕರೆ ಸಂಗ್ರಹಿಸುವ ಸಂಕಲ್ಪ ಮಾಡಿತು. ಅಲ್ಲಿಂದ ಮುಂದೆ ವಿನೋಬಾ ಒಂದು ಲಕ್ಷ ಎಕರೆಯ ಕೆಳಗೆ ಮಾತೇ ಆಡು ವುದಿಲ್ಲ. ಜಿಲ್ಲೆಗೆ ಎರಡು ಲಕ್ಷ ಬೇಕು ಎನ್ನುತ್ತಾರೆ. ೨೫೦ ಜಿಲ್ಲೆ ಗಳಿಂದ ಐದು ಕೋಟಿ ಎಕರೆ ಸಿಗಬೇಕು “ಹೊಲ ಎಷ್ಟಾದರೂ ಸಿಗಲಿ, ಚಿಂತೆಯಿಲ್ಲ ಆದರೆ ಕಲ್ಪನೆಯಲ್ಲಿ ಅಲ್ಪತನ ಬೇಡ.” ವೇದ ಗಳ ಅಪ್ಪಣೆಯೇ ಇದೆ—“ಸ್ವಲ್ಪೇಸುಖಮಸ್ತಿ” ಅಲ್ಪದರಲ್ಲಿ ಸುಖ ವಿಲ್ಲ. ಆದ್ದರಿಂದ ಎಲ್ಲೆಲ್ಲೂ ಲಕ್ಷದ ಮಾತೇ ಆಡುತ್ತಾರೆ. “ತರು ವಾಗ ಒಂದೊಂದು ಎಕರೆಯಾದರೂ ತನ್ನಿ. ಮಾತಾಡುವಾಗ ಲಕ್ಷದ ಕೆಳಗೆ ಆಡಲೇಬೇಡಿ. ಈಪತ್ತು ಆಡೀರಿ, ನಾಳೆ ಮಾಡೀರಿ ಇವತ್ತು ಜಪ ಮಾಡಿದರೆ ನಾಳೆ ಅದರ ದರ್ಶನವಾದೀತು.”

**ನಮ್ಮ ಗುಲಾಮಗಿರಿಯ ಸಾಮಗ್ರಿ ಜಗಳ:** ಹಮೀರ ಪುರದಲ್ಲಿ ಎರಡು ಪಕ್ಷ ದಿವಾನ ಶತ್ರುಘ್ನಸಿಂಹ ಈ ಜಿಲ್ಲೆಯ ಜನರ ಮನಸ್ಸನ್ನು ಸೂರೆಗೊಂಡ ಕೆಲಸಗಾರರು. ಅವರೀಗ ಭೂದಾ ನದ ಕೆಲಸದಲ್ಲಿ ತೊಡಗಿದಾರೆ. ಏನು ಕಾರಣವೊ, ಕಾಂಗ್ರೆಸ್ಸಿ ನವರು ಅವರಿಗೆ ಸಹಕಾರ ನೀಡಲಿಲ್ಲ. ಆತ ತನ್ನ ಪ್ರಯತ್ನದಿಂದಲೇ ಎಂಟು ಸಾವಿರ ಎಕರೆ ದಾನ ಸಂಗ್ರಹಿಸಿದ್ದರು. ಇನ್ನೂ ಸಂಗ್ರಹಿಸು ತ್ತಿದ್ದರು. ನಮ್ಮ ಸಹಕಾರ ಕೇಳಲಿಲ್ಲ ಎಂದು ಕಾಂಗ್ರೆಸಿಗರು ದೂರಿ ದರು. ನಮ್ಮ ರಾಜಕೀಯದ ಕೊಚ್ಚೆಯಲ್ಲಿ ತಮ್ಮನ್ನು ಇಳಿಸುವುದು ನಮಗೆ ಇಷ್ಟವಿಲ್ಲ, ಇನ್ನು ಮೇಲೆ ಕೆಲಸ ಮಾಡುತ್ತೇವೆ ಎಂದರು. ವಿನೋಬಾಜೀ ಅವರಿಗೆ ಎಂಟು ಸಾವಿರ ಎಕರೆ ಸಂಗ್ರಹಿಸುವಹೊಣೆ ಒಪ್ಪಿಸಿದರು. ಆಮೇಲೆ ತಮ್ಮ ಸಂಕಟವನ್ನು ತಿಳಿಸಿ, ‘ಎಂಟು ತಿಂಗಳಿಂದ ನಾನು ನಿಮ್ಮ ಪ್ರಾಂತದಲ್ಲಿ ತಿರುಗಾಡುತ್ತಿದೇನೆ. ನನಗೆ

ನೀವು ರಾಜನೀತಿ ಹೇಳಿಕೊಡುತ್ತೀರಾ ? ಏನು ಹೇಳಿಕೊಡುತ್ತೀರಿ ? ನೀವೇ ಮುಂದೆ ಬಂದು ಏಕೆ ಶತ್ರುಘ್ನಸಿಂಹರಿಗೆ ಸಹಕಾರ ನೀಡಲಿಲ್ಲ ? ಇದೇನು ಯಾರದಾದರೂ ಮನೆಗೆಲಸವೆ ? ಅವರ ಜತೆಗೆ ಕೆಲಸ ಮಾಡುವುದು ಇಷ್ಟವಿಲ್ಲದಿದ್ದರೆ ನೀವೇ ಬೇರೆ ಮಾಡಬೇಕಿತ್ತು. ಮೊದಲು ಕೆಲಸಮಾಡಿ ಭೂದಾನ ತಂದು ಆಮೇಲೆ ದೂರು ಹೇಳಬೇಕಾಗಿತ್ತು.

'ನಿಮ್ಮೊಳಗೆ ಹೀಗೆ ಜಗಳ ಇರುವುದು ಸರಿಯಲ್ಲ. ಅದರಿಂದ ಏನೂ ಲಾಭವಿಲ್ಲ ನಿಷ್ಕಾಮ ಬುದ್ಧಿಯಿಂದ ನಾವು ಸಾರ್ವಜನಿಕ ಕೆಲಸ ಮಾಡಬೇಕು ಯಾರಿಗೆ ಹೆಸರು ಬೇಡವೋ ಅವನದೇ ಕಡೆಗೆ ಹೆಸರಾಗುವುದು. ತುಲಸೀದಾಸರಿಗೆ ಹೆಸರು ಬೇಕಿರಲಿಲ್ಲ ಆದರೆ ಇವೊತ್ತು ಅವರ ಹೆಸರು ಮನೆಮನೆಯಲ್ಲೂ ನೆಲೆಸಿದೆ.'

ಆಮೇಲೆ ತೆಲಂಗಾಣದ ದೃಷ್ಟಾಂತ ಕೊಟ್ಟು ಹೇಳಿದರು : 'ಅಲ್ಲಿ ಇಂಥ ಎಷ್ಟೋ ಮತ ಭೇದಗಳನ್ನು ನಾವು ತೊಡೆದು ಹಾಕಿದೆವು. ಐಕಮತ್ಯವಿದ್ದರೆ ಈ ರಾಷ್ಟ್ರ ಉಳಿದೀತು. ಮೂವತ್ತು ಕೋಟಿ ಜನ ಮೂವತ್ತು ಪಕ್ಷವಾಗುವ ಬದಲು ಒಂದೇ ಮನಸ್ಸಿನವರು ಮೂರುಕೋಟಿ ಜನವಾದರೂ ದೇಶಕ್ಕೆ ಒಳಿತು. ನಮ್ಮ ಮತಭೇದಗಳ ದೆಸೆಯಿಂದಲೇ ಇಂಗ್ಲೀಷರು ಹೊರಟುಹೋದರು. ಆದರೆ ನಮ್ಮ ಒಳಜಗಳಗಳು ಹೀಗೆ ಇದ್ದರೆ ಅವರ ಬದಲು ಅಮೆರಿಕದವರು ಬಂದು ಕಾಲೂರಿಯಾರು. ಆದ್ದರಿಂದ ನೀವು ಒಂದಾಗಿ, ಒಟ್ಟಾಗಿ ಒಂದೇ ಮನಸ್ಸಿನಿಂದ ಈ ಕೆಲಸದಲ್ಲಿ ನಿರತರಾದರೆ ಒಗ್ಗಟ್ಟು ಬಲವಾದೀತು'

**ಎರಡು ಮನಸ್ಸು ಮತ್ತೆ ಕೂಡಿದವು :** ಎರಡೂ ಕಡೆಯಿಂದ, ಇತ್ತಲಿಂದ ಶತೃಘ್ನಸಿಂಹ, ಅತ್ತಲಿಂದ ರಾಮುಗೋಪಾಲು, ಇಬ್ಬರೂ ವಿನೋಬಾಜಿಯ ಬಳಿ ತೀರ್ಮಾನ ಮಾಡಿಕೊಳ್ಳಲಿ , ತಮಗೆ

ಒಪ್ಪಿಗೆ ಎಂದರು ಕಪಿಲಭಾಯಿ. ಮರುದಿನ ಹಮೀರಪುರ ಜಿಲ್ಲೆಯ ಕಟ್ಟಕಡೆಯ ಬಿಡಾರ. ರಾಮಗೋಪಾಲರು ತಮ್ಮ ಕತೆಯನ್ನೆಲ್ಲ ವಿನೋಬಾಜಿಗೆ ಹೇಳಿದರು. ಶತ್ರುಘ್ನಸಿಂಹರ ಮಾತನ್ನು ವಿನೋಬಾ ಕೇಳಿದರು. ಇಬ್ಬರೂ ಈ ಋಷಿವರ್ಯರ ಇದಿರಿನಲ್ಲಿ ತಮ್ಮ ಹಗೆಯನ್ನು ಕೈಬಿಟ್ಟರು. ಇಬ್ಬರೂ ಒಪ್ಪಿಕೊಂಡರು. 'ಸಿಂಹರನ್ನು ನಾನು ತಂದೆಯಂತೆ ಕಾಣುತ್ತೇನೆ' ಎಂದರು ರಾಮಗೋಪಾಲ್. 'ಇಂದಿನವರೆಗೂ ಈತನನ್ನು ಮಗನೆಂದೇ ತಿಳಿದಿದ್ದೆ. ಇವೊತ್ತು ನನಗೆ ಮಗನನ್ನು ಕೂಡಿದಂತಾಯಿತು. ಅಷ್ಟು ಸಂತೋಷವಾಗಿದೆ' ಎಂದರು ವೃದ್ಧ ಶತ್ರುಘ್ನಸಿಂಹರು.

ದರಿದ್ರನಾರಾಯಣನ ವಕೀಲ ನಾನು ಎಂದು ಈ ಸಮರಸಕ್ಕಾಗಿ ಇನ್ನೂ ಎಂಟೆಂಟು ಸಾವಿರದ ಹೊರೆ ಅವರಿಗೆ ಹೊರಿಸಿದರು ವಿನೋಬಾ. ಅಲ್ಲಿನ ಜಿಲ್ಲಾಧೀಶನೂ 'ಕೋರ್ಟ್ ಆಫ್ ವಾರ್ಡ್ಸ್' ಪರವಾಗಿ ೧೦ ಸಾವಿರ ಎಕರೆ ಕೊಟ್ಟ. ಹೀಗೆ ೧೮ ಸಾವಿರ ಆಗಿತ್ತು. ಈಗ ಹೊರಿಸಿದ ೧೬ ಸಾವಿರ ಸೇರಿ ೩೪ ಸಾವಿರ ಎಕರೆ ಸಂಗ್ರಹಿಸುವ ವಚನವಿತ್ತರು.

ಬಾಂದಾ ಜಿಲ್ಲೆಯವರು ಒಂದು ಲಕ್ಷದ ಸಂಕಲ್ಪ ಮಾಡಿದಾರೆ. ಆದರೆ ಅವರ ಪರಿಸ್ಥಿತಿ ಗಮನಾರ್ಹವಾಗಿದೆ. ನಾವು ಬಾಂದಾ ಜಿಲ್ಲೆಯಲ್ಲಿ ಕಾಲಿಟ್ಟಾಗ ಒಟ್ಟು ೩೦೦ ಎಕರೆ ಸಿಕ್ಕಿತ್ತು. ಹೇಗೆ ಮಾಡಬೇಕು ಉಳಿದುದಕ್ಕೆ ಎಂದು ಅರ್ಜುನಭಾಯಿ ಚಿಂತೆಗೊಳಗಾಗಿದ್ದರು. ತಮ್ಮ ಜಿಲ್ಲೆಯ ೧೧೦೦ ಹಳ್ಳಿಗಳಿಂದ ೧೧ ಸಾವಿರ ಎಕರೆ ಕೊಡಿಸುತ್ತೇನೆ ಎಂದು ಮಥುರಾದಲ್ಲಿ ಆತ ಹೇಳಿದ್ದರು. ಆದರೆ ನಾಲ್ಕಾರು ಜನರಿಗಿಂತ ಹೆಚ್ಚು ಯಾರೂ ಆತನಿಗೆ ಸಹಕಾರ ನೀಡಲಿಲ್ಲ. ನಾಯಕರೆಲ್ಲ ಲಖನೋ ದಿಲ್ಲೀಗಳಲ್ಲಿದ್ದರು. ಆದರೆ ವಿನೋಬಾಜೀ ಈ ಜಿಲ್ಲೆಗೆ ಕಾಲಿಟ್ಟ ದಿನ ಅವರು ಬರಬೇಕಾಗಿತ್ತು. 'ಇದು ತುಲಸೀ

ದಾಸರ ಜಿಲ್ಲೆ. ಇಡೀ ದೇಶ ಅವರ ರಾಮಾಯಣವನ್ನು ಓದಿದೆ. ಇಲ್ಲಿ ನಾವು ಸಾವಿರದ ಮಾತು ಆಡೆವು. ಇಲ್ಲಿ ಲಕ್ಷದ ಕೆಳಗೆ ಮಾತೇ ಇಲ್ಲ' ಎಂದರು ವಿನೋಬಾ. 'ನಾನು ಹೇಳುತ್ತಿರುವುದು ಹೃದಯ ಪರಿವರ್ತನದ ಮಾತು, ಸಾಮಾಜಿಕ ಕ್ರಾಂತಿಯ ಮಾತು. ನಿಮ್ಮ ಈ ಕೆಲಸ ಹೇಗೆ, ಯಾವಾಗ, ಯಾವ ರೀತಿ ಪೂರ್ತಿಗೊಂಡೀತು ಎಂದು ಜನ ಕೇಳುತ್ತಾರೆ ಕಾನೂನಿನ ಪರಿಣಾಮವನ್ನು ನೀವು ನೋಡುತ್ತಲೇ ಇದೀರಿ. ಕೊಲೆಯ ದಾರಿಯ ಅನುಭವವೂ ನಿಮಗೆ ಆಗಿದೆ. ಕೊಲ್ಲಬೇಕೆಂದರೆ ಯಾರನ್ನು ಕೊಲ್ಲಬೇಕೋ ನನಗಂತೂ ತಿಳಿದಿಲ್ಲ. ನಾವು ಸುಂದೋಪಸುಂದರ ಕತೆ ಕೇಳಿಲ್ಲವೇ? ಆ ದಾರಿ ನಿಷ್ಪ್ರಯೋಜಕ. ತುಲಸೀದಾಸರ ಹೆಸರು ಹೇಳಿ ನಿಮ್ಮನ್ನು ಹೊಲ ಬೇಡುತ್ತೇನೆ. ಒಂದು ಲಕ್ಷ ಎಕರೆಗೆ ಕಡಮೆ ಹೊಲ ನನಗೆ ಬೇಡವೇ ಬೇಡ.'

ಮಾತಾಡುವ ವಿನೋಬಾಗೆ ಹನಿಗಣ್ಣಾಯಿತು. ವಿಷ್ಣು ಪೂಜೆಯಲ್ಲಿ ತಲ್ಲೀನನಾದ ಈಶ್ವರನ ಕಣ್ಣು ಧಾರೆಕರೆದು ಈಶ್ವರನಿಗೇ ಅಭಿಷೇಕ ಮಾಡಿದಂತಿತ್ತು ನೋಟ. ಈ ಭಾವ ಸಮಾಧಿಯನ್ನು ನೋಡುತ್ತ ಸಭೆ ಮೂಕನಾಗಿ ನಿಂತಿತು. ಸ್ವಲ್ಪ ಹೊತ್ತಿನ ಮೇಲೆ ಶಾಂತರಾಗಿ ವಿನೋಬಾ ಬಹಳ ಪ್ರಯಾಸದಿಂದ ಒಂದೇ ವಾಕ್ಯ ನುಡಿದರು 'ದೇವರ ಆ ಭಕ್ತಿಯೇ ಸುದರ್ಶನ ಚಕ್ರದ ರೂಪಿನಿಂದ ಮೈತಳೆದು ಈಗ ಜಗತ್ತನ್ನು ರಕ್ಷಿಸುತ್ತದೆ. ನಮ್ಮೆಲ್ಲರನ್ನೂ ಅದೇ ಕಾಪಾಡೀತು'

ಸಂದರ್ಭದ ಗಾಂಭೀರ್ಯವನ್ನು ಎಲ್ಲರೂ ಅರಿತರು. ಮನಸ್ಸಿನೊಳಗೇ ಸಂಕಲ್ಪಮಾಡಿ ಯುಗಪುರುಷನ ಅಡಿಗಳಲ್ಲಿ ಶ್ರದ್ಧೆಯಿಂದ ಪ್ರಮಾಣಮಾಡಿ ಭೂದಾನ ಯಜ್ಞದ ಕೆಲಸದಲ್ಲಿ ತೊಡಗಿದರು. ದಿನವೆಲ್ಲ ಭೂದಾನ ಸಂಗ್ರಹ, ಸಂಜೆಗೆ ಪ್ರಾರ್ಥನೆಗೆ ಬಂದು ಅದನ್ನೆಲ್ಲ ಒಪ್ಪಿಸಿ ಹೋಗುತ್ತಿದ್ದರು. ಮೊದಲಿನಿಂದಲೂ ಗಾಳಿಯೇನೋ ಸಿದ್ಧ

ವಾಗಿಯೇ ಇತ್ತು. ಅರ್ಜುನಭಾಯಿಯೂ ಅವರ ಗೆಳೆಯರೂ ನೂರಾರು ಹಳ್ಳಿಗಳಿಗೆ ಹೋಗಿ ವಿನೋಬಾಜೀಯ ಸಂದೇಶವನ್ನು ಬೀರಿದ್ದರು. ವಿನೋಬಾಜೀ ಬರಲಿ, ಬಂದಾಗ ನೋಡೋಣ ಎಂದಿದ್ದರು ಎಲ್ಲರೂ. ಹಿಂದೆ ನಾನೀಬಾಯಿಯ ಮದುವೆಯಲ್ಲಿ ನರಸೀ ಮೆಹತಾನ ಮೇಲೆ ಒಡವೆ – ವಸ್ತ್ರಗಳ ಮಳೆ ಕರೆಯಿತಂತೆ. ಬಾಂದಾ ಜಿಲ್ಲೆಯಲ್ಲಿ ವಿನೋಬಾ ಇರುವ ತನಕ ದಿನವೂ ಭೂದಾನದ ಮಳೆಗರೆಯಿತು. ೨೦ ಸಾವಿರ ಎಕರೆ ದಾನ ದೊರೆಯಿತು. ಯಮುನಾ ನದೀ ತಟದ ತುಲಸೀದಾಸರ ಹುಟ್ಟೂರು ರಾಜಾಪುರದಲ್ಲಿ ಕೆಲಸಗಾರರೆಲ್ಲ ಒಂದು ಲಕ್ಷ ಎಕರೆ ಗಳಿಸುವ ಸಂಕಲ್ಪ ಮಾಡಿದರು.

ಕೋಲ – ಕಿರಾತರ ಆ ಪ್ರೇಮಭೂಮಿಯನ್ನು ಬೀಳ್ಕೊಡುವಾಗ ವಿನೋಬಾಜೀ ಹೇಳಿದರು ; 'ಆತ್ಮವು ಸತ್ಯಸಂಕಲ್ಪ, ಸತ್ಯಕಾಮ. ನಾವು ನಾವು ಸಾಮುದಾಯಿಕವಾಗಿ ಸಂಕಲ್ಪಮಾಡಿದರೆ ನಮ್ಮ ಶಕ್ತಿಯ ಹೊಳವು ಆಗುತ್ತದೆ. ನಾವು ಒಳ್ಳೇ ಉನ್ನತ ಸಂಕಲ್ಪ ಮಾಡುತ್ತ ಹೋಗಬೇಕು. ಅದನ್ನು ಪೂರಯಿಸಲು ದೇಹತ್ಯಾಗ ಮಾಡಬೇಕಾದರೂ ಸರಿಯೆ, ಸರ್ವ ಪ್ರಯತ್ನವನ್ನೂ ಮಾಡಬೇಕು. ಮನುಷ್ಯ ಶುದ್ಧ ಸಂಕಲ್ಪಮಾಡುವುದೇ ಸಂಕಲ್ಪಮುಕ್ತಿಯ ಯುಕ್ತಿ. ಆದ್ದರಿಂದ ನೀವು ಸಾಮುದಾಯಿಕವಾಗಿ ಮಾಡಿದ ಈ ಲಕ್ಷದ ಸಂಕಲ್ಪವನ್ನು ನೆರವೇರಿಸಲು ತೊಡಗಿರಿ. ರಾಮಕಾರ್ಯ ಮಾಡದೆ ನಮಗೆ ವಿಶ್ರಾಮವಿಲ್ಲ.'

**ಜಯಪ್ರಕಾಶರೊಡನೆ** : ಪಂಚಮಡೀ ಸಮ್ಮೇಳನದ ತರುವಾಯ ಜಯಪ್ರಕಾಶರು ವಿನೋಬಾ ಭೇಟಿಗೆ ಬಾಂದಾಕ್ಕೆ ಬಂದರು. ಈ ಸುದ್ದಿ ದೇಶದಲ್ಲಿ ಕುತೂಹಲ ಆಸೆಗಳನ್ನು ಕೆರಳಿಸಿತು. ಇದಕ್ಕೆ ಮೊದಲು ಪಂಡಿತ ನೆಹರೂ ಭೂದಾನಯಜ್ಞದ ಬಗ್ಗೆ ತಮ್ಮ ಸಾನುಭೂತಿಯನ್ನು ಪ್ರಕಟಿಸಿದ್ದರು. ವಿನೋಬಾ ಉತ್ತರ ಪ್ರದೇಶಕ್ಕೆ

ಬರುವ ಮೊದಲೇ ಕೃಪಲಾನೀ ತಮ್ಮ ಸಹಕಾರ ನೀಡಿದ್ದರು. ಕಮ್ಯೂನಿಸ್ಟರೂ ತಮ್ಮ ಸಾನುಭೂತಿ ತೋರಿ ಭೂದಾನ ನೀಡಿದರು. ಉತ್ತರ ಪ್ರದೇಶದ ರಾಷ್ಟ್ರೀಯ ಸ್ವಯಂಸೇವಕ ಸಂಘದವರೂ ಭೂದಾನ ಯಜ್ಞಕ್ಕಾಗಿ ಠರಾವು ಮಾಡಿದರು. ಭೂದಾನವನ್ನೂ ಮಾಡಿದರು. ಈಗ ಪಂಚಮಢೀ ತೀರ್ಮಾನವನ್ನು ತೆಗೆದುಕೊಂಡು ಸ್ವಯಂ ಜಯಪ್ರಕಾಶರೇ ಬಂದರು. ತೆಲಂಗಾಣದ ಕರೀಂನಗರ ಜಿಲ್ಲೆಯ ಸಮಾಜವಾದಿಗಳು ಸಹಕಾರ ನೀಡಿದರು. ಅವರಲ್ಲೊಬ್ಬ ತನ್ನ ಹೊಲದಲ್ಲಿ ಅರ್ಧವನ್ನು (೨೫ ಎಕರೆ) ದಾನ ಕೊಟ್ಟ.

ಈಶ್ವರನ ದೃಷ್ಟಾಂತ ಕೊಡುತ್ತಾ ವಿನೋಬಾ ಹೇಳಿದರು: 'ವಿಷ್ಣುಪೂಜೆಗೆ ಸಾವಿರ ಕಮಲಗಳನ್ನು ಅರ್ಪಿಸುವ ಸಂಕಲ್ಪಮಾಡಿದ್ದ ಈಶ್ವರ. ಒಂಬತ್ತುನೂರಾ ತೊಂಬತ್ತೊಂಬತ್ತು ಕಮಲಗಳನ್ನು ಅರ್ಪಿಸಿಯಾಯಿತು. ಒಂದೇ ಉಳಿಯಿತು. ಆಗ ಈಶ್ವರ ತನ್ನ ನೇತ್ರಕಮಲವನ್ನೇ ಅರ್ಪಿಸಿದ' ಈ ಹಿನ್ನೆಲೆ ಸಿದ್ಧವಾದ ಮೇಲೆ ಜಯಪ್ರಕಾಶರು ಬಂದದ್ದು ಭೂದಾನ ಯಜ್ಞದ ಚಳುವಳಿಗೆ, ದೇಶ ಹಿತಕ್ಕೆ ಮಹತ್ವ ಪೂರ್ಣವೆನ್ನಬೇಕು.

ಮಧ್ಯಾಹ್ನ ೨ ರಿಂದ ೫ ಗಂಟೆಯ ವರೆಗೆ, ಸರಿಯಾಗಿ ಮೂರು ಗಂಟೆ ಹೊತ್ತು ಇಬ್ಬರೂ ಏಕಾಗ್ರವಾಗಿ ಮಾತಾಡುತ್ತಿದ್ದರು. ಕಾನೂನು, ಪ್ರತಿಮೂಲ್ಯ, ಸತ್ಯಾಗ್ರಹ ಮುಂತಾದ ಎಲ್ಲಾ ಪ್ರಶ್ನೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಸಾರ್ವಜನಿಕ ಸಭೆಯಲ್ಲಿ ಶ್ರೀ ಜಯಪ್ರಕಾಶರು ಹೀಗೆ ಹೇಳಿದರು.

'೧೯೪೮ ರ ಜನವರಿ ೩೦ ರ ತರುವಾಯ, ಹಿಂದೆ ನಮಗೆ ತ್ಯಾಗದ ಸ್ಫೂರ್ತಿಕೊಡುತ್ತಿದ್ದ ಪ್ರೇರಣೆ ಈಗಿಲ್ಲ ಎನಿಸಿತ್ತು. ನಮ್ಮ ಸಮಸ್ಯೆಗಳನ್ನು ಅಹಿಂಸೆಯಿಂದ ಹರಿಸಬಲ್ಲೆವು ಎಂದು ಮತ್ತೆ ಈಗ ಎನಿಸುತ್ತಿದೆ. ಈ ಭೂದಾನ ಯಜ್ಞದ ದೆಸೆಯಿಂದ ಗಾಂಧೀವಾದ

ಸಮಾಜವಾದಗಳೆರಡೂ ಗಂಗಾ - ಯಮುನಾಗಳಂತೆ ಸಂಗಮವಾದಾವು, ದೇಶದ ಉನ್ನತಿಗೆ ಕಾರಣವಾದಾವು ಎಂಬ ಆಸೆಯಿದೆ ನನಗೆ. '

ವಿನೋಬಾ - ಜಯಪ್ರಕಾಶರ ಮಾತುಕತೆ ಪ್ರಕಟನಾರ್ಹವಲ್ಲದಿದ್ದರೂ ಕೆಲವು ಮುಖ್ಯವಿಷಯಗಳ ಬಗ್ಗೆ ವಿನೋಬಾಜೀಯ ಅಭಿಪ್ರಾಯವೇನೋ ತಿಳಿಯಲು ಜನ ಬಯಸಿಯಾರು. ಒಂದೆರಡು ಮಾತು ಹೇಳುತ್ತೇನೆ.

' ಪ್ರಜಾಶಕ್ತಿ ಅಸೀಮವಾದುದು. ಜನತೆ ಕಲ್ಪವೃಕ್ಷದಂತೆ. ನಾವು ಬೇಡಿದಂತೆ ನಮಗೆ ದೊರೆತೀತು. ಎರಡು ವರ್ಷಗಳಲ್ಲಿ ೨೫ ಲಕ್ಷ ಎಕರೆಯಾದರೆ ಸರಕಾರವೂ ಯೋಚಿಸಬೇಕಾದೀತು. ಜನರ ಮನೋವೃತ್ತಿ ಹೊಲ ನೀಡಲು ಸಿದ್ಧವಾಗಿದೆ ಎಂದು ತಿಳಿದರೆ, ಜಮೀನುದಾರರೂ ಇದನ್ನು ಒಪ್ಪಿದರೆ, ಸರ್ಕಾರ ಕಾನೂನು ಮಾಡಬಲ್ಲದು '

ಪ್ರತಿ ಮೂಲ್ಯದ ಬಗ್ಗೆ—' ಪ್ರತಿಮೂಲ್ಯ ಕೊಡುವ ಮಾತು ವಿಧಾನದಲ್ಲಿದೆ. ಆದರೆ ಇಲ್ಲಿಯ ವರೆಗೆ ಹತ್ತು ಹತ್ತುಸಾವಿರ ಎಕರೆ ಅನುಭವಿಸಿದವರಿಗೆ ಏನು ಪರಿಹಾರ ಕೊಡಬೇಕು ? ಅವರೂ ನಮ್ಮ ದೇಶದವರೇ, ಅದಕ್ಕಾಗಿ ಅವರಿಗೆ ಏನಾದರೂ ಕೊಡಲೇಬೇಕು, ನಿಜ. ಅನೇಕರಿಗೆ ಆ ಪರಿಹಾರ ಅಗತ್ಯವಿಲ್ಲ. ಅಂತೇ ಆ ಪರಿಹಾರದ್ರವ್ಯವನ್ನೆ ಅವರಿಂದ ನಾನು ಬೇಡುತ್ತಿದೇನೆ. ಇಲ್ಲಿಯ ವರೆಗೆ ಒಂದೂವರೆ ಲಕ್ಷ ರೂಪಾಯಿಗಳ ಪ್ರತಿಮೂಲ್ಯ ದಾನ ಸಿಕ್ಕಿದೆ. '

ಸಮಾಜವಾದಿಗಳೇ ಅಲ್ಲ, ಗಾಂಧೀವಾದಿಗಳೂ ಸತ್ಯಾಗ್ರಹದ ಬಗ್ಗೆ ವಿನೋಬಾಜಿಯ ವಿಚಾರವನ್ನು ಅರಿಯಲು ಉತ್ಸುಕರಾಗಿದ್ದರು. ' ಜನರು ಸತ್ಯಾಗ್ರಹದ ಬಗ್ಗೆ ಕೇಳುತ್ತಾರೆ. ನಾನು ಏನು ಕೆಲಸ ಮಾಡಿದರೂ ಸತ್ಯಾಗ್ರಹಿ ಎಂತಲೇ ಮಾಡುತ್ತೇನೆ. ಈಗ ನಾನು

ಮಾಡುತ್ತಿರುವುದು ಸತ್ಯಾಗ್ರಹ ಎಂದೇ ನನ್ನ ಭಾವನೆ. ಸತ್ಯಕ್ಕಾಗಿ ಆಗ್ರಹ ಮಾಡುವುದು, ಅದಕ್ಕಾಗಿ ವಾತಾವರಣ ಕಲ್ಪಿಸುವುದು, ಪರರ ಹೃದಯವನ್ನು ಹೊಗಲೆಂದು ಅತ್ಯಧಿಕ ಕಷ್ಟವನ್ನು ಸಹಿಸುವುದು - ಇದು ಸತ್ಯಾಗ್ರಹದ ರೂಪ. ಅದೊಂದು ಬಗೆಯ ಪರಕಾಯ ಪ್ರವೇಶ. ಇಷ್ಟೆಲ್ಲ ಮಾಡಿಯೂ ಸ್ಥೂಲ ಸತ್ಯಾಗ್ರಹ ಅಗತ್ಯವಾದರೆ ದೇವರು ನನ್ನಿಂದ, ನಿಮ್ಮಿಂದ ಅದನ್ನು ಮಾಡಿಸಿ ತೀರುತ್ತಾನೆ. ಎಲ್ಲರ ಹೃದಯದಲ್ಲೂ ಅವನೇ ಕೆಲಸ ಮಾಡುತ್ತಿದಾನೆ. ನನಗೆ ಪ್ರೇರಣೆ ಕೊಡುತ್ತಿರುವ ಪರಮೇಶ್ವರನೇ ನಿಮಗೂ ಕೊಟ್ಟಾನು.'

# ೧೬. ವಾರಣಾಸಿಗೆ ಮೊದಲ ಪ್ರವೇಶ

ದೇವರನ್ನು ತಮಗೆ ಉತ್ತರಾಧಿಕಾರಿಯಾಗಿಮಾಡಿ ಏಕಾಗ್ರವಾಗಿ ನಿಶ್ಚಿಂತೆಯಿಂದ ವಿನೋಬಾಜೀ ತಮ್ಮ ಚರೈವೇತಿ ಕಾರ್ಯಕ್ರಮವನ್ನು ಸಾಗಿಸುತ್ತಿದಾರೆ. ಜನಕಮಹಾರಾಜನಂತೆ ಸಿದ್ಧೆ ಮಾಡುತ್ತಾರೆ! ಶ್ರೀ ಕೃಷ್ಣನಂತೆ ಜ್ಞಾನ ದಾನ ಮಾಡುತ್ತಾರೆ. ತಾವು ಎಷ್ಟು ನೀಡುತ್ತಾರೋ ಅದಕ್ಕಿಂತ ಬಹಳ ಕಡಮೆ ತೆಗೆದುಕೊಳ್ಳುತ್ತಾರೆ. ತೆಗೆದುಕೊಂಬದೂ ಬರೀ ಹೊಲ, ಹೊಲಕ್ಕೆ ಉಪಯೋಗವಾಗುವ ಸಾಮುಗ್ರಿ ಬಾವಿ, ಎತ್ತು, ನೇಗಿಲು ಇತ್ಯಾದಿ. ಆದರೆ ತಾವು ನೀಡುವುದಕ್ಕೆ ಎಣೆಯೆಲ್ಲಿದೆ, ಬೆಲೆಯೆಲ್ಲಿದೆ? ಹೋಲಿಕೆಯೇನಿದೆ? ಅದರಲ್ಲಿ ಜೀವನದ ಶ್ರೇಯವಿದೆ. 'ಈ ವ್ಯಾಪಾರ ತುಟ್ಟಿಯೋ - ಅಗ್ಗವೋ ನೀವೇ ಹೇಳಿ' ಎಂದು ಒಂದು ಸಭೆಯಲ್ಲಿ ಕೇಳಿಯೇ ಬಿಟ್ಟರು ವಿನೋಬಾ. 'ನಾವು ಐದರ ಪದಾರ್ಥ ಕೊಟ್ಟು ಐವತ್ತರ ಪದಾರ್ಥ ಪಡೆದರೆ ವ್ಯಾಪಾರ ತುಟ್ಟಿಯಾದೀತು. ನಾವು ವಿಚಾರ ನೀಡಿ ಮಣ್ಣು ಬೇಡುತ್ತೇವೆ. ವಿಚಾರಕ್ಕೂ ಮಣ್ಣಿಗೂ ಎಲ್ಲಿಯ ಹೋಲಿಕೆ? ತುಲಸೀದಾಸರು ನಮಗೇನು ಕೊಟ್ಟರು? ಒಂದು ಲೈಸೆನ್ಸ್ ಕೊಟ್ಟರೇ? ಸತ್ಯವಿಚಾರವನ್ನು ನೀಡಿದರು. ವಿಚಾರ ನೀಡಿದವರು ಜೀವನ ನೀಡಿದಂತೆ. ನಾನು ನಿಮಗೆ ಹೇಳಿದ ವಿಚಾರದಂತೆ ನೀವು ನಡೆದರೆ ಇಲ್ಲೇ ವೈಕುಂಠವನ್ನು ಪಡೆದೀರಿ ಎಂದು ಸಾರಿ ಹೇಳುತ್ತೇನೆ.'

ಇಲ್ಲೇ ಈಗಾಗಲೇ ವೈಕುಂಠವನ್ನು ನೆಲೆಗೊಳಿಸುವ ಕಾರ್ಯಕ್ರಮವನ್ನು ವಿನೋಬಾ ದೇಶಕ್ಕೆ ಕೊಟ್ಟಿದಾರೆ. ಈ ದೇಶ ಅದನ್ನು ಒಪ್ಪಿದುದನ್ನೂ ನಾವು ಕಂಡೆವು. ಇಡೀ ದೇಶದ ಸರ್ವೋದಯ

ಕೆಲಸಗಾರರು ಸೇವಾಪುರಿಯಲ್ಲಿ ೨೫ ಲಕ್ಷ ಎಕರೆ ಹೊಲ ಕೂಡಿಸುವ ಸಂಕಲ್ಪ ಮಾಡಿದರು

**ಸೇವೆಯ ಸುವಾಸನೆ:** ಗಾಜೀಪುರ ಜಿಲ್ಲೆಯಲ್ಲಿ ಮಹಮದಾಬಾದ್, ಗಾಜೀಪುರ, ನಂದಗಾಂ, ಸೈದ್‌ಪೂರ್—ಹೀಗೆ ನಾಲ್ಕು ಬಿಡಾರ. ಮಹಮುದಾಬಾದಿನಲ್ಲಿ ಸ್ವರ್ಗೀಯ ಡಾ. ಅನ್ಸಾರಿಯವರ ನೆನಪು ಸಹಜವಾಗಿಯೇ ಆಯಿತು. ಅಲ್ಲಿಗೆ ೨ ಮೈಲಿ ಅವರ ಹುಟ್ಟೂರು. ಅವರು ಮಾಡಿದ ದೇಶಸೇವೆಯ ಪರಿಮಳ ಬಚ್ಚಿಟ್ಟರೂ ಅಡಗಿರಲಿಲ್ಲ ಅಲ್ಲಿನ ಮುಸಲ್ಮಾನರು ನಮಗೆ ಎಲ್ಲ ಬಗೆಯಲ್ಲೂ ನೆರವಾದರು. ಸಭೆಗಳಲ್ಲೂ ಸಾಕಷ್ಟು ಜನ ಮುಸಲ್ಮಾನರು ಇದ್ದರು

**ರಾಟೆಯ ಗುಪ್ತ ಸಾಮರ್ಥ್ಯ:** ಎಂದಿನಂತೆ ಇಲ್ಲೂ ನೂಲುವುದು ನಿತ್ಯವೂ ನಡೆದಿತ್ತು. ಇಬ್ಬರು ತಂಗಿಯರು ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ನೂತರು. ಸಭೆಯ ಕಣ್ಣೆಲ್ಲ ಅವರ ಕಡೆಗೇ. ನಿತ್ಯವೂ ನಮ್ಮ ಸೂತ್ರಯಜ್ಞ ನಡದೇ ಇರುತ್ತದೆ. ಹೋದಲ್ಲೆಲ್ಲ ನೂಲುಗಾರಿಕೆಯ ಪ್ರದರ್ಶನವೇ ಆಗುತ್ತದೆ. ಈ ತಂಗಿಯರ ದೆಸೆಯಿಂದ ಇವತ್ತು ಪ್ರದರ್ಶನಕ್ಕೆ ಕಳೆಯೇರಿತು ವಿನೋಬಾಜೀ ತಮ್ಮ ಪ್ರವಚನದಲ್ಲಿ ಇದನ್ನು ಪ್ರಸ್ತಾಪಿಸಿದರು. ‘ ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ನೂಲುವುದು ಲಾಭಕರ ಹಗಲೇ ಅಲ್ಲ, ರಾತ್ರಿಯೂ ನೂಲಬಹುದು. ಚಂದ್ರ ಸೂರ್ಯ ಯಾರೂ ಇಲ್ಲದಿದ್ದರೂ ರಾಮನಾಮ ಜಪಿಸುತ್ತ ಸಾಗಿಸಬೇಕಾದ ಕೆಲಸ ನೂಲುವುದು. ಅರ್ಜುನ ಹೀಗೆ ಕತ್ತಲಲ್ಲಿ ಧನುರ್ವಿದ್ಯೆ ಕಲಿತ ನೂಲುಗಾರಿಕೆಯಲ್ಲಿ ಇನ್ನೂ ಎಷ್ಟೋ ಪ್ರಯೋಗ ಆಗಬೇಕಾಗಿದೆ. ಅದರಲ್ಲಿ ಇದೂ ಒಂದು. ಕುರುಡರು ನೂಲುವುದನ್ನು ನಾನು ನೋಡಿದ್ದೇನೆ. ಆದರೆ ಕಣ್ಣು ಮುಚ್ಚಿಕೊಂಡು ನೂತರ ಅಪಾರ ಶಾಂತಿ ಸಿಗುತ್ತದ. ಮೌನವಾಗಿ ನೂತರೆ ಆ

ಶಾಂತಿ ಇನ್ನೂ ಹೆಚ್ಚುತ್ತದೆ. ನಾನೂ ಹೀಗೆ ಕಣ್ಣು ಮುಚ್ಚಿ ನೂಲುವ ಪ್ರಯೋಗ ಮಾಡಿದೇನೆ. ನಾನು ತಕಲಿಯಿಂದ ನೂತೆ· ರಾಟೆಗಿಂತ ನೂಲಲಿಕ್ಕೆ ತಕಲಿ ಸುಲಭ.

'ಎಲ್ಲಿಯ ವರೆಗೆ ಹಳ್ಳಿಗಳಲ್ಲಿ ತಮ್ಮ ದಾರ ತಾವೇ ನೂತು ಹಳ್ಳಿಯಲ್ಲೇ ಬಟ್ಟೆ ನೇಯಿಸಿಕೊಳ್ಳರೋ ಅಲ್ಲಿಯ ವರೆಗೆ ನಮ್ಮ ಈ ಬಡತನ ನೀಗುವುದು ಸಾಧ್ಯವಿಲ್ಲ. ಇಲ್ಲಿ ಈ ಜಿಲ್ಲೆಯಲ್ಲಂತೂ ಮೂವರಿಗೆ ಒಂದು ಎಕರೆ ಹೊಲ ಇದೆ. ಎಂದರೆ ಡೆಸಿಮಲ್·೩೨. ಬೇರಾವ ಕಸಬೂ ಇಲ್ಲ. ಬಾವಿ ತೋಡಿಸಿ, ರಸ್ತೆ ಮಾಡಿಸಿ ಜನಕ್ಕೆ ಕೆಲಸ ಕೊಡಬಹುದು ಎಂದು ಕೆಲವರು ತಿಳಿಯುತ್ತಾರೆ. ಬಾವಿ ರಸ್ತೆ ನಮಗೆ ಬೇಕು; ನಿಜ. ಇದರಿಂದ ತಾತ್ಕಾಲಿಕವಾಗಿ ಸ್ವಲ್ಪ ಕೆಲಸವೂ ಸಿಗುತ್ತದೆ. ಇಷ್ಟು ಸ್ವಲ್ಪ ಹೊಲ ಇರುವೆಡೆ ಬಾವಿ–ರಸ್ತೆಗಳಿಂದ ಸಮಸ್ಯೆ ಹರಿಯದು. ಇಲ್ಲಿ ಗ್ರಾಮೋದ್ಯೋಗವೇ ಗತಿ. ಈ ದೃಷ್ಟಿಯಿಂದ ಚರಖಾ ನಮಗೆ ಬಹಳ ನೆರವಾಗಬಲ್ಲದು. ಆದರೆ ದಕ್ಷತೆಯ ಅರಿವು ಕೆಲಸಗಾರರಿಗೆ ಇನ್ನೂ ಪೂರ್ಣವಾಗಿ ಆಗಿಲ್ಲ.'

## ಕಮ್ಯೂನಿಸಂ ಅಥವಾ ಕಳ್ಳತನ—ಡಕಾಯಿತಿ :

ಆಮೇಲೆ ಭೂದಾನ ಯಜ್ಞದ ಹಿನ್ನೆಲೆ, ಅದರ ಅಗತ್ಯ ತಿಳಿಸುತ್ತ: 'ನಿಮ್ಮ ಕಣ್ಣ ಮುಂದೆ ಇದೇನು ಚಮತ್ಕಾರವಾಗುತ್ತಿದೆ? ಸಾವಿರಾರು ಜನ ಸ್ವೇಚ್ಛೆಯಿಂದ ಹೊಲ ಕೊಡುತ್ತಿದಾರ. ಇದು ಅಹಿಂಸೆಯ ಚಮತ್ಕಾರ. ಗಂಗೆ ಕಡಲನ್ನು ಸಾರುವಂತೆ, ಮಗು ತಾಯ ಬಳಿಗೆ ಓಡುವಂತೆ, ಈ ಹೊಲವೂ ದರಿದ್ರನಾರಾಯಣನ ಬಳಿಗೆ ಓಡಿ ಬರುತ್ತಿದೆ' ಎಂದರು. ಮುಂಬರಿದು 'ಹಳ್ಳಿ ಹಳ್ಳಿಯೂ ಬಲವಾಗಲಿ ಎಂದೇ ನಾನು ಹಳ್ಳಿ ಹಳ್ಳಿ ತಿರುಗುತ್ತಿದೇನೆ. ಒಂದು ಹಳ್ಳಿಯೂ ದುರ್ಬಲವಾಗಬಾರದು ಹಳ್ಳಿಯ ಸುತ್ತ ಕೋಟೆ

ಕಟ್ಟಿದರೆ ಈ ಬಲ ಬಾರದು. ಒಳಗಿನ ಜನ ಪ್ರೀತಿಯಿಂದಿದ್ದರೆ ಬರುತ್ತದೆ. ಇಡೀ ಹಳ್ಳಿ ನಮ್ಮ ಕುಟುಂಬ ಎಂದು ತಿಳಿದರೆ ಬರುತ್ತದೆ. ಭೂದಾನ ಯಜ್ಞ ಈ ಪ್ರೇಮದ ಸಾಕ್ಷಾತ್ಕಾರ. ನಾವು ನಮ್ಮಲ್ಲಿನ ಪದಾರ್ಥವನ್ನು ಪರರಿಗೆ ನೀಡುವುದೇ ಇದರ ಕುರುಹು. ಸ್ವರಾಜ್ಯ ಬಂದಮೇಲೆ ಸೇವಕರದೊಂದು ದೊಡ್ಡ ಸೈನ್ಯವೇ ನಮ್ಮಲ್ಲಿ ಸಿದ್ಧವಾಗಬೇಕಿತ್ತು. ಹಾಗಾಗಲಿಲ್ಲ. ಜನತೆ ತಮಗಿದ್ದ ಭರವಸೆಯನ್ನು ಬಿಟ್ಟರು. ಬಡವರ ಸಮಸ್ಯೆ ಎಲ್ಲಿ ಹರಿಯದೋ ಅಲ್ಲಿ ಕಮ್ಯೂನಿಸಂ ಬೆಳೆಯುತ್ತದೆ. ಒಂದು ವೇಳೆ ಕಮ್ಯೂನಿಸಂ ಬಾರದಿದ್ದರೆ ಕಳ್ಳತನ–ಡಕಾಯಿತಿ ಹೆಚ್ಚುತ್ತದೆ. ನಾವೂ ಬಡವರಾದರೆ ನಾವೇ ಎಷ್ಟರ ವರೆಗೆ ಸೈರಿಸಿಯೇವೋ ಹೇಳಲು ಕಷ್ಟ. ಕಳವು—ಡಕಾಯಿತಿಗಳಿಗೆ ಶಿಕ್ಷೆ ಕೊಡುವ ನ್ಯಾಯಧೀಶ ತಾನೇ ಬಡವನಾದರೆ ಅವನು ಎಷ್ಟು ಮಟ್ಟಿಗೆ ಶಾಂತನಾಗಿದ್ದಾನೋ ಹೇಳುವುದು ಕಷ್ಟ. ನ್ಯಾಯಾಧೀಶನಾಗಿರುವವನಿಗೆ ಒಳ್ಳೆಯ ಅನುಕೂಲ ಕಲ್ಪಿಸಬೇಕಾಗುತ್ತದೆ. ಅಂತೇ, ಬಡವರು ಅಪರಾಧಿಗಳಲ್ಲ. ಅವರನ್ನು ಬಡವರಾಗಿಸಿದ ನಾವು ಅಪರಾಧಿಗಳು. ಮಾಡಿದವರು ಉಣ್ಣದೆ ಮಾಡದವರೇಕೆ ಉಣ್ಣಬೇಕು ಫಲ? ಇದು ನ್ಯಾಯವಲ್ಲ.'

ಒಬ್ಬ ತಮ್ಮ ಹೇಳಿದ : 'ಸ್ವಾಮಿ, ಬಡವರು ಪಾಪ ಮಾಡರು, ದೊಡ್ಡವರೇ ಪಾಪ ಮಾಡುವುದು.'

ವಿನೋಬಾ . 'ನಾನೂ ಅದನ್ನೇ ಹೇಳಿದೆ. ಅಪರಾಧಿಗಳನ್ನು ಹುಟ್ಟಿಸಿದವರು ನಾವೇ ಎಂದೆನಲ್ಲ.'

ಮುಂಬರಿಸಿ ವಿನೋಬಾ ಹೇಳಿದರು : 'ನಿಜವಾದ ಅಪರಾಧಿಗಳು ನಾವು, ಬಿಳೀ ಬಟ್ಟೆಯವರು. ಈ ಅಪರಾಧದ ಭಾರ ಅವರಿಗೆ ಕಡಮೆಯಾಗಲೆಂದು ನಮ್ಮ ಈ ಚಳುವಳಿ. ಬಡವರಿಗೆ ನಾವೆಸಗಿದ ಪಾಪದ ಹೊಣೆ ಪರಮ ಪಾಪಿಗಳಾದ ನಮ್ಮ ಮೇಲೆ ಇದೆ. ಈ

ಭೂದಾನ ಯಜ್ಞ ಇಬ್ಬರನ್ನೂ ಕಾಪಾಡುವ ಕೆಲಸ. ಬರೀ ಒಂದು ಉಪ್ಪಿನ ಮೂಲಕ ಗಾಂಧೀಜೀ ಜಾಗೃತಿ ಉಂಟುಮಾಡಿದರು. ಉಪ್ಪಿನಿಂದಲೇ ಅವರು ಸ್ವರಾಜ್ಯ ಗಳಿಸಿದರು. ಈ ಭೂದಾನ ಯಜ್ಞ ಚಳುವಳಿ ಸಾಗಿದರೆ, ಈಗ ಅದಕ್ಕೆ ಅನುಮಾನವಿಲ್ಲ. ಬಡವರು ಶಕ್ತಿವಂತರಾಗಿ ನಿಂತಾರು.'

ಮುಹಮ್ಮದಾಬಾದಿನಿಂದ ಗಾಜೀಪುರ. ಇಲ್ಲಿ ಮಹರ್ಷಿ ಜಮುದಗ್ನಿಯ ತಪೋಭೂಮಿಯಿದೆ. ಇಲ್ಲಿಂದ ಮುಂದೆ ಸೈದ್‌ಪುರ ಅಥವಾ ಸಿದ್ಧಪುರ. ಇಪ್ಪತ್ತುಮೂರು ವರ್ಷಗಳ ಹಿಂದೆ ಭಾಗೀರಥಿ-ಗೋಮತಿಗಳ ಸಂಗಮದ ಬಳಿಯ ಸಿದ್ಧಪುರಕ್ಕೆ ಬಾಪೂ ಪಾದಧೂಳಿ ಲಭಿಸಿದ ಪುಣ್ಯದಿನವನ್ನು ಈಗಲೂ ಇಲ್ಲಿನ ಜನ ಮರೆತಿಲ್ಲ. ಇವೊತ್ತು ಬಾಪೂನ ಆಧ್ಯಾತ್ಮಿಕ-ನೈತಿಕ ಆದರ್ಶಗಳಿಗೆ ಏಕಮಾತ್ರ ಉತ್ತರಾಧಿಕಾರಿಯಾದ ಆಚಾರ್ಯಪಾದರ ಆಗಮನದಿಂದ ಇಲ್ಲಿನ ಜನ ತಾವು ಕೃತಾರ್ಥರಾದಂತೆ ಭಾವಿಸಿದರು. ಅವರ ಉಲ್ಲಾಸಕ್ಕೆ ಮೇರೆಯೇ ಇಲ್ಲ. ತಮ್ಮ ಮನಸ್ಸಿನ ಭಾವವನ್ನು ಹೊರಗೆಡಹದೆ ಅವರಿಗೆ ಸಮಾಧಾನವಿಲ್ಲ. ಅದಕ್ಕಾಗಿ ವಿನೋಬಾಗೆ ಒಂದು ಮಾನಪತ್ರವನ್ನು ಅರ್ಪಿಸಿದರು. ಮಾನಪತ್ರ ಬರೀ ಸ್ಥೂಲವಸ್ತು. ಆದರೆ ಅದರ ಅಕ್ಷರ ಅಕ್ಷರದಲ್ಲೂ ಇಲ್ಲಿನ ಸಮಸ್ತ ಜನತೆಯ ಹೃದಯವೇ ಮೂರ್ತೀಭವಿಸಿ ಕೃತಕೃತ್ಯವಾಗಿತ್ತು. ಅದು ಬರೀ ಹೊಗಳಿಕೆಯಲ್ಲ. ಹೊಸ ಯುಗದ ನವಪ್ರಭಾತದ ತೇಜೋಮಯ ಪ್ರಕಾಶ ಜನಜೀವನವನ್ನು ಸುತ್ತಿ ಹರಿದು ಅದು ಜನತೆಯನ್ನು ಕರೆವಂತಿತ್ತು. ಹೊಸ ಯುಗದ ನಿರ್ಮಾತೃ ದೇವದೂತನಲ್ಲಿ ಅವರಿಗಿದ್ದ ಅಪಾರ ಶ್ರದ್ಧೆಯನ್ನು ಕಂಡು ಮನಸ್ಸಿನಲ್ಲೇ ಧನ್ಯವಾದವನ್ನು ಅರ್ಪಿಸಿದೆ.'

ಹೀಗೆ ಮಾನಪತ್ರಗಳ ಮೂಲಕ ಅನೇಕ ಸಲ ಈ ಯಾತ್ರೆಯಲ್ಲಿ ಜನಪದ ಮಾನಸ ಪ್ರತಿಬಿಂಬಿತವಾಯಿತು. ಆ ಸಾಹಿತ್ಯವೆಲ್ಲ ಈ

ದೇಶದ ಭಾರತಿಗೆ ಒಂದು ವಿಶೇಷ ಕಾಣಿಕೆಯಾಗಿ ಲಭಿಸಿತು. ವಿನೋಬಾಜೀಯೂ ಈ ಭಾವನೆಗಳನ್ನು ಸಮುಚಿತವಾಗಿ ಆದರಿಸಿದರು. ಯಥೋಚಿತ ಮಾರ್ಗದರ್ಶನ ಮಾಡಿದರು. ಪ್ರಾಸಂಗಿಕವಾಗಿ ಆವೊತ್ತು ಎಪ್ರೆಲ್ ೬–ರಾಷ್ಟ್ರೀಯ ಸಪ್ತಾಹದ ಪ್ರಾರಂಭ. ಇದರ ಪ್ರಸ್ತಾಪವೆತ್ತಿ ವಿನೋಬಾಜೀ ಹೇಳಿದರು 'ಈ ಸಪ್ತಾಹದ ಕಾರಣ ದಿಂದ ಹಿಂದೂಸ್ತಾನದ ಜನರ ಹೃದಯಕ್ಕೆ ದೇಶಪ್ರೇಮದ ಸಂದೇಶ ಕೊಡುತ್ತ ಬಂದಿದೆ. ಈ ಸಪ್ತಾಹದ ನೆನಪಿನಿಂದ ಹಿಂದೂಸ್ಥಾನದ ಜನರಿಗೆ ಪರಾಕ್ರಮ ಉಕ್ಕಿಬಂದಿದೆ ಅಂತೇ ಇದೊಂದು ಪಾವನ ಸಪ್ತಾಹ. ಪ್ರತಿ ವರ್ಷವೂ ನಮಗಿದು ಹೊಸ ಸ್ಫೂರ್ತಿಕೊಟ್ಟಿದೆ.'

**ಹೊಸ ರಕ್ತಕ್ಕೆ ಹೊಸ ಕೆಲಸಬೇಕು**· ಆಮೇಲೆ ಭೂದಾನದ ಮಹತ್ವವನ್ನು ತಿಳಿಸುತ್ತ 'ಈ ಯಜ್ಞ ಒಳ್ಳೆಯ ಸಮಯಕ್ಕೆ ಪ್ರಾರಂಭ ವಾಯಿತು. ಈಗ ಈ ಕೆಲಸ ಮೊದಲಾಗಿರದಿದ್ದರೆ ಯುವಕರಿಗೆ ಮುಂಬರಿಯಲು ಅವಕಾಶವೇ ಇರುತ್ತಿರಲಿಲ್ಲ. ಹಿಂದಿನವರು ಆ ಕಾಲದಲ್ಲಿ ಬಹಳ ಕೆಲಸ ಮಾಡಿದಾರೆ. ಅವರಲ್ಲಿ ಕೆಲವರು ಇನ್ನೂ ಹಿಂದಿನ ಸ್ಥಾನದಲ್ಲೇ ಕೂತಿದಾರೆ. ಕೆಲವರು ಮೇಲಿನ ಸ್ಥಾನಗಳಿಗೆ ಹೋದರು. ಹೋಗುವುದು ಅಗತ್ಯವೂ ಆಗಿತ್ತು ಆದರೆ ದೊಡ್ಡವರ ಕಡೆ ನೋಡಿ ಯುವಕರು ಅವರು ಕೆಲಸ ಮಾಡಿದರೆ ನಾವು ಮಾಡೋಣ ಎಂದರೆ ಕೆಲಸ ಆಗದು. ಯುವಕರೀಗ ಮುಂದೆ ಬರಬೇಕು. ಈ ಕೆಲಸ ಕಾಂಗ್ರೆಸ್ಸಿನವರದಲ್ಲ. ಸ್ವರಾಜ್ಯ ಬಂದಮೇಲೆ ಶೋಷಣಹೀನ ಸಮಾಜವನ್ನು ನಾವು ಕಟ್ಟಬೇಕಾಗಿದೆ. ಎಲ್ಲರಿಗೂ ಸಮಾನತೆಯ ಅನುಭವವಾಗಬೇಕು. ಆರ್ಥಿಕ ವಿಷಮತೆಯನ್ನು ಸಾಧ್ಯವಿದ್ದಷ್ಟು ಕಡಮೆ ಮಾಡಬೇಕಾಗಿದೆ. ಎಲ್ಲರಿಗೂ ಅಗತ್ಯವಾದ ಅನ್ನ–ವಸ್ತ್ರ ಗಳನ್ನು ಕೊಡಬೇಕಾಗಿದೆ. ಅದಕ್ಕೆ ಹೊಸ ಹೊಸ ಕೆಲಸಗಾರರು ಬೇಕು. ಹೊಸ ರಕ್ತ ಮುಂದೆ ಬರಬೇಕೆಂದು ಜವಾಹರಲಾಲರೂ

ಅನ್ನುತ್ತಿದಾರೆ. ಆದರೆ ಹೊಸ ರಕ್ತ ಹೊಸ ಬೇಡಿಕೆ ಬೇಡುತ್ತದೆ. ಯಾವ ದೇಶಕ್ಕಾಗಿ ತಮ್ಮ ಪ್ರಾಣವನ್ನೆ ಕೊಡಬೇಕೋ ಅದರ ಬಗ್ಗೆ ತಮಗೆ ಒಂದು ಹೊಸ ದರ್ಶನವಾಗಬೇಕಾಗಿದೆ ಹೊಸ ಪ್ರೇರಣೆ ಸಿಗಬೇಕಾಗಿದೆ. ಈ ಭೂದಾನ ಯಜ್ಞದಲ್ಲಿ ಅಂಥ ಪ್ರೇರಣೆಯಿದೆ.

'ಹಿಂದಿನವರಿಗೆ ಒಂದು ಆದರ್ಶವಿದೆ ಅವರು ಹೊಸಬರನ್ನು ಸೆಳೆಯಲಾರದಿದಾರೆ. ಹೊಸ ಜನಕ್ಕೆ ಹೊಸ ವಿಚಾರ ಬೇಕು, ಹೊಸ ಶಬ್ದ ಬೇಕು, ಹೊಸ ಪರಿಭಾಷೆ ಬೇಕು. ಹೊಸ ಕಾರ್ಯಕ್ರಮ ಬೇಕು. ಈ ಭೂದಾನದ ಕೆಲಸ ಅಂಥದು. ಇದರಿಂದ ಹಳ್ಳಿಯ ಮತಭೇದವೆಲ್ಲ ಅಳಿಯುತ್ತದೆ. ಹಳೆಯ ಹೆಸರು ಇರುವ ವರೆಗೆ ಹಳೆಯ ಮತಭೇದ. ಗಂಗೆ- ಯಮುನೆ ಇರುವ ತನಕ ಪ್ರವಾಹಗಳೆ ಬೇರೆ ಬೇರೆ. ಮಹಾ ಸಮುದ್ರಕ್ಕೆ ಸೇರಿದಾಗ ಬೇರೆ ಬೇರೆ ಪ್ರವಾಹಗಳೆಲ್ಲ ಮುಕ್ತಾಯ. ಆದ್ದರಿಂದ ಈ ಕೆಲಸದಲ್ಲಿ ಎಲ್ಲರನ್ನೂ ಸೆಳೆಯಬೇಕಾಗಿದೆ. ಜನಸಂಘದವರಿಗೆ ಇದು ಸಾಂಸ್ಕೃತಿಕ ಉತ್ಥಾನಕಾರ್ಯ ಎನಿಸುತ್ತದೆ. ಕ್ರಾಂತಿಕಾರಿಗಳಿಗೆ ಇದು ಸಾಮಾಜಿಕ–ಆರ್ಥಿಕ ಕ್ರಾಂತಿಯ ಕೆಲಸ ಎನಿಸುತ್ತದೆ. ಹೊಸ ಹೆಸರಿನ ಕೌಶಲವೇ ಅಂಥದು. ಅದರಲ್ಲಿ ಎಲ್ಲರಿಗೂ ತಮ್ಮ ತಮ್ಮ ಇಷ್ಟ ಪದಾರ್ಥ ಕಾಣುತ್ತದೆ. ನಮಗೆ ಹಳಬರ ಆಶೀರ್ವಾದ ಸಿಕ್ಕಿದೆ. ಅಷ್ಟು ಸಾಕು. ಈಗ ಹೊಸಬರು ಈ ಕೆಲಸವನ್ನು ಮಾಡಬೇಕು. ಈ ರಾಷ್ಟ್ರೀಯ ಸಪ್ತಾಹದ ನೆಪದಲ್ಲಿ ನಾನು ಯುವಕರನ್ನು ಆಹ್ವಾನಿಸುತ್ತೇನೆ. ಇದರಲ್ಲಿ ಕೆಲಸ ಮಾಡ ಬಯಸಿದವರೆಲ್ಲ ಬರಲಿ. ನನ್ನ ಜತೆಗೇ ಇಟ್ಟುಕೊಳ್ಳುತ್ತೇನೆ. ಇದು ನಮ್ಮ ಚರಂತೀ - ಶಾಲೆ. ೧೦ - ೧೫ ದಿನದ ತರಬೇತು ದೊರೆತರೆ ಸಾಕು. ಹೀಗೆ ಹೊಸ ಹೊಸ ಜನರು ದೊರೆತರೆ, ಉತ್ತರಪ್ರದೇಶದಲ್ಲಿ ಸಾವಿರ ಜನ ಸೇವಕರ ದಂಡೇ ಒಂದು ಆದೀತು. ಹೊಸ ಜನ ಇದರಲ್ಲಿ ಕಾಲಿಟ್ಟರೆ ಹಿಂದೂಸ್ಥಾನದಲ್ಲಿ ಸೇವೆಯ ಹೊಳೆಯೇ ಹರಿ

ದೀತು. ಎಲ್ಲ ಭೇದಭಾವವೂ ಅಳಿಯಲೆಂಬುದೇ ನನ್ನ ಉದ್ದೇಶ್ಯ. ಇಷ್ಟು ತಿಂಗಳಿಂದ ಉತ್ತರ ಪ್ರದೇಶದಲ್ಲಿ ತಿರುಗುತ್ತಿದೇನೆ. ಇದನ್ನು ಹೀಗೇ ಬಿಟ್ಟುಹೋಗಲಾರೆ ಇಲ್ಲಿನ ಕೆಲಸಗಾರರಿಂದ ಪರಂಪರೆಯಾಗಿ ಕೆಲಸ ಮಾಡಿಸಬಯುಸಿದೇನೆ, ಅವರೊಡನೆ ವೈಯಕ್ತಿಕ ಸಂಬಂಧ ಇಡಬಯುಸಿದೇನೆ ತರುಣರು ನನ್ನನ್ನು ಬಯುಸುತ್ತಾರೆ, ಆದರದ ಕಣ್ಣಿಂದ ಕಾಣುತ್ತಾರೆ - ನಾ ನೋಡುತ್ತಿದೇನೆ. ನನ್ನನ್ನು ಅವರು ಬಯುಸಿ ಆದರಮಾಡುವಂಥದು ನನ್ನಲ್ಲೇನಿದೆ? ನಾನು ಬಡವರ ಸೇವೆ ಮಾಡುತ್ತಿದೇನೆ ಎಂಬುದಷ್ಟೇ ಅಲ್ಲವೆ? ಇನ್ನಾವ ಉಪಕಾರವನ್ನೂ ನಾ ಮಾಡಿಲ್ಲ. ಬಡವರಿಗಾಗಿ ನಾನು ಸುತ್ತುತ್ತಿದೇನೆ. ಆದ್ದರಿಂದ ನನಗವರು ತೋರುವ ಆದರ ಬಡವರಿಗೆ ತೋರಿದ ಆದರ. ನನ್ನ ಮೇಲೆ ಪ್ರೀತಿಯಂದರೆ ಬಡವರ ಮೇಲಿನ ಪ್ರೀತಿ. ಅಂತೇ ಈ ಕೆಲಸದಲ್ಲಿ ನೀವು ಎಷ್ಟು ಸಹಕಾರ ಕೊಡಬಹುದೋ ಅಷ್ಟೂ ಕೊಡಿ. ಪ್ರೀತಿಯಿಂದ ನಿಮ್ಮನ್ನು ಕರೆಯುತ್ತಿದೇನೆ.'

ಆ ದಿನ ಭಾಷಣದ ತರುವಾಯ ಕೆಲವರು ಜವಾಬವಾರಿ ಜನ ತಮ್ಮ ಹೆಸರು ಬರೆಸಿದರು. ಈ ಧ್ವನಿ ಬಹಳ ದೂರ ಕೇಳಿಸಿದೆ. ಬೇರೆ ಪ್ರಾಂತಗಳಿಂದಲೂ ಹೆಸರು ಬರುತ್ತಿವೆ. ಸಿದ್ದಪುರದಲ್ಲಿ ಗಾಜೀಪುರ ಜಿಲ್ಲೆಯ ಯಾತ್ರೆ ಮುಗಿಯಿತು. ಬನಾರಸ್ ಜಿಲ್ಲೆಯಲ್ಲಿ ವಿನೋಬಾಜೀ ಅಡಿಯಿಟ್ಟರು. ಐದು ಮೈಲಿ ದೋಣಿಯ ಪ್ರಯಾಣ ಮಾಡಬೇಕಿತ್ತು. ವಿನೋಬಾಜೀಯವರ ಜತೆಗೆ ಇನ್ನೂ ಎರಡು ದೋಣಿ ಹೊರಟುವು. ಪಯಣ ಇದಿರು ದಿಕ್ಕಿಗೆ. ಆದರೆ ಗಾಳಿ ಇದಿರಿರಲಿಲ್ಲ. ಆದ್ದರಿಂದ ಪ್ರಯಾಣ ಕಷ್ಟವಾಗಲಿಲ್ಲ. ನದಿಯ ನೀರು ಆಳವೂ ಇರಲಿಲ್ಲ. ಕೆಲವರು ದೋಣಿಯಿಂದಿಳಿದು ಸ್ನಾನ ಮಾಡಿಬಿಟ್ಟರು. ಆ ಮನೋಹರ ಸೃಷ್ಟಿ ಸೌಂದರ್ಯದ ನಡುವೆ ಮಧುರ ಸಂಗೀತದ ಅಲೆಗಳಾಡಿದಾಗ ಕೆಲವು ಹೊತ್ತು ವಿನೋಬಾಜಿ

ಭಾವ ಸಮಾಧಿಯಲ್ಲಿ ಮುಳುಗಿದ್ದರು. ಅವರ ಈ ತಲ್ಲೀನತೆಯ ಪ್ರಭಾವ ಗಾಳಿಯಲ್ಲಿ ಹರಡಿ ಆ ಪ್ರಶಾಂತ· ಪ್ರವಾಸದಲ್ಲಿ ಮೌನ, ಶಾಂತಿ, ನೀರವತೆಗಳು ಮೂರೂ ಒಮ್ಮೆಲೇ ಕಳೆಗೊಂಡಂತೆ ಆಯಿತು. ನದಿಯ ದಡದಲ್ಲಿ ನಿಂತಿದ್ದ ಸಾವಿರಾರು ಮಂದಿಯ ಗುಂಪು ವಿನೋಬಾಜಿಯನ್ನು ಸ್ವಾಗತಮಾಡಿತು ಹಲವು ದಿನದಿಂದ ಯಾರ ದರ್ಶನವನ್ನು ಬಯಸಿದರೋ ಅವರನ್ನು ಕಣ್ಣಾರೆ ಕಂಡು ಜನದ ಮನ ಅದ್ಭುತ ರೀತಿಯಲ್ಲಿ ಅರಳಿ ಹೋಯಿತು ವಿನೋಬಾಜೀ ಆಯಾಸಗೊಂಡಿದ್ದರು. ಗಳಿಗೆಗಳಿಗೆ ಗೂನೀರು ಕುಡಿಯಬೇಕಾಗುತ್ತಿತ್ತು.? ಯಾರಾದರೂ ಸ್ವಲ್ಪದಣಿವಾರಿಸಿಕೊಳ್ಳುವ ಮಾತು ಆಡಿದರೆ ಮುಗಳ್ನಗೆ ನಕ್ಕು ವೇಗವಾಗಿ ಮುಂಬರಿಯುತ್ತಿದ್ದರು. 'ರಾಮಕಾರ್ಯ ಮುಗಿಯದೆ ನನಗಲ್ಲಿ ಬಿಡುವು?'—ಎಂಬುದೇ ಯಾರ ಶಪಥವೋ, ಈ ಕಾರ್ಯವನ್ನು ಮಾಡಿಯೇವು ಇಲ್ಲ ಮಾಡಲಿಕ್ಕಾಗಿ ಮಡಿದೇವು ಎಂಬುದು ಯಾರ ಪ್ರತಿಜ್ಞೆಯೋ ಅಂಥವರಿಗೆ ದಣಿವೇನು-ಬಿಡುವೇನು.

**ಎಲ್ಲ ರೋಗಗಳ ಮದ್ದು—ಸಾಮ್ಯಯೋಗ·** ಇವೊತ್ತು ವಿನೋಬಾಜೀ ಬಿಡಾರ ತಲಪಿದಾಗ ಒಂದೆಡೆ ಅವರ ಸ್ವಾಗತಕ್ಕಾಗಿ ೭೦-೭೦ ಜನ ಹುಡುಗರು ನಿಂತಿದ್ದರು. ಈ ವಿದ್ಯಾರ್ಥಿಗಳ ಪ್ರಸ್ತಾಪವೆತ್ತಿ ಪ್ರಾರ್ಥನಾ ಸಭೆಯಲ್ಲಿ ವಿನೋಬಾ ಹೇಳಿದರು— 'ನನ್ನ ಕಣ್ಣು ಆ ೭೦ ಜನ ಹುಡುಗರ ಕಾಲಿನ ಕಡೆ ಹೋದುವು. ಅವರ ಕಣ್ಣು ನನ್ನನ್ನು ದಿಟ್ಟಿಸಿ ನೋಡುತ್ತಿದ್ದುವು. ಒಬ್ಬನ ಹೊರತು ಯಾರ ಕಾಲಲ್ಲೂ ಮೆಟ್ಟು ಇರಲಿಲ್ಲ—ತೀಕ್ಷ್ಣವಾದ ಬಿಸಿಲು ನನ್ನ ಕಾಲಿನಲ್ಲಿ ಮೆಟ್ಟು—ಅವರದು ಬರಿಗಾಲು. ನನಗೆ ನಾಚಿಕೆಯಾಯಿತು. ಒಬ್ಬರ ಕಾಲಿನಲ್ಲಿ ಮೆಟ್ಟು, ಉಳಿದ ಅನೇಕರಿಗೆ ಬರೀ ಕಾಲು. ಹೀಗೇಕೆ ಆಗಬೇಕು? ಒಬ್ಬರಿಗೆ ಮೈತುಂಬ ಬಟ್ಟೆ, ಉಳಿದವರು ಬರೀ ಬೆತ್ತಲೆ— ಹೀಗೇಕೆ? ಒಬ್ಬನಿಗೆ ಮೃಷ್ಟಾನ್ನ, ಉಳಿದವರಿಗೆ

ಹುಟ್ಟೇ ಇಲ್ಲ – ಹೀಗೇಕೆ ಆಗಬೇಕು ?"

ಅದಕ್ಕೆ ಮದ್ದನ್ನೂ ಅವರೇ ಹೇಳಿದರು : 'ಗೀತೆಯ ಸಾಮ್ಯ ಯೋಗವೇ ಇದರ ಮದ್ದು. ಭಗವಾನ್ ಶ್ರೀ ಕೃಷ್ಣ ತನ್ನ ಜೀವನದಲ್ಲಿ ಈ ಸಾಮ್ಯಯೋಗ ಸಿದ್ಧಿಯನ್ನು ತೋರಿಸಿದ. ಅವನನ್ನು ಬೆಣ್ಣೆಗಳ್ಳ ಎಂದರು. ಆದರೆ ಶುಕದೇವ ಇದನ್ನೇ ಹಾಡಿ ಹೊಗಳಿದ. ಏಕೆಂದರೆ, ಅದು ಕಳ್ಳತನವಲ್ಲ, ಬಡವರಲ್ಲಿದ್ದ ಪ್ರೀತಿ. ಎಲ್ಲರಿಗೂ ಎಲ್ಲಾ ಪದಾರ್ಥ ಸಿಗಲಿ ಎಂದು ಅವನ ಬಯಕೆ. ಎಲ್ಲವನ್ನು ಪರರಿಗಾಗಿ ಮಾಡುತ್ತಿದ್ದ. ಕಂಸನನ್ನು ಕೊಂದ. ಆದರೆ ರಾಜ್ಯವನ್ನು ಅವನ ವಂಶಕ್ಕೇ ಕೊಟ್ಟ. ಬಡವರಿಗಿಂತ ಬಡವನಾಗಿದ್ದೇನು, ಎಲ್ಲರಿಗೂ ಎಲ್ಲ ವಸ್ತುಗಳೂ ಸಮಾನವಾಗಿ ಸಿಗುವಂತೆ ಯತ್ನಿಸಬೇಕು—ಇದೇ ಅವನ ಅಗ್ಗಳಿಕೆ. ಆದ್ದರಿಂದಲೇ ಅವನು ಗೀತೆಯಲ್ಲಿ ಸಾಮ್ಯಯೋಗವನ್ನು ತೋರಿಸಿದಾನೆ. ಅವನ ವಿಚಾರಕ್ಕೆ ತಳಾದಿಯಾಗಿ ಅವನ ಆಚಾರವಿತ್ತು.'

ಇವೊತ್ತು ವಿನೋಬಾಜೀ ಸಭೆಯಲ್ಲಿ ನಿಂತು ಅತ್ತಿತ್ತ ತಿರುಗಾಡುತ್ತ ಭಾಷಣಮಾಡಿದರು. ಬಹಳ ಬಳಲಿದ್ದರು. ಆದ್ದರಿಂದ ಒಂದು ಉದ್ದವಾದ ಕೋಲನ್ನು ಊರಿಕೊಳ್ಳುತ್ತಾ ತಿರುಗಾಡುತ್ತ ಮಾತಾಡಿದರು. ಹುಡುಗರನ್ನು ಗದ್ದಲಮಾಡಬೇಡಿರೆಂದು ಗದರಿಸುತ್ತ 'ಈ ಗದರಿಕೆ ಪ್ರೀತಿಯದು. ಹುಡುಗರು ನನ್ನ ಮಾತು ಕೇಳದೆ ಬಿಡಬಹುದು. ನನ್ನ ಕೈಯಲ್ಲಿ ಯಾವಾಗಲೂ ನಾನು ಹೀಗೆ ಕೋಲು ಹಿಡಿಯೆ. ಊರೆಗೋಲಾಗಿ ಕೈಯಲ್ಲಿ ಕೋಲು ಹಿಡಿಯಲು ಯತಿಗಳಿಗೂ ಸನ್ಯಾಸಿಗಳಿಗೂ ಹಕ್ಕು ಕೊಡಲಾಗಿದೆ. ಈಗ ಮೂರ್ಖರ ಕೈಗೆ ಪೋಲೀಸರ ಕೈಗೆ ಬಂದಿದೆ ಕೋಲು' ಎಂದರು.

೧೩ನೇ ತಾ.ಗೆ ವಾರಣಾಸಿಗೆ ತಲಪಬೇಕು. ಇವೊತ್ತು ಎರಡು ಸಲ ಗಂಗೆಯನ್ನು ದಾಟಬೇಕಾಯಿತು ಬೆಳಿಗ್ಗೆ ೪ ಗಂಟೆಗೇ

ವಿನೋಬಾಜೀ ದೋಣಿಯೇರಿದರು. ಇವೊತ್ತೂ ಪ್ರವಾಹಕ್ಕೆ ಇದಿರು ಪಯಣ. ಅಂಬಿಗನಿಗೆ ಬಹಳ ಆಯಾಸವಾಗುತ್ತಿತ್ತು. ಅದನ್ನು ನೋಡಿ ವಿನೋಬಾ ಅವನ ಬಳಿ ಹೋಗಿ ಕುಳಿತರು, ಅವನಿಗೆ ಸಹಾಯ ಮಾಡಲೆಂದು.

**ಇಬ್ಬರು ಋಷಿಗಳ ಪಾವನ ಮಿಲನ** ವಾರಣಾಸೀ ಪ್ರವೇಶದ ಪ್ರಸಂಗ ಅದ್ಭುತವಾಗಿತ್ತು. ೫ ಮೈಲಿಯ ವರೆಗೆ ಜನ ಗುಂಪು ಗಟ್ಟಿ ಕಾದಿದ್ದರು. ಅವರ ಉತ್ಸಾಹವೋ ಹೇಳಿತೀರದು. ರಾಜ ಘಾಟಿನಲ್ಲಿ ವಿನೋಬಾಜೀಗೆ ಮಾನವತ್ರ ಕೊಟ್ಟರು. ಸ್ವರ್ಗೀಯ ಆನಿಬೆಸೆಂಟರ ಈ ಸ್ಮರಣ ಭೂಮಿಯಲ್ಲಿ ವಿದ್ಯಾರ್ಥಿಗಳು ಎಲ್ಲ ಧರ್ಮಗಳ ನೀತಿವಚನಗಳನ್ನು ಹಾಡಿದರು. ಸಂಸ್ಕೃತಿಯ ಇಡೀ ಇತಿಹಾಸವೇ ಕಣ್ಣುಮುಂದೆ ಚಿತ್ರಿತವಾಗುತ್ತಿದ್ದಂತಿತ್ತು. ದಾರಿಯಲ್ಲಿ ವಯೋವೃದ್ಧ ತಪಸ್ವಿ ಡಾ॥ ಭಗವಾನ್‌ದಾಸರು ವಿನೋಬಾರನ್ನು ಸ್ವಾಗತಿಸಿದರು. ಯಾರ ಇಡೀ ಜೀವನ ಮಾನವ ಕಲ್ಯಾಣದ ಚಿಂತೆಯಲ್ಲೇ ಕಳೆಯುತ್ತಿದೆಯೋ ಅಂಥ ಇಬ್ಬರು ಋಷಿಗಳು ಸಂಧಿಸಿದರು. ಭೂದಾನ ಯಜ್ಞಕ್ಕೆ ಇದೊಂದು ಶುಭ ಶಕುನ. ಹೊರಡುವಾಗ ಡಾ॥ ಭಗವಾನ್‌ದಾಸರು ವಿನೋಬಾಜೀಯನ್ನು ಬೀಳ್ಕೊಡಲು ಬಾಗಿಲುವರೆಗೂ ಬಂದರು. ಅವರ ಕಣ್ಣಲ್ಲಿ ಹರ್ಷ - ಪ್ರಸನ್ನತೆ - ತೇಜಸ್ಸು ಸೂಸುತ್ತಿತ್ತು.

**ಮಹಾ ಮಾನವನ ನೆರಳಿನಲ್ಲಿ** . ವಿನೋಬಾಜೀಯ ಭಾವ ಗಂಭೀರಮುದ್ರೆ ಈ ದಿನ ವಿಶೇಷರೀತಿಯಲ್ಲಿ ಮೌನಧಾರಣೆ ಮಾಡಿತ್ತು. ಜಗತ್ತಿನ ಅತಿ ಪುರಾತನವಾದ ಈ ನಗರದಲ್ಲಿ ಅವರು ಇಂದು ಪ್ರವೇಶ ಮಾಡಿದರು. ಭಾರತದಲ್ಲಿ ಹುಟ್ಟಿದ ಯಾವ ಸಾಧು ಸತ್ಪುರುಷನೇ ಆಗಲಿ ತನ್ನ ಜೀವಮಾನದಲ್ಲಿ ಕೆಲವು ದಿನವಾದರೂ ಕಾಶಿಗೆ ಬಂದು ಇದ್ದು ಕಳೆಯದಂಥವರೇ ಇರಲಾರೆರು. ಅಂಥ ಪುಣ್ಯ

ಭೂಮಿ. ಬುದ್ಧ, ತುಲಸೀದಾಸ, ಮೀರಾ, ಎಲ್ಲರೂ ಇಲ್ಲಿ ಪ್ರೇರಣೆ ಪಡೆದರು. ಉಪನಿಷತ್ತುಗಳಲ್ಲಿಯೂ ಕಾಶಿಯ ಹೆಸರು ಇದೆ. ವಾರಣಾ ಮತ್ತು ಅಸೀ ಎರಡೂ ನಮ್ಮ ಎರಡು ಹುಬ್ಬು ಎನ್ನುತ್ತಾನೆ ಋಷಿ. ಇವೆರಡರ ನಡುವೆ ಇದೆ ಕಾಶಿ ಉಪನಿಷತ್ತುಗಳ ಮೊಟ್ಟ ಮೊದಲನೆಯ ನಗರಿ ಕಾಶಿ. ೩೬ ವರ್ಷದ ಹಿಂದೆ ವಿನೋಬಾಜೀ ಸ್ವಯಂ ಇಲ್ಲಿದ್ದರು. ಇಲ್ಲಿಂದ ಹಿಮಾಲಯಕ್ಕೆ ಹೋಗಬೇಕಿತ್ತು. ಇಲ್ಲಿಂದ ಬಾಪೂನೊಡನೆ ಪತ್ರವ್ಯವಹಾರ ಮಾಡಿದರು. ತಾನು ಪತ್ರವ್ಯವಹಾರ ಮಾಡಿದ ಮನುಷ್ಯ ಹಿಮಾಲಯಕ್ಕಿಂತಲೂ ಶ್ರೇಷ್ಠ, ಅಷ್ಟೇ ಧೀರ, ಸರ್ವ ದೃಷ್ಟಿಯಲ್ಲಿಯೂ ಹಿಮಾಲಯವೇ ಬಾಪೂಗಿಂತ ಹಗುರ ಎಂಬುದು ಅನುಭವವಾಯಿತು. ಉತ್ತರಕ್ಕೆ ಪಯಣ ಬೆಳಸುವುದನ್ನು ನಿಲ್ಲಿಸಿ ಸಾಬರಮತಿ ಆಶ್ರಮದ ಕಡೆ ಕಾಲು ತಿರುಗಿಸಿದರು.

ಬನಾರಸಿನಲ್ಲಿ ಭೂದಾನ ಯಜ್ಞದ ಕೆಲಸ ಚೆನ್ನಾಗಿ ನಡೆಯಿತು. ಕೆಲಸಗಾರರು ಯಾವ ಜಮೀನುದಾರರನ್ನೂ ಬಿಡಲಿಲ್ಲ. ಒಂದಲ್ಲ, ಎರಡು ನಲ ಅವರನ್ನು ಕಂಡು ಬಂದಿದ್ದರು. ಮೊದಲು ವಿಮುಖ ವಾಗಿದ್ದವರು ಮತ್ತೆ ಕಂಡಾಗ ಅನುಕೂಲರಾದರು. ಕೆಲಸಗಾರರ ಸ್ಥೈರ್ಯವನ್ನು ಅವರು ಪರೀಕ್ಷಿಸಿದರು ಅಹಿಂಸಕ ಪ್ರಯೋಗದಲ್ಲಲ್ಲದೆ ಉಳಿದುದರಲ್ಲಿ ಇಂಥ ಪರೀಕ್ಷೆ ಹೇಗೆ ಸಫಲವಾದೀತು. ಒಬ್ಬ ತಮ್ಮ ಮೊದಲು ಪೂರಾ ನಿರಾಕರಿಸಿದ ಕಡಗೆ ೨೦೦ ಎಕರೆ ಕೊಟ್ಟ. ವಿನೋಬಾ ಕಾಶಿಗೆ ಬಂದರಲ್ಲ ಎಂದು ಮದರಾಸಿನ ಗೌರ್ನರ್, ಬಾಬು ಶ್ರೀ ಪ್ರಕಾಶ್ 'ಪತ್ರ ಪುಷ್ಪಂ' ಸಮರ್ಪಿಸಿದರು. ತಮ್ಮ ಹೊಲ ವನ್ನಂತೂ ಅವರು ಮೊದಲೇ ರೈತರಿಗೆ ಹಂಚಿಬಿಟ್ಟಿದ್ದರು. ದಿಲ್ಲಿಯಲ್ಲಿ ರಾಜೇಂದ್ರ ಪ್ರಸಾದರು ಮಾಡಿದಂತೆ ಇಲ್ಲಿ ಶ್ರೀಪ್ರಕಾಶರು ಭೂದಾನ ಯಜ್ಞದಲ್ಲಿ ಭಾಗವಹಿಸಿ ಜನತೆಗೆ ದಾರಿ ತೋರಿದರು. ಇವೊತ್ತು

ನಮ್ಮ ಬಿಡಾರ ಕಾಶೀ ವಿದ್ಯಾಪೀಠದಲ್ಲಿ. ಉತ್ತರ ಪ್ರದೇಶದ ಜನ ಜೀವನದಲ್ಲಿ ಕಾಶೀ ವಿದ್ಯಾಪೀಠದ್ದು ಮಹತ್ವಪೂರ್ಣ ಪಾತ್ರ. ಬಾಬು ಶಿವಪ್ರಸಾದರ ಪ್ರೇರಣೆಯೇ ಇದಕ್ಕೆ ತಳಹದಿ. ಸ್ವಯಂ ಶಿವ ಪ್ರಸಾದಜೀ ಅಲ್ಲದೆ ಡಾ|| ಭಗವಾನ್‌ದಾಸ್, ಆಚಾರ್ಯ ನರೇಂದ್ರ ದೇವ, ಸಂಪೂರ್ಣಾನಂದಜೀ ಆದಿ ಎಷ್ಟೋ ಜನ ಸೇವಕರ ಸೇವೆ ಯಿಂದ ಇದು ರೂಪುಗೊಂಡಿತ್ತು. ವಿದ್ಯಾಪೀಠದ ಅತ್ಯಂತ ಲೋಕ ಪ್ರಿಯ, ವಿನಯಶಾಲಿ ಆಚಾರ್ಯ ಶ್ರೀ ಬೀರಬಲಸಿಂಹರು ವಿದ್ಯಾ ಪೀಠವನ್ನು ರಿಜಿಸ್ಟ್ರಾರ್, ಕಾರ್ಯದರ್ಶಿ, ಪ್ರಾಧ್ಯಾಪಕ ಗಣ, ವಿದ್ಯಾರ್ಥಿ ಗಣದೊಡನೆ ಪರಿಚಯ ಮಾಡಿಸಿ ಭೂದಾನ ಯಜ್ಞದಲ್ಲಿ ನೆರವಾಗುವ ಭರವಸೆ ನೀಡಿದರು. ವಿದ್ಯಾಪೀಠದಿಂದ ಪ್ರಕಾಶಿತ ವಾದ ಗ್ರಂಥಗಳನ್ನು ಕಾಣಿಕೆ ಕೊಟ್ಟರು.

**ಸೇವಾಪುರಿಯಲ್ಲಿ** . ಬೆಳಿಗ್ಗೆ ಪ್ರಾರ್ಥನೆಯಾದ ಮೇಲೆ ಸೇವಾ ಪುರಿಗೆ ಹೊರಟೆವು ದಾರಿಯಲ್ಲಿ ಒಬ್ಬ ಸಜ್ಜನ ೩೦೦ ಎಕರೆ ನೀಡಿದ. ಸೇವಾಪುರಿ ಮುಟ್ಟುವ ವರೆಗೆ ದಾರಿಯಲ್ಲಿ ಅಲ್ಲಲ್ಲಿ ಭೂದಾನ ಸಿಗು ತ್ತಲೇ ಇತ್ತು. ೧೫-೧೬ ಮೈಲಿಯ ದಾರಿ. ಇಡೀ ದಾರಿ ಜನ ಸಮುದಾಯದಿಂದ ತುಂಬಿತ್ತು. ಇಷ್ಟು ಗುಂಪು, ಉರಿಬಿಸಿಲು, ಇದರಲ್ಲಿ ನಡೆದು ವಿನೋಬಾಜಿ ಸೇವಾಪುರಿ ತಲಪಿದರು. ಸೇವಾ ಪುರಿಯ ಸೇವಕರು ಮೌನ ಗಂಭೀರ ಸ್ವಾಗತ ನೀಡಿದರು ವಿನೋ ಬಾಜಿಯ ಪ್ರಾಸ್ತಾವಿಕ ಭಾಷಣ ಒಂದು ದೊಡ್ಡ ಆಲದಮರದ ಕೆಳಗಾಯಿತು. ಕಡಲಿನಲ್ಲಿ ಸೇರುವ ಮೊದಲು ಭೂದಾನ ಯಜ್ಞದ ಗಂಗೆ ಸರ್ವ ಶುಭ ಸಂಕಲ್ಪವನ್ನೂ ಆವಾಹನೆ ಮಾಡಿದಂತಿತ್ತು.

ಸೇವಾಪುರಿಯಲ್ಲಿ ಏನು ನಡೆಯಿತು, ಭೂದಾನ ಯಜ್ಞದ ಚಳುವಳಿ ದೇಶದ ಚಳುವಳಿ ಹೇಗಾಯಿತು ಇದಲ್ಲದರ ವರ್ಣನೆ ಇಲ್ಲಿ ಹೇಳುವ ಕಾರಣವಿಲ್ಲ.

*

# ೧೮. ನವರ್ ಹೌಸುಗಳು

**ಸೇವಾಪುರಿಯ ತರುವಾಯ :** ಸರ್ವೋದಯ ಸಮ್ಮೇಳನದ ತರುವಾಯ ಮುಂದಿನ ಪ್ರವಾಸಕ್ಕೆ ವಿನೋಬಾಜೀ ಕೂಡಲೇ ಹೊರಡಲಿಲ್ಲ. ಸಮ್ಮೇಳನಕ್ಕೆ ಬಂದ ಜನ ಕೂಡಲೇ ಹಿಂದಿರುಗಬೇಕೆಂದಿದ್ದರು. ವಿನೋಬಾಜೀ ಹೇಳಿದರು . ' ಹಿಂದಿರುಗಲು ಇಷ್ಟು ಗಡಿಬಿಡಿಯೇಕೆ? ನಾನಂತೂ ಹಳ್ಳಿಗ. ಚಿಕ್ಕ ಚಿಕ್ಕ ಹಳ್ಳಿಯಲ್ಲೂ ಒಂದು ದಿನ ಪೂರಾ ತಂಗುತ್ತೇನೆ. ಇಲ್ಲಿಗೆ ಬಂದವರು ವಿಮಾನದಲ್ಲೇನು ಬರಲಿಲ್ಲವಲ್ಲ. ನಮ್ಮ ನಮ್ಮ ಕೆಲಸವನ್ನು ಸರಿಯಾಗಿ ವ್ಯವಸ್ಥೆಮಾಡದೆ ಹೋಗಬಾರದು.'

ದೇಶದ ಬದುಕನ್ನು ಸ್ವಸ್ಥ ಆಗಿಸಲು, ಆಗಿರಿಸಲು, ಅಗತ್ಯವಾದ ಕ್ರಾಂತಿಕಾರಿ ಸಂಕಲ್ಪ ಸೇವಾಪುರಿಯಲ್ಲಿ ಆಯಿತು ಆದರೆ ಅದರ ಸಿದ್ಧಿಗಾಗಿ ಕೆಲಸಗಾರರು ತಮ್ಮ ತಮ್ಮ ಊರಿಗೆ ಹಿಂದಿರುಗುವ ಮೊದಲು ಅವರೊಡನೆ ವಿನೋಬಾಜೀ ವಿಶೇಷ ರೀತಿಯಲ್ಲಿ ಗೋಷ್ಠಿ ನಡಸಿದರು ಅವರಿಗೆ ಕೆಲಸದ ಹೊಣೆ ಹೊರಿಸಿದರು. ಒಂದು ದಿನ ಸುಮಾರು ೪ ಗಂಟೆಯ ಹೊತ್ತು ಆ ಅರಳಿಯ ಮರದ ಕೆಳಗೆ ಕುಳಿತು ಎಲ್ಲರೊಡನೆ ಮಾತಾಡಿ ಎಲ್ಲರಿಗೂ ಮಾರ್ಗದರ್ಶನ ಮಾಡಿದರು. ಈ ಮಾತಿನಲ್ಲಿ ಭೂದಾನ ಕೇಳುವ ಬಗ್ಗೆ ಒಂದು ಮೂಲಭೂತ ವಿಷಯವನ್ನು ಅವರಿಗೆ ತಿಳಿಸುತ್ತ " ಬೇಡುವವನ ಮನಸ್ಸಿನಲ್ಲಿ ಇತರರ ಬಗ್ಗೆ ಕೀಳು ಭಾವನೆ ಇರಲಾಗದು ಎಂಬುದು ಈ ವಿದ್ಯೆಯ ಮುಖ್ಯ ವಿಧಾನ. ಬೇಡುವವನು ನಮ್ಮ ಹೃದಯದಲ್ಲೇ ಇದಾನೆ ಎಂಬುದು ಇದಿರಿನಲ್ಲಿರುವವರಿಗೆ ಕಂಡು ಬಂದಾಗ ಯೋಗ್ಯ ದಾನ ಕೊಟ್ಟೇ ತೀರುತ್ತಾನೆ, ಕೊಡದ ಇರಲಾರ " ಎಂದರು.

**ನಿರ್ವೈರ ಎಂದರೆ ಪ್ರತೀಕಾರ ಹೀನತೆಯಲ್ಲ :** " ಭೂದಾನ ಯಜ್ಞದಲ್ಲಿ ಪಾಲುಗೊಂಡು ಇದನ್ನು ಸಫಲಗೊಳಿಸದಿದ್ದರೆ ಕಮ್ಯುನಿಸಂ ಬಂದೀತು" – ಹೀಗೆ ಹೇಳುವುದು ಬೆದರಿಕೆ ಹಾಕಿದಂತೆ ಅಲ್ಲವೆ ಎಂದು ಪ್ರಶ್ನೆ ಬಂತು. ಈ ಬಗ್ಗೆ ಕೆಲಸಗಾರರಿಗೆ ತಿಳಿಸಿ ಹೇಳುತ್ತ 'ಕಮ್ಯುನಿಸಂನ ಅಂಜಿಕೆ ತೋರುವುದು ಸರಿಯಲ್ಲ ಎಂದು ನಾನು ಎಷ್ಟೋ ಸಲ ಹೇಳಿದೇನೆ ನಾವು ವಿರೋಧಿ ಭಾವನೆಯಿಂದ ಯೋಚಿಸಿದರೆ ಹಾಗೆ ಸರಿ. ಕಂಸನಿಗೆ ಕೃಷ್ಣನ ಹೊರತು ಬೇರೆ ಯಾವುದೂ ಕಾಣುತ್ತಲೇ ಇರಲಿಲ್ಲ. ಗೋಪಿಯರ ಹೃದಯದಲ್ಲೂ ಕೃಷ್ಣನೇ ಕುಳಿತಿದ್ದ. ಇಬ್ಬರೂ ಕೃಷ್ಣರೂಪಿಗಳಾದರು. ಒಬ್ಬನು ಸದಾ ನಿಷೇಧ ಮಾಡಿದ. ಇನ್ನೊಬ್ಬರು ಸದಾ ಧ್ಯಾನ ಮಾಡಿದರು. ಪರಿಣಾಮವೇನೋ ಒಂದೇ ಆಯಿತು.'

ವಿನೋಬಾಜೀ ಇನ್ನೂ ಒಂದು ಮಾತು ಹೇಳಿದರು. ಜನ ಸಂಘದ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕೆಲಸಗಾರರೂ ತಮ್ಮ ಜೊತೆಯಲ್ಲಿದ್ದರು ಅವರಿಗೆ ಈ ಕೆಲಸ ಇಷ್ಟವಾಯಿತು. ಅನುಕೂಲ ತೀರ್ಮಾನವನ್ನೂ ಮಾಡಿದರು. 'ಎಲ್ಲ ಕಡೆಯಿಂದಲೂ ನಮಗೆ ಸಹಕಾರ ಸಿಗುತ್ತಿದೆ ನಮ್ಮ ಕಡೆಯಿದೆ. ಆದ್ದರಿಂದ ನಮ್ಮ ವಾಣಿ, ನಮ್ಮ ಹೃದಯ ಶುದ್ಧವಾಗಿರಬೇಕು. ಇದನ್ನು ಎಲ್ಲ ಸಮಿತಿಗಳೂ ಗಮನಿಸಬೇಕು. ಮುಂದೇ ಏನಾದೀತೋ ಕಮ್ಯುನಿಸಂ ಬಂದೀತೋ ಬಿಟ್ಟೀತೋ ಅದರ ಚಿಂತೆ ಬೇಡ. ಸಹಜವಾಗಿಯೇ ಸಂಗ್ರಾಮದ ಸಂಧರ್ಭ ಬಂದರೆ ಅದನ್ನೂ ಮಾಡೋಣ. ಆದರೆ ನಮ್ಮ ಮನೋಧರ್ಮ ಕೇವಲ ನಿರ್ವೈರವಾಗಿರಲಿ. ನಿರ್ವೈರ ಎಂದರೆ ಪ್ರತೀಕಾರ ಮಾಡೆವು ಎಂದಲ್ಲ. ಪ್ರತೀಕಾರಕ್ಕೆ ವೈರಭಾವನೆಯೇಕೆ ಬೇಕು ?' ಈ ಪ್ರಸಂಗದಲ್ಲಿ ತಮ್ಮ ರುಗ್ಣ ಸೇವೆಯ ದೃಷ್ಟಾಂತವನ್ನು ಮತ್ತೆ ವಿವರಿಸಿದರು.

ಕೆಲಸಗಾರರು ಒಬ್ಬೊಬ್ಬರಾಗಿ ಬೀಳುಕೊಂಡರು. 'ಅಹಿಂಸಕ ಸಮಾಜದ ರಚನೆಯ ಕೆಲಸ ಮಾಡುವ ಈ ಗೆಳೆಯರು ಒಂದು ಮಹಾ ಸ್ಫೂರ್ತಿಪಡೆದು ಹಿಂತಿರುಗಿದರು. ಧರ್ಮಚಕ್ರ ಪ್ರವರ್ತನೆಗಾಗಿ ಭಗವಾನ್ ಬುದ್ಧನಿಂದ ಅವನ ಸಂಗಡಿಗರು ಇಂಥದೇ ಸ್ಫೂರ್ತಿಪಡೆದು ಕೆಲಸಕ್ಕೆ ಹೊರಟರೋ ಏನೋ! ವಿನೋಬಾಜೀ ಒಂದು ಭಾಷಣದಲ್ಲಿ ಹೇಳಿಯೂ ಬಿಟ್ಟರು ಈ ಕೆಲಸ ಧರ್ಮಚಕ್ರ ಪ್ರವರ್ತನಕ್ಕಿಂತ ಕಡಿಮೆಯೂ ಅಲ್ಲ, ನಮ್ಮ ಮಹತ್ವಾಕಾಂಕ್ಷೆಯೂ ಚಿಕ್ಕದಲ್ಲ.'

ಸೇವಾಪುರಿ ಆಶ್ರಮದ ಕೆಲಸಗಾರರಿಂದ ಬೀಳ್ಕೊಳ್ಳುವ ಸಮಾರಂಭವೂ ನಡೆಯಿತು. 'ಈ ಸ್ಥಾನಗಳಿಂದ ನಮ್ಮ ಜೀವನದ ಚಿತ್ರ ನೋಡಲಿಕ್ಕೆ ಸಿಗಬೇಕೆಂದು ಜನರು ಅಪೇಕ್ಷಿಸುತ್ತಾರೆ. ಈ ದರ್ಶನ ಲಾಭವಾದರೆ ಜನರಿಗೆ ಭರವಸೆಯಾಗುತ್ತದೆ. ಈ ಸ್ಥಾನಗಳು ನಮ್ಮ ಶಕ್ತಿಕೇಂದ್ರಗಳು, ನಮ್ಮ ಪವರ್ ಹೌಸ್‌ಗಳು' ಎಂದರು ವಿನೋಬಾ.

ಸಂಗಾತಿಗಳೊಂದಿಗೆ ಮುಂದಿನ ಜೌನಪುರ ಜಿಲ್ಲೆಗೆ ಪಯಣ ಹೊರಟರು ವಿನೋಬಾ. ಈ ಸಲ ಬೇರೆ ಬೇರೆ ಪ್ರಾಂತಗಳ ಜನರು ಕೆಲವರು ಸೇರಿದರು ಗುಂಪಿನಲ್ಲಿ ಜತೆಗೆ ಬರಲು ಅವರಿಗೆ ವಿನೋಬಾ ಅಪ್ಪಣೆಕೊಟ್ಟರು. ಮಲಬಾರಿನ ಗಾಂಧೀನಿಧಿ ಸಂಚಾಲಕ ರಾಧಾಕೃಷ್ಣನ್, ಗುಜರಾತಿನ ನಾರಾಯಣ ದೇಸಾಯಿ, ರಾಜೇಂದ್ರರು; ಮಹಾರಾಷ್ಟ್ರದಿಂದ ಪ್ರೇಮಾಕಟಂಕ್, ಮಧ್ಯಪ್ರದೇಶದಿಂದ ನಿರ್ಮಲಾತಾಯಿ ದೇಶಪಾಂಡೆ; ಕರ್ನಾಟಕದಿಂದ ಜಯಸಿಂಹರಾವ್, ಆಂಧ್ರದಿಂದ ಶ್ರೀಮತಿ ವಿದ್ಯಾ, ಇವರಲ್ಲದೆ ಇಬ್ಬರು ಫ್ರೆಂಚ್ ಹೆಂಗಸರು. ಬಾಪೂ ಮೊಟ್ಟಮೊದಲು ಚಂಪಾರಣ್ಯ ಸತ್ಯಾಗ್ರಹ ಮೊದಲಿಟ್ಟಾಗ ಅವರ ಜತೆಗೆ ರಾಜೇಂದ್ರಬಾಬು, ಕೃಪಲಾನೀ ಇದ್ದರು. ಆ ಪ್ರಯೋಗಶಾಲೆ ನಾಯಕತನದ ನಿರ್ಮಾಣದ ಕೆಲಸ

ಮಾಡಿತು. ಈಗಿನ ಈ ಸತ್ಸಂಗವೂ ಅಂಥ ಭಾವೀ ನಾಯಕ-ನಿರ್ಮಾಣಕ್ಕೆ ನೆರವಾದೀತು.

**ಎಲ್ಲಾ ಭೂ ಹೀನರಿಗೂ ಹೊಲ ಕೊಟ್ಟ ಹಳ್ಳಿ**: ಜೌನಪುರ ಜಿಲ್ಲೆಯಲ್ಲಿ ಒಂದು ಕಡೆ ಒಂದು ಹೊಸ ಅನುಭವವಾಯಿತು ನಮ್ಮ ಬಿಡಾರಕ್ಕೆ ೪ ಮೈಲಿ ದೂರದಲ್ಲಿ ಒಂದು ಹಳ್ಳಿ-ಟಿಕಾರಡೀ ವಿನೋಬಾ ಅಲ್ಲಿಗೆ ಹೋಗಿರಲಿಲ್ಲ. ಕೆಲಸಗಾರರು ಅವರ ಸಂದೇಶವನ್ನು ಬಿರೀ ಬಂದಿದ್ದರು.

ಆ ಹಳ್ಳಿಯಲ್ಲಿ ಮೂವತ್ತೆರಡೇ ಮನೆ ೨೦ ಜನ ಹೊಲ ವಿದ್ದವರು, ೧೨ ಜನ ಹೊಲವಿಲ್ಲದವರು ತಮ್ಮ ಭೂಮಿಹೀನ ಭ್ರಾತೃಗಳಿಗೆ ಹೊಲ ಕೊಡುವ ಮಾತನ್ನು ಅವರಿಗೆ ತಿಳಿಸಿ ಹೇಳಿದಾಗ ಹೊಲವಿದ್ದವರೆಲ್ಲ ಸೇರಿ ಉಳಿದವರಿಗಾಗಿ ೩೭ ಎಕರೆ ಹೊಲವನ್ನು ಕೂಡಿಹಾಕಿದರು. ಈಗ ಆ ಹಳ್ಳಿಯಲ್ಲಿ ಯಾರೂ ಹೊಲವಿಲ್ಲದವರಿಲ್ಲ.

ಆಮೇಲೆ ಎಲ್ಲರೂ ಮೆರವಣಿಗೆ ಹೊರಟು ವಿನೋಬಾಜೀಯ ಬಳಿಗೆ ಬಂದರು. ಅವರಿಗೆ ವಿನೋಬಾಜೀ ಏನೂ ಹೇಳಬೇಕಾಗಿರಲಿಲ್ಲ. ವಿಚಾರದ ಪ್ರಭಾವ-ಸಾಮರ್ಥ್ಯವೇ ಹಾಗೆ. ಅವ್ಯಕ್ತ ಪ್ರಭಾವ ಬೀರುತ್ತದೆ. ಇನ್ನೇನು, ನನಗೆ ಮಾತಾಡುವ ಅಗತ್ಯವಿಲ್ಲ ಎನ್ನುತ್ತಾರೆ ವಿನೋಬಾ.

ಆದರೆ ಚಂದ್ರ ದರ್ಶನದಿಂದ ಸಾಗರ ಉಕ್ಕೇರುವಂತೆ ಜನತಾ ದರ್ಶನದಿಂದ ವಿನೋಬಾ ಹೃದಯದಲ್ಲಿ ಆನಂದ, ನವೋನವ ವಿಚಾರ, ಹೊಚ್ಚ ಹೊಸ ಕಲ್ಪನೆ, ಇವುಗಳ ಅಲೆ ಏಳುತ್ತವೆ. ದಿನವೂ ಎರಡು ಸಲವಾದರೂ ಮಾತಾಡುತ್ತಾರೆ. ಇಷ್ಟೆಲ್ಲ ನಾನು ಹೇಗೆ ಹೇಳುತ್ತೇನೆ ಎಂದು ಅವರಿಗೇ ಆಶ್ಚರ್ಯವಾಗುತ್ತಿದೆ. ತುಕಾರಾಮರು ಹೇಳಿಲ್ಲವೇ 'ಹೇಳಿಸುವವನು ಬೇರೆ ಇದಾನೆ!'

**ಇಂದಿನ ನಿಜ ರಾಜನೀತಿ:** ರಾಷ್ಟ್ರೀಯ ಸ್ವಯಂ ಸೇವಕ

ಸಂಘದ ಪ್ರಸ್ತಾಪ ಬಂದಿತ್ತು ಮೇಲೆ. ಜೌನಪುರ ಜಿಲ್ಲೆಯ ಸಂಚಾಲಕ ರಾಜಾ ಶ್ರೀ ಯಾದವೇಂದ್ರರು ಎರಡು ಸಾವಿರ ಎಕರೆ ಭೂದಾನ ನೀಡಿದರು. ಇದುವರೆಗೆ ಸಮಾಜವಾದಿ, ಸಾಮ್ಯವಾದಿ ಗೆಳೆಯರಿಂದ ಭೂದಾನ ಸಿಕ್ಕಿತ್ತು. ಈಗ ರಾ. ಸ್ವ. ಸೇ. ಸಂಘದವರೂ ಕೊಟ್ಟರು. ಹೀಗೆ ಎಲ್ಲರನ್ನೂ ಒಂದೆಡೆ ತರುವ ಶಕ್ತಿ ಈ ಕಾರ್ಯಕ್ರಮದಲ್ಲಿ ಇದೆ ಎಂಬುದು ಅರಿವಾಗುತ್ತಿದೆ. ವಿನೋಬಾಜೀಯ ಮಾತಿನಲ್ಲಿ ಹೇಳುವುದಾದರೆ ‘ ಎಲ್ಲರನ್ನೂ ಒಟ್ಟಿಗೆ ತರುವುದೇ ಈಗಿನ ರಾಜನೀತಿ. ’

ಈ ಜಿಲ್ಲೆಯ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಹೊಲದ ಕೆಲಸಕ್ಕಾಗಿ ಒಂದು ಸಾವಿರ ರೂಪಾಯಿನ ಉಪಕರಣಗಳನ್ನು ಕೊಡುವುದಾಗಿ ತೀರ್ಮಾನಿಸಿದಾರೆ. ಐವತ್ತು ಜಿಲ್ಲೆಗಳಲ್ಲೂ ಹೀಗೆ ತೀರ್ಮಾನಿಸಿದರೆ ಬರೀ ಗ್ರಾಮ ಪಂಚಾಯಿತಿಗಳಿಂದಲೇ ಐವತ್ತು ಸಾವಿರ ರೂಪಾಯಿ ಉಪಕರಣ ದೊರೆತಾವು

ಜೌನಪುರ ಗೋಮತೀ ತೀರದ ಒಂದು ಐತಿಹಾಸಿಕ ಸ್ಥಳ. ಇದು ಮುಸಲ್ಮಾನರ ರಾಜ್ಯ – ಷರ್ ಕೀ ಹುಕುಮತ್. ಮಿಹರಾಂವಾದಲ್ಲಿ ಒಂದು ಬಿಡಾರವಿತ್ತು. ಅಲ್ಲಿಗೆ ೪ ಮೈಲಿ ದೂರದ ಮುಬಾರಕ್‌ಪುರದಲ್ಲಿ ೧೮೫೭ ರ ಕ್ರಾಂತಿಯಲ್ಲಿ ಐದಾರು ಜನರನ್ನು ಬಂಡುಗಾರರೆಂದು ಮಾವಿನಮರಕ್ಕೆ ಕಟ್ಟಿ ಗಲ್ಲಿಗೇರಿಸಿದರು. ೪೨ ರಲ್ಲಿ ೬ ಜನಕ್ಕೆ ಮರಣದಂಡನೆಯಾಗಿತ್ತು. ಆಮೇಲೆ ಅವರಿಗೆ ಬಿಡುಗಡೆಯಾಯಿತು. ಇನ್ನೊಂದು ಬಿಡಾರ ಮಡಿಯಾವೂ. ಇದು ಭದೌಹಿಯಂತೆ ರತ್ನಗಂಬಳಿಗಳಿಗೆ ಹೆಸರಾಗಿದೆ. ಅಮೆರಿಕಾಕ್ಕೆ ಈ ಕಂಬಳಿ ಹೋಗುತ್ತವೆ. ಜೌನಪುರದಿಂದ ಮಲ್ಲಿಗೆ ಎಣ್ಣೆ ( ಚಮೈಲಿ ತೇಲ್) ಹಿಂದುಸ್ತಾನದಲ್ಲಿ ಎಲ್ಲ ಕಡೆಗೂ ಹೋಗುತ್ತದೆ. ಇಲ್ಲಿನ ಗೆಣಸು - ಕೆಂಗೆಣಸು ಒಂದೊಂದು ಇಪ್ಪತ್ತು ಸೇರಿನ ತೂಕದ್ದು. ಸೊಂಟದ ವರೆಗೆ - ಅಷ್ಟು ಗಾತ್ರ. ಹತ್ತು ಸೇರಿಗೆ ಕಡಮೆ ತೂಕದ

ಗೆಣಸೇ ಇಲ್ಲ. ಎಲ್ಲಾದರೂ ಒಂದೊಂದು ಒಂದು ಮಣ ತೂಕದ್ದೂ ಆಗುವುದುಂಟು. ಹೊಗೆಸೊಪ್ಪು, ಈರುಳ್ಳಿ, ಆಲೂಗೆಡ್ಡೆ ಹೆಚ್ಚು. ಆಲೂಗೆಡ್ಡೆಯಲ್ಲಿ ಫರೂಕಾಬಾದಿನದಕ್ಕೆ ಮೊದಲನೆ ಸ್ಥಾನ. ಎರಡನೆಯದು ಜೌನಪುರದ್ದು. ಇಲ್ಲಿನ ಖರಬೂಜದ ಹಣ್ಣೂ ಒಳ್ಳೆಯದೇ. ಹಣ ತರುವ ಪೈರು ಹೆಚ್ಚಿ ಈ ಜಿಲ್ಲೆ ಆಹಾರದ ಬಗ್ಗೆ ಸ್ವಾವಲಂಬಿಯಲ್ಲದಿದೆ.

**ಅಹಿಂಸೆಯ ಸೂಕ್ಷ್ಮ ವಿಕಾಸ**: ಈ ಜಿಲ್ಲೆಯಲ್ಲಿ ಮೀನುಗಾರಿಕೆ ಚೆನ್ನಾಗಿ ನಡೆಯುತ್ತದೆ. ಇಲ್ಲಿಂದ ಬಂಗಾಳಕ್ಕೆ ಮೀನು ಹೋಗುತ್ತವೆ. ಬಾದಷಹಪುರದಲ್ಲಿ ನಾವು ತಂಗಿದ್ದವು ಅಲ್ಲಿ ಇದಿರಿಗೆ ಒಂದು ಚಲೋ ಕೆರೆ. ಪಕ್ಕದಲ್ಲೇ ಒಂದು ಗುಡಿ. ನಾವು ಅಲ್ಲಿ ಇಳಿದಿದ್ದೆವು. ಆ ಕೆರೆ ಆ ಗುಡಿಗೆ ಸಂಬಂಧಿಸಿದ್ದು ನಮ್ಮ ಇದಿರಿಗೆ ಮೀನಿನ ಶಾಖೆಯ ಜನ ಬಂದು ಅಲ್ಲಿ ಮೀನನ್ನು ಬಿಟ್ಟರು. ಅದು ಮರಿಹಾಕಿ ತುಂಬ ಮೀನು ಆದಾಗ ಅದನ್ನು ರಫ್ತುಮಾಡಲು ಅನುಕೂಲವಾಗಲಿ ಎಂದು ಅವರ ಉದ್ದೇಶ್ಯ. ಧಾರ್ಮಿಕ ಸ್ಥಾನಗಳಲ್ಲಿ ಹೀಗೆ ಮಾಡಬೇಡಿ ಎಂದು ಜನ ವಿರೋಧಿಸಿದರು. ಅದಕ್ಕೆ ಮಣಿದು ಅವರು ತಮ್ಮ ಕೆಲಸವನ್ನು ಅಲ್ಲಿಗೇ ನಿಲ್ಲಿಸಿದರು.

ಭಾರತದ ಅಹಿಂಸಕ ವೃತ್ತಿ ಎಷ್ಟು ಸೂಕ್ಷ್ಮವಾಗಿ ವಿಕಾಸಗೊಂಡಿದೆ ಎಂಬುದು ಇಂಥ ಚಿಕ್ಕ ಪುಟ್ಟ ಸಂಗತಿಗಳಿಂದ ತಿಳಿದು ಬರುತ್ತದೆ. ಅಹಿಂಸೆಯನ್ನು ಸಫಲಗೊಳಿಸುವುದೊಂದೇ ಈಗ ಅಗತ್ಯ.

ಜೌನಪುರ ಜಿಲ್ಲೆಯ ಕೆಲಸಗಾರರು ತುಂಬ ಹುರುಪಿನಿಂದ ಇದ್ದರು. ಕೊನೆಯ ಮಜಲು ಷಹಾಗಂಜ್. ಅಲ್ಲಿ ಜಿಲ್ಲೆಯ ಕೆಲಸಗಾರರೆಲ್ಲ ಬಂದಿದ್ದರು. ೨೦ ಜನರ ಒಂದು ಸಮಿತಿ ಏರ್ಪಾಡಾಯಿತು. ಜೂನ್ ೧೫ ಕ್ಕೆ ಮೊದಲೇ ತಮ್ಮ ಪಾಲಿನ ಭೂದಾನ

ಸಂಗ್ರಹಿಸುವುದಾಗಿ ಅವರು ವಚನ ಕೊಟ್ಟರು. ಗುಜರಾತ್, ಮಹಾರಾಷ್ಟ್ರ, ದಕ್ಷಿಣದ ಸಂಗಾತಿಗಳು ಜೌನಪುರದಲ್ಲಿ ಬೀಳ್ಕೊಂಡರು. ತಾವು ಮುಂದೆ ಮಾಡಬೇಕಾದ ಕೆಲಸಕ್ಕೆ ಸ್ಫೂರ್ತಿಯ ಸ್ರೋತಸ್ಸು ಒಂದನ್ನು ಗಳಿಸಿ ಹೊರಟುಹೋದರು. ಅವರಿಗೆ ಹೋಗಲು ಮನ ಸ್ಸಿರಲಿಲ್ಲ. ಕಾಲೇ ಬಾರದು. ಆದರೆ ಕರ್ತವ್ಯ ಬಹಳ ಕಠೋರ ವಾದುದು.

ಜೌನಪುರದ ತರುವಾಯ ಫೈಸಾಬಾದ್ ಜಿಲ್ಲೆ. ಅದು ಗಾಂಧೀ ಆಶ್ರಮದ ಕೆಲಸಗಾರರ ಮುಖ್ಯ ಕೇಂದ್ರ. ಗಾಂಧೀ ಆಶ್ರಮದ ಮೊಟ್ಟ ಮೊದಲ ಕೇಂದ್ರ 'ರನಿವಾ ಆಶ್ರಮ' ಅಲ್ಲೇ ಮೊದಲು ಅನೇಕ ಕೆಲಸಗಾರರು ಸೇವೆಯ ದೀಕ್ಷೆ ಪಡೆದುದು. ಅದೂ ಈ ಜಿಲ್ಲೆಯಲ್ಲೇ ಇದೆ, ಆದ್ದರಿಂದ ಕೆಲಸಗಾರರೆಲ್ಲ ಹತ್ತಿರದ ಬಿಡಾರ ಗಳಲ್ಲಿ ಬಂದು ಭೇಟಿಯಾದರು. ಅಕಬರಪುರವೂ ಫೈಸಾಬಾದ್ ಜಿಲ್ಲೆಯಲ್ಲೇ ಇದೆ. ಇಲ್ಲಿ ಗಾಂಧೀ ಆಶ್ರಮದ ಕೆಲಸ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ತಾಂಗಾ ತಹಸೀಲಿನಲ್ಲಿ ಖಾದಿ ಕೆಲಸ ನಡೆಯದೆ ಇದ್ದ ಹಳ್ಳಿ ಒಂದೂ ಇಲ್ಲ. ಪಶ್ಚಿಮವಿಭಾಗಕ್ಕೆ ಮೀರತ್ ಇದ್ದಂತೆ ಪೂರ್ವ ವಿಭಾಗಕ್ಕೆ ಅಕಬರಪುರ.

ಫೈಸಾಬಾದ್ ಜಿಲ್ಲೆಯಲ್ಲಿ ವಿನೋಬಾಜೀ ಎರಡು ಮೂರು ಕಡೆ ನಯೀತಾಲಿಂ ಬಗ್ಗೆ ಹೆಚ್ಚಾಗಿ ಹೇಳಿದರು.

ಮೇ ಮೊದಲನೆ ದಿನ ಫೈಸಾಬಾದಿನಲ್ಲಿದ್ದೆವು ಆ ಸಂದರ್ಭದಲ್ಲಿ ಮಾಡಿದ ಭಾಷಣ ಅಂತರ ರಾಷ್ಟ್ರೀಯ ಮಹತ್ವದ್ದು ಎನ್ನಬೇಕು ಫೈಸಾಬಾದಿಗೆ ಹೋಗುವಾಗ ಅಕಬರಪುರದ ಬಳಿ ತಮಸಾ ನದಿಯ ದರ್ಶನವಾಯಿತು. ಭಗವಾನ್ ಶ್ರೀರಾಮಚಂದ್ರನನ್ನು ಬೀಳ್ಕೊಳ್ಳಲು ಅಯೋಧ್ಯೆಯ ನರ ನಾರಿಯರೆಲ್ಲ ಇದೇ ತಮಸಾ ನದಿಯ ದಡದ ವರೆಗೂ ಬಂದಿದ್ದರೇನೊ! ಮಥುರೆಯಲ್ಲಿ ಶ್ರೀಕೃಷ್ಣನ ಚರಿತ್ರೆ ನೆನಪಾ

ಗುವಂತೆ ಇಲ್ಲಿ ರಾಮಚರಿತ್ರೆ ಕಂಡು ಬರುತ್ತದೆ. ಫೈಸಾಬಾದಿಗೆ ಬರುವಾಗ ದಾರಿಯಲ್ಲಿ ತುಲಸೀಚೌರಾದ ಬಳಿ ವಿನೋಬಾಜೀ ಸ್ವಲ್ಪ ನಿಂತರು. ತುಲಸೀದಾಸರು ಇಲ್ಲಿ ಕುಳಿತು ರಾಮಾಯಣದ ಸ್ವಲ್ಪ ಭಾಗ ಬರೆದರಂತೆ. ಸ್ವಲ್ಪಭಾಗ ಕಾಶಿಯಲ್ಲಿ, ಸ್ವಲ್ಪಭಾಗ ಚಿತ್ರಕೂಟ ದಲ್ಲಿ. ರಾಮನ ಜನ್ಮಭೂಮಿಯಾದ ಈ ಪ್ರದೇಶ ಈ ರಾಮಭಕ್ತನಿಗೆ ಭಾವಾವೇಶ ಕೊಟ್ಟುದರಲ್ಲಿ ಅಚ್ಚರಿಯೇನು? ಇಲ್ಲಿಯವರೆಗೆ ರಾಮನಿಗೆ ಅತ್ಯಂತ ಪ್ರಿಯವಾದ ಕೆಲಸವನ್ನು ಕೈಗೊಂಡೇ ಅವರು ತಿರುಗುತ್ತಿ ದಾರೆ. ಇಲ್ಲಿ ನಮ್ಮ ಪಾವನ ಐತಿಹಾಸಿಕ ಸ್ಥಾನಗಳನ್ನು ಹೇಗೆ ಕಾಪಾಡ ಬೇಕೆಂಬುದನ್ನು ತಿಳಿಸಿದರು ಈಗ ಸ್ವರಾಜ್ಯ ಬಂದಿದೆ ಇನ್ನು ಇಂಥ ಮಹಾಸ್ಥಾನಗಳನ್ನು ಅಸಡ್ಡೆ ಮಾಡಲಾಗದು. ತುಲಸೀರಾಮಾಯಣದ ಬಗ್ಗೆ ಹೆಚ್ಚಾಗಿ ಹೇಳಬಯಸಿದದಾಗ ಅವರ ಕಣ್ಣು ನೀರೊಡೆಯಿತು. ಭಾವ ಸಮಾಧಿಯಲ್ಲಿ ಮುಳುಗಿಹೋದರು. ಮಾತು ಆಡುವುದು ಕಷ್ಟವಾಯಿತು.

**ಪಾದಯಾತ್ರೆ ಅಗ್ಗವೇ ತುಟ್ಟಿಯೇ?** ಬಾರಾಬಂಕಿ ತಲಪಿ ದಾಗ ಒಬ್ಬ ತಮ್ಮ 'ಇವೊತ್ತು ನೀವು ಬೇಗ ಬಂದಿರಿ' ಎಂದ. ವಿನೋಬಾ ಹೇಳಿದರು. 'ನಮಗೆ ತೀವ್ರ ಸಾಧನ ದೊರೆತಂತೆಲ್ಲ ನಮ್ಮ ಬುದ್ಧಿ ಮಂದವಾಗುತ್ತ ಬಂತು. ನಮ್ಮ ಉಪಕರಣಗಳೂ ಆದಷ್ಟು ಹೆಚ್ಚು ಕುಶಲವಾಗಿರಬೇಕು ವರ್ಧಾದಿಂದ ೪೦ ರೂಪಾಯಿ ಕೊಟ್ಟು ದಿಲ್ಲಿಗೆ ರೈಲಿನಲ್ಲಿ ಬಂದಿದ್ದ ಒಬ್ಬ ಗೆಳೆಯ. 'ನೀವು ವರ್ಧಾ ದಿಂದ ದಿಲ್ಲಿಗೆ ನಡೆದೇಕೆ ಬಂದಿರಿ' ಎಂದು ವಿನೋಬಾಜೀಯನ್ನು ಕೇಳಿದ. ರೈಲಿನಲ್ಲಿ ಏಕೆ ಬರಲಿಲ್ಲ ಎಂದ. ಇದಕ್ಕೆ ಉತ್ತರಕೊಡುತ್ತ 'ವರ್ಧಾದಿಂದ ದಿಲ್ಲಿಗೆ ನಿನಗೆ ೪೦ ರೂಪಾಯಿ ಟಿಕೀಟು ಆಯಿತು. ಕೂಲಿಮಾಡುವವನಿಗೆ ದಿನಕ್ಕೆ ೧೩ಆಣೆ ಸಿಗುತ್ತದೆ. ಎಂದರೆ ಸುಮಾರು ೫೦ ದಿನದ ಕೂಲಿ ಈ ಟಿಕೀಟಿಗೆ ವೆಚ್ಚವಾಯಿತು ನನಗೆ ೬೦ ದಿನ

ಹಿಡಿಯಿತು ಪ್ರಯಾಣ. ನಿನಗಿಂತ ಹತ್ತುದಿನ ಹೆಚ್ಚಾಯಿತು. ಆದರೆ ಈ ಮಧ್ಯೆ ೨೦,೦೦೦ ಎಕರೆ ಹೊಲ ಸಿಕ್ಕಿತು. ಈಗ ನೀನೇ ಹೇಳು, ನಾನು ನಡೆದು ಬಂದದ್ದು ಅಗ್ಗವಾಯಿತೋ, ತುಟ್ಟಿಯಾಯಿತೋ' ಎಂದು ವಿನೋಬಾಜೀ ಕೇಳಿದರು.

ವಿನೋಬಾಗಾದರೆ ಹೊಲ ಸಿಕ್ಕೀತು, ಎಲ್ಲರಿಗೂ ಸಿಕ್ಕೀತೆ ಎಂದು ಜನ ಹೇಳಬಹುದು ನಿಜ ಯಾರಲ್ಲಿ ಬೇಡಲು ಹೋಗುತ್ತೀವೋ ಅವರು ಬೇಡುವವನ ಜೀವನವನ್ನು ನೋಡುತ್ತಾರೆ. ಬೇಡುವವನ ಅಪರಿಗ್ರಹ, ಅವನ ವಾಣಿಯ ಶುದ್ಧಿ, ಅವನ ಹೃದಯದ ನಿರ್ವೈರ, ಇವೆಲ್ಲದರ ಪ್ರಭಾವ ಬೀಳುತ್ತದೆ. ಏನೇ ಇರಲಿ ನಾವು ಈ ಕೆಲಸ ಮಾಡಲೇ ಬೇಕು. ಈ ಚಳುವಳಿಯ ನಾಯಕನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ನಡೆದರೆ ಚಿಕ್ಕಪುಟ್ಟ ಕೆಲಸಗಾರರು ನಿರಾಸೆಗೊಂಬ ಕಾರಣವಿಲ್ಲ.

ಬಾರಾಬಂಕಿಯ ಪಾಲಿಗೆ ೧೨,೦೦೦ ಎಕರೆ ಬಂದಿತ್ತು, ೪ ದಿನದಲ್ಲಿ ಇಲ್ಲಿ ಕೆಲಸ ನಡೆಯುತ್ತಿದೆ, ಸ್ವಲ್ಪ ಸ್ಫೂರ್ತಿ ದೊರೆತರೆ ಹೆಚ್ಚು ಕೆಲಸ ಆಗಬಲ್ಲದು ಎಂದು ತಿಳಿಯಿತು ಬಾರಾಬಂಕಿ ಆದ ಮೇಲೆ ಲಕನೌ. ಲಕನೌದಲ್ಲಿ ಹೆಚ್ಚು ಕೆಲಸ ಆಗಿರಲಿಲ್ಲ ಲಕನೌ ರಾಜಧಾನಿ. ನಮಗೆ ಸಮಯ ಸಿಗಲಿಲ್ಲ ಎಂದು ಅಲ್ಲಿಂದ ಬಂದ ಒಬ್ಬಗೆಳೆಯ ಹೇಳಿದ ೭ ತಿಂಗಳಿಂದ ವಿನೋಬಾಜೀ ಈ ಪ್ರಾಂತದಲ್ಲಿ ತಿರುಗುತ್ತಿದ್ದರೂ ಇವರಿಗೆ ಸಮಯ ಸಿಗಲಿಲ್ಲ!

**ಪರಾಕ್ರಮ ಘಾತಕ ವಿಷಯಾಸಕ್ತಿ** ಸಂಜೆಯ ಪ್ರಾರ್ಥನಾ ಸಭೆಯಲ್ಲಿ ವಿನೋಬಾಜೀ ಹೀಗೆ ಹೇಳಬೇಕಾಗಿ ಬಂತು. ' ಕೆಲವರು ಮೂಢರು ಇರುತ್ತಾರೆ. ಅವರು ನೋಡಿಯೂ ಕಾಣರು, ಕೇಳಿಯೂ ಆಲಿಸರು. ಈಗ ೭ ತಿಂಗಳಿಂದ ನಿಮ್ಮ ಪ್ರಾಂತದಲ್ಲಿ ನಾನು ಸುತ್ತುತ್ತಿದೇನೆ. ಇನ್ನೂ ಹಲವರು ಕೆಲಸಗಾರರು ಎಚ್ಚತ್ತಿಲ್ಲ. ಕೆಲಸ

ಗಾರರೇ ಇಲ್ಲ. ಇದ್ದವರು ಕೆಲವರು ಸರಕಾರದಲ್ಲಿ ಅಥವಾ ಸಂಸಾರ ದಲ್ಲಿ ಅಥವಾ ಸಾಹಿತ್ಯದಲ್ಲಿ ಸೇರಿಹೋಗಿದಾರೆ. ಹೀಗೇಕೆ ಕೆಲಸ ಗಾರರು ಹೆಣದಂತೆ ಆಗಿದಾರೆ? ಅವರಲ್ಲಿ ಜೀವವೇ ಕಾಣಬಾರದು. ಗಂಗಾಸ್ನಾನ ಮಾಡುತ್ತಾರೆ. ತುಲಸೀದಾಸರ ನಾಮ ಹೇಳುತ್ತಾರೆ. ಧರ್ಮದ ಮಾತು ಆಡುತ್ತಾರೆ ಧರ್ಮದ ಪಾಲನೆ ಮಾಡುವವರು ಇದಾರೆಯೆ? ವಿಷಯಾಸಕ್ತಿಯಲ್ಲಿ ಮುಳುಗಿದ ಜನ ಏನು ಪರಾಕ್ರಮ ತೋರಬಲ್ಲರು? ನಾನು ಇವೊತ್ತು ಇಲ್ಲಿದೇನೆ. ನಾಳೆ ಹೊರಟು ಹೋದೇನು. ನನ್ನ ಕೆಲಸವನ್ನೇನೋ ನಾನು ಮಾಡುತ್ತಾ ಇರುತ್ತೇನೆ. ಯಾರು ಬರಲಿ, ಯಾರು ಬರದಿರಲಿ, ನನ್ನ ಕೆಲಸವಂತೂ ನಡದೇ ತೀರಬೇಕು. ಹೊಲ ಸಿಕ್ಕೇ ಸಿಗುತ್ತದೆ ಹೊಲ ಎಂದೋ ಸಿಕ್ಕಿ ಬಿಟ್ಟಿದೆ ಎಂದು ಗೋರಖಪುರದಲ್ಲಿ ನಾನು ಹೇಳಿದೆ. ಇಂದು ನಿಮ್ಮ ಜಿಲ್ಲೆಯ ಕೊನೆಯ ಮಜಲು ಇವೊತ್ತಾದರೂ ತಮ್ಮ ಜೀವನವನ್ನು ಸಮಾಜಸೇವೆಗೆ ದಾನ ನೀಡಲು ಸಿದ್ಧರಾದ ೧೦ ಜನ ನನಗೆ ಸಿಗ ಲಾರರೆ? ಇದೇ ನನ್ನ ಭಿಕ್ಷೆ. ಅಂಥವರಿದ್ದರೆ.ನಾನು ಭೆಟ್ಟಿಯಾಗಲು ಬಯಸುತ್ತೇನೆ. ಅವರೊಡನೆ ಸ್ವಯಂ ಸಂಬಂಧ ಬೆಳೆಸುತ್ತೇನೆ.'

ಒಂದೊಂದು ಶಬ್ದವೂ ಹಾರ್ದಿಕತೆಯಿಂದ ತುಂಬಿ, ಕೇಳುವ ವರ ಎದೆಯಲ್ಲಿ ನಟ್ಟು, ಏನಾದರೂ ಒಂದು ಹೆಜ್ಜೆ ಮುಂದೆ ಹಾಕ ಬೇಕೆಂಬ ಸ್ಫೂರ್ತಿಕೊಡುತ್ತಿತ್ತು. ಏನಾದರೂ ಸಂಕಲ್ಪಮಾಡದೆ ಮನಸ್ಸು ಸಮಾಧಾನ ಗೊಳ್ಳುವಂತಿರಲಿಲ್ಲ. ಪ್ರವಚನವಾದ ಮೇಲೆ ಒಬ್ಬೊಬ್ಬರೇ ಬಂದು ಭೆಟ್ಟಿಯಾದರು. ೨೬ ಜನ ತಮ್ಮ ಹೆಸರು ಕೊಟ್ಟರು. ಅದರಲ್ಲಿ ಪ್ರತಿಷ್ಠಿತ ತ್ಯಾಗಿ – ಸೇವಕರೂ ಇದ್ದರು. ಸಾಧಾರಣವಾಗಿ ವಿನೋಬಾ ೮ ಗಂಟೆಗೆ ಮೌನ ಹಿಡಿಯುತ್ತಾರೆ. ಇವೊತ್ತು ಇವರೊಡನೆ ಮಾತಾಡುತ್ತ ಯಾವಾಗಲೋ ೮ ಹೊಡೆದು ಹೋಯಿತು. ಆದರೆ ' ತುಲಸೀದಾಸರು ' ' ರಘುನಾಥ ಕುವರನನ್ನು

ಎಚ್ಚರ' ಗೊಳಿಸಿದರು. ಆದ್ದರಿಂದ ಆ ಮುಖಾರವಿಂದ ನಿರುಕಿಸಿ ಆನಂದಗೊಳ್ಳುವುದು ಸಹಜವಾಗಿತ್ತು. ಸಂಕಲ್ಪಮಾಡಿ ಜನ ಭೇಟಿಗೆ ಬಂದಾಗ ವಿನೋಬಾ ಹೇಳಿದರು : ' ಇವೊತ್ತು ನನ್ನ ಎದೆಯನ್ನು ಬಿಚ್ಚಿ ನಿಮ್ಮೆದುರಿಗೆ ಇಟ್ಟೆ. ಹೀಗೆ ಬಹಳ ಕಡೆ ಮಾಡಿಲ್ಲ. ಇದು ಸಾಮಾಜಿಕ, ಆರ್ಥಿಕ ಕ್ರಾಂತಿಯ ಕೆಲಸ. ಏನಿದ್ದರೆ ಅದರಲ್ಲಿ ಒಂದು ಪಾಲು ನೀಡಬೇಕು ಬದುಕನ್ನು ಸಮಾಜಸೇವೆಗೆ ಅರ್ಪಿಸ ಬೇಕು.'

ಸೇವಾಪುರಿ ಬಿಟ್ಟು ಇಲ್ಲಿಗೆ ೨ ವಾರ ಆಯಿತು. ಗಣಿತ ಪಂಡಿತ ರಾದ ವಿನೋಬಾಜೀಯ ಗಣಿತ ಮೊದಲಾಯಿತು. ಪ್ರಾರ್ಥನಾ ಸಭೆಯಲ್ಲಿ ಪ್ರಕಟವಾಗಿ ಚಿಂತನ ಮಾಡಿದರು. ೧ ಲಕ್ಷ ಆಯಿತು. ಇನ್ನೂ ೨೪ ಲಕ್ಷ ಆಗಬೇಕು. ಉಳಿದಿರುವುದು ೨೪ ತಿಂಗಳು, ತಿಂಗಳಿಗೆ ೧ ಲಕ್ಷ ಆದರೆ ಸಂಕಲ್ಪಸಿದ್ಧಿಯಾದೀತು. ಸೇವಾಪುರಿ ಯಿಂದ ಜನರು ತಮ್ಮ ತಮ್ಮ ಸ್ಥಳಕ್ಕೆ ಹೋಗಿ ಅಲ್ಲಿನ ಸಮಿತಿಗಳ ಸದಸ್ಯರ ಒಪ್ಪಿಗೆ ಕಳಿಸಿದಾರೆ. ಕೆಲವು ಕಡೆ ಸಮ್ಮೇಲನ ನಡೆದಿವೆ. ಕೆಲಸಗಾರರು ಕೆಲಸ ಮೊದಲಿಟ್ಟಿದಾರೆ. ಅವರಿಗೆ ಪತ್ರ ಬರೆದು ವಿನೋಬಾಜೀ ಸ್ಫೂರ್ತಿಕೊಡುತ್ತಿದಾರೆ

ಸೇವಾಪುರಿಗೆ ಬರಲು ಆಗದಿದ್ದ ಗೋಂಡಾ ಜಿಲ್ಲೆಯ ಕೆಲಸ ಗಾರನೊಬ್ಬನಿಗೆ ಹೀಗೆ ಬರೆದರು· ' ನೀನು ನಿನ್ನ ಪಾಲನ್ನು ಸಂಗ್ರಹಿ ಸುವ ಕೆಲಸದಲ್ಲಿ ತೊಡಗಿದೀಯೆ. ಸೇವಾಪುರಿಗೂ ಬರಲು ಆಗಲಿಲ್ಲ. ನನಗದು ಒಳ್ಳೆಯದು ಎನಿಸಿತು. ವಾರಕ್ಕೆ ಒಂದು ದಿನ, ಗೊತ್ತಾಗಿ, ಆ ವಾರದಲ್ಲಿ ಎಷ್ಟು ಕೆಲಸ ಆಯಿತೋ ಬರೆದರೆ ಒಳ್ಳೆಯದು. ನಿನ್ನ ನಿಶ್ಚಯವನ್ನು ಎಲ್ಲೆಡೆಯಲ್ಲೂ ಪ್ರಶಂಸೆ ಮಾಡುತ್ತ ಬಂದಿದೇನೆ. ಕೆಲಸದ ಪ್ರಗತಿಯ ಸುದ್ದಿಯೂ ನನಗೆ ತಿಳಿದರೆ, ನಾನು ಹೋದ ಲ್ಲೆಲ್ಲ ಜನಕ್ಕೆ ಸ್ಫೂರ್ತಿ ದೊರೆತೀತು. ಕಲಿಯುಗದಲ್ಲಿ ಜೀವ ಒಂದ

ರಿಂದ ಒಂದು ಪ್ರೇರಣೆ ಪಡೆದು ನಾಗುತ್ತವೆ. ಉಳಿದವರು ಕೂಡಲಿ ಬಿಡಲಿ, ನಾನು ನನ್ನ ಕೆಲಸ ಮಾಡುತ್ತೇನೆ ಎಂಬವರು ಬಹಳಿಲ್ಲ. ಆ ಶಕ್ತಿಯಿರುವುದು ಎಲ್ಲೋ ಕೆಲವರಿಗೆ ಗೋಂಡಾದ ಸುದ್ದಿ ಕೇಳಿ ಲಖನೋಗೆ ಹುರುಪು ಬಂದೀತು. ಲಖನೋದ ಸುದ್ದಿಯಿಂದ ಗೋಂಡಾಕ್ಕೆ ಹುರುಪು ಹುಟ್ಟೀತು. ಲಖನೋದಲ್ಲಿ ಏನಾದೀತೋ ನನಗೆ ತಿಳಿಯದು. ಆಸೆಯೇನೋ ತೋರಿಸಿದಾರೆ. ಫಲವನ್ನು ನೋಡಬೇಕು. ಕಾನಪುರದವರು ಒಳ್ಳೇ ಸಂಘಟನೆ ಮಾಡಿದಂತೆ ಕಾಣುತ್ತದೆ. ಎಲ್ಲ ಕಡೆಯಿಂದಲೂ ಉತ್ಸಾಹಪೂರ್ಣ ಸುದ್ದಿ ಬರುತ್ತಿವೆ.'

ಏಟಾದ ತಮ್ಮನೊಬ್ಬನಿಗೆ · ' ಏಟಾದ ಕೋಟಾ ಹೇಗಾದರೂ ಮಾಡಿ ಮುಗಿಸಲೇಬೇಕು ಎಲ್ಲರ ನೆರವನ್ನೂ ಪಡೆಯಬೇಕು. ಸರ್ವೋದಯ ಸಮ್ಮೇಳನದ ತರುವಾಯ ನಾಕಷ್ಟು ವಾತಾವರಣ ಸಿದ್ಧವಾಗಿದೆ. ಕಾಂಗ್ರೆಸಿನವರೂ ಈ ಕೆಲಸದ ಮಹತ್ವವನ್ನು ಅರಿಯ ತೊಡಗಿದಾರೆ. ಗ್ರಾಮಪಂಚಾಯಿತಿಗಳ ಸಹಕಾರವೂ ಸಿಗಬೇಕು. ಲಖನೋದಲ್ಲಿ ೮ ನೆ ತಾ. ಇರಬೇಕು. ನಿನ್ನ ಕೆಲಸ ಹೇಗೆ ನಡೆ ದಿದೆಯೋ ಅಲ್ಲಿಗೆ ಬರೆದು ತಿಳಿಸು. ನಾನು ಸುತ್ತಬೇಕಾದ್ದು ಇನ್ನೂ ೧೨ ಜಿಲ್ಲೆಯಿವೆ ಜೂನ್ ಕಡೆಯ ವರೆಗೆ ಕಾಲ್ನಡಿಗೆ ಯಾತ್ರೆ ಸಾಗೀತು. ಒಂದು ಪ್ರಾಂತ ಇದಕ್ಕಿಂತ ಹೆಚ್ಚು ಕಾಲವನ್ನು ಬಯಸ ಲಾಗದು.

' ಭೂದಾನಕ್ಕಿಂತ ಹೆಚ್ಚು ಬೆಲೆ ಕೆಲಸಗಾರರ ಸಂಕಲ್ಪದ್ದು ನನಗೆ. ಉತ್ತರ ಪ್ರದೇಶದ ಕೆಲಸಗಾರರು ೫ ಲಕ್ಷದ ಸಂಗ್ರಹ ಪೂರ್ತಿ ಮಾಡಿದರೆ ಅವರ ನೈತಿಕ ಶಕ್ತಿ ಬೆಳೆದೀತು. ಇದರಿಂದ ಎಲ್ಲ ಬಗೆಯ ಲಾಭವಾದೀತು. ನಾನು ನಿಮ್ಮ ಪ್ರಾಂತದಲ್ಲಿ ತಿರುಗಾಡುವಷ್ಟು ಕಾಲ ಏಕಾಗ್ರತೆಯಿಂದ ಹೇಗೆ ಕೆಲಸ ಮಾಡಿದರೋ ಹಾಗೇ ಈಗ

ಅದರಲ್ಲಿ ಮುಳುಗಿಹೋಗಬೇಕು ಸಂಕಲ್ಪಸಿದ್ಧಿಯಾಗುವ ವರೆಗೂ. ಲಖನೋದಲ್ಲಿ ನಿನ್ನ ಪತ್ರ ಬಂದರೆ ನನಗೆ ನಿಮ್ಮಲ್ಲಿನ ಇಡೀ ಚಿತ್ರ ತಿಳಿದೀತು'

ಹೀಗೆ ಒಬ್ಬೊಬ್ಬರಿಗೂ ಹುರುಪು ಕೊಡುತ್ತ ಸಾಗಿಸುತ್ತಿದಾರೆ ಕೆಲಸ. ಸಮ್ಮೇಳನಗಳಿಗೂ ಸ್ಫೂರ್ತಿದಾಯಕ ಸಂದೇಶ ಕಳಿಸುತ್ತಾರೆ. ಸೇವಾಪುರಿಯ ತರುವಾಯ ಬೇರೆ ಬೇರೆ ಸಮ್ಮೇಳನ ನಡೆದಿವೆ.

ಮಲಯಾಳದ ಗೆಳೆಯರಿಗೆ. 'ಮಲಯಾಳದ ಸರ್ವೋದಯ ಕೆಲಸಗಾರರು ಸಭೆ ಸೇರುತ್ತಿದಾರೆ. ಯಾವುದಾದರೊಂದು ಕಾರ್ಯ ಕ್ರಮವನ್ನು ಅವರು ನಿರ್ಧರಿಸಬೇಕು ಈಗ ಭೂದಾನ ಯಜ್ಞದ ಕಾರ್ಯಕ್ರಮ ತಳಹದಿಯ ಕೆಲಸ. ಉಳಿದುದೆಲ್ಲ ಅದರ ಮೇಲೆ. ಇದೇ ಇಲ್ಲದಿದ್ದರೆ ಅವೆಲ್ಲವೂ ಒಣಗಿಹೋದಾವು. ಆದ್ದರಿಂದ ಈ ಕೆಲಸಕ್ಕೆ ತೊಡಗಿರಿ. ದೇವರಲ್ಲಿ ಶ್ರದ್ಧೆಯಿಟ್ಟು ಈ ಕೆಲಸ ಮಾಡಿ. ಉತ್ತರ ಪ್ರದೇಶದವರು ಈ ಕೆಲಸ ಮಾಡಿದ ರೀತಿ ನಮಗೆ ಸ್ಫೂರ್ತಿ ಕೊಡಬೇಕು. ಕೈಲಾಸದಿಂದ ಕನ್ಯಾಕುಮಾರಿಯವರೆಗೆ ಇಡೀ ಭಾರತದಲ್ಲಿ ಒಂದೇ ಆತ್ಮ ಕೆಲಸ ಮಾಡುತ್ತಿದೆ. ಆದ್ದರಿಂದ ಉತ್ತರ ಪ್ರದೇಶದಲ್ಲಿ ಸಾಧ್ಯವಾದುದು ಕೇರಳದಲ್ಲೂ ಸಾಧ್ಯವಾಗ ಬೇಕು.'

ತಮಿಳು ಪ್ರಾಂತದ ಗೆಳೆಯರಿಗೆ. 'ಹಳ್ಳಿಹಳ್ಳಿಗೂ ಮನೆ ಮನೆಗೂ ಭೂದಾನ ಯಜ್ಞದ ಸಂದೇಶವನ್ನು ಸಾರುವುದೇ ಸರ್ವೋದಯ ಕೆಲಸಗಾರರ ಈಗಿನ ಕೆಲಸ ಇದರಲ್ಲಿ ಎಲ್ಲ ಗುಂಪುಗಳ ಎಲ್ಲ ಜನರ ಸಹಕಾರ ಸಿಗಬಲ್ಲದು. ದೊರಕಿಸಿಕೊಳ್ಳಬೇಕು. ಶ್ರೀ ಜಗನ್ನಾಥನ್ ನಮ್ಮ ಯಾತ್ರೆಯಲ್ಲಿ ನಾಲ್ಕು ತಿಂಗಳು ನನ್ನ ಜತೆಗೆ ಇದ್ದು ಪ್ರೇಮದಿಂದ ಹೇಗೆ ಕೆಲಸ ಮಾಡಬೇಕೋ ನೋಡಿದಾರೆ. ಗಂಗೆ-ಯಮುನೆ ಮಾಡುತ್ತಿರುವ ಕೆಲಸದಲ್ಲಿ ಕಾವೇರಿ ಹಿಂದುಳಿಯ

ಲಾರಳು ಎಂದು ನನ್ನ ಮನಸ್ಸು. ತಮಿಳು ಸಾಹಿತ್ಯದ ಮೂಲಕ ತಮಿಳು ತಮ್ಮಂದಿರೊಡನೆ ಏಕರೂಪವಾಗಲು ನಾನು ಪ್ರಯತ್ನ ಪಟ್ಟಿದೇನೆ. ಈ ಉತ್ತರ ಪ್ರದೇಶದ ಯಾತ್ರೆಯಲ್ಲಿಯೂ ದಿನವೂ ಬೆಳಿಗ್ಗೆ ' ಕುರಳ್ ' ಅಧ್ಯಯನ ನಡದೇ ಇದೆ. ನನ್ನ ದ್ರಾವಿಡ ಬಂಧುಗಳು ನನ್ನನ್ನು ತಮ್ಮವನೆಂದೇ ತಿಳಿದಾರು, ಭೂದಾನ ಯಜ್ಞ ದಲ್ಲಿ ಪೂರ್ಣ ಸಹಕಾರ ನೀಡಿಯಾರು ಎನ್ನುವ ಭರವಸೆ ನನಗಿದೆ.'

ಶ್ರೀ ಚಾರುಚಂದ್ರ ಬಾಬು ಬಂಗಾಳಕ್ಕಾಗಿ ಸಂದೇಶ ಬೇಡಿದರು. ಅದನ್ನು ಎತ್ತಿಕೊಟ್ಟು ಈ ಪತ್ರಮಾಲೆ ಮುಗಿಸುತ್ತೇನೆ.

' ಭೂದಾನ ಯಜ್ಞಕ್ಕಾಗಿ ಒಂದು ಯೋಜನೆ ಮಾಡಲು ಕೆಲಸ ಗಾರರ ಸಮ್ಮೇಳನ ಸೇರುತ್ತಿದೆ. ಇದು ಒಳ್ಳೇ ಮಾತು. ಬಂಗಾಳ ದಲ್ಲಿ ಈಗ ಈ ಕೆಲಸ ಅತ್ಯಗತ್ಯ. ಬಂಗಾಳದಲ್ಲಿ ತ್ಯಾಗವುಂಟು, ದೇಶಕ್ಕಾಗಿ ಭಾವನೆಯಿದೆ, ತನ್ಮಯತೆ—ತೀವ್ರತೆ ಇದೆ. ಶಕ್ತಿಯೂ ಹೇರಳವಾಗಿದೆ. ಆದರೆ ಈಗ ನಮ್ಮ ದೇಶದಲ್ಲಿ ಬಹಳ ಪಕ್ಷಭೇದ ಆಗಿವೆ. ಬಂಗಾಳದಲ್ಲೂ ಹಾಗೇ ಭಾವನೆಯ ತೀವ್ರತೆಯಿಂದ ಬಂಗಾಳದಲ್ಲಿ ಪಕ್ಷಭೇದ ಇನ್ನೂ ಬಿರುಸಿದ್ದೀತು. ಈ ಕೆಲಸದಲ್ಲಿ ಪಕ್ಷಭೇದಗಳನ್ನು ಮರೆತು ಎಲ್ಲರೂ ಸರ್ವೋದಯ ಪ್ರೇಮಿಗಳೆಂದು ಕೆಲಸ ಮಾಡಬೇಕು. ಮನುಷ್ಯರ ಹಣೆಗೆ ಅಂಟಿಸಿಕೊಂಡ ಚೀಟಿಗಳ ಕಡೆ ನೋಡುವುದು ಬೇಡ. ಹೃದಯದಲ್ಲಿ ವಿರಾಜಮಾನನಾದ ಅಂತರ್ಯಾಮಿಯ ಕಡೆ ನೋಡೋಣ. ಅಹಂಕಾರ—ಅಭಿಮಾನ ಬಿಟ್ಟು ಎಲ್ಲರೂ ಸೇರಿ ದರಿದ್ರ ನಾರಾಯಣನ ಸೇವಗೆ ತೊಡಗಿರಿ. ಆಗ ಬಂಗಾಳದಲ್ಲಿ ಕಲ್ಯಾಣಕಾರಿಣಿ ವಿಶ್ವಮಂಗಳ ಶಕ್ತಿ ಆವಿರ್ಭವಿ ಸೀತು. ಸಾಂಖ್ಯ ತತ್ವ, ಬೌದ್ಧ ವಿಚಾರ, ಶಕ್ತಿ ತಂತ್ರ, ವೈಷ್ಣವ ಸಂಪ್ರದಾಯ ಎಲ್ಲಿ ಹುಟ್ಟಿದುವೋ ಅಂಥ ಬಂಗಾಳದಲ್ಲಿ ಈ ಕೆಲಸ ಮೊದಲಾದರೆ ಇಡೀ ಭಾರತಕ್ಕೇ ಮೇಲ್ಪಂಕ್ತಿಯಾದೀತು.

'ದರಿದ್ರ ನಾರಾಯಣ ಶಬ್ದದ ದ್ರಷ್ಟಾರರು ಬಂಗಾಳದ ಮನೀಷಿ. ಅವರ ಶಬ್ದವನ್ನೆ ಗಾಂಧೀಜೀ ಎತ್ತಿ ಬಳಸಿದರು, ಮನೆ ಮನೆಗೂ ಮುಟ್ಟಿಸಿದರು. ಆ ದರಿದ್ರ ನಾರಾಯಣನನ್ನು ಎಲ್ಲರ ಹೃದಯ ಮಂದಿರದಲ್ಲಿ ಪ್ರತಿಷ್ಠಿಸುವ ಕೆಲಸವೇ ಈ ಭೂದಾನ ಯಜ್ಞ. ಇದನ್ನು ಸಫಲಗೊಳಿಸಲು ನಮ್ಮ ಶಕ್ತಿಯನ್ನು ಏಕಾಗ್ರವಾಗಿ ಉಪಯೋಗಿಸಬೇಕು. .

'ಬಂಗಾಳದವರು ಯಾರಾದರೂ ನಡುನಡುವೆ ಈ ಯಾತ್ರೆಯಲ್ಲಿ ನಮ್ಮ ಜತೆಗೆ ಬಂದು ಇದ್ದರೆ ಈ ಕೆಲಸದ ಪದ್ಧತಿ ತಿಳಿಯಲು ಅನುಕೂಲ. ಎಲ್ಲರಿಗೂ ಪ್ರಣಾಮ.'

## ೧೯. ಸರ್ವೋದಯ : ರಾಮ-ಸೀತೆ

**ರಾಜಧಾನಿಯಲ್ಲಿ ಎರಡು ದಿನ**: ಉತ್ತರ ಪ್ರದೇಶದ ರಾಜಧಾನಿ ಲಖನೋದಲ್ಲಿ ಎರಡು ದಿನ ತಂಗಿದ್ದೆವು. ಭೂದಾನ ಯಜ್ಞದ ದೃಷ್ಟಿಯಿಂದ ಎರಡೂ ದಿನ ಮಹತ್ವಪೂರ್ಣ ಚರ್ಚೆ ನಡೆಯಿತು. ಮುಖ್ಯಮಂತ್ರಿ ಗೋವಿಂದ ವಲ್ಲಭ ಪಂತರು ವಿನೋಬಾಜೀಯ ಭೆಟ್ಟಿಗೆ ಬಂದರು. ನಮ್ಮ ಸರಕಾರ ವಿನೋಬಾಜೀಯ ಭೂದಾನ ಯಜ್ಞದ ಕೆಲಸದಲ್ಲಿ ಪೂರ್ಣ ಸಹಕಾರ ಕೊಡುತ್ತದೆ ಎಂದು ಅವರು ಪತ್ರಿಕೋದ್ಯೋಗಿಗಳಿಗೆ ಹೇಳಿದರು.

ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ, ವ್ಯವಸಾಯ ಮಂತ್ರಿ, ಅನ್ನಮಂತ್ರಿ, ವಿದ್ಯಾಪೀಠದ ಪ್ರಾಧ್ಯಾಪಕರು, ಪಂಚಾಯಿತಿ ಅಧಿಕಾರಿಗಳು, ಅದರ ಕಾರ್ಯದರ್ಶಿಗಳು ೫೦೦ ಜನ, ಪತ್ರಿಕೋದ್ಯೋಗಿಗಳು, ರಾ. ಸ್ವ. ಸೇ. ಸಂಘದವರು-ಎಲ್ಲರೂ ಬಂದಿದ್ದರು. ಭೂದಾನ ಯಜ್ಞದ ಬಗ್ಗೆ ಸಂದೇಹ ನಿವಾರಣೆಗಾಗಿ, ಕಾನೂನಿನ ಅಡಚಣೆಗಳ ಚರ್ಚೆಗಾಗಿ ಮಂತ್ರಿಗಳೆಲ್ಲರೂ ಬಂದಿದ್ದರು. ವಿನೋಬಾಜೀಯೊಡನೆ ಮಾತಾಡಿ ಎಲ್ಲರೂ ಪ್ರಭಾವಗೊಂಡರು.

**ಪರ್ಯಾಪ್ತ ಕ್ಷೇತ್ರದ ಪ್ರಶ್ನೆ**. ಸೇವಾಪುರಿಯಿಂದ ದಿಲ್ಲಿಗೆ ಹಿಂದಿರುಗಿದಮೇಲೆ ಶ್ರೀ ಪಾಟೀಲರು ಕೊಟ್ಟ ಹೇಳಿಕೆಯ ಬಗ್ಗೆ ಅಲ್ಲಲ್ಲಿ ಸ್ವಲ್ಪ ಚರ್ಚೆ ನಡಯುತ್ತಿತ್ತು. ಲಖನೋದಂಥ ಪ್ರಾಂತ-ರಾಜಧಾನಿಯಲ್ಲಿ ಅದರ ವಿಸ್ತಾರ ಚರ್ಚೆ ಆಗದಿರುವುದು ಸಂಭವವಲ್ಲ. ವಿನೋಬಾಜೀ ತಿಳಿಸಿ ಹೇಳಿದರು. 'ನಮ್ಮನ್ನು ಯಾರಾದರೂ ಟೀಕಿಸಲಿ. ನಮಗೆ ನಷ್ಟವಿಲ್ಲ. ಲಾಭವೇ ಉಂಟು. ಜನರೆಲ್ಲ ನನ್ನಂತೆಯೆ ಯೋಚಿಸಿದರೆ ನಾನು ಈ ಕೆಲಸ ಬಿಟ್ಟು ಬೇರೇನಾದರೂ

ಮಾಡಿಯೇನು—ಜನ ಇನ್ನೂ ವಿಚಾರ ಮಾಡದಿದ್ದುದನ್ನು. ಶ್ರೀ ಪಾಟೀಲರು ತಮ್ಮ ಹೊಲದಲ್ಲಿ ಬಹಳಷ್ಟು ಭಾಗ ನನಗೆ ಧಾನ ನೀಡಿದಾರೆಂಬುದನ್ನು ಜನರು ಅರಿಯರು. ನಾನು ಕೇಳಿದರೆ ಇನ್ನೂ ಕೊಟ್ಟಾರು. ಅವರಿಗೂ ನಮಗೂ ವಿಚಾರದಲ್ಲಿ ಭೇದವಿಲ್ಲ. ಭೂದಾನ ಯಜ್ಞ ಪಾಟೀಲರಿಗೆ ಇಷ್ಟ. ಅವರಿಗೆ ಎತ್ತಿನ ಚಿಂತೆ. ಒಂದು ಜತೆ ಎತ್ತಿಗೆ ಐದು ಎಕರೆ ಸಾಲದು ನಾನು ಯೋಚಿಸುವುದು ಹಾಗಲ್ಲ. ಹೊಲವನ್ನು ಹಂಚುವುದು ಮನುಷ್ಯರಿಗಾಗಿಯೋ, ಎತ್ತಿಗಾಗಿಯೋ ? ಎತ್ತಿಗಾಗಿ ಎಂದರೆ ಅದರ ಅಭಿಪ್ರಾಯ ಕೇಳಬೇಕಾದೀತು. ರೈತರ ದೃಷ್ಟಿಯಿಂದ ನೋಡಿದರೆ ನಾನು ಅವರಿಗೆ ಐದು ಎಕರೆ ಕೊಡುತ್ತಿದೇನೆ. ಇಲ್ಲಿ ಅನೇಕ ಜಿಲ್ಲೆಗಳಲ್ಲಿ ನಾನು ಹಳ್ಳಿ ಹಳ್ಳಿ ತಿರುಗಾಡಿದೇನಲ್ಲ. ಐದು ಗುಂಟೆ ಹೊಲದಲ್ಲಿ ನಾವು ಹೊಟ್ಟೆ ಹೊರೆಯಬಲ್ಲೆವು ಎಂದು ರೈತರು ನನಗೆ ಹೇಳಿದಾರೆ. ಇಷ್ಟು ಕಡಮೆ ಇದೆ ಇಲ್ಲಿ ಹೊಲ. ಅಂತೇ ಈ ಎಕನಾಮಿಕ್ ಹೋಲ್ಡಿಂಗ್ (ಪರ್ಯಾಪ್ತ ಕ್ಷೇತ್ರ) ಎಂಬುದು ನಾವೇಕ್ಷ ಪದ. ಮಧ್ಯಪ್ರದೇಶದಲ್ಲಿ ಒಂದು ಜತೆ ಎತ್ತು ಇಪ್ಪತ್ತು ಎಕರೆಯ ವರೆಗೆ ಬಿತ್ತಬಲ್ಲವು. ನಿಮ್ಮ ಉತ್ತರ ಪ್ರದೇಶದ ಸರಕಾರ ೬ ಎಕರೆಯೇ ಪರ್ಯಾಪ್ತ ಎಂದು ಒಪ್ಪಿದಾರೆ. ಐದಕ್ಕೆ ಬದಲು ಆರು ಎಕರೆ ಕೊಡಲು ನನಗೆ ಅಡ್ಡಿಯೇನು ? ಹೊಲ ತಂದುಕೊಡುವವರು ನೀವು. ಹೆಚ್ಚಾಗಿ ತನ್ನಿ. ಆರಾರು ಎಕರೆಯನ್ನೇ ಕೊಡೋಣ. ಹೊಲ ಸಾಕು—ಸಾಲದು ಎಂಬುದು ಲಖನೋ ದೃಷ್ಟಿಯಿಂದಲ್ಲ, ಹಳ್ಳಿಯ ದೃಷ್ಟಿಯಿಂದ.

ಮುಂಬರಿದು ವಿನೋಬಾ ಹೇಳಿದರು : 'ಎಕನಾಮಿಕ್ ಹೋಲ್ಡಿಂಗಿನ ಮಾತು ಆಡುವಾಗ ನಾವು ದೇಶದ ಸ್ಥಿತಿಯನ್ನು ಮರೆಯುತ್ತೇವೆ. ನಮ್ಮಲ್ಲಿ ಹೊಲ ಬಹಳ ಕಡಮೆ. ಹಿಡುವಳಿಗಳನ್ನು ದೊಡ್ಡವು ಮಾಡುವುದಲ್ಲ ಗುರಿ ; ಚಿಕ್ಕ ಚಿಕ್ಕ ಹಿಡುವಳಿಗಳಲ್ಲೇ ಹೆಚ್ಚು

ಹೆಚ್ಚು ಬೆಳೆ ಬೆಳೆಯುವುದು. ಚೀನಾ ಜಪಾನುಗಳಲ್ಲಿ ಎಷ್ಟಿವೆ ಹಿಡುವಳಿಗಳು? ಒಂದು ಜತೆ ಎತ್ತಿಗೆ ೧೫–೨೦ ಎಕರೆ ಸರಿಯಾದ ಹಿಡುವಳಿ ಎಂಬ ರೀತಿಯಲ್ಲಿ ಟ್ರ್ಯಾಕ್ಟರಿಗೆ ೫೦೦ ಎಕರೆ ಹಿಡುವಳಿ ಬೇಕೇನೋ. ಎಂದರೆ, ಕೈಯಿಂದ ಮಾಡುವ ಬೇಸಾಯಕ್ಕೆ ಒಂದು ಮಿತಿ - ಒಂದು ಪ್ರಮಾಣ. ಎತ್ತುಗಳಿಗೇ ಒಂದು ಪ್ರಮಾಣ. ಟ್ರ್ಯಾಕ್ಟರಿಗೇ ಇನ್ನೊಂದು ಪ್ರಮಾಣ. ಈ ಮೂರೂ ಪ್ರಮಾಣವನ್ನು ಕೈಬಿಡಿ. ಕುಟುಂಬಕ್ಕೆ ಎಷ್ಟು ಹೊಲ ಬೇಕೋ ಅದಕ್ಕನುಸಾರವಾಗಿ ಹಂಚಿ ಎನ್ನುತ್ತೇನೆ. ಆಮೇಲೆ ಎಷ್ಟು ಮಟ್ಟಿಗೆ ಸಹಕಾರ ಅಗತ್ಯವೋ ಅಷ್ಟು ಮಾಡಿ. ಪೂರ್ಣ ಸಹಕಾರದ ಮಾತು ಆಡುತ್ತಾರೆ. ದೇಶದ ಪರಿಸ್ಥಿತಿ ನೋಡಿದರೆ ಈ ಕೂಡಲೇ ಅದು ಸಾಧ್ಯವಿಲ್ಲ. ಆಂಶಿಕ ಸಹಕಾರ ಸಾಧ್ಯ. ನಾಲ್ಕು ಕುಟುಂಬಗಳ ನಡುವೆ ಒಂದು ಎತ್ತಿನ ಜತೆ ಇಡುವುದು, ರಾತ್ರಿಯ ಕಾವಲು, ನೀರು ಹರಿಸುವುದು ಇತ್ಯಾದಿ ಕೆಲಸಗಳಲ್ಲಿ ಸಹಕಾರ. ಈಗಲೂ ಹಳ್ಳಿಗಳಲ್ಲಿ ಈ ಸಹಕಾರ ನಡೆಯುತ್ತಿದೆ. ಅಲ್ಲದೆ, ಹೊಲವಿಲ್ಲದ ಪ್ರತಿಯೊಬ್ಬರಿಗೂ ಹೊಲ ಕೊಡುವುದು ನಮ್ಮ ಕೆಲಸವಲ್ಲ. ಯಾರಿಗೆ ಬೇರೆ ಆಸರೆಯೇ ಇಲ್ಲವೋ, ಯಾರು ಬೇಸಾಯ ಕೂಲಿ ಮಾಡಿ ಹೊಟ್ಟೆ ಹೊರೆಯುತ್ತಿದಾರೋ, ಯಾರು ಚೆನ್ನಾಗಿ ಹೊಲ ಮಾಡಬಲ್ಲರೋ ಅವರಿಗೆ ಮಾತ್ರ.'

ಬೇಸಾಯವೇಕೆ, ಗ್ರಾಮೋದ್ಯೋಗದಲ್ಲಿ ತೊಡಗಿ ಎಂಬ ಸೂಚನೆಯ ಬಗ್ಗೆ ಮಾತಾಡುತ್ತ '೩೦ ವರ್ಷದಿಂದ ಗ್ರಾಮೋದ್ಯೋಗದ ಕೆಲಸವನ್ನೆ ಮಾಡುತ್ತ ಬಂದಿರುವವನಿಗೆ ಅದರ ಮಹತ್ವವನ್ನು ತಿಳಿಸಲೇಕೆ? ಭೂದಾನ - ಗ್ರಾಮೋದ್ಯೋಗ ನಮಗೆ ಸೀತೆ–ರಾಮ ಇದ್ದಂತೆ. ಇದಲ್ಲದೆ ಮೂರನೆಯ ಲಕ್ಷ್ಮಣನೂ ಬೇಕು ಎಂಧು ಯಾರಿಗಾದರೂ ಅನಿಸಿದರೆ ಅವರು ತೋರಿಸಲಿ ಆ

ಲಕ್ಷ್ಮಣನನ್ನು.

'ಚಿಕ್ಕ ಹಿಡುವಳಿಗಳಲ್ಲಿ ಕಡಮೆ ಬೆಳೆಯಾಗುತ್ತದೆ. ಹೆಚ್ಚು ಬೆಳೆ ಬೇಕಾದರೆ ಹಿಡುವಳಿ ದೊಡ್ಡದಾಗಬೇಕು ಎಂದು ಚಿಕ್ಕ ಹಿಡುವಳಿಗಳ ಬಗ್ಗೆ ಒಂದು ಆಕ್ಷೇಪಣೆಯಿದೆ. ಪರಂಧಾಮ ಆಶ್ರಮದಲ್ಲಿ ಕೈಬೇಸಾಯದ ಪ್ರಯೋಗ ನಡೆಯಿತು. ಅದರಿಂದ ಈ ವಾದ ನಿರರ್ಥಕ ಎಂದು ತಿಳಿದಿದೆ. ಬೇರೆ ಕಡೆಯಲ್ಲೂ ಅಂಥ ಪ್ರಯೋಗ ನಡೆದಿವೆ. ಪರಂಧಾಮದ ಪ್ರಯೋಗಕ್ಕೆ ಅವು ಪುಷ್ಟಿಕೊಟ್ಟಿವೆ.'

ಇನ್ನೂ ಕೆಲವು ಸ್ವಾರಸ್ಯವಾದ ಪ್ರಶ್ನೋತ್ತರ ನಡೆದುವು.

ಪ್ರಶ್ನೆ: ನಿಮ್ಮ ಕೆಲಸ ಯಾವ ಕಾಲಕ್ಕೆ ಸಫಲವಾದೀತು?

ಉತ್ತರ ಸಫಲತೆಯನ್ನು ಎರಡು ರೀತಿ ಅಳೆಯಬಹುದು. ನಮ್ಮ ಧ್ಯೇಯಕ್ಕೆ ಎಷ್ಟು ಹತ್ತಿರ ಬಂದಿದೇವೆ ಎಂಬುದು ಒಂದು. ಸಫಲತೆಯ ಬಗ್ಗೆ ನಮಗೇ ಏನನಿಸುತ್ತದೆ ಎಂಬುದು ಎರಡು. ನನ್ನ ಯೋಗ್ಯತೆಗೆ ಬಹಳ ಮೀರಿ ಸಿಕ್ಕಿದೆ ನನಗೆ ಫಲ ಎನ್ನುತ್ತೇನೆ. ಮುಂದೆಯೂ ಸಿಕ್ಕುವಂತಿದೆ. ಒಂದು ವರ್ಷದಲ್ಲಿ ಒಂದು ಲಕ್ಷ ಎಕರೆ ಹೊಲ ಸಿಕ್ಕೀತು ಎಂದು ನನಗೆ ಊಹೆಯಿತ್ತು. ಅದು ಸರಿಯಾಯಿತು. ಈಗಂತೂ ಒಂದು ದೊಡ್ಡ ಕೆಲಸವೇ ಬಂದು ನಿಂತಿದೆ ಮುಂದೆ. ಸೇವಾಪುರಿಯಲ್ಲಿ ದೇಶದ ಎಲ್ಲ ಕೆಲಸಗಾರರೂ ಸೇರಿ ಬರಲಿರುವ ಎರಡು ವರ್ಷದಲ್ಲಿ ೨೫ ಲಕ್ಷದ ಸಂಕಲ್ಪ ಮಾಡಿದಾರೆ. ನಾನು ಹೋದಲ್ಲೆಲ್ಲ ಜನರಿಗೆ ಇದರಲ್ಲಿ ಅಭಿರುಚಿ ಹೆಚ್ಚುತ್ತಿರುವುದನ್ನೆ ನೋಡಿದೇನೆ. ಇಡೀ ಜನ ಚುನಾವಣೆಯ ಕೆಲಸದಲ್ಲಿ ಮುಳುಗಿದ ಕಾಲದಲ್ಲೂ ನಮ್ಮ ಕೆಲಸ ಚೆನ್ನಾಗಿಯೆ ನಡೆಯಿತು. ಈಗ ಸಹಾನುಭೂತಿಯೂ ಹೆಚ್ಚಿದೆ, ಅಪೇಕ್ಷೆಯೂ ಹೆಚ್ಚಿದೆ. ಈಗ ಇದು ಸಾಮಾಜಿಕ ಕ್ರಾಂತಿಯ ದಿಕ್ಕಿನಲ್ಲಿ ಒಂದು ಲಾಕ್ಷಣಿಕ ಪ್ರಯೋಗ ಎನ್ನುತ್ತೇನೆ.

ಪ್ರಶ್ನೆ : ಹಾಗೆಂದರೆ ಏನು?

ಉತ್ತರ : ಮುಂದೆ ಏನು ಆಗಲಿದೆಯೋ ಅದರ ದರ್ಶನ ನನಗೆ ಇಂದು ಆಗುತ್ತಿದೆ. ಕಾಣಬಲ್ಲವರಿಗೆ ಅಂಥ ದರ್ಶನ ಆದೀತು. ಆದರೆ ಕುರುಡರಿಗೆ ಢಿಕ್ಕಿ ಹೊಡೆದ ಮೇಲೆಯೇ ಕಂಬ ತಿಳಿಯುವುದು. ಭೂದಾನದ ವಿಚಾರವನ್ನು ಅರಿಯಲು ಜನಕ್ಕೆ ವಿಳಂಬವಾಗುವುದಿಲ್ಲ. ಎಲ್ಲಿ ಜನಾಭಿಪ್ರಾಯ ಸಿದ್ಧವಾಗುತ್ತದೋ, ಎಂದರೆ ಹೊಲವಿದ್ದವರು ಇದಕ್ಕೆ ಅನುಕೂಲವಾಗುತ್ತಾರೋ, ಅಲ್ಲಿ ಕಾನೂನು ಅಥವಾ ರಾಜ್ಯ ಕ್ರಾಂತಿ, ಎರಡೂ ಬರಬಲ್ಲವು. ಆಗ ಯಾವ ನಾಗರಿಕನೂ ಇದನ್ನು ವಿರೋಧಿಸಲಾರ. ಈಗಂತೂ ಲೆಫ್ಟಿಸ್ಟ್, ರೈಟಿಸ್ಟ್, ರಾಂಗಿಸ್ಟ್, ಎಲ್ಲರೂ ನನ್ನ ಪಕ್ಷವೇ. ಅವರಿಗೆ ಹಂಚಿಕೆಯ ಬಗ್ಗೆ ಮಾತ್ರ ಸ್ವಲ್ಪ ಅನುಮಾನ. ಹೈದರಾಬಾದಿನಲ್ಲಿ ಹಂಚಿಕೆಯಾಗುತ್ತಿದೆ. ಅಲ್ಲಿಂದ ಒಂದೂ ದೂರು ಬಂದಿಲ್ಲ. ವಿಚಾರ ಸೃಷ್ಟಿ, ಸಾಹಿತ್ಯ ಸೃಷ್ಟಿಗಳಲ್ಲಿ, ಸಾಹಿತ್ಯ ಸೃಷ್ಟಿ ಸತ್ಯ ಸೃಷ್ಟಿಗಳಲ್ಲಿ ಬಹಳ ಭೇದವಿಲ್ಲ. ಮೊದಲು ವಿಚಾರ ಮನಸ್ಸಿನಲ್ಲಿ ಹುಟ್ಟುತ್ತದೆ. ಆಮೇಲೆ ವಾಣಿಯಲ್ಲಿ ಪ್ರಕಟ ವಾಗುತ್ತದೆ. ಅನಂತರ ಕೃತಿಯಲ್ಲಿ ಮೂಡುತ್ತದೆ. ಇವೊತ್ತು ಯಾರ ಬಳಿ ಹೊಲವಿದೆಯೋ ಅವರ ಬಳಿಯಲ್ಲೇ ಇರಬೇಕೆಂದರೆ ಜನರು ಬಿಟ್ಟಾರೆ? ಹಾಗಿದ್ದರೆ ಹೊಲ ಓಡೋಡಿ ನನ್ನ ಬಳಿಗೇಕೆ ಬರುತ್ತಿದೆ? ಇವೊತ್ತು ಯಾರ ಬಳಿ ಇದೆಯೋ ಅವರ ಬಳಿ ಇರಲೊಲ್ಲೆನೆ ನ್ನುತ್ತಿದೆ ಭೂಮಿ. ತನ್ನ ನಿಜವಾದ ಒಡೆಯರ ಬಳಿ ಹೋಗಬಯ ಸುತ್ತಿದೆ. ಹೊಲವಿಲ್ಲದವರ ಬಳಿಗೆ ಓಡಿಹೋಗಲು ಭೂಮಿಗೇ ಆತುರ. ಇಲ್ಲದಿದ್ದರೆ ನನ್ನ ಮಾತು ಕೂಡ ತಿಳಿಯದ ತೆಲಂಗಾಣದಂಥ ಸೀಮೆಯಲ್ಲಿ ನನಗೆ ಹೊಲ ಹೇಗೆ ಸಿಕ್ಕಿತು? ಆದರೆ ನಾನು ಒಂದು ಮಾತು ಕಂಡೆ. ನನಗೆ ಬೇಡಲು ಪ್ರೇರಣೆ ಕೊಟ್ಟವನೇ ಉಳಿದವರಿಗೆ ನೀಡಲೂ ಪ್ರೇರಣೆ ಕೊಡುತ್ತಾನೆ. ಈಗಂತೂ ಗಾಳಿಯೇ ಬದಲಾಗಿದೆ.

ಈ ಚಳುವಳಿಗೆ ವೇಗ- ಬಲ ಬಂದಿದ. ಅಂತೇ ಇಂದಿನ ಒಡೆಯರಲ್ಲಿ ಇರಬಯಸುತ್ತಿಲ್ಲ ಭೂಮಿ ಎನ್ನುತ್ತಿದೇನೆ. ಯಾರು ಹೊಲ ಮಾಡು ತ್ತಾರೋ ಅವರ ಬಳಿ ಇರಲು ಬಯಸುತ್ತಿದೆ ಹೊಲ.

**ಸ್ವಾವಲಂಬಿ ಶಿಕ್ಷಣ**· ವಿದ್ಯಾಪೀಠದ ಪ್ರಾಧ್ಯಾಪಕರೊಡನೆ ಸಾಕಷ್ಟು ಮಹತ್ವದ ಚರ್ಚೆ ನಡೆಯಿತು. ಸರ್ವೋದಯದ ಕೆಲಸ ದಲ್ಲಿ ವಿಶ್ವವಿದ್ಯಾಲಯಗಳು ಹೇಗೆ ನೆರವಾಗಬಹುದೋ ವಿನೋಬಾಜೀ ಅವರಿಗೆ ತಿಳಿಸಿದರು. ವಿಶ್ವವಿದ್ಯಾಲಯಗಳು ತಮ್ಮ ಈಗಿನ ರೂಪನ್ನು ಬದಲಿಸಬೇಕು. ಇವೊತ್ತು ರೈತ, ಬಡಗಿ, ಕಮ್ಮಾರ, ಇವರು ಯಾರಿಗೂ ನಿಮ್ಮ ವಿಶ್ವವಿದ್ಯಾಲಯದಲ್ಲಿ ಭರವಸೆ ಕೊಡುವಂತಿಲ್ಲ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ದಿನಕ್ಕೆ ೪ ಗಂಟೆ ಶರೀರ ಶ್ರಮ ಮಾಡಲೇಬೇಕು. ಅದರಿಂದಲೇ ಅವರಿಗೆ ಅನ್ನ. ಮನೆಯಿಂದ ಒಂದು ಬಿಡಿಕಾಸೂ ಅವರಿಗಾಗಿ ವೆಚ್ಚವಾಗಬಾರದು. ಇತ್ಯಾದಿ ವಿಚಾರಗಳನ್ನು ವಿನೋಬಾ ಹೇಳಿದರು.

ಪಂಡಿತರು ಕೇಳಿದರು. ' ಪಟ್ಟಣದಲ್ಲಿ ಇದೆಲ್ಲ ಹೇಗೆ ಸಾಧ್ಯ ?'

ವಿನೋಬಾ: ' ಏಕೆ ಸಾಧ್ಯವಿಲ್ಲ? ಪಟ್ಟಣವೂ ಲೋಕದ ಅಂಶವೇ ತಾನೆ! ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ವಿಶ್ವದಲ್ಲಿ ಹೋಗಲಿ ಎಂದೇನು. ವಿಶ್ವದ ಸಂಬಂಧ ಬೆಳೆಯಲಿ. ಈಗ ಇಂಗ್ಲೀಷಿನ ಮೂಲಕ ಬೇಸಾಯದ ಜ್ಞಾನ ತಿಳಿಸುತ್ತಾರೆ· ಹತ್ತು ಸಾವಿರ ವರ್ಷದಿಂದ ನಮ್ಮಲ್ಲಿ ಬೇಸಾಯದ ಜ್ಞಾನ ಸಾಗಿ ಬರುತ್ತಲೇ ಇದೆ. ಇದಕ್ಕೆ ಇಂಗ್ಲೀಷಿನ ಅಗತ್ಯವೇನು? ಆಧುನಿಕ ವಿಷಯವಾದರೂ ಆಗಿದ್ದರೆ ಆ ಮಾತು ಬೇರೆ. ನನ್ನ ಕೈಯಲ್ಲಿ ಒಂದು ವ್ಯವಸಾಯದ ಕಾಲೇಜು ಇದ್ದರೆ, ಒಂದು ಉತ್ತಮ ಪ್ರಯೋಗ ಶಾಲೆ, ಉತ್ತಮ ಪುಸ್ತಕ ಭಂಡಾರ, ಒಳ್ಳೆಯ ಹೊಲ, ಅಷ್ಟನ್ನು ವಿದ್ಯಾರ್ಥಿಗಳಿಗೆ ಅಧ್ಯಾಪಕರಿಗೆ ಕೊಟ್ಟು, ಶಿಕ್ಷಕರಿಗೆ

ಸಂಬಳವಿಲ್ಲ, ವಿದ್ಯಾರ್ಥಿಗಳಿಗೆ ಮನೆಯಿಂದ ವೆಚ್ಚಕ್ಕೆ ಹಣವಿಲ್ಲ ಎಂದೇನು. ಬೆಳೆ ಬೆಳೆಯಿರಿ. ಹೊಸ ಶೋಧನೆ ಮಾಡಿ. ಸ್ವಾವಲಂಬನ ದಿಂದ ಶಿಕ್ಷಣ ಪಡೆಯಿರಿ. ಹಾಗೆ ಕ್ರಾಂತಿಕಾರಿ ಹೆಜ್ಜೆ ಹಾಕದಿದ್ದರೆ ಈಗಿನ ಪುರುಷಾರ್ಥ - ಹೀನ ಶಿಕ್ಷಣ ನಿಲ್ಲುವಂತಿಲ್ಲ ದೇವರ ದಯೆ ಯಿಂದ ಈ ಹಾಳು ಶಿಕ್ಷಣ ಇನ್ನೂ ದೇಶದಲ್ಲಿ ಪೂರಾ ವ್ಯಾಪಿಸಿಲ್ಲ. ಹಳೆಯ ಶಿಕ್ಷಣ ನಡೆಯುತ್ತಿರುವ ವರೆಗೂ ಹಳೆಯ ರಾಜ್ಯವೇ ನಡೆಯು ತ್ತಿದೆ ಎನ್ನಬೇಕು. ಅಹಿಂಸೆಯನ್ನು ಒಪ್ಪದ ಪರಾಕ್ರಮಣಕಾರಿ ರಾಷ್ಟ್ರಗಳು ಕೂಡ ರಚನಾತ್ಮಕ ಕೆಲಸವನ್ನು ಹೆಚ್ಚಾಗಿ ಮಾಡುತ್ತವೆ. ನಾವು ಅಹಿಂಸಾವಾದಿಗಳು. ಇವೊತ್ತಿನ ಪದ್ಧತಿಯನ್ನು ಕೂಡಲೇ ಬದಲಿಸಬೇಕು ದಿನವೂ ಕೆಲಸ ಮಾಡಬೇಕು.'

**ಸರ್ವೋದಯ ತತ್ವಜ್ಞಾನ**. ಕಟ್ಟಕಡೆಯಲ್ಲಿ ಸರ್ವೋ ದಯದ ಬಗ್ಗೆ ಸ್ವಲ್ಪದರಲ್ಲಿ ಹೇಳಬೇಕು ಎಂದು ಈ ಗೆಳೆಯರು ಅಪೇಕ್ಷಿಸಿದ್ದರು. ವಿನೋಬಾ ಹೇಳಿದರು : ' ಅರ್ಥಶಾಸ್ತ್ರ ಎಂಬುದು ನಿರಪೇಕ್ಷ ವಿಜ್ಞಾನ ಶಾಸ್ತ್ರವಲ್ಲ. ಗಣಿತದ ಹಾಗೆ ನಿತ್ಯ - ಸಿದ್ಧಾಂತ ವಲ್ಲ. ಸಮಾಜದ ಸ್ಥಿತಿಯಂತೆ ಅದು ಬದಲುತ್ತಾ ಹೋಗುತ್ತದೆ. ಹಿಂದುಸ್ತಾನದ ಹಳ್ಳಿಗಳು ತಮ್ಮ ಕಾಲಿನ ಮೇಲೇ ನಿಂತಿವೆ. ಈ ತಾರು ಮಾರುಗಳಿಂದ ಅದನ್ನು ಎಷ್ಟು ಸಾಧ್ಯವೋ ಅಷ್ಟು ಕಾಪಾ ಡೋಣ. ಅದಕ್ಕೆ ಯಾವ ಸಿದ್ಧವಸ್ತು ಬೇಕೋ, ಯಾವುದಕ್ಕೆ ಕಚ್ಚಾಮಾಲು ಅಲ್ಲಿ ಬೆಳೆಯುತ್ತದೋ, ಅದನ್ನು ಅಲ್ಲಿಯೇ ಆ ಹಳ್ಳಿಯೇ ಸಿದ್ಧಮಾಡಲಿ. ಯಂತ್ರಗಳು ಇರುವುದೇ ಆದರೆ, ಅವು ಸಮಾಜದ ಅಧಿಕಾರಕ್ಕೆ ಒಳಪಟ್ಟಿರಲಿ. ಹುಟ್ಟುವಳಿ, ಹಂಚಿಕೆಗಳ ನಡುವೆ ಯಾವ (ಏಜನ್ಸಿ) ದಲಾಳಿಯೂ ಬೇಡ. ನಾವು ಅಹಿಂಸಕ ಸಮಾಜ ರಚನೆ ಮಾಡುವವರು. ನಡುವಿನ ದಲಾಳಿಯಿಂದ ನಮ್ಮ ಕೆಲಸ ನಡೆಯದು. ಆದ್ದರಿಂದ ನಮಗೆ ಗ್ರಾಮೋದ್ಯೋಗಗಳಿರಲಿ. ಎಲ್ಲರಿಗೂ

ಕೆಲಸ, ಎಲ್ಲರಿಗೂ ಅನ್ನ ಸಿಗಲಿ. ದೇಶದ ಯೋಜನೆ ಒಂದು ಕುಟುಂಬದ ರೀತಿಯಲ್ಲಿ ಆಗಲಿ. ಆದ್ದರಿಂದ ಎಲ್ಲರಿಗೂ ಕೆಲಸ ಕೊಡಲು ರಾಟೆ ಅನುಕೂಲವಾದರೆ ಅದನ್ನೇ ಕೊಡಿ. ನಾನು ರಾಟೆಯ ಮಾತೆತ್ತಿ, ದೇಶಕ್ಕೆ ಕೆಲಸ - ಕವಳ ಕೊಡುವ ಮಾತನ್ನು ಒತ್ತಾಯ ಮಾಡಿದಾಗ, ರಾಷ್ಟ್ರೀಯ ಯೋಜನಾ ಸಮಿತಿ 'ನಮ್ಮದು ಪೂರ್ಣಯೋಜನೆಯಲ್ಲ, ಆಂಶಿಕ ಯೋಜನೆ' ಎನ್ನುತ್ತದೆ. ಆಗ, ನಾನು ಸರ್ವೋದಯ ದೃಷ್ಟಿಯಿಂದ ರಾಷ್ಟ್ರೀಯ ಯೋಜನೆಯ ಮಾತು ಆಡುತ್ತೇನೆ; ನಿಮಗೆ ಅದು ಅಸಾಧ್ಯ ಎನಿಸಿದರೆ ಕೂಡಲೆ ನಾನು ಕಮ್ಯೂನಿಸ್ಟ್ ಆಗುತ್ತೇನೆ. ನೀವು ಆಂಶಿಕ ಯೋಜನೆ ಮಾಡುವುದೇ ಆದರೆ ದಾರಿದ್ರ್ಯದ ಅಂಶವನ್ನು ನೋಡಿ ಎನ್ನುತ್ತೇನೆ. ನಿಮ್ಮದು ಪಾರ್ಷಲ್ ಪ್ಲಾನಿಂಗ್ ಆದರ, ಪಾರ್ಷಿಯಾಲಿಟಿ ಪ್ಲಾನಿಂಗ್ ಆಗಲಿ. ಬಡವರಿಗೆ ಪಾರ್ಷಿಯಾಲಿಟಿ ತೋರಿಸಿ ಎನ್ನುತ್ತೇನೆ. ಇದೇ ಸ್ವಲ್ಪದರಲ್ಲಿ ಸರ್ವೋದಯ.'

**ಸೋದರಿಯರಿಗೂ ಶಸ್ತ್ರ. ಸತ್ಯಾಗ್ರಹ:** ಹಲವರು ತಂಗಿಯರು ಭೇಟಿಗೆ ಬಂದಿದ್ದರು. ವಿನೋಬಾ ಅವರಿಗೆ ಪರದಾ ಮುಂತಾದ ವಿಷಯ ತಿಳಿಸಿದರು ಹೆಂಗಸರ ಜಾಗೃತಿಯ ನಮ್ಮ ಕೆಲಸವನ್ನು ನಾವೇ ಮಾಡಬೇಕ, ಗಂಡಸರ ಸಹಕಾರ ಪಡೆಯ ಬೇಕೆ, ಎಂದು ಒಬ್ಬ ತಂಗಿ ಕೇಳಿದಳು. ವಿನೋಬಾ ಹೇಳಿದರು: 'ಸಾಧ್ಯವಾದಷ್ಟೂ, ಹೆಂಗಸರ ಕೆಲಸ ಹೆಂಗಸರಿಂದಲೇ ಆಗಲಿ ಎಂದು ನನ್ನ ಆಸೆ. ಇನ್ನೂ ಮುಂಬರಿದು, ನಾವು ಮೂಲಶಿಕ್ಷಣ ಎನ್ನುವುದೆಲ್ಲವೂ ಹೆಂಗಸರ ಕೈಯಲ್ಲೇ ಇರಲಿ ಎನ್ನುವವನು ನಾನು.'

'ನಮ್ಮ ಕೆಲಸ ನಡೆದಲ್ಲಿ ಗಂಡಸರಿಂದ ಅಡ್ಡಿ ಬರುತ್ತವೆ. ಆಗ ಏನು ಮಾಡಬೇಕು?' ಒಬ್ಬಳ ಪ್ರಶ್ನೆ.

'ಸತ್ಯಾಗ್ರಹ ಮಾಡಬೇಕು. ನಿಮ್ಮ ಹೃದಯದಲ್ಲಿ ಪ್ರೇಮ

ವಂತೂ ಇದ್ದೇ ಇದೆ. ಆಗ್ರಹ ಮಾಡುವುದೊಂದೇ ಬಾಕಿ'

ರಾಷ್ಟ್ರೀಯ ಸ್ವಯಂ ಸೇವಕ ಸಂಘದವರಿಗೆ ಹೇಳಿದರು: 'ಮಾನವತೆಯನ್ನು ಹೋಳು ಮಾಡುವ ಸೇವೆ ನಮಗೆ ಅಸಹ್ಯವಾಗ ಬೇಕು. ಇವೊತ್ತು ಹಿಂದೂ, ಮುಸ್ಲಿಂ ಇಬ್ಬರೂ ದುಃಖಿಗಳು. ಚಳಿಯ ಬಾಧೆಗೆ ಇಬ್ಬರಿಗೂ ಕಂಬಳಿ ಬೇಕು. ಅಂಥ ಹೊತ್ತಿನಲ್ಲಿ ಬರೀ ಮುಸಲ್ಮಾನರಿಗೆ, ಬರೀ ಹಿಂದೂಗಳಿಗೆ ಎಂದು ಯಾರಾದರೂ ಕಂಬಳಿ ಕೊಟ್ಟರೆ ನಾನವನನ್ನೂ ಬಿಸುಟೇನು. ಬರೀ ಸೇವಾವೃತ್ತಿ ಸಾಲದು. ಜತೆಗೆ, ನಾನು ಪರಿಶುದ್ಧ ಆತ್ಮ ಎಂಬ ತಿಳಿವೂ ಬೇಕು. ನನ್ನ ಮೈ ಬ್ರಾಹ್ಮಣನದಾಗಲಿ ಶೂದ್ರನದಾಗಲಿ, ಗಂಡು ಆಗಲಿ ಹೆಣ್ಣು ಆಗಲಿ, ಅದೇ ಬೇರೆ – ನಾನೇ ಬೇರೆ ಈ ದೇಹ ನನ್ನದು ಎಂದರೆ ನನ್ನ ಶಕ್ತಿಯೆಲ್ಲ ಛಿನ್ನ – ಭಿನ್ನವಾದೀತು. ನನ್ನೊಳಗಿರುವ ಅನಂತ ಶಕ್ತಿಯನ್ನು ಕಳೆದುಕೊಂಡು ನಾನು ಅಂತವಂತ ಶಕ್ತಿಯವನಾದೇನು. ನಮ್ಮ ಸಂಸ್ಥೆ ದೊಡ್ಡದು; ಆದರೂ ಮುಸಲ್ಮಾನರು ನಮ್ಮನ್ನು ನಾಶ ಮಾಡಿಯಾರು ಎಂಬ ಅಂಜಿಕೆ ನಮಗಿದೆ. ನಮಗೆ ಪಾಕಿಸ್ತಾನದ್ದು, ಪಾಕಿಸ್ತಾನಕ್ಕೆ ನಮ್ಮದು ಅಂಜಿಕೆ ಸದಾ ಇದ್ದೇ ಇದೆ. ಹಿಂದೂ ಧರ್ಮ ಎಷ್ಟು ಬಲಿಷ್ಠವೋ ಇತಿಹಾಸವೇ ಸಾಕ್ಷಿ ಇವೊತ್ತು ಈ ಅಂಜಿಕೆಯೇ ನಮ್ಮನ್ನು ಅಂಜಿಸುತ್ತಿದೆ. ಸ್ವಲ್ಪ ಮುಸಲ್ಮಾನರೊಡನೆ ಕೈ ಕುಲುಕಿಸಿ. ಇದಿರಿನ ಕೈಗೆ ಕಲಿಸದೆ ಕೈಯಲ್ಲಿ ದೊಣ್ಣೆ ಹಿಡಿದವನಿಗೆ ಎಂದಿಗೂ ನಿರ್ಭಯವಿಲ್ಲ. ಮುಸಲ್ಮಾನರ ಗೆಳೆತನ ಮಾಡಿ. ಅವರಿಗೂ ನಿಮ್ಮಂತೆ ಪ್ರೀತಿ–ದಾಹವಿರುವುದು ಕಾಣುತ್ತದೆ. ನಿಮಗಾದಂತೆಯೆ ಅವರ ಹೃದಯಕ್ಕೂ ಪ್ರೇಮಸ್ಪರ್ಶವಾಗುತ್ತದೆ. ಅವರೂ ತಮ್ಮ ಮಕ್ಕಳು ಮರಿಯನ್ನು ಪ್ರೀತಿಸುತ್ತಾರೆ. ದೇವರು ಯಾವೊಂದು ಸಮಾಜವನ್ನೂ ಕ್ರೂರವಾಗಿ ಮಾಡಿಲ್ಲ. ಮುಸಲ್ಮಾನರೆಲ್ಲ ಕ್ರೂರಿಗಳು ಎಂದರೆ ದೇವರನ್ನೇ ದೂರಿದಂತೆ. ಹಿಂದುಸ್ತಾನಕ್ಕೆ ಯಾವಾಗಲೂ

ಯಾರದೂ ಅಂಜಿಕೆಯಿರಲಿಲ್ಲ. ಯಾರೂ ಅದನ್ನು ನಾಶಗೊಳಿಸ ಲಾರರು. ನಮಗೆ ನಿಷ್ಠೆಯಿಲ್ಲ, ಔದಾರ್ಯವಿಲ್ಲ. ಸುಧಾರಣೆ ಮಾಡುವುದಿಲ್ಲ. ಧೈರ್ಯವಾಗಿ ಇತರರ ಬಳಿ ಹೋಗುವುದಿಲ್ಲ. ಆದರಿಂದಲೇ ಇವೊತ್ತಿನ ದುರ್ದಶೆ.'

ರಾ. ಸ್ವ. ಸಂಘಕ್ಕೆ ಇಷ್ಟು ಸ್ಪಷ್ಟವಾಗಿ ಹೇಳಬಲ್ಲವರು ವಿನೋಬಾಜೀಯೊಬ್ಬರೇ ಅನಿಸುತ್ತದೆ.

೯ ತಾರೀಕಿಗೆ ಬುದ್ಧ ಜಯಂತಿ. ಆವೊತ್ತು ಉತ್ತರ ಪ್ರದೇಶದ ರಾಜಧಾನಿ ವಿನೋಬಾ ವಾಣಿಯನ್ನು ಕೇಳಿತು. ಬುದ್ಧನ ವಾಣಿ ಯನ್ನು ಕೇಳುತ್ತಿದೇವೋ ಎನಿಸಿತು. ಧರ್ಮಚಕ್ರ ಪ್ರವರ್ತನೆ ಮೊದ ಲಿಡುತ್ತ ಬುದ್ದ ಹೇಳಿದ್ದ : 'ಹಗೆಯಿಂದ ಹಗೆ ನಂದದು.' ಆ ದಿನದ ಭಾಷಣ ಅಪ್ರತಿಮವಾಗಿತ್ತು.

## ೨೦. ಧನ್ಯ ಕಾನ್ಪುರ

ಕಾನ್ಪುರ ಜಿಲ್ಲೆಯಂತೂ ಇಡೀ ಉತ್ತರ ಪ್ರದೇಶಕ್ಕೇ ಒಂದು ಮೇಲ್ಪಂಗ್ತಿ ಹಾಕಿತು. ಎರಡು ತಿಂಗಳಿಂದ ವ್ಯವಸ್ಥಿತವಾಗಿ ನಿರಂತರವೂ ಅಲ್ಲಿ ಕೆಲಸ ನಡೆಯಿತು. ಕೆಲವರು ಕಾನ್ಪುರದ ಗೆಳೆಯರು ಮಥುರಾ ಸಮ್ಮೇಳನಕ್ಕೆ ಬಂದಿದ್ದರು. ಕೆಲಸದ ಪ್ರಾರಂಭ ಪವಂಯಾ ಸಮ್ಮೇಳನದ ತರುವಾಯವೇ. ಜನವರಿ ೧೭ ರ ಮೇಲೆ. ಶಿವನಾರಾಯಣ ಟಂಡನ್ ಪವಂಯಾ ಸಮ್ಮೇಳನಕ್ಕೆ ಬಂದಿದ್ದರು. ಅಲ್ಲಿ ವಿನೋಬಾ ಭಾಷಣದ ಪರಿಣಾಮದಿಂದ ಭೂದಾನದ ಮಾತು ಪೂರಾ ನೆಟ್ಟುಹೋಯಿತು. ಕಾನ್ಪುರಕ್ಕೆ ಬಂದಮೇಲೆ ಎಲ್ಲಾ ಪಕ್ಷಗಳ ಕೆಲಸಗಾರರನ್ನೂ ಸೇರಿಸಿಕೊಂಡು ಕೆಲಸ ಮಾಡಿದರು. ತಾಲೂಕು ತಾಲೂಕಿಗೂ ತುಕಡಿಗಳಾದುವು. ಪ್ರತಿಯೊಬ್ಬ ಕೆಲಸಗಾರನೂ ತನಗೆ ತಿಳಿದವರ ಬಳಿ ಹೋಗಲು ಪ್ರಯತ್ನಿಸಿದ. ಸಾಹಿತ್ಯ, ಹಾಡು, ಭಾಷಣ, ಎಲ್ಲಕ್ಕಿಂತ ಹೆಚ್ಚಾಗಿ ಭೇಟಿ ಇವುಗಳ ಮೂಲಕ ಇಡೀ ಜಿಲ್ಲೆಯಲ್ಲಿ ಪ್ರಚಾರವಾಯಿತು.

ಕೆಲವರು ಕೆಲಸಗಾರರು ಕಾಲ್ನಡಿಗೆ ಯಾತ್ರೆಯನ್ನೂ ಮೊದಲಿಟ್ಟರು. ಒಂದು ಸುವ್ಯವಸ್ಥಿತ ರೂಪ ಬಂತು ಈ ಚಳುವಳಿಗೆ. ಇದರಿಂದ, ವಿನೋಬಾಜೀ ಕಾನ್‌ಪುರದಲ್ಲಿ ಕಾಲಿಟ್ಟ ದಿನವೇ ಅಲ್ಲಿನ ಗೆಳೆಯರು ಆ ಜಿಲ್ಲೆಯ ಪಾಲಿನ ೧೦ ಸಾವಿರ ಎಕರೆಯ ಬದಲು ೧೦,೮೦೦ ಎಕರೆ ಹೊಲವನ್ನು ವಿನೋಬಾಜೀಗೆ ಸಮರ್ಪಿಸಿದರು. ಜಿಲ್ಲೆಯ ಪಾಲಿನದನ್ನು ಪೂರಾ ಮೊದಲನೆ ದಿನವೇ ನೀಡಿದ ಪ್ರಸಂಗ ಇದೇ ಮೊದಲು.

ಕಾನ್‌ಪುರ ಪ್ರವೇಶದ ಆ ದಿನದ ನೋಟವೂ ಅತ್ಯದ್ಭುತ.

ಐದು ಮೈಲಿ ದೂರಕ್ಕೆ ವಿನೋಬಾ ದರ್ಶನಕ್ಕಾಗಿ ಜನರು ಬಂದಿದ್ದರು. ಗಂಗಾನದಿ ದಾಟುವ ಎಡೆಯಲ್ಲಿ ಅಪಾರ ಜನಸ್ತೋಮ ಸೇರಿತ್ತು. ಅಲ್ಲಿಂದ ಬಿಡಾರಕ್ಕೆ ಮೂರು ಮೈಲಿ. ಊರಿನ ಜನ ಸಾವಿರಾರು ಮಂದಿ ಬಂದಿದ್ದರು. ಮೊದಲು ನಾಲ್ವರು ಕುದುರೆ ಸವಾರರು, ಅವರ ಹಿಂದೆ ಸ್ತ್ರೀ ಸ್ವಯಂಸೇವಕಿಯರು, ಆಮೇಲೆ ಊರಿನ ಜನ. ದಾರಿಯುದ್ದಕ್ಕೂ ಭಾವಪೂರ್ಣ ಸ್ವಾಗತ, ಆರತಿ, ಹೂಹಾರ, ಮಂಗಲಗೀತೆ, ಹೂಮಳೆ ಎಲ್ಲವೂ ವಿಶೇಷವಾಗಿದ್ದವು. ವಿನೋಬಾಜೀ ಎಲ್ಲರ ಕೈಯಿಂದಲೂ ಹಾರ ತೆಗೆದುಕೊಳ್ಳುತ್ತಾರೆ. ಆವೊತ್ತು ಹೂಮಾಲೆ ಹೊರೆ ಹೊರೆಯಾಗಿ ಉಳಿದವರ ಕೈಯಿಂದ ಅದನ್ನು ತೆಗೆದುಕೊಳ್ಳಲು ಸಾಧ್ಯವೇ ಇಲ್ಲವಾಯಿತು. ಸೂರ್ಯನಿಗೆ ದೂರ ದಿಂದಲೇ ಅರ್ಘ್ಯ ಕೊಟ್ಟು ಸಂತೋಷಪಡುವಂತೆ, ತಾವು ನಿಂತ ಲ್ಲಿಂದಲೇ ಜನ ವಿನೋಬಾಗೆ ಹಾರವನ್ನು ಸಮರ್ಪಿಸಿದರು, ಸಮಾ ಧಾನಗೊಂಡರು.

ಕಾನ್‌ಪುರದಲ್ಲಿ ವಿನೋಬಾಜೀ ಎರಡು ದಿನ ಇದ್ದರು. ಎರಡೂ ದಿನ ಒಂದೊಂದು ಗಳಿಗೆಯನ್ನೂ ಕೆಲಸಗಾರರು ಬಳಸಿಕೊಂಡರು. ಅವರು ಅಲ್ಲಿಂದ ಕದಲದೆಯೇ ಎಷ್ಟೋ ಕೆಲಸ ಆಯಿತು. ಸಮಾಜದ ನಾನಾ ವರ್ಗಗಳ ಜನರೊಡನೆ ವೈಯಕ್ತಿಕ, ಸಾಮೂಹಿಕ ಭೇಟಿ ಯಾಯಿತು. ಅವರೆಲ್ಲರ ಮೂಲಕ ಸಮಾಜದ ಸುಖ ದುಃಖ ವಿನೋಬಾಜೀಗೆ ತಿಳಿಯಲಿ ಎಂದು ಉದ್ದೇಶ. ಎಲ್ಲರಿಗೂ ಭೂದಾನ ಯಜ್ಞದಲ್ಲಿ ಸಾನುಭೂತಿ ಹುಟ್ಟಲಿ ಎಂದು. ಹಾಗೇ ಆಯಿತು. ಭೇಟಿಗೆ ಬಂದವರೆಲ್ಲ ಆ ಕಾಲಪುರುಷನ ಬೇಡಿಕೆಗೆ ಪೂರ್ಣ ಸಹಾನು ಭೂತಿ ತೋರಿದರು. ಸಹಕಾರದ ಭರವಸೆ ಕೊಟ್ಟರು.

**ಪ್ರತಿಯೊಂದೂ ಸರ್ವ ಸಮ್ಮತಿಯಿಂದ :** ಜಿಲ್ಲಾಬೋರ್ಡು ಕಟ್ಟಲಿದ್ದ ಹರಿಜನ ಬಸದಿಯ ಶಂಕುಸ್ಥಾಪನೆ ವಿನೋಬಾಜಿಯ

ಬಿಡಾರದಲ್ಲಿಯೇ ನಡೆಯಿತು. ಅಭಿವೃದ್ಧಿ ಸಮಿತಿಯ ಅಧ್ಯಕ್ಷ ವಿನೋಬಾಜೀಗೆ ಬಿನ್ನವತ್ತಳೆ ಕೊಡುತ್ತ, 'ನಮ್ಮ ಬೋರ್ಡಿನಲ್ಲಿ ಮತ ಭೇದವಿಲ್ಲವೆಂದಲ್ಲ. ಬೇಕಾದಷ್ಟು ಚರ್ಚೆ ಮಾಡುತ್ತೇವೆ. ಕಡೆಗೆ ಸರ್ವಸಮ್ಮತವಾಗಿ ತೀರ್ಮಾನ ಮಾಡುತ್ತೇವೆ' ಎಂದರು.

ಹರಿಜನ ಬಸದಿಯ ಯೋಜನೆಗಾಗಿ ಜಿಲ್ಲಾಬೋರ್ಡನ್ನು ಪ್ರಶಂಸಿಸುತ್ತ ವಿನೋಬಾ ಹೇಳಿದರು: 'ನಿಮ್ಮ ನಗರದ ಪ್ರತಿಷ್ಠೆ ಭಾರಿ ಮನೆಗಳಲ್ಲಿಲ್ಲ, ಈ ಬಡ ಹರಿಜನರ ಮನೆಗಳಲ್ಲಿ ಯಾರಿಗೆ ಸ್ವಂತ ಶಕ್ತಿಯಿಲ್ಲವೋ ಅವನಿಗೆ ದೇವರೆ ಬಲ. ಅಂಥವರ ಸೇವೆ ಮಾಡಿದರೆ ದೇವರ ಕೃಪೆ ನಮ್ಮ ಮೇಲೆ ಇರುತ್ತದೆ. ನಮ್ಮ ಮೈಯಲ್ಲಿ ಎಲ್ಲಕ್ಕಿಂತ ದುರ್ಬಲವಾದ ಅವಯುವವೇ ನಮ್ಮ ಬಲ. ಭಂಗಿ ನಮ್ಮ ಹೃದಯ. ಅದೇ ಭಗ್ನವಾದರೆ ಸಮಾಜವೂ ಒಂದು ದಿನ ಭಗ್ನ ವಾದೀತು. ಸರಪಳಿಯಲ್ಲಿ ಗಟ್ಟಿಯಿಲ್ಲದ ಕೊಂಡಿಯೇ ಅದರ ಬಲದ ಗುರುತು. ಅದು ಮುರಿಯಿತೋ ಸರಪಳಿಯೇ ಮುರಿಯಿತು.'

ಸರ್ವ ಸಮ್ಮತಿಯ ನಿರ್ಣಯಗಳ ಬಗ್ಗೆ 'ಇದನ್ನೆ ಪಂಚ ಪರಮೇಶ್ವರ ಎಂಬುದು. ಈಗಂತೂ ಮೂವರೇ ಮಹಾದೇವ ಎಂದಾಗಿದೆ. ಇರುವ ಐವರೂ ಒಂದೇ ಮುಖವಾಗಿ, ಒಂದೇ ಮಾತಿನಿಂದ ನ್ಯಾಯದಾನ ಮಾಡಲಿ ಎಂಬುದು ಪಂಚ ಪರಮೇಶ್ವರದ ಅರ್ಥ. ಹೀಗೆ ಆಗುವ ತನಕ ಬಹುಸಂಖ್ಯೆ–ಅಲ್ಪಸಂಖ್ಯೆಯ ಜಗಳ ಹರಿಯಲೇ ಹರಿಯದು. ಮೊದಲು ಹೀಗೆ ಪಕ್ಷಗಳು ಇರುತ್ತಿರಲಿಲ್ಲ. ಪಶ್ಚಿಮದ ಪ್ರಜಾಧರ್ಮ - ಡೆಮಾಕ್ರಸಿಯ ಜತೆಗೆ ನಮಗೆ ಈ ಅಭಿ ಶಾಪವೂ ಬಂತು.'

**ರಾಜಕೀಯದ ಮರ್ಮ** : ಸಂಜೆಗೆ ಪ್ರಾರ್ಥನೆಯಲ್ಲಿ : 'ಈಗ ರಾಜಕೀಯದಲ್ಲಿ ತಿಳಿಯಬೇಕಾದುದು ಏನಾದರೂ ಇದ್ದರೆ, ಅದು ಎಲ್ಲರ ಶಕ್ತಿಯನ್ನೂ ಸಂಯೋಗ ಮಾಡುವ ಅಗತ್ಯ. ಎಲ್ಲರೂ

ಹಿಂದಾಗುವಂತೆ ಮಾಡುವುದು ಅಗತ್ಯ. ನಮ್ಮ ದೇಶದ ಸಮಸ್ಯೆಯೆಂದರೆ ಒಳಜಗಳ. ನಮ್ಮ ದೇಶ ಬಹಳ ದೊಡ್ಡದು. ಇಲ್ಲಿ ಹೃದಯ–ಸಾಮರಸ್ಯ ಬಹಳ ಅಗತ್ಯ. ಸಮಾಜ ರಚನೆಯ ಮೂಲ ಸಿದ್ಧಾಂತವನ್ನು ತಿಳಿಸುತ್ತೇನೆ, ಕೇಳಿ. ಹಳ್ಳಿಯ ಆಡಳಿತ ನೂರಕ್ಕೆ ೭೭ ಪಾಲು ಅಲ್ಲೇ ಇರಬೇಕು. ಅದೂ ಪಂಚ ಪರಮೇಶ್ವರ ನಿಯಮದಂತೆ ಆಗಬೇಕು. ಯಾವ ರೂಪಿನಿಂದಲೇ ಆಗಲಿ ನಾವು ಪ್ರಜೆಯಲ್ಲಿ ಪಕ್ಷಗಳಿಗೆ ಅವಕಾಶ ಕೊಡಲಾಗದು. ಹಳ್ಳಿಯ ಏಕ ಮಾರ್ಗವನ್ನು ಸ್ಥಿರಗೊಳಿಸಬೇಕು. ಇವೊತ್ತು, ಎಲ್ಲಾ ಶಕ್ತಿಗಳ ಮೇಲನವೇ ರಾಜಕೀಯ ಎಂದೇನು. 'ಶಕ್ತಿ ಸಂವರ್ಧನ'ವೇ ರಾಜಕಾರ್ಯ. ದೇಶದ ಸಮಸ್ತ ವಿಚಾರ ಶಕ್ತಿಯನ್ನು ಯಾರು ಒಂದು ವಿಷಯದ ಬಗ್ಗೆ ಏಕಾಗ್ರವಾಗಿಸಿದರೂ ಅದೇ ಉತ್ತಮ ರಾಜಕೀಯ. ಈಗ ನಾನು ಮಾಡುತ್ತಿರುವ ಭೂದಾನದ ಕೆಲಸ ದೇಶದ ಎಲ್ಲಾ ವಿಚಾರ ಶಕ್ತಿಯನ್ನೂ ಏಕಾಗ್ರಮಾಡಲು ಸಮರ್ಥವಾಗಿದೆ.'

ಜಿಲ್ಲೆಯಲ್ಲಿ ಕಾಲಿಟ್ಟ ಮೊದಲ ದಿನವೇ ೧೦ ಸಾವಿರಕ್ಕಿಂತ ಹೆಚ್ಚು ಭೂದಾನ ಕೊಟ್ಟಿದ್ದಕ್ಕಾಗಿ ಕಾನ್ಪುರವನ್ನು ಪ್ರಶಂಸಿಸಿ. 'ಈ ೧೦ ಸಾವಿರ ಎಕರೆ ೨ ಸಾವಿರ ಕುಟುಂಬಗಳಿಗೆ ಹಂಚಿ ಹೋಗುತ್ತದೆ. ಈ ೨ ಸಾವಿರ ಕುಟುಂಬಗಳಿಗೆ ೨ ಸಾವಿರ ಎತ್ತಿನ ಜತೆಗಳನ್ನು ಕಾನಪುರದ ಗೆಳೆಯರು ನೀಡಿಯಾರೆಂದು ನನ್ನ ಆಸೆ. ಕಾನ್‌ಪುರ ದೇಶದ ಸಪ್ತ ಮಹಾಪುರಗಳಲ್ಲಿ ಒಂದು. ಇದಕ್ಕೆ ಇದೇನು ಕಠಿನ ಕೆಲಸವಲ್ಲ. ಇವೊತ್ತು ಒಂದು ಎತ್ತಿನ ಜತೆಗೆ ಕನಿಷ್ಠಪಕ್ಷ ಐದು ನೂರು ರೂಪಾಯಿ ಬೇಕು. ಎಂದರೆ ೨ ಸಾವಿರ ಜತೆಗೆ ಕನಿಷ್ಠ ೧೦ ಲಕ್ಷ ರೂಪಾಯಿ ಬೇಕು' ಎಂದರು.

ಕಾನಪುರದ ಪರವಾಗಿ ಶ್ರೀ ಶಿವನಾರಾಯಣಜೀ ಟಂಡನ್ ಎದ್ದು ನಿಂತು 'ಗುರುವೆ, ಕಾನಪುರ ತಮ್ಮ ಬೇಡಿಕೆಗೆ ಅಸ್ತುವೆನ್ನು

ತ್ತದೆ. ತಮ್ಮ ಅಪ್ಪಣೆಯ ಪ್ರಕಾರ ನಾವು ಕಾನ್‌ಪುರದವರು ೨ ಸಾವಿರ ಜತೆ ಎತ್ತನ್ನು ಕೊಡುತ್ತೇವೆ, ಕೊಡುತ್ತೇವೆ, ಕೊಡುತ್ತೇವೆ.'

ಇಡೀ ವಾತಾವರಣ ಚಪ್ಪಾಳೆಗಳಲ್ಲಿ, ಭೂದಾನ ಯಜ್ಞ—ಅದರ ಜನಕ ಆಚಾರ್ಯ ವಿನೋಬಾಜಿಯ ಜಯ ಜಯ ಧ್ವನಿಗಳಲ್ಲಿ ಮುಳುಗಿ ಹೋಯಿತು.

ಯಾರಿಗೆ ಬಾವಿ ಬೇಕಾಗುತ್ತದೆಯೋ ಅವರಿಗೆ ಬಾವಿಯನ್ನೂ ತೆಗೆಸಿಕೊಡುತ್ತೇವೆ ಎಂದು ಶಿವನಾರಾಯಣಜೀ ಭರವಸೆ ಕೊಟ್ಟರು.

ಇದೆಲ್ಲಕ್ಕಿಂತಲೂ ಮಹತ್ವದ ಮತ್ತೊಂದು ಘಟನೆಗೆ ಸನ್ನಾಹ ಮಾಡಿಕೊಳ್ಳುತ್ತಿತ್ತು ಕಾನ್‌ಪುರ. ಜಿಲ್ಲೆಯ ಕಟ್ಟಕಡೆಯ ಬಿಡಾರ-ಪುಖರಾಯಾಂದಲ್ಲಿ ಭೂಮಿಯ ಹಂಚಿಕೆಯ ಕಾರ್ಯಕ್ರಮವನ್ನು ಏರ್ಪಡಿಸಿದ್ದರು.

**ಆ ನೋಟ** : ಪುಖರಾಯಾಂದಲ್ಲಿ ದೊರೆತ ಹೊಲವನ್ನು ಎರಡು ಹಳ್ಳಿಗಳಿಗೆ ಹಂಚಿದರು ವಿನೋಬಾ. ಅಲ್ಲಿಗೆ ಎರಡೂವರೆ ಮೈಲಿ ದೂರದ ಸುನರ್‌ಪುರ (ಈಗ ಸುಂದರಪುರ)ಕ್ಕೆ ತಾವೇ ಹೋಗಿ ವಿನೋಬಾಜೀ ಹೊಲವನ್ನು ನೋಡಿ ಬಂದರು. ಬಹಳ ಸೊಗಸಾದ ಹೊಲ. ಸಹಕಾರ ಕ್ಷೇತ್ರದ ಮೂಲಕ ಅದರ ಬೇಸಾಯ ನಡೆದಿತ್ತು. ಆ ಹೊಲ ಪಡೆದವರು ಭಾಗ್ಯಶಾಲಿಗಳು. ಏಕೆಂದರೆ, ಅದಕ್ಕೆ ಕಾಲುವೆ ನೀರು ಹರಿಯುತ್ತದೆ. ಡಂಗೂರ ಹೊಡೆದು ಹಳ್ಳಿಯ ಜನರೆಲ್ಲರನ್ನೂ ಸಭೆ ಸೇರಿಸಿದರು. ಎಲ್ಲರ ಸಮಕ್ಷಮ ಭೂಮಿಹೀನರನ್ನು ಆರಿಸ ಲಾಯ್ತು.

ಎಲ್ಲರ ಅಭಿಪ್ರಾಯದಂತೆ, ಸುಂದರಪುರದಲ್ಲಿ ಹೊಲವಿಲ್ಲದ ಕುಟುಂಬ ನಾಲ್ಕೇ ಎಂದು ತೀರ್ಮಾನವಾಯಿತು. ಹೊಲವೂ ನಾಲ್ಕು ಕುಟುಂಬಕ್ಕೆ ಆಗುವಷ್ಟಿತ್ತು. ಪುಖರಾಯಾಂದಲ್ಲಿ ಎಂಟು ಜನ ಭೂಮಿಹೀನರು ದೊರೆತರು. ಆದರೆ ಹೊಲ ಮಾತ್ರ ಇಬ್ಬರಿ

ಗಾಗುವಷ್ಟೇ ಇತ್ತು. ಆ ಎಂಟೂ ಜನರನ್ನು ವಿನೋಬಾಜೀ ಇದಿರಿಗೆ ಕೂಡಿಸಿಕೊಂಡರು. ಒಬ್ಬೊಬ್ಬನ ಬಳಿಯಲ್ಲೂ ತಾವೇ ಹೋಗಿ ಕುಳಿತು ಮಾತಾಡಿದರು. ಅವರೊಳಗೆ ಹೆಚ್ಚು ಬಡವರು ಯಾರು ಎಂಬುದನ್ನು ಅವರ ಬಾಯಿಂದಲೇ ಹೊರಡಿಸಿದರು. ದರಿದ್ರ ನಾರಾಯಣನ ವಕೀಲಿ ಮಾಡುವ ಅವರ ಪ್ರತಿನಿಧಿ ತನ್ನ ಉಪಾಸ್ಯ ದೇವತೆಯ ಅರ್ಧ ನಗ್ನ ಜರ್ಜರ ಶರೀರವನ್ನು ಸವರುತ್ತಲಿದ್ದುದನ್ನು ಜನರು ಕಣ್ಣಾರೆ ಕಂಡರು. ಧೂಳು ತುಂಬಿದ ಅಂಗಳದಲ್ಲಿ ಕುಳಿತು ಅವರ ಹೃದಯಾಂತರಾಳವನ್ನು ತನ್ನ ಕಣ್ಣಿಂದ ಮುಟ್ಟಿದಂತಿತ್ತು. ಅವರ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಅವರ ಸುಖದುಃಖವನ್ನು ಚರ್ಚಿಸಿದರು. ಅವರ ಹೃದಯದೊಳಗೆ ಹೊಕ್ಕರು. ಮಾತಾಡುತ್ತಾ ಒಬ್ಬ ಹರಿಜನ ತಮ್ಮನ ಬಳಿಗೆ ಹೋದರು. ಅವನ ಸ್ಥಿತಿಗತಿ ವಿಚಾರಿಸಿದರು ಅವನು ಗದ್ಗದನಾಗಿ ' ಮಹಾರಾಜ, ನಾನು ಹೇಗಾದರೂ ಹೊಟ್ಟೆ ಹೊರೆಯುತ್ತೇನೆ. ಬೇರೆಯವರಿಗೆ ಹೊಲ ಕೊಡಿ ' ಎಂದು ಹೇಳಿದ. ಇಷ್ಟರಲ್ಲಿ ವಿನೋಬಾಜೀ, ನೀವು ದೊಡ್ಡ ಮನಸ್ಸು ಮಾಡಿ ಎಲ್ಲರಿಗೂ ಹೊಲ ಸಿಗುವಂತೆ ಹೊಸ ದಾನ ಕೊಡಿ ಎಂದರು. ಅದ್ಭುತ ಪ್ರಸಂಗ! ಇತ್ತ ಹೊಲ ಬೇಡುವ ಹೊಲವಿಲ್ಲದ ಜನ, ಅತ್ತ ಹೊಲ ನೀಡಬಲ್ಲ ಜನ. ವಿನೋಬಾಜಿಯ ಈ ತಪಃಪೂತ ವಾಣಿಯನ್ನು ಕೇಳಿ ಹೊಲವಿದ್ದವರ ಹೃದಯದೊಳಗಿನ ಭಗವಂತ ಎಚ್ಚೆತ್ತ. ಒಬ್ಬ ಸಿಕ್ಖ ಸರದಾರ ತನ್ನ ಹೊಲವೆಲ್ಲವನ್ನೂ ನೀಡಿದ. ಮತ್ತೊಬ್ಬ ಮೊದಲು ಕೊಟ್ಟಿದ್ದುದಕ್ಕೆ ಇನ್ನೂ ಐದು ಬಿಘಾದಷ್ಟು ಸೇರಿಸಿದ. ಹೊಲಗಳ ಸರ್ವೆ ನಂಬರು ತೋರಿಸುತ್ತಿದ್ದ ಶಾನುಭೋಗ ತಾನೂ ತನ್ನ ಕುಚೇಲನ ಅವಲಕ್ಕಿಯನ್ನು - ಎರಡುವರೆ ಬಿಘಾ ಸಮರ್ಪಿಸಿದ. ಹೊಲವಿಲ್ಲದವರೆಲ್ಲರಿಗೂ ಹೊಲ ಸಿಕ್ಕಿತ್ತು. ಅವರೂ ಅಲ್ಲಿನ ಸಹಕಾರ ವ್ಯವಸಾಯದ ಸದಸ್ಯರಾಗಿ ಕೆಲಸ ಮಾಡಲು

ಒಪ್ಪಿದರು. ನಮ್ಮ ಮಹಾದೇವಿ ತಾಯಿ ಎಲ್ಲರಿಗೂ ಕುಂಕುಮ ಹಚ್ಚಿದಳು.

ಸಂಜೆಯ ಸಭೆಯಲ್ಲಿ ಎಲ್ಲರಿಗೂ ಅವರವರ ಹೊಲದ ದಾನ ಪತ್ರವನ್ನು ಹಂಚಿದರು. ಒಬ್ಬೊಬ್ಬರೂ ಬಂದು ವಿನೋಬಾಜಿಯ ಕೈಯಿಂದ ಅದನ್ನು ಪಡೆದು ಹೋದರು. ಇಂದಿನ ಬೆಳಗಿನವರೆಗೆ ಅವರು ಭೂಮಿಹೀನರು. ಈಗ ಅವರೂ ಎಲ್ಲರಂತೆ ತಲೆಯೆತ್ತಿ ನಡೆಯಬಹುದು. ಸ್ವಾಭಿಮಾನದಿಂದ ಬಾಳಬಹುದು. ಅವರ ಕಣ್ಣೊಳಗೆ ಕಾಂತಿ ಮಿನುಗಲಾರಂಭಿಸಿತು. ಕೃತಜ್ಞತೆ, ಮಾನವತೆ ಎರಡೂ ಮೂರ್ತಿವೆತ್ತವು. ಆನಂದ, ಸುಖಗಳ ದೆಸೆಯಿಂದ ಹನಿ ಗಣ್ಣಾಗದವರೇ ಇಲ್ಲ. ಅದೇ ಹೊತ್ತಿಗೆ ಮುಗಿಲೂ ಹನಿಯೊಡೆಯಿತು. ದೇವತೆಗಳೇ ಹರಸಿದಂತಿತ್ತು.

ಜನರ ಮನಸ್ಸು ಆನಂದ ತುಂಬಿ ತುಳುಕಿ ಚೆಲ್ಲಾಡಿತು. ಶಿವನಾರಾಯಣಜಿಯ ಎದೆಯೂ ತುಂಬಿಬಂತು. ತನ್ನ ಶ್ರದ್ಧಾಂಜಲಿ ಯನ್ನರ್ಪಿಸಲು ಎದ್ದುನಿಂತರು. ನಾವು ವಿನೋಬಾಜಿಯ ಬಗ್ಗೆ ಒಂದು ಭಾಷಣ ಕೇಳಿದ್ದೆವು. ಡಾ|| ಜಾಕಿರ್ ಹುಸೇನರದು, ಇವೊತ್ತು ಮತ್ತೊಂದು ಕೇಳಿದೆವು, ಶಿವನಾರಾಯಣರದು. ' ಮತ್ತೆ ಏನೋ ಶ್ರೇಯಸ್ಸು ಆಗಲಿದೆ ದೇಶಕ್ಕೆ ಅನಿಸುತ್ತಿದೆ ಇವೊತ್ತು. ಬಾಪೂ ತರುವಾಯ ನಮ್ಮಲ್ಲಿ ಯಾರೂ ಸ್ಥಿತಪ್ರಜ್ಞ ನಾಯಕರಿರಲಿಲ್ಲ. ಈಗ ವಿನೋಬಾಜಿಯಲ್ಲಿ ಆ ನಾಯಕನು ದೊರೆತ. ದೇವರ ಐದು ಜನ್ಮಗಳಂತೆ ಅವರು ಭಾರತ ವರ್ಷದಲ್ಲಿ ವ್ಯಾಪ್ತರಾಗಿದಾರ. ಅವರು ಋಷಿಯಲ್ಲ, ರಾಜರ್ಷಿಯಲ್ಲ, ಬ್ರಹ್ಮರ್ಷಿ. ಆತ್ಮದಲ್ಲಿ ಲೀನ ವಾದವರು, ಆತ್ಮವನ್ನೇ ಎಲ್ಲೆಡೆಯೂ ಕಾಣಬಲ್ಲವರು ಮಾತ್ರವೇ ಬ್ರಹ್ಮರ್ಷಿಯಾಗಬಲ್ಲರು. ಹಿಂದೆ ವಶಿಷ್ಠರಲ್ಲಿ ಕಂಡ ತೇಜಸ್ಸನ್ನೇ ಇಂದು ನಾವು ವಿನೋಬಾಜಿಯಲ್ಲಿ ಕಾಣುತ್ತಿದೇವೆ. ನಾವು ದುಷ್ಟ

ಬುದ್ಧಿಯಿಂದ ಕೆಲಸ ಮಾಡುವುದನ್ನು ಬಿಟ್ಟು ಬ್ರಹ್ಮರ್ಷಿ ತೋರಿದ ದಾರಿಯಲ್ಲಿ ನಡೆಯುವುದು ನಮ್ಮ ಕೆಲಸ.' ಅವರ ಭಾಷಣ ದೃಷ್ಟಾಂತ, ಶರಣವಚನಗಳಿಂದ ತುಂಬಿತ್ತು. ಅದನ್ನೆಲ್ಲ ಕೊಡಲು ಆಗಿಲ್ಲ.

ವಿನೋಬಾಜೀ ಪ್ರವಚನದಲ್ಲಿ ಹೇಳಿದರು : 'ದಿನವೂ ನಾನು ಹೊಲ ಪಡೆಯುತ್ತಿದ್ದೆ. ಇವೊತ್ತು ನನ್ನ ಕೈಯಿಂದ ಹಂಚುವ ಕೆಲಸವನ್ನೂ ಮಾಡಿಸಿದಿರಿ. ಬಡವರಿಗೆ ಹೊಲ ಕೊಡುವುದು ಅತ್ಯಂತ ಪವಿತ್ರ ಕಾರ್ಯ. ದೇವರಿಗೆ ಈ ಕೆಲಸ ಅತ್ಯಂತ ಪ್ರಿಯವಾದೀತು. ಸಂದೇಹವಿಲ್ಲ. ಹೊಲವನ್ನು ಹಂಚಬೇಕು ಎಂದಾಗ ಅದನ್ನು ಕಣ್ಣಾರೆ ನೋಡದೆ ನನಗೆ ಸಂತೋಷವಿರಲಿಲ್ಲ. ಅದಕ್ಕಾಗಿ ನಾನೇ ಎರಡೂವರೆ ಮೈಲಿ ನಡೆದು ಆ ಹಳ್ಳಿಗೆ ಹೋದೆ. ಇದಕ್ಕೆ ಸಂಬಂಧಿಸಿದ ಎಲ್ಲಾ ಕೆಲಸವನ್ನೂ ನಾನೇ ಮಾಡಿದೆ. ಇವೊತ್ತು ಬೇಡಿದವರಿಗೆಲ್ಲ ನೀಡುವಂತಾಯಿತು. ಬಹಳ ಸಂತೋಷ. ಯಾರಿಗೆ ಹೊಲ ಸಿಕ್ಕಿತೋ ಅವರಂತೂ ಭಾಗ್ಯವಂತರೇ. ಆದರೆ ಯಾರು ಹೊಲ ಕೊಟ್ಟರೋ ಅವರು ಹೆಚ್ಚು ಭಾಗ್ಯವಂತರು. ಹೊಲ ಕೊಟ್ಟವರಿಗೂ ಹೊಲ ಪಡೆದವರಿಗೂ ಏನೂ ಸಂಬಂಧವಿಲ್ಲ, ಬಳಗವಲ್ಲ. ಆದರೂ ಕೊಡುವವರು ಪ್ರೀತಿಯಿಂದ ಕೊಟ್ಟರು. ಪಡೆದವರಿಗೆ ಪ್ರೇಮದೊಡನೆ ಸಿಕ್ಕಿತು. ಹೊಲ ಪಡೆದವರು ದೇವರನ್ನು ಮರೆಯದಿರಲಿ. ಇಂದಿನಿಂದ ಅವರು ಭಕ್ತರಾಗಲಿ. ಅವರು ಹೊಲದಲ್ಲಿ ಬೆಳೆ ಬೆಳೆಸಿದಾಗ ದೇಶದ ಧಾನ್ಯವಂತೂ ಹೆಚ್ಚೀತು; ಆದರೆ ಭಕ್ತಿ ಬೆಳೆದೀತು. ದೇಶದಲ್ಲಿ ಸಙ್ಭಾವನೆ ಹೆಚ್ಚೀತು. ಇದೇ ಎಲ್ಲೆಡೆಯಲ್ಲೂ ಹರಡಲಿ. ಇಂದು ಹೊಲ ಕೊಟ್ಟವರು ಮುಂದೆಯೂ ಬಾಳಿನ ಎಲ್ಲ ರಂಗದಲ್ಲೂ ಬಡವರ ಬಗ್ಗೆ ಗಮನವಿಡಲಿ. ದರಿದ್ರನಾರಾಯಣ ತಮ್ಮ ಮನೆಯ ಹುಡುಗ ಎಂದು ತಿಳಿಯಲಿ. ಇಂದಿನ

ಪ್ರಸಂಗ ಅದ್ಭುತ ಪ್ರಸಂಗ. ಎಲ್ಲರಲ್ಲಿರುವುದೂ ಒಂದೇ ಆತ್ಮ ಎಂಬ ಭಾವನೆ ಕೆಲಸ ಮಾಡುತ್ತಿದೆ. ಈ ದಿನದ ವಾತಾವರಣವನ್ನು ನೋಡಲು ಸ್ವರ್ಗದ ದೇವತೆಗಳೂ ಬಂದಾರು. ಇದೊಂದು ನೈತಿಕ ಪ್ರಯೋಗವೆಂಬುದನ್ನು ಜನ ಅರಿತರು. ಹೊಲ ನೀಡಿದವರಿಗೂ ಅತ್ಯಂತ ಹರ್ಷವಾಗುತ್ತಿದೆ. ಇಂದು ನಾನು ಅದನ್ನು ಕಾಣುತ್ತಿದೇನೆ. ಮಗುವಿಗೆ ಹಾಲು ಕುಡಿಸುವಾಗ ಅದರ ಮೋರೆ ನೋಡಿ ತಾಯಿಗೆ ಹರ್ಷವಾಗದೆ? ಇವೊತ್ತು ಮಾತಾಡುವ ಅಗತ್ಯ ಕಡಿಮೆ. ಇವತ್ತಿನ ಕೆಲಸವೇ ಮಾತಾಡುತ್ತಿದೆ. ಕಾನಪುರದವರಿಂದ ನಾವು ಹೆಚ್ಚು ಆಶಿಸಬಹುದು. ಅವರು ಮಾಡಿದ ಕೆಲಸ ಅಷ್ಟು ಹೆಚ್ಚು. ಈ ಜಿಲ್ಲೆಯಲ್ಲಿ ಸರ್ವೋದಯದ ನಿಜವಾದ ದರ್ಶನವಾಗಲಿ ಎಂದು ನಾನು ಹಾರೈಸುತ್ತೇನೆ.'

**ನರವಲ್ ಆಶ್ರಮ** : ಹೀಗೆ ಕಾನ್‌ಪುರ ತನ್ನ ಮುಡುಪಿಗಿಂತ ೫ ಸಾವಿರ ಎಕರೆ ಹೆಚ್ಚು ನೀಡಿತು. ಎರಡು ಸಾವಿರ ಎತ್ತಿನ ಜೋಡಿ ಕೊಡಲು ಒಪ್ಪಿತು, ಬಾವಿ ಅಗೆಸಿಕೊಡುವ ಮಾತು ಕೊಟ್ಟಿತು, ಕೆಲವರು ಕೆಲಸಗಾರರು ತಮ್ಮ ಬಾಳು-ಬದುಕನ್ನೆ ಈ ಕೆಲಸಕ್ಕಾಗಿ ಅರ್ಪಿಸಿದರು. ಇಷ್ಟೆಲ್ಲಾ ಕೊಟ್ಟು ಕಾನ್‌ಪುರ ಅತ್ಯಧಿಕವಾಗಿ ಗಳಿಸಿಯೂಕೊಂಡಿತು, ಶಾಶ್ವತವಾಗಿ ವಿನೋಬಾಜಿಯನ್ನು ತಮ್ಮವ ನನ್ನಾಗಿ ಮಾಡಿಕೊಂಡಿತು. ಪ್ರೀತಿಯ ಸೂತ್ರದಿಂದ ಎಲ್ಲ ಕಾಲಕ್ಕೂ ಅವರನ್ನು ಕಟ್ಟಿಹಾಕಿತು. ಕೀ. ಶೇ ಗಣೇಶ ಶಂಕರ ವಿದ್ಯಾರ್ಥಿ ಸ್ಥಾಪಿಸಿದ ನರವಲ್ ಆಶ್ರಮಕ್ಕೆ ವಿನೋಬಾಜೀ ಹೋಗಬೇಕಾಗಿತ್ತು. ಆದರೆ ಬಿಡುವಿಲ್ಲದ್ದರಿಂದ ಆಶ್ರಮಕ್ಕೆ ತೀರ ಹತ್ತಿರ ಸಂಬಂಧದ ಕಾನ್ಪುರದ ನಾಯಕರು ಆ ಕಾರ್ಯಕ್ರಮವನ್ನು ಕೈಬಿಟ್ಟರು. ಇದು ನಿಜವಾಗಿ ಅವರು ತೋರಿದ ಅದ್ಭುತ ತ್ಯಾಗವೆನ್ನುತ್ತೇನೆ. ಆದರೆ ಅವರ ಪ್ರಚಾರ ಎಂಥದು? ಕೆಲಸಗಾರರಿಗೆ ಎಷ್ಟು ನಿರಾಶೆಯೋ?

ಬಾಪೂ ಅಲ್ಲಿಗೆ ಹೋಗಬೇಕಾಗಿದ್ದವರು ಅಲ್ಲಿಗೆ ಹೋಗಲಾಗಲಿಲ್ಲ. ಆಗ ಅವರು ಬರಲಿಲ್ಲ. ಈಗ ಇವರು ಬರಲಿಲ್ಲ ಎಂದು ನವರಲ್ ಜನ ಬಹಳ ನೊಂದುಕೊಂಡರು ಕೆಲಸಗಾರರ ಸಂಕಟಕ್ಕೆ ಮಿತಿಯೆ ಇಲ್ಲ. ಗಣೇಶ ಶಂಕರ ವಿದ್ಯಾರ್ಥಿಗಳ ಪರಮ ಮಿತ್ರ, ಆಶ್ರಮಕ್ಕಾಗಿ ಸರ್ವಸ್ವವನ್ನೂ ಅರ್ಪಿಸಿದ, ವಿಜಯೀ ವಿಶ್ವತಿ ರಂಗಾ ಪ್ಯಾರಾ ಎಂಬ ಝಂಡಾ ಗೀತವನ್ನು ರಚಿಸಿದ, ಶ್ಯಾಮಲಾಲ್ ಪಾರಿಷದ್ ಎರಡು ದಿನ ಅತ್ತರು. 'ಆಶ್ರಮಕ್ಕಂತೂ ಬರಲಿಲ್ಲ; ನಮಗೊಂದು ವರ ಕೊಡಿ, ನಮ್ಮ ಆಶ್ರಮಕ್ಕೆ ಮಾರ್ಗದರ್ಶಕರಾಗಿ' ಎಂದು ಕೇಳಿಕೊಂಡರು. ಈ ಒಲವಿನ ಬೇಡಿಕೆಯನ್ನು ವಿನೋಬಾಜೀ ಒಪ್ಪಿಕೊಂಡರು. 'ಕಳೆದ ಮೂವತ್ತು ವರ್ಷದಿಂದ ಎಷ್ಟೋ ಆತಂಕ ಬಂದರೂ ನಿಮ್ಮ ಆಶ್ರಮ ತಡೆದು ನಿಂತಿದೆ. ಅಗತ್ಯವಾಗಿ ನಿಮಗೆ ದಾರಿ ತೋರುತ್ತೇನೆ ನಿಮ್ಮ ಪ್ರಾಂತದಲ್ಲಿ ಇಷ್ಟು ದಿನ ಸುತ್ತಿದೇನೆ, ಇಷ್ಟು ಜನರ ಸಂಬಂಧವಾಗಿದೆ, ಎಲ್ಲರೊಡನೆಯೂ ಸಂಪರ್ಕವಿಡಬೇಕೆಂದು ನನಗೇ ಆಸೆಯಿದೆ. ಅದು ನಿಮ್ಮಂಥವರ ಮೂಲಕವೇ ನನಗೆ ಸಾಧ್ಯ. ನಾನಿದನ್ನು ಒಪ್ಪದಿದ್ದರೆ ನನ್ನ ಕೆಲಸವನ್ನು ನಾನೇ ಕಡಿದಂತೆ.'

ಆಶ್ರಮದವರ ಎದೆ ತುಂಬಿಬಂತು ಕೃತಜ್ಞತೆಯಿಂದ.

**ಸಾವಧಾನ!** ಜಿಲ್ಲೆಯ ಈ ಕೊನೆಯ ಬಿಡಾರಕ್ಕೆ ಎಲ್ಲಾ ಕಾರ್ಯಕರ್ತರೂ ಬಂದಿದ್ದರು. ಮಹತ್ವದ ಕೆಲವು ಚರ್ಚೆ ನಡೆದವು. ಈ ಕೆಲಸ ಬೆಳೆಯುತ್ತ ಹೋಗಿ ನಮ್ಮ ಪ್ರಭಾವ ಬೆಳೆದರೆ ರಾಜಕೀಯ ಸಂಸ್ಥೆಗಳವರು ಇದೇನೋ ದೊಡ್ಡ ಸಂಘಟನೆ ನಡೆಯುತ್ತಿದೆ ಎಂದುಕೊಂಡಾರು ಎಂದ ಒಬ್ಬ ಕೆಲಸಗಾರ. ವಿನೋಬಾ ಹೇಳಿದರು: 'ಜನರಲ್ಲಿ ಪ್ರಭಾವ ಹೆಚ್ಚೀತು; ಸಂದೇಹವಿಲ್ಲ. ಆದರ ಜತೆಗೆ ನಿಮ್ಮ ಅಹಂಕಾರ ಬೆಳೆಯದಿದ್ದರೆ ಅದು ಬಲ. ಅಹಂಕಾರ ಬೆಳೆದರೆ

ಕುತ್ತಾದೀತು. ಇಲ್ಲದಿದ್ದರೆ ಎಲ್ಲ ತಪ್ಪು ತಿಳಿವಳಿಕೆಯೂ ದೂರ ವಾದೀತು.'

ಐದು ಲಕ್ಷ ಎಕರೆ ದೊರೆತ ಮೇಲೆ ಮುಂದೇನು ಕಾರ್ಯಕ್ರಮ ಎಂದು ಕೇಳಿದಾಗ 'ಇದನ್ನು ಮೊದಲು ಮುಗಿಸಿ, ಆಮೇಲೆ ನನ್ನನ್ನು ಕೇಳಿ. ನೀವು ಕೇಳಿದಂತೆಲ್ಲ ಕೆಲಸ ತೋರಿಸಲಿಕ್ಕೆ ನಾನಿಲ್ಲಿ ಸಿದ್ಧ ವಾಗಿದೇನೆ. ಇಡೀ ಹೊಲ ಇಡೀ ಹಳ್ಳಿಯದೇ ಆದಾಗ ನನಗೆ ತೃಪ್ತಿ, ಅಲ್ಲಿಯವರೆಗೆ ಇಲ್ಲ ಪ್ರತಿಯೊಂದು ಹಳ್ಳಿಯಲ್ಲೂ ಒಂದು ಸರ್ವೋದಯ ಕುಟುಂಬವನ್ನು ನೆಲೆಗೊಳಿಸಿದರೆ ನನ್ನ ಕೆಲಸ ಮುಗಿ ಯಲಿಲ್ಲ. ಅದು ಕೆಲಸಕ್ಕೆ ಆರಂಭ ನನ್ನಿದಿರಿಗೆ ಇಡೀ ಗ್ರಾಮ ರಾಜ್ಯದ ಕಲ್ಪನೆ ರೂಪುಗೊಂಡು ನಿಂತಿದೆ. ಪ್ರಯೋಗಕ್ಕಾಗಿ ಈಗ ನರವಲ್‌ಹಳ್ಳಿ ಸಿಕ್ಕಿತು ಈಗ ದಿಲ್ಲೀ, ಲಖನೋಗಳಲ್ಲಿ ಕೇಂದ್ರಿತ ವಾಗಿರುವ ಅಧಿಕಾರ ಹಳ್ಳಿಗಳಲ್ಲಿ ಹಂಚಿ ಹೋಗಬೇಕು. ಹಳ್ಳಿಯ ಕೆಲಸ – ಕಾರ್ಯ ಹಳ್ಳಿಯವರೇ ನಡೆಸದೆ ಸರಕಾರ ನಡಸುವುದು ಸ್ವರಾಜ್ಯದ ಲಕ್ಷಣವಲ್ಲ.'

**ಬೀಳ್ಕೊಡಿಗೆ** · ಇಲ್ಲಿನ ಕೆಲಸಗಾರರಿಗೆ ಇಂದಿಗೂ ಪ್ರೇರಣೆ ಸಿಗುತ್ತಿದೆ. 'ಸಮರ್ಪಣ ಯೋಗಿ ಸ್ವರ್ಗೀಯ ಶ್ರೀ ವಿದ್ಯಾರ್ಥಿ ಯನ್ನು ಕಾನ್‌ಪುರದ ಜನತೆ ಎಂದಿಗೂ ಮರೆಯಲಾರದು. ಅವರ ಅನುಪಮ ತ್ಯಾಗಕ್ಕೆ ಕಾನ್‌ಪುರದ ಕಣಕಣವೂ ಸಾಕ್ಷಿಯಾಗಿದೆ. ಪಾವನ ಬಲಿದಾನದಿಂದ ಸೇವಾತ್ಯಾಗಗಳ ತೋಟ ಹೇಗೆ ಹಚ್ಚ ಹಸಿರಾಗಿರಬಲ್ಲದೋ ನೋಡಲು ಕಾನ್‌ಪುರವನ್ನು ನೋಡಬೇಕು. ವಿನೋಬಾಜೀ ಹೇಳಿದರು : 'ಇಲ್ಲಿಂದ ನಾನು ಬುಂದೇಲ ಖಂಡಕ್ಕೆ ಹೋಗುತ್ತೇನೆ ಆದರೆ ವಿಯೋಗದ ಭಾವನೆಯಿಲ್ಲ, ಮಿಲನದ ಅನುಭವವಾಗುತ್ತಿದೆ.'

## ೨೧ ಫತೇಪುರದಿಂದ ರಾಯಬರೈಲೀ

**ಬಾಪೂನ ಬಾಲಕ**: ಜೂನ್ ೭ಕ್ಕೆ ಬುಂದೇಲಖಂಡದ ಪ್ರವಾಸ ಮುಗಿಸಿ ವಿನೋಬಾಜೀ ಫತೇಪುರ ಜಿಲ್ಲೆಗೆ ಬಂದರು. ಗಂಗೆ- ಯಮುನೆಗಳ ನಡುವಿನ ಪ್ರದೇಶ ಇದು. ಫತೇಪುರ ಜಿಲ್ಲೆಯಲ್ಲಿ ಮೊದಲನೆ ಸ್ಥಳ ಕಿಷನಪುರ. ಸಂಜೆಗೆ ಪ್ರಾರ್ಥನಾ ಸಭೆಯಲ್ಲಿ ಲೌಡ್‌ಸ್ಪೀಕರ್ ಬಳಿ ಮಾತಾಡುವ ಬದಲು ಜನರ ಗುಂಪಿನ ನಡುವೆ ಹೋಗಿ ಕೋಲೂರಿ ನಿಂತು ಮಾತಾಡಿದರು ವಿನೋಬಾ. ೩೬ ವರ್ಷದ ಹಿಂದೆ ಇದೇ ದಿನ ವಿನೋಬಾ ಗಾಂಧೀಜಿಯನ್ನು ಸಂದರ್ಶಿಸಿದ್ದು. ಇವೊತ್ತು ಆ ನೆನಪು ಆಗುವುದು ಸ್ವಾಭಾವಿಕ. ಎರಡೇ ಮಾತಿನಲ್ಲಿ ಅದೆಷ್ಟೊಂದು ಹೇಳಿದರು ವಿನೋಬಾ. 'ಅಲ್ಲಿಯವರೆಗೆ ನಾನು ಎಳೆಯ ಮಗುವಾಗಿದ್ದೆ. ಅಂದಿನಿಂದ ಇಂದಿನವರೆಗೆ ಅವರ ಅಪ್ಪಣೆಯಂತೆ ಕೆಲಸ ಮಾಡುತ್ತ ಬಂದಿದೇನೆ.'

ಅವರ ಅಪ್ಪಣೆಯಂತೆ ಕೆಲಸ ಮಾಡಿದುದಷ್ಟೇ ಅಲ್ಲ. ಅವರು ಬಿಟ್ಟಲ್ಲಿಂದ ಕೆಲಸವನ್ನು ಮುಂದುವರಿಸಿದಾರೆ. ಬುಂದೇಲಖಂಡದಲ್ಲಿ ಇಬ್ಬರು ರೈತರು ಆಡುತ್ತಿದ್ದ ಮಾತು ನನಗೆ ನೆನಪಾಯಿತು.

'ಅದು ಯಾರು ಹೋಗುತ್ತಿರುವುದು ಗೊತ್ತೆ?'

'ವಿನೋಬಾಜೀ.'

'ಅಲ್ಲವೋ ಅಲ್ಲ. ಅವರು ಮಹಾತ್ಮರು.'

'ಮಹಾತ್ಮರೆಲ್ಲಿದಾರೆ? ಇವರು ವಿನೋಬಾಜೀ.'

'ಎಲ, ಇವರು ಮಹಾತ್ಮರೇ ಕಣೋ. ಮಹಾತ್ಮರು ಸಾಯುವುದುಂಟೆ?'

ಮಹಾತ್ಮರು ಹೊರಟುಹೋಗಿಲ್ಲ ಎಂಬುದನ್ನು ವಿನೋಬಾಜೀ

ತೋರಿಸಿದಾರೆ. ಅವರು ಇದಾರೆ, ತಾವೇ ಇದಾರೆ. ಇನ್ನೂ ನನ್ನ ಕಿವಿಯಲ್ಲಿ ಆ ಮಾತು ಗುಂಯ್ ಅನ್ನುತ್ತಿದೆ: 'ಅಂದಿನಿಂದ ಇಂದಿನ ವರೆಗೆ ಅವರ ಅಪ್ಪಣೆಯಂತೆ ಕೆಲಸ ಮಾಡುತ್ತ ಬಂದಿದೇನೆ.'

ಈ ಯಾತ್ರೆಯಲ್ಲಿ ನಮ್ಮ ಸಂಗಾತಿಯೊಬ್ಬರು ಹಿಂದೆ ಲೂಟಿ, ಡಕಾಯಿತಿ, ಕೊಲೆ ಮುಂತಾದ್ದರಲ್ಲಿ ಮುಳುಗಿದ್ದವರು. ಅವರನ್ನು ಹಿಡಿದು ಕೊಟ್ಟವರಿಗೆ ೫ ಸಾವಿರದ ಬಹುಮಾನ ಇಟ್ಟಿತ್ತು ಸರಕಾರ. ಅವರ ಬಾಳಿನಲ್ಲಿ ಏನೋ ಒಂದು ಕಾಯಕಲ್ಪವಾಗಿ, ಕಳೆದ ೧೦ ವರ್ಷಗಳಿಂದ ಆತ ಅಧ್ಯಾತ್ಮ ಚಿಂತನೆಯಲ್ಲಿದಾರೆ. ಕೈಲಾದಷ್ಟು ಸೇವೆ ಮಾಡುತ್ತಾರೆ. ಅರವಿಂದರ ಉಪಾಸಕರು ಅವರು ಒಂದು ಪ್ರಶ್ನೆ ಕೇಳಿದರು—'ಆರ್ಥಿಕ ಸಮತೆಯ ಜತೆಗೆ ಮನಸ್ಸಿನ ಸಮತೆಯನ್ನೂ ತರುತ್ತೀರಾ, ಹೇಗೆ?'

ಅದಕ್ಕೆ ಉತ್ತರವಾಗಿ 'ನಾನೀಗ ಮಾಡುವ ಪ್ರಯತ್ನವೆಲ್ಲ ನಿಜವಾಗಿ ಮಾನಸಿಕ ಸಮತೆಗಾಗಿಯೆ. ಆತ್ಮ ಎಲ್ಲರಲ್ಲೂ ಮನೆ ಮಾಡಿದೆ. ನಾವೆಲ್ಲರೂ ತಿಳಿಯಬೇಕಾದ ಮೂಲ ವಿಚಾರ ಇದು. ಸಾಧನೆಯ ಮೂಲಕ ಪ್ರತಿಯೊಬ್ಬರಿಗೂ ಇದರ ಅನುಭವವಾಗ ಬಲ್ಲದು' ಎಂದರು ವಿನೋಬಾ.

**ಎದೆಯಲ್ಲಿ ರಾಮು, ಬಾಯಲ್ಲಿ ನಾಮು, ಕೈಯಲ್ಲಿ ಕರ್ಮ:** 'ಈ ಮಾನಸಿಕ ಸಮತೆಯನ್ನು ಹೇಗೆ ತರಬೇಕೆಂಬುದೇ ಯೋಚಿಸ ಬೇಕಾದ್ದು. ಭಗವಾನ್ ಬುದ್ಧನ ಬಾಳಿನ ಒಂದು ಸಂಗತಿಯನ್ನು ಪ್ರಸ್ತಾಪಿಸಿ ಒಂದು ಸಲ ಬುದ್ದನ ಶಿಷ್ಯರು ಒಬ್ಬನನ್ನು ತಂದು ಗುರುವಿನ ಇದಿರಿಗೆ ನಿಲ್ಲಿಸಿ, ಇವನ ಆತ್ಮಕ್ಕೆ ಸ್ವಲ್ಪ ಬೋಧನೆಮಾಡಿ ಎಂದರು. ಅವನಿಗೆ ಅನ್ನವಿಡಿ ಎಂದ ಬುದ್ಧ. ಅವನು ಹೊಟ್ಟೆ ತುಂಬಾ ಊಟಮಾಡಿ ದಣಿವಾರಿಸಿಕೊಂಡ ಮೇಲೆ ಅವನನ್ನು ಮತ್ತೆ ಬುದ್ಧನ ಇದಿರಿಗೆ ತಂದು ನಿಲ್ಲಿಸಿದರು. ಅವನನ್ನು ನೋಡಿ ಹೊರಟು

ಹೋಗು ಎಂದ ಬುದ್ಧ. ಶಿಷ್ಯರಿಗೆ ಅಚ್ಚರಿಯಾಯಿತು. ಆಗ ಭಗವಾನ್ ಹೇಳಿದ: ಹಸಿದವನಿಗೆ ಅಶನವೀಯುವುದೇ ದೊಡ್ಡ ಧರ್ಮ. ಎಲ್ಲರೊಳಗೂ ಆತ್ಮ ಇದೆ ಎಂದರೆ ಉಪದೇಶವನ್ನು ಯಾರಿಗೆ ಕೊಡಬೇಕು? ನಮಗೋ ಉಳಿದವರಿಗೋ? ಕೃತಿಯಿಂದ ಕೊಡ ಬಹುದಾದ ಶಿಕ್ಷಣ ಮಾತಿನಿಂದ ಸಾಧ್ಯವಿಲ್ಲ ನಿಜವಾದ ಗುರು ತನ್ನ ಆಚರಣೆಯಿಂದ ಬೋಧನೆ ಮಾಡಿಯಾನು. ನಮಗಿಂತ ಕೆಳಗೆ ಬಿದ್ದಿರುವ ಜನರೊಡನೆ ನಾವು, ಮಾನಸಿಕ ಸಮಾನತೆ ಬೇಕೆಂಬ ಜನ ನಾವು, ಮೊದಲು ಸಮತ್ವ ಸಾಧಿಸಿದರೆ ಆಮೇಲೆ ಮಾನಸಿಕ ಸಮಾನತೆ ಬಂದೀತು. ಮಕ್ಕಳನ್ನು ಎತ್ತಿಕೊಳ್ಳಲು ತಾಯಿ ತಾನು ಬಾಗುತ್ತಾಳೆ. ನಮಗಿಂತ ಚಿಕ್ಕವರ ಮಟ್ಟದಲ್ಲಿ ನಾವಿರಬೇಕು. ಮೊದಲು ನಾವು ಚಿಕ್ಕವರಾಗಬೇಕು. ಎಲ್ಲರ ಸೇವೆಯಲ್ಲಿ ಸತ್ತು ಬೂದಿಯಾಗುವುದು ನಮ್ಮ ಧರ್ಮ. ಅದೇ ನಮ್ಮ ಕರ್ಮ. ಅದೇ ನಿಜವಾಗಿ ನಮ್ಮ ದೇಹಾವಸಾನ' ಎಂದರು 'ಏಕೆ? ಈಗಿನ ಹಾಗೆ ಹಳ್ಳಿ ಹಳ್ಳಿ ತಿರುಗುವುದನ್ನು ಬಿಟ್ಟು ಒಂದು ಲಂಗೋಟಿ ಧರಿಸಿ ಹೋಗಿ ಗುಹೆಯಲ್ಲಿ ಕುಳಿತು, ಜನರಿಂದ ಭಿಕ್ಷೆಬೇಡಿ ನನ್ನ ಹೊಟ್ಟೆ ತುಂಬಲಿ? ಹಾಗೆ ಧ್ಯಾನ-ಚಿಂತನದಲ್ಲಿ ಕಾಲ ಕಳೆಯಲಿ? ಆ ಕೆಲಸವೂ ಒಳಿತೇ. ಆದರೆ ಈಗ ಅದಕ್ಕೆ ಕಾಲವಲ್ಲ. ಕೈಯಲ್ಲಿ ಜಪಸರ ಹಿಡಿದರೇನೇ ಚಿತ್ತ ಏಕಾಗ್ರವಾಗುತ್ತದೆ ಎಂದಲ್ಲ. ರಾಟೆ ತಿರುಗಿಸಿದರೂ, ನೀರು ಸೇದಿದರೂ ಚಿತ್ತ ಏಕಾಗ್ರವಾಗಬಲ್ಲದು. ಇಂದಿನ ಮಂತ್ರ, ಇಂದಿನ ಸಾಧನೆ ಇದು-ಎದೆಯಲ್ಲಿ ರಾಮ, ಬಾಯಲ್ಲಿ ನಾಮ, ಕೈಯಲ್ಲಿ ಕರ್ಮ.'

ಸಭೆಯಲ್ಲಿ ಒಬ್ಬ ರೈತ ಏನೋ ಹೇಳಲು ಎದ್ದ. ಕೆಲಸಗಾರರು ಅವನಿಗೆ ಕೂತುಕೊಳ್ಳಲು ಸನ್ನೆ ಮಾಡಿದರು. 'ಬೇಡ, ಅವನು ಹೇಳಲಿ' ಎಂದರು ವಿನೋಬಾ ಅವನು ಎದ್ದು ನಿಂತು 'ಸ್ವಾಮಿ,

ಬಡವರ ಹೊಲ ಲೂಟಿಯಾಗುತ್ತಿದೆ. ಯಾರೂ ಕೇಳುವವರೇ ಇಲ್ಲ' ಎಂದ. ಅವನನ್ನು ಸಮಾಧಾನ ಮಾಡುತ್ತ ವಿನೋಬಾಜೀ ಹೇಳಿದರು : ' ನಿಮ್ಮ ಕೆಲಸ ಮಾಡಲೆಂದೇ ಅಲ್ಲವೆ ನಾನು ಬಂದಿರುವುದು. ಬಡವರು ಇಷ್ಟು ದೀನರಾಗಬಾರದು. ಲೋಕದಲ್ಲಿ ಜನ ನಿಮ್ಮನ್ನು ಮೋಸಗೊಳಿಸುತ್ತಿದಾರೆ, ನಿಜ. ಅದರ ಅರ್ಥ, ನಾವೂ ಅವರಿಗೆ ಮೋಸಮಾಡಬೇಕೆಂದಲ್ಲ. ನಾವು ಪ್ರಾಮಾಣಿಕರಾಗಿ ಕೆಲಸ ಮಾಡಬೇಕು. ಯಾವಾಗಲೂ ಸುಳ್ಳು ಹೇಳಬಾರದು ಹೆಂಡದ ಬಳಿಗೇ ಸುಳಿಯಬಾರದು, ಬಡವರಿಗೆ ಹೇಳುತ್ತೇನೆ – ತಮ್ಮ, ಮುಂದೆ ಬರುವುದು ನಿಮ್ಮ ಕಾಲ. ಅಂತೇ ನೀವು ಎಚ್ಚೆತ್ತುಕೊಳ್ಳಿ ಹಾಗೆಂದರೆ ಭಾಗ್ಯವಂತರ ಮನೆಯ ಬಾಗಿಲಿಗೆ ಹೋಗಿ ಚೀರಿಕೊಳ್ಳಿ ಎಂದಲ್ಲ. ನಮ್ಮ ಕೆಲಸವನ್ನು ನಾವು ಮುಗಿಸಬೇಕು. ನಿರ್ವ್ಯಸನರಾಗಿ ಭಗವಂತನ ಧ್ಯಾನ ಮಾಡುವುದನ್ನು ಕಲಿತು, ಜೋಕೆಯಾಗಿ, ಒಗ್ಗಟ್ಟಿನಿಂದ ಮುಂಬರಿಯಬೇಕು. ನನ್ನನ್ನು ಹೀಗೆ ಸುತ್ತಾಡಿಸುತ್ತಿರುವುದು ನಿಮ್ಮ ತಪಸ್ಸೇ. ಇಲ್ಲದಿದ್ದರೆ ನನ್ನ ಏಕಾಂತವಾಸದಿಂದ ನನ್ನನ್ನು ಹೊರಗೆಳೆಯಬಲ್ಲದ್ದು ಬೇರೆ ಯಾವ ಶಕ್ತಿಯಿತ್ತು ? ಹೀಗೆ ಹಳ್ಳಿ ಹಳ್ಳಿ ಸುತ್ತಿಸಬಲ್ಲದ್ದು ? ಅಂತೇ ನೀವು ದೀನರಾಗಬೇಡಿ ಎನ್ನುತ್ತೇನೆ.'

* * * *

ಕಿಷನಪುರದ ಕೆಲಸಗಾರರು ಕೇಳಿದರು. ' ವಿಷಮತೆ ಇನ್ನೂ ಬೇರೆ ಕ್ಷೇತ್ರಗಳಲ್ಲಿದೆಯಲ್ಲ. ಅದರ ಮಾತು ಹೇಗೆ ? '

' ತಮ್ಮ, ನಮ್ಮ ಬಲ ಹೆಚ್ಚಲಿ, ನಿಲ್ಲಿ. ಆಮೇಲೆ ಯಾವ ಕ್ಷೇತ್ರದಲ್ಲಿ ಅನ್ಯಾಯವಾಗುತ್ತದೋ ಆ ಕ್ಷೇತ್ರಗಳಲ್ಲಿ ಏನಾದರೂ ಮಾಡಲಾದೀತು. ನಮ್ಮ ದೇಶದಲ್ಲಿ ಸಮಸ್ಯೆ ಕಡಮೆಯಿಲ್ಲ ರೈತರದು ಕೂಲಿಗಾರರದು, ಶರಣಾರ್ಥಿಗಳದು - ಹಿಂದುಸ್ತಾನ ಸಮಸ್ಯೆಗಳ ಸಂತೆ.'

ಹೊಲವಿಲ್ಲದವರಿಗೆ ಹೊಲವನ್ನು ಕೊಟ್ಟೂ ಜಾಗೀರುದಾರರ ಬಳಿ ಇನ್ನೂ ಅಪಾರ ಭೂಮಿ ಉಳಿದಿರುತ್ತದೆ. ೩೦ ಎಕರೆಗಿಂತ ಹೆಚ್ಚು ಯಾರಿಗೂ ಇರಬಾರದು - ಎಂದು ಒಬ್ಬ ಸಮಾಜವಾದಿ ಹೇಳಿದ. ವಿನೋಬಾಜೀ ಹೇಳಿದರು : 'ಮೊದಲು ಎಷ್ಟು ಜನ ಭೂಮಿಹೀನರಿದ್ದಾರೋ ಅವರಿಗೆ ಹೊಲ ಕೊಡಿಸಿ. ಹೊಲವಿಲ್ಲದವರಿಂದ ಮೊದಲಿಡಿ. ಆಮೇಲೆ ಯಾರ ಬಳಿ ೩೦ ಎಕರೆ ಉಳಿಯುತ್ತದೋ ನೋಡಿ.'

ಜನರು ಮತ್ತೆ ಸತ್ಯಾಗ್ರಹದ ಮಾತು ಎತ್ತಿದರು. ಸೇವಾಪುರಿ ಬಿಟ್ಟ ಮೇಲೆ ಅಲ್ಲಲ್ಲಿ ಸ್ಪಷ್ಟವಾಗಿ ಈ ಬಗ್ಗೆ ವಿನೋಬಾಜೀ ಹೇಳಿದಾರೆ. ಇವೊತ್ತು ತಾವು ಮಾಡುವ ಕಾರ್ಯಕ್ರಮ ಸತ್ಯಾಗ್ರಹದ್ದೇ ಎಂದು ವಿನೋಬಾ ಹೇಳಿದಾರೆ. ಅಗತ್ಯಬಿದ್ದರೆ ಸ್ಥೂಲ - ಸತ್ಯಾಗ್ರಹವನ್ನೂ ಮಾಡಿಯಾರು. ಮತ್ತೆ ಅದೇ ಪ್ರಶ್ನೆ ಬಂದಾಗ, 'ಹೊಲದ ಪ್ರಶ್ನೆ ಬಿಡಿಸಲು ಮೂರು ದಾರಿಯಿವೆ. ಕೊಲೆ, ಕಾನೂನು, ಕಾಣಿಕೆ. ಜನರು ಆಗಾಗ ಸತ್ಯಾಗ್ರಹದ ಮಾತು ಆಡುತ್ತಾರೆ. ನಿರಹಂಕಾರದಿಂದ ಶ್ರದ್ಧೆಯಿಂದ ಬೇಡಿದರೆ ಸ್ಥೂಲ ಸತ್ಯಾಗ್ರಹ ಅಗತ್ಯವಾಗದು ಎಂದು ಹಲವು ಬಾರಿ ನಾನು ಹೇಳಿದೇನೆ. ಒಂದು ವೇಳೆ ಅಗತ್ಯ ಬಿದ್ದರೂ, ಈ ಬೇಡುವುದರಿಂದ ಹುಟ್ಟುವ ವಾತಾವರಣ ಸತ್ಯಾಗ್ರಹಕ್ಕೆ ಅನುಕೂಲವಾದೀತು. ಮಾಡಬೇಕಾಗಿ ಯೋಚಿಸಿದರೆ, ಯಾರೂ ಅದನ್ನು ವಿರೋಧಿಸಬಾರದು ಅಂಥ ಸಮಯ, ರೀತಿ ನೋಡಿ ಸತ್ಯಾಗ್ರಹ ಮಾಡಿಯೇನು. ಆಗ ಎಲ್ಲರಿಗೂ ಅದರಲ್ಲಿ ಸಾನುಭೂತಿಯಿದ್ದೀತು. ಅದು ಸಫಲವಾದೀತು. ಆಡಿದ ಮಾತು ಮತ್ತೆ ಆಡಲೊಲ್ಲ, ಬಿಟ್ಟ ಬಾಣ ಮತ್ತೆ ಬಿಡಲೊಲ್ಲ, ಶ್ರೀರಾಮು. ನನ್ನ ಸತ್ಯಾಗ್ರಹದ ಕಲ್ಪನೆ - ರೂಪ ಇದು.'

ಸಂಜೆ ಎಂಟೂವರೆ ಆಗಿತ್ತು. ಇನ್ನು ವಿಶ್ರಾಂತಿಯ ಸನ್ನಾಹ.

ಅಷ್ಟರಲ್ಲಿ ಒಬ್ಬ ರೈತ ತೇಕುತ್ತ ವಿನೋಬಾ ಬಳಿಗೆ ಬಂದು ನಮಿಸಿದ, ವಿನೋಬಾ ಅವನ ಕಡೆ ನೋಡಿದರು. ಅವನು ಕೈಜೋಡಿಸಿ ಸ್ವಾಮಿ, ನನಗೆ ಸಭೆಗೆ ಬರಲು ಆಗಲಿಲ್ಲ ಎಂದ. ಮುಂದೆ ಏನೋ ಹೇಳಬೇಕು. ಆದರೆ ಸಂಕೋಚ. ಬಹಳ ಸ್ನೇಹ ಪೂರ್ವಕ ವಿನೋಬಾ ಕೇಳಿದರು-ಎಲ್ಲಿ ನೀನಿರುವುದು?

'ಐದು ಮೈಲಿ ದೂರದಲ್ಲಿ ಒಂದು ಹಳ್ಳಿ.'

'ಏನು ಮಾಡುತ್ತೀ?'

'ನಾನು ರೈತ ಸ್ವಾಮಿ.'

'ಬಡವರಿಗಾಗಿ ಏನಾದರೂ ತಂದಿದೀಯಾ?'

'ಹೌದು ದೇವರೆ, ನನಗೆ ಏಳು ಬಿಘ ಹೊಲ ಇದೆ. ಎರಡು ಕೊಡೋಣ ಎಂದು ಬಂದೆ.'

ಪಕ್ಕದಲ್ಲಿ ಕೂತಿದ್ದ ನಾನು ಈ ಇಂದ್ರಜಾಲವನ್ನೆಲ್ಲ ನೋಡುತ್ತಿದ್ದೆ. ೧೪ ತಿಂಗಳಾಯಿತು. ಇಂಥವು ಎಷ್ಟೋ ಕಂಡೆ. ಈ ಕುಚೇಲನ ಈ ಹಿಡಿ ಅವಲಕ್ಕಿಯನ್ನು ಯಾರು ನಮಗೆ ಕಳಿಸುತ್ತಾರೆ? ಯಾರು ಇವರಿಗೆ ಸ್ಫೂರ್ತಿಕೊಡುತ್ತಾರೆ?

* * * *

ಫತೇಪುರದ ಕೊನೆಯ ಸ್ಥಳ ಮೌಜಮಾಬಾದ್. ಗಂಗಾ ತಟದ ಊರು. ಎತ್ತರವಾದ ದಿಣ್ಣೆಯ ಮೇಲಿದೆ ಬೆಳಿಗ್ಗೆ ಗಂಗೆಯನ್ನು ದಾಟ ಹೋದೆವು. ಮೊದಲು ಸ್ವಲ್ಪ ನೀರು, ಆಮೇಲೆ ಮರಳು, ಆಮೇಲೆ ಆಳವಾದ ನೀರು. ಮರಳಿನಲ್ಲಿ ನಡೆದಾಗ ಪ್ರಾರ್ಥನೆಮಾಡಲು ಹೇಳಿದರು ವಿನೋಬಾ. ಪ್ರಾರ್ಥನೆ ಮುಗಿದ ಹೊತ್ತಿಗೆ ಮರಳಿನ ನೆಲ ಮುಗಿಯಿತು. ಈಗ ದೋಣಿಯ ಪಯಣ. ಪ್ರಾರ್ಥನೆ ಮಾಡುತ್ತಲೇ ದೋಣಿ ಹತ್ತಿದೆವು. ಅತ್ತಣವರು ಕರೆದೊಯ್ಯಲು ಬಂದು ಅತ್ತ ನಿಂತರು. ಇತ್ತಣವರು ಬೀಳ್ಕೊಡಲು

ಬಂದು ಇತ್ತ ನಿಂತರು. ನಡುವೆ ದೋಣಿ. ಬೆಳಗಿನ ತಂಪು ಗಾಳಿ. ಪ್ರಶಾಂತ ವೇಳೆ. ಈಶಾವಾಸ್ಯದ, ಗೀತೆಯ ಪ್ರಾಣಮಯ ಶ್ಲೋಕ. ಅದೇ ಅರುಣೋದಯವಾಗಿತ್ತು. ಈಶಾವಾಸ್ಯದ ಋಷಿ ಹಾಡಿದಂತಿತ್ತು - ಪೂಷಣಾದಿ ಕಿರಣಗಳೆ, ಒಡೆದು ತೋರಿ, ಒಡಮೂಡಿಸಿ ತೋರಿ, ಒಂದೇಕಡೆ ಅವನನ್ನು ಹಾಗೇ ತೋರಿಸಿ.

ಗಂಗೆಯ ಮಡಿಲಲ್ಲಿ ಧ್ಯಾನಸಮಾಧಿ ಹತ್ತುವಂಥ ಪ್ರಸಂಗ. ಪ್ರಾರ್ಥನೆ ಮುಗಿದ ಮೇಲೆ ಸ್ವಲ್ಪ ಹೊತ್ತು ಗಂಭೀರ ಮೌನ. ಯಾರಿಗೂ ಆ ಶಾಂತಿ ಭಂಗ ಮಾಡುವ ಮನಸ್ಸಾಗಲಿಲ್ಲ. ಆದರೆ ದರಿದ್ರ ನಾರಾಯಣನ ಅಮೂಲ್ಯ ವೇಳೆಯನ್ನು ಕಳೆದವರುಂಟೆ? ಫತೇಪುರದವರು ಪ್ರಣಾಮಪೂರ್ವಕ ಬೀಳ್ಕೊಟ್ಟರು. ರಾಯ ಬರೈಲಿಯವರು ದೋಣಿ ಹತ್ತಿದರು. ' ಸಂತ ಪರಮ ಹಿತಕಾರಿ ' ಭಜನೆ ಮೊಳಗಿತು. ನದಿಯ ಅಲೆಗಳೇ ವೀಣೆಯ ಶ್ರುತಿಯಾಯಿತು. ಅತ್ತಣ ದಡದಿಂದ ರಾಮನಾಮ ಕೇಳಿಸತೊಡಗಿತು. ದಡದಲ್ಲಿ ಒಂದು ಸೊಗಸಾದ ಶಿವಾಲಯ. ಅದನ್ನು ರಾಜಘಾಟ್ ಎನ್ನುತ್ತಿದ್ದರು. ರಾಣಾ ಸ್ವಯಂವರಸಿಂಹರು ನಾಲ್ಕು ಸಾವಿರ ಬಿಘಾ ಹೊಲ ದಾನ ನೀಡಿ ದರಿದ್ರ ನಾರಾಯಣನನ್ನು ಸ್ವಾಗತಿಸಿದರು. ' ರಾಯಬರೈಲಿಯಿಂದ ಒಂದು ಲಕ್ಷ ಎಕರೆ ಬೇಡುತ್ತೇನೆ. ಈ ೧೪ ತಿಂಗಳಿನಲ್ಲಿ ನಮಗೆ ಎರಡೂವರೆ ಲಕ್ಷ ಎಕರೆ ಸಿಕ್ಕಿದೆ. ಶ್ರೀ ರಾಮಚಂದ್ರ ೧೪ ವರ್ಷ ವನವಾಸಮಾಡಿದ. ನನಗೇನೋ ಬಹಳ ಧೈರ್ಯವಿದೆ. ಆದರೂ ನಾನು ಎಷ್ಟು ಹಳ್ಳಿಗಳಿಗೆಂದು ಹೋಗಲಿ ? ಕೆಲಸಗಾರರು ಹಳ್ಳಿ ಹಳ್ಳಿ ಸುತ್ತಬೇಕು. ಹೀಗೆ ನೀವು ಹಳ್ಳಿ ಹಳ್ಳಿಗ ಹೋಗಿ ನೋಡಿ. ಯಾರೂ ಕೊಡಲು ಒಲ್ಲೆ ಎನ್ನರು. ನಾವು ನಮ್ಮ ಸಂಕಲ್ಪ ಪೂರಯಿಸಬೇಕು. ಆಗ ಆತ್ಮ ಶಕ್ತಿ ಹೊಳೆದೀತು. ನಿಮ್ಮ ಜಿಲ್ಲೆಯಲ್ಲಿ ಪಂಡಿತ ನೆಹರೂನಂಥ ಪುಣ್ಯ ಪುರುಷ ಕೆಲಸ ಮಾಡಿದಾರೆ. ಈ ಜಿಲ್ಲೆಗೆ ನಾ ಬೇಡಿದ

ಒಂದು ಲಕ್ಷವೇನು ಹೆಚ್ಚಲ್ಲ' ಎಂದರು ವಿನೋಬಾ.

ಬುಂದೇಲಖಂಡದಲ್ಲಿ ಹೊಮ್ಮಿದ ದಾನ-ಹುರುಪುಗಳ ಪರಂಪರೆ ಮುಂದೆಯೂ ಉಳಿಯಿತು. ಜನ ಹೆಚ್ಚು ಹೆಚ್ಚು ಹುರುಪು ತೋರಿಸಿದರು, ರಾಯಬರೈಲಿಯಲ್ಲಿ ದೊಡ್ಡ ಜಾಗೀರುದಾರರು, ಜಮೀನುದಾರರು, ರೈತರು ದಾನ ನೀಡಲು ಬರುತ್ತಿದ್ದರು. ಈ ಜಿಲ್ಲೆಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರಿಂದಲೂ ೨ ಸಾವಿರ ಎಕರೆ ಸಿಕ್ಕಿತು. ಜಿಲ್ಲೆಯ ಮೊದಲನೆ ಬಿಡಾರ ಲಾಲ್‌ಗಂಜ್. ರಾತ್ರಿ ಒಂಬತ್ತೂವರೆಗೆ, ವಿನೋಬಾಜೀ ನಿದ್ದೆಯಲ್ಲಿದ್ದಾಗ ಕೈಯಲ್ಲಿ ಕಾಗದಗಳನ್ನು ಹಿಡಿದುಕೊಂಡು ಒಬ್ಬ ಯುವಕ ನನ್ನನ್ನು ಹುಡುಕುತ್ತ ಬಂದ. ಆವೊತ್ತಿನ ಸಂಜೆಯ ಪ್ರವಚನ ಕೇಳಿ ಅವನ ಮನಸ್ಸು ಕಲಕಿತ್ತು- ಮನೆಗೆ ಹೋದ. ಆವನಿಗೆ ಹೊಲವಿಲ್ಲ. ಲಾಲ್‌ಗಂಜಿನಲ್ಲಿ ಮುಂಡಿ ವರ್ತಕ. ಊರಿನ ನಡುವೆ ಒಂದು ಮನೆದಳ ಇತ್ತು. ಅದನ್ನು ದಾನ ನೀಡಿ ಕಾಗದ ಬರೆದು ತಂದಿದ್ದ.

ಮೊದಮೊದಲು ಚಳುವಳಿಯ ಬಗ್ಗೆ ಕೆಲಸಗಾರರಿಗೆ ಸ್ವಲ್ಪ ಸಂದೇಹವ. ಎಲ್ಲ ಜಿಲ್ಲೆಗಳಲ್ಲೂ ಹಾಗೇ. ಇದಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಪೂರಾ ಓದಿಲ್ಲವೆಂದೇ ಅವರಿಗೆ ಈ ಅನುಮಾನ. ಒಮ್ಮೆ ವಿನೋಬಾಜಿಯ ಬಾಯಿಂದ ಆ ಸಂದೇಶ ನಿವಾರಣೆಯಾಯಿತೋ, ಇಮ್ಮಡಿ ಹುರುಪು ಬರುತ್ತದೆ. ಹಂಚಿಕೆಯ ಬಗ್ಗೆ ಇಲ್ಲಿನವರಿಗೆ ಕೆಲವು ಸಂದೇಹವಿತ್ತು. ಹಂಚಿಕೆಗೆ ವಿನೋಬಾಜೀ ಕೆಲವು ನಿಯಮ ಮಾಡಿದಾರೆ. ಏಳು ದಿನ ಮೊದಲು ಹಂಚಿಕೆಯ ತಿಳಿವಳಿಕೆ ಕೊಡಬೇಕು; ಹಿಂದಿನ ದಿನ ಮತ್ತೆ ಡಂಗುರ; ಇಡೀ ಹಳ್ಳಿಯವರ ಸಭೆ, ಎಲ್ಲರ ಇದಿರಿಗೆ ಹೊಲವಿಲ್ಲದವರ ಆಯ್ಕೆ; ಹೊಲ ಕಡಿಮೆ ಬೇಡುವವರು ಹೆಚ್ಚು ಇದ್ದಾಗ ಹೆಚ್ಚು ಯೋಗ್ಯರು ಯಾರೆಂಬುದನ್ನು ಅವರೇ ನಿರ್ಧರಿಸುವುದು- ಮುಂತಾಗಿ. ಈ ಬಗ್ಗೆ

ಅನುಮಾನ ತೋರಿದಾಗ ವಿನೋಬಾ ' ಹಂಚುವವನು ಬರೀ ಸಾಕ್ಷಿ. ಯಾರು ಬೇಕಾದರೂ ಈ ಕೆಲಸ ಮಾಡಿ ಎಂದೇನು. ನನ್ನ ಹಗೆ ಎಂದುಕೊಂಡವನನ್ನು ಬೇಕಾದರೂ! ಸಮಸ್ತರೂ ಸೇರಿದಲ್ಲಿ ಅವರ ಇದಿರಿಗೆ, ನಮ್ಮ ನಿಯಮಾನುಸಾರ ಹಂಚಿಕೆಯಾದೀತು. ಅಲ್ಲಿ ಏನು ಬಾಧಕವಿದೆ? ಒಳಗೊಳಗೇ ಸದ್ದಿಲ್ಲದೆ ಹಂಚುವಂತಿದ್ದರೆ ಏನಾದರೂ ಅನುಮಾನಕ್ಕೆ ಅವಕಾಶ. ಈಗಾಗಲೇ ಹೈದರಾಬಾದಿನಲ್ಲಿ ಉಳಿದಲ್ಲಿ ಹೊಲವನ್ನು ಹಂಚಿದಾರೆ. ಅಲ್ಲಿ ಏನೂ ದೂರು ಇಲ್ಲ' ಎಂದರು.

ನಿಮ್ಮ ಗುರಿ ಮುಟ್ಟಲಾದೀತೆ ಎಂದ ಒಬ್ಬ ತಮ್ಮ. 'ನನಗೇನೋ ಪೂರ್ಣ ಭರವಸೆಯಿದೆ. ನೀವು ಹೋಗಿ ತಲಕಾವೇರಿಯನ್ನು ಕೇಳಿ ನೀನು ಕಡಲಿಗೆ ಮುಟ್ಟೇಯಾ ಎಂತ. ಅದು ಏನು ಹೇಳೀತು. ನನ್ನ ಮಟ್ಟಿಗೆ ಹೇಳಬಲ್ಲೆ. ಈ ಕೆಲಸ ಮುಗಿಯುವವರೆಗೆ ನನ್ನ ಕಾಲಿನಲ್ಲಿ ಬಲವಿರುವ ತನಕ ನಾನೇನೋ ನಡೆಯುತ್ತಲೇ ಇರುತ್ತೇನೆ. ಈ ನಡುವೆ ಹೊಲದ ಸಮಸ್ಯೆ ಬಿಡುವ ಬದಲು ನನ್ನ ಸಮಸ್ಯೆಯೇ ಬಿಟ್ಟುಹೋದರೂ ಚಿಂತೆಯಿಲ್ಲ. ಹಿಂದೆ ರಾಮ ಬಂದ, ಬುದ್ಧ ಬಂದ, ಸಮಸ್ಯೆ ಎಲ್ಲಾ ಹರಿದಿಲ್ಲ. ಇದೆಲ್ಲವೂ ದೇವರ ಲೀಲೆ. ನಾವು ಹಿಡಿದ ದಾರಿ ಯಾವುದೋ, ಅದು ಯಶಸ್ವಿಯೋ ಇಲ್ಲವೋ ಅಷ್ಟೇ ನಮ್ಮ ಯೋಚನೆ. ಆ ದಾರಿಯೇ ನಮಗೆ ಬೇಡ ಎನ್ನುವವರಿಗೇನು ಮದ್ದು? '

ನಿಮಗೆ ದೊರೆವ ಹೊಲದಲ್ಲಿ ಕೆಲಸಕ್ಕೆ ಬಾರದ ಹೊಲ ಬೇಕಾದಷ್ಟಿದೆ ಎಂದ. ತಟ್ಟನೆ ಬಂತು ಉತ್ತರ. 'ಅಯ್ಯಾ, ರುಕ್ಮಿಣಿಯ ಜತೆಗೆ ಕುಬ್ಜೆಯನ್ನು ಪಾವನ ಮಾಡಿದ ದೇವರು. ಅವಳನ್ನು ಚೆಲುವೆಯಾಗಿಯೂ ಮಾಡಿದ. ನಮಗೆ ದೊರೆತ ಹೊಲವನ್ನೆಲ್ಲ ಫಲವಂತವಾಗಿ ಮಾಡೋಣ.'

ಈ ಐದಾರು ವರ್ಷದಲ್ಲಿ ದೇಶ ಬಹಳ ಇಳಿದುಹೋಯಿತು ಎಂದ ಇನ್ನೊಬ್ಬ. 'ಹಾಗೆಲ್ಲ ೫–೬ ವರ್ಷದಲ್ಲಿ ಒಂದು ದೇಶ ಕೆಳಗಿಳಿಯದು. ಒಂದು ದೇಶದಲ್ಲಿ ಪರಿವರ್ತನೆಯಾಗಲು ಸಾವಿರಾರು ವರ್ಷ ಬೇಕು ಇವೊತ್ತು ನಮ್ಮ ಕಣ್ಣಿಗೆ ಕಾಣುವ ಕೊಳಕೆಲ್ಲ ಆರ್ಥಿಕ ಕಾರಣದ್ದು ಸಮಾಜದ ಆರ್ಥಿಕ ರಚನೆ ಮುರಿದು ಬಿದ್ದಿದೆ.' ಸಾಧಾರಣ ಸಮಾಜ ಹಿಂದಿನಿಂದಲೂ ಕೆಳಗಿಳಿಯಿತೋ ಮೇಲೇರಿತೋ ತಿಳಿಸಲು ತಮ್ಮ ಯಾತ್ರೆಯ ಅನುಭವವನ್ನೆ ಒಂದನ್ನು ಹೇಳಿದರು. ಅವರು ಶ್ರಾವಸ್ತಿಗೆ ಹೋಗಿದ್ದರಲ್ಲ. 'ಶ್ರಾವಸ್ತಿಯ ಒಬ್ಬ ಭಕ್ತ ಚಾತುರ್ಮಾಸ್ಯಕ್ಕಾಗಿ ಅಲ್ಲಿಗೆ ಭಗವಾನ್ ಬುದ್ಧನನ್ನು ಆಹ್ವಾನಿಸಿದ. ಅವರ ಬಿಡಾರಕ್ಕಾಗಿ ನೆಲವನ್ನೂ ಕೊಂಡ. ಆ ನೆಲದ ತುಂಬಾ ವರಹಗಳನ್ನು ಹಾಸಿ ಅದನ್ನು ಆ ಬೆಲೆಗೆ ಕೊಂಡ–ಭಗವಾನನ ಬಿಡಾರಕ್ಕಾಗಿ. ಅಂಥದರಲ್ಲಿ ನನ್ನಂಥ ಅಲ್ಪನಿಗೆ ಅದೇ ಶ್ರಾವಸ್ತಿಯಲ್ಲಿ ೧೫೦ ಎಕರೆ ದಾನ ಸಿಕ್ಕಿತು ಸಮಾಜ ಏರಿತೋ ಇಳಿಯಿತೋ ಇದರಿಂದ ತಿಳಿದೀತು. ನಾನು ಇಷ್ಟೆಲ್ಲ ಸುತ್ತುತ್ತೇನೆ ಜನ ಕೆಟ್ಟವರೆಂದು ನನಗೆಲ್ಲೂ ಅನುಭವವಾಗಿಲ್ಲ. ಈಗ ಲಕ್ಷಾಂತರ ಎಕರೆ ಹೊಲ ನನಗೆ ಸಿಗುತ್ತಿದೆ. ಸುಮ್ಮನೆ ಬೇಡಿದ ಮಾತ್ರಕ್ಕೇ ಅಷ್ಟಕ್ಕೇ ಹೊಲ ದೊರೆಯಲು ನನ್ನದೇನು ಯೋಗ್ಯತೆ?'

ಆದರೂ ಈಗ ಕಾಣುವ ಕೀಳುತನವನ್ನು ವಿಶ್ಲೇಷಣಮಾಡುತ್ತ ನಿಜವಾಗಿ ಸಮಾಜ ಕೆಟ್ಟಿಲ್ಲ. ಆದರೆ ಈಗ ಚಲಾವಣೆಯಾಗುವ ನಾಣ್ಯದ ದೋಷ ಇದು. ಉತ್ಪಾದನೆಗೂ ಇಲ್ಲ, ಪರಿಶ್ರಮಕ್ಕೂ ಇಲ್ಲ ಅದರ ಸಂಬಂಧ. ಅಂಥ ನಾಣ್ಯ ಹೆಚ್ಚಿದರೆ ಜನ ಅದರ ಬೆನ್ನು ಹತ್ತುತ್ತಾರೆ' ಎಂದರು.

## ೨೨. ಸುಲ್ತಾನಪುರದಿಂದ ಪ್ರತಾಪಗಡ

ಹಿಂದಿನ ಜಿಲ್ಲೆಗಳಲ್ಲಿ ಅಷ್ಟೆಲ್ಲ ವಿಸ್ತಾರವಾಗಿ ಕೆಲಸ ನಡೆದಿದ್ದರೂ ಸುಲ್ತಾನಪುರಕ್ಕೆ ಬಂದಾಗ ಇಲ್ಲಿನ ಕೆಲಸಗಾರರಿಗೆ ಇದರ ಗಾಂಭೀರ್ಯವೇ ಅರ್ಥವಾಗಿಲ್ಲ ಎನಿಸಿತು. ಮೊದಲನೆ ಬಿಡಾರ ಗೊರೀಗಂಜಿನಲ್ಲಿ. ಅವರೊಡನೆ ಮಾತಾಡಿದಾಗ ಹೆಚ್ಚು ದಾನ ಪತ್ರಗಳೂ ಬಂದಿರಲಿಲ್ಲ. ೧೦೦೦-೨೦೦೦ ಎಕರೆಗಿಂತ ಹೆಚ್ಚು ಸಂಗ್ರಹಿಸುವ ನಂಬಿಗೆಯೂ ಅವರಿಗಿರಲಿಲ್ಲ. 'ಕನಿಷ್ಠ ಪಕ್ಷ ೨೦ ಸಾವಿರ ಎಕರೆಯಾದರೂ ನೀವು ಸಂಗ್ರಹಿಸಬೇಕು' ಎಂದರು ವಿನೋಬಾ. ಕೇಳಿ ಅವರು ಗಾಬರಿಯಾದರು. ಉಳಿದ ಜಿಲ್ಲೆಯವರು ಹೇಗೆ ಕೆಲಸ ಮಾಡಿದರೋ ವಿವರಿಸಿದರು ವಿನೋಬಾ. ಅವರ ಪ್ರೇರಣೆಯಿಂದ ಕೆಲಸಕ್ಕೆ ತೊಡಗಿ, ಐದೇ ದಿನದಲ್ಲಿ ೧೭ ಸಾವಿರ ಎಕರೆ ಗಳಿಸಿದರು ಕೆಲಸಗಾರರು. ಒಂದು ವರ್ಷದಲ್ಲಿ ಒಂದು ಲಕ್ಷ ಎಕರೆ ಗಳಿಸುವ ಸಂಕಲ್ಪ ಮಾಡಿದರು. ಇನ್ನೂ ಚಮತ್ಕಾರ. ೧೪ ನೂರು ಹಳ್ಳಿ. ೧೪ ನೂರು 'ಗೀತಾ ಪ್ರವಚನ' ಕೊಂಡರು. ೨೨೮ ಜನ 'ಸರ್ವೋದಯ'ಕ್ಕೆ ಚಂದಾದಾರರಾದರು. ೫ ಸಾವಿರ ಎಕರೆ ಹೊಲವನ್ನು ಹದಮಾಡುವ ಶ್ರಮದಾನದ ವಚನ. ಪ್ರಾಂತೀಯ ರಕ್ಷಾದಳ ೨೦೦ ಕೆರೆ – ಹೊಸದು ಕಟ್ಟಿ ಅಥವಾ ಹಳೆಯದನ್ನು ಸರಿಮಾಡಿ - ಕೊಡಲು ಒಪ್ಪಿತು. ೧೦೦೦ ರೂಪಾಯಿನ ಗೊಬ್ಬರ. ಇದೆಲ್ಲವೂ ಯಕ್ಷಿಣಿ ಹೇಗಾಯಿತು? ಕಡೆಯ ಬಿಡಾರದಲ್ಲಿ ವಿನೋಬಾಜೀ ವಿಸ್ತಾರವಾಗಿ ತಿಳಿಸಿದರು. 'ಜನತೆಯಲ್ಲಿ ಪರಮೇಶ್ವರ ಪ್ರತಿಷ್ಠಿತನಾಗಿದಾನೆ. ಆತ ಕಲ್ಪವೃಕ್ಷ. ಅದನ್ನು ಏನು ಬೇಡಿದರೂ ಕೊಟ್ಟೀತು. ಅಲ್ಪ ಬೇಡಿ ಅಲ್ಪ ಪಡೆಯಿರಿ. ಮಹತ್ತು ಬೇಡಿ

ಅದನ್ನು ಪಡೆಯಿರಿ.' ಒಂದು ಮಹತ್ವದ ಸಲಹೆ ಕೊಟ್ಟರು. ' ಜನರ ಬಳಿ ನಿರಹಂಕಾರ ಬುದ್ಧಿಯಿಂದ ಹೋಗಬೇಕು. ನಮ್ಮ ಸ್ವಾರ್ಥ ವಿರದ ನಿಜವಾದ ಮಾತನ್ನು ಹೇಳಬೇಕು.'

ಸುಲತಾನಪುರ ಜಿಲ್ಲೆಯಲ್ಲಿ ಅಮೇಠೀ ಒಂದು ರಾಜ್ಯ. ಅಷರ ರಾಣಾ ರಣಂಜಯಸಿಂಹನ ಹಿರಿಯರು ೧ ಸಾವಿರ ವರ್ಷದ ಹಿಂದೆ ಇಲ್ಲಿಗೆ ಬಂದರು. ಅವರು ಆಮೇರದ (ಜಯಪುರ) ರಾಜವಂಶ ದವರು. ರಾಜ್ಯದಲ್ಲಿ ೩೨೬ ಹಳ್ಳಿಯಿದ್ದುವು ಅದರಲ್ಲಿ ೨೬ ಹಳ್ಳಿ ಯನ್ನು ಸಾರ್ವಜನಿಕ ಕೆಲಸಕ್ಕಾಗಿ ರಾಣಾ ಒಂದು ಧರ್ಮಸ್ವ (ಟ್ರಸ್ಟ್) ಮಾಡಿದಾರೆ. ' ಇಡೀ ಜಿಲ್ಲೆಯಲ್ಲಿ ೩೦೦ ಹಳ್ಳಿಗಳ ರಾಣಾ ಆಗಿರುವುದು ನನಗೆ ಇಷ್ಟವಿಲ್ಲ. ಜಿಲ್ಲೆಯ ೨೫೦೦ ಹಳ್ಳಿಗಳಿಗೂ ನೀವು ರಾಣಾ ಆಗಬೇಕು ' ಎಂದರು.

ರಾಣಾ ಸ್ವಯಂ ವಿದ್ವಾಂಸರು. ಸಂಸ್ಕೃತದಲ್ಲಿ ಒಳ್ಳೇ ಅಧ್ಯಯನ. ನಿರ್ವ್ಯಸನಿ ಮನುಷ್ಯ. ಮಾಂಸ–ಹೆಂಡ ಇಲ್ಲ. ವೀಳೆಯ ದೆಲೆಯ ಚಟವೂ ಇಲ್ಲ. ಭಾವನಾ ಸಂಪನ್ನ, ಭಕ್ತ ಹೃದಯಿ. ನಿಜವಾದ ರಾಣಾ ಆಗಲು ಉಪಾಯ ಹೇಳಿಕೊಡುತ್ತ ಅವರಿಗೆ ವಿನೋಬಾ ಹೇಳಿದರು . ' ತಾವು ಅಧಿಕಾಧಿಕ ದಾನ ನೀಡಿ. ಭಿಕ್ಷಾ ಪಾತ್ರೆ ಹಿಡಿದು ಹೊರಡಿ. ಯಾವ ಕೆಲಸದಲ್ಲಿ ಯಾವ ಗುಣ ಹೊರ ಹೊಮ್ಮುತ್ತದೆಯೋ ಅದರ ಪ್ರಭಾವ ಆ ಕಾಲದ ಮೇಲೆ ಬೀಳುತ್ತದೆ. ರಾಜ್ಯ ಹೋಗುತ್ತದೆಂದು ದುಃಖಿಸಬೇಡಿ. ಮಗ ಕೆಲಸ ಮಾಡು ವಂತಾದರೆ ತಂದೆ ಅವನಿಗೆ ಎಲ್ಲವನ್ನೂ ವಹಿಸುತ್ತಾನೆ. ಲೋಕ ಪ್ರಿಯ ರಾಜರೆಲ್ಲ ತಮ್ಮ ಪ್ರಜೆಯನ್ನು ಮಕ್ಕಳೆಂದು ತಿಳಿದರು. ತಾವು ಪ್ರಜಾ ಸೇವಕರೆಂದು ತಿಳಿದು ಹಾಗೆ ನಡೆದರು. ಈಗಲೂ ಸೇವಕ ರಂತೆ ಅವರು ಕೆಲಸ ಮಾಡಿದರೆ ಪ್ರಜಾ ಹೃದಯದಲ್ಲಿ ಪ್ರೀತಿಯ ಸ್ಥಾನ ಅವರಿಗೆ ದೊರೆತೀತು.' ಮುಂಬರಿದು ' ಈ ಭೂದಾನ

ಯಜ್ಞದಿಂದ ಯಾರೊಬ್ಬರೂ ಬಡವನಾಗನು. ಬಡವನೋ ಭಾಗ್ಯವಂತನೋ ದುಡಿದವರೆಲ್ಲ ಶ್ರೀಮಂತರಾದಾರು' ಎಂದರು.

ತಮ್ಮ ದಾನದ ಮೊದಲನೆ ಕಂತಾಗಿ ರಾಣಾ ಎರಡು ಸಾವಿರ ಎಕರೆ ನೀಡಿದರು. ಕಾಶಿಗೆ ಮುಟ್ಟುವ ವೇಳೆಗೆ ಅವರಿಂದ ಇನ್ನೊಂದು ಸಾವಿರ ಎಕರೆಯ ತಂತಿ ಬಂತು.

ಸುಲ್ತಾನಪುರದಲ್ಲಿ ಇಡೀ ದಿನ ಒಂದು ಅದ್ಭುತ ದೃಶ್ಯ ಕಾಣಬಂತು. ಎಷ್ಟೋ ಜನ ಹೊಲ ನೀಡಲು ಬಂದರು. ಹೊಲಗಳ ಅಳತೆ ಆಕಾರಗಳನ್ನು ತಿಳಿಸಲು ಶ್ಯಾನಭೋಗರೂ ಇದ್ದರು. ಜಿಲ್ಲೆಯ ಶ್ಯಾನುಭೋಗರೆಲ್ಲ ತಮ್ಮ ಖಾತೆ ಖಿರ್ದಿ ಹೊತ್ತು ತಂದಿದ್ದರು. ಅವರ ಸುತ್ತಲೂ ದಾನ ನೀಡುವವರ ಕಡೆಯ ಜನ. ದಿನವೆಲ್ಲ ಹೊಲದ ನಂಬರು, ಅಳತೆ ಹುಡುಕುವುದೇ ಕೆಲಸ.

ಕಡೆಯ ಬಿಡಾರ ತ್ರಿಸುಂಡಿ. ದಾರಿಯಲ್ಲಿ ಅರ್ಧಮೈಲಿ ಅಡ್ಡನುಗ್ಗಿ ರಾಯಪುರ ಹಳ್ಳಿಗೆ ಹೋದೆವು ಮೊದಲು ಈ ಕಾರ್ಯಕ್ರಮವಿರಲಿಲ್ಲ. ಆದರೆ ಹಳ್ಳಿಯವರಿಗೆ ಈ ಹರಿಶರಣನ ಪಾದಧೂಳಿ ತಮ್ಮ ಊರಿಗೆ ಲಭಿಸಬೇಕೆಂದು ಬಹಳ ಆಸೆ. ರಾತ್ರಿ ೯ ಗಂಟೆಗೆ ವಿನೋಬಾಜಿಗೆ ಇದನ್ನು ಸೂಚಿಸಿದೆವು. ನನ್ನ ವೇಳೆ ದರಿದ್ರ ನಾರಾಯಣನ ವೇಳೆ. ಅದಕ್ಕೆ ಶುಲ್ಕ ಬೇಕು, ಎಂದರು.

ರಾತ್ರಿ ೧೨ ಗಂಟೆಗೆ ಗ್ರಾಮಪಂಚಾಯಿತರು ಹಳ್ಳಿಗೆ ಹಿಂದಿರುಗಿದರು. ಬೆಳಿಗ್ಗೆ ನಸುಕಿನಲ್ಲಿ ನಾನು ಹೋಗುವ ವೇಳೆಗೆ ಹಳ್ಳಿ ಚೊಕ್ಕಟವಾಗಿತ್ತು. ಅಲ್ಲಲ್ಲಿ ತೋರಣ-ಮಂಟಪ. ಹಳ್ಳಿಯವರು ನೂರಾ ಹನ್ನೊಂದು ಎಕರೆ ಹೊಲವನ್ನು ನೀಡಿದರು. ಅಲ್ಲಿನ ಗಾಂಧಿ-ಕಟ್ಟೆಯಮೇಲೆ ವಿನೋಬಾಜೀ ಚಿಕ್ಕ ಪ್ರವಚನ ಮಾಡಿದರು. ಕಟ್ಟೆಯ ಇದಿರಿಗೆ ಅಶೋಕ ಚಕ್ರ. ಅದರ ಮೇಲೆ ತ್ರಿವರ್ಣ ಧ್ವಜ. ಅಶೋಕ ಚಕ್ರದ ಸಿಂಹಗಳ ಅರ್ಥ ಹೇಳುತ್ತ ' ಈ ಸಿಂಹಗಳ ಹಾಗೆ

ನಾವು ಧೀರರಾಗಬೇಕು, ಹಸುಗಳ ಹಾಗೆ ಒಗ್ಗಟ್ಟಾಗಿರಬೇಕು' ಎಂದರು.

ತ್ರಿಸುಂಡಿಯಲ್ಲಿ ೩೦೫ ಜನ ದಾನ ನೀಡಿದರು. ಹಿಂದಿನ ಊರಿನಲ್ಲೇ ದಾನಿಗಳ ಸಂಖ್ಯೆ ಹೆಚ್ಚು-೨೪೨. 'ಹನಿ ಹನಿಯಾಗಿ ಎಲ್ಲೆಡೆಯಲ್ಲೂ ಮಳೆಗರೆವಂತೆ ಎಷ್ಟೇ ಬಡವನಾದ ರೈತನಿರಲಿ, ಭೂದಾನ ಯಜ್ಞದಲ್ಲಿ ಸ್ವಲ್ಪ ಕೊಡಲಿ ಇಡೀ ಹಿಂದುಸ್ಥಾನದಿಂದ ೫ ಕೋಟಿ ಎಕರೆ ಬೇಡಿದೇನೆ ನಾನು. ಗೋವರ್ಧನ ಪರ್ವತ ಎತ್ತುವಂಥ ಕಷ್ಟದ ಕೆಲಸ ಇದು. ಎಲ್ಲರ ಶಕ್ತಿಯೂ ಇದಕ್ಕೆ ಮೀಸಲಾದಾಗಲೇ ದೇವರ ಕೈ ಬೆರಳಿನ ಸ್ಪರ್ಶವಾಗಿ ಆ ಪರ್ವತ ಮೇಲಕ್ಕೆ ಎದ್ದೀತು. ಈ ಜಿಲ್ಲೆ ಆ ಒಗ್ಗಟ್ಟಿಗೆ ಮೇಲ್ಪಂಗ್ತಿ ಯಾಗಲಿ.'

ವಿನೋಬಾಜೀ ಹೊರಟು ಬಂದ ಮೇಲೆ ಸುಲ್ತಾನಪುರದ ಗೆಳೆಯರು ಇನ್ನೂ ೧೦ ಸಾವಿರ ಎಕರೆ ಕೂಡಿಸಿದರು. ಅದರಲ್ಲಿ ೨೨೨ ಹಳ್ಳಿಗಳ ಪಂಚಾಯತಿಗಳು ೧೩೦೦ ಎಕರೆ ಕೊಟ್ಟುವು. ವ್ಯಾಪಕದೃಷ್ಟಿಯಿಂದ ಕೆಲಸವಾಗಲಿ ಎಂದು ಪಂಚಾಯತಿಗಳಿಂದ ಈ ಕೆಲಸ ಮಾಡಿಸಿದ್ದು ಅನುಕರಣೀಯ. ಪ್ರತಿಯೊಂದು ಗ್ರಾಮ ಪಂಚಾಯತಿಯೂ ಐದೈದು ಎಕರ ಹೊಲ ಕೊಡುವಂತೆ ಮಾಡ ಬೇಕೆಂದು ಸುಲ್ತಾನಪುರದವರ ಯೋಜನೆ ಅಲ್ಲಿ ೨೪೪ ಪಂಚಾಯತಿ ಇವೆ. ಎಲ್ಲಾ ಬಗೆಯಲ್ಲೂ ಉಳಿದ ಜಿಲ್ಲೆಗಳಿಗೆ ಮೇಲ್ಪಂಗ್ತಿ ಯಾಯಿತು ಸುಲ್ತಾನಪುರ. ನಾಲ್ಕೇ ದಿನದಲ್ಲಿ ಎಲ್ಲ ಪುರುಷಾರ್ಥ ವನ್ನೂ ಸಾಧಿಸಿತು. ಈ ಜಿಲ್ಲೆಗೆ ಕಾಲಿಟ್ಟಾಗ, ಬೀಳ್ಕೊಳ್ಳುವಾಗ ಏನು ವ್ಯತ್ಯಾಸ? ಭೂಮಿ ಆಕಾಶಗಳಷ್ಟು!

ಪ್ರತಾಪಗಡ ತಲಪಿದಾಗ ವೇದಮಂತ್ರ ಸಹಿತ ಸ್ವಾಗತ ವಾಯಿತು. 'ಇದಕ್ಕಿಂತ ಹೆಚ್ಚಿನ ಸ್ವಾಗತವಿನ್ನೇನು? ನನಗೆ

ವೇದಗಳು ತಾಯಿ. ವೇದದ ಅಪ್ಪಣೆ ನನಗೆ ಮಾತೃವಾಕ್ಯ. ನಾನೀಗ ಹಿಡಿದ ಕೆಲಸ ವೇದಗಳಿಗೆ ಅತ್ಯಂತ ಪ್ರಿಯವಾದುದು. ಮಾತಾ ಭೂಮಿಃ ಪುತ್ರೋಽಹಂ ಪೃಥಿವ್ಯಾಃ ಎಂದು ವೇದದ ಅಪ್ಪಣೆ. ಎಲ್ಲರಿಗೂ ಅಧಿಷ್ಠಾನ ಕೊಡುವವಳು, ಎಲ್ಲರಿಗೂ ಸಾವ್ಯ ನೀಡುವವಳು, ಈ ಭೂಮಿ-ತಾಯಿಯುಂತೆ; ಭೂಮಿಯಿಲ್ಲದೆ ಯಾವ ವಸ್ತುವೂ ಇಲ್ಲ ಎಂದು ವೇದಗಳು ಹೇಳಿವೆ. ಭೂಮಿಯೆ ಎಲ್ಲಕ್ಕೂ ಮೂಲಾಧಾರ. ಅಂಥ ಮೂಲಾಧಾರ ವಸ್ತುವಿನ ಹಂಚಿಕೆ ಯೋಗ್ಯವಾಗಿ ಆಗದಿದ್ದರೆ, ಕೆಲವರಿಗೇ ದೊರೆತರೆ ಜನಕ್ಕೆ ಸುಖವಿರದು. ಭೂಮಿಯ ಹಂಚಿಕೆ ಸರಿಯಾಗಿ ಆಗದಿದ್ದರೆ ಜನ ಪರಿಶ್ರಮಮಾಡರು. ಜನರು ಪರಿಶ್ರಮ ನಿಷ್ಠರಾಗಬೇಕೆಂದು ನಮ್ಮ ಬಯಕೆ. ಅಂತೇ ಈ ದಾರಿ ಹಿಡಿದುದು ನಾನು. ಈ ಕೆಲಸ ನಿಧಾನವಾದೀತು. ಆದರೆ ಎದೆ ಕುಂದ ಬಾರದು.'

ಶ್ರೀರಾಮನ ದೃಷ್ಟಾಂತ ಕೊಟ್ಟು, ೧೪ ವರ್ಷ ವನವಾಸದ ಪ್ರಸ್ತಾಪಮಾಡಿ ವಿನೋಬಾ ಹೇಳಿದರು—'ಕಲ್ಯಾಣಕಾರಿ ಕೆಲಸಕ್ಕೆ ಎಷ್ಟು ಕಾಲ ಹಿಡಿಯುತ್ತದೆ ಎಂಬುದರ ಚಿಂತೆ ನಮಗೆ ಬೇಡ. ಅದನ್ನು ಮಾಡುವವನಿಗೆ ಯಾವಾಗಲೂ ಅಮರತೆಯೆ. ಇದು ದೇವರಿಗೆ ಇಷ್ಟವಾದ ಕೆಲಸ' ಎಂದರು. 'ಇಂಥ ಕೆಲಸ ಲೋಕದಲ್ಲಿ ಎಲ್ಲೂ ಎಂದೂ ಆಗಿಲ್ಲ. ಹೊಸ ಕೆಲಸ ಮಾಡಿಸಲು ದೇವರು ಹೊಸಬರನ್ನೆ ಕಳಿಸುತ್ತಾನೆ. ಲೋಕದಲ್ಲಿ ಹಿಂದೆ ಆಗಿರದಿದ್ದ ಈ ಕೆಲಸಕ್ಕಾಗಿಯೆ ದೇವರು ನನಗೆ ಜನ್ಮಕೊಟ್ಟನೇನೋ!'

# ೨೩. ಪ್ರಯಾಗದ ನೆನಪು

ಪ್ರತಾಪಗಡದ ಕೊನೆಯ ಊರು ಕ್ಷೇತ್ರಪಾಲಗಡ. ಪ್ರಯಾಗಕ್ಕೆ ಹತ್ತಿರ ಇದೆ. ಕ್ಷೇತ್ರಪಾಲಗಡ ಬಿಟ್ಟು ಹೊರಟು ಬೆಳಗಿನ ಪ್ರಾರ್ಥನೆ ಮಾಡುತ್ತಲೇ ಪ್ರಯಾಗದ ಜಿಲ್ಲೆಗೆ ಬಂದೆವು. ಗಡಿಯಲ್ಲಿ ಎಲ್ಲವೂ ಸಜ್ಜಾಗಿತ್ತು ಸ್ವಾಗತಕ್ಕೆ. ಜಿಲ್ಲೆಯ ಮುಖ್ಯ ಕೆಲಸಗಾರರೆಲ್ಲ ಬಂದಿದ್ದರು. ಇನ್ನೂ ಅರುಣೋದಯಕ್ಕೆ ಮೊದಲು ಚಿಮುಚಿಮು ನಸುಕು. ಬಂದವರು ತಂದ ಹೂಹಾರವನ್ನು ತೆಗೆದುಕೊಂಡರು ವಿನೋಬಾ. ಅದು ಬರೀ ಪತ್ರಂ ಪುಷ್ಪಂ ಅಲ್ಲ. ತಮ್ಮ ಪಾಲಿನ ಭೂದಾನದ ಸಂಗ್ರಹದ ಸೂಚನೆ.

ಮೊದಲನೆ ಬಿಡಾರ ಶಿವಗಡ. ಅಲ್ಲಿಗೆ ಸ್ವಯಂ ಟಂಡನ್‌ಜೀ ಬಂದಿದ್ದರು. ಅವರ ಕಣ್ಣಿನಲ್ಲಿ ಆನಂದ, ಆದರ, ಸ್ನೇಹಗಳು ಸೂಸುತ್ತಿದ್ದವು ಬಿಡಾರದಲ್ಲಿ ಇಬ್ಬರೂ ಒಂದು ಗಂಟೆಯ ಹೊತ್ತು ನಾನಾ ವಿಷಯಗಳ ಬಗ್ಗೆ ಮನಬಿಚ್ಚಿ ಮಾತಾಡಿದರು. ಸಂಜೆಗೆ ಮತ್ತೆ ಟಂಡನ್‌ಜೀ ಪ್ರಯಾಗದಿಂದ ಬಂದರು. ಸಂಜೆಗೆ ಜಿಲ್ಲೆಯ ಪರವಾಗಿ ವಿನೋಬಾಗೆ ಸ್ವಾಗತ ನೀಡುತ್ತ 'ಈ ಮೂರ್ತಿ ಇಲ್ಲಿ ಬಂದದ್ದು ನಿಮ್ಮ-ನನ್ನ ಸೌಭಾಗ್ಯ. ನೋಡಿ, ಎಷ್ಟು ಒಣಕಲು. ಆದರೆ ಅವರ ಮನೋಬಲ ಬಹಳ ಜನಕ್ಕಿಲ್ಲ. ಈ ಯುಗದಲ್ಲಿ ಈ ಯೋಗ್ಯತೆಯ ಜನ ಕೈಯಲ್ಲಿ ಎಣಿಸುವಷ್ಟು. ಇದ್ದರೂ ಹೀಗೆ ಭಿಕ್ಷೆಬೇಡುತ್ತ ಬಂದಿಲ್ಲ. ಯಾರಿಗಾಗಿ ಈ ಭಿಕ್ಷೆ ಬೇಡುತ್ತಿದಾರೆ ವಿನೋಬಾ? ಜನರಿಗಾಗಿ ಕೇಳುತ್ತಿದಾರೆ, ತಮಗಾಗಿ ಅಲ್ಲ. ಅವರು ತಪಸ್ವಿ, ತ್ಯಾಗಿ. ನಿಮ್ಮಲ್ಲಿ ದುಃಖಿ, ದರಿದ್ರ ಭೂಮಿಹೀನ ಆದವರ ದುಃಖ ದೂರವಾಗಲೆಂದು ಅವರು ಹೊಲ ಕೇಳುತ್ತಿದಾರೆ' ಎಂಧರು,

ಬಾಯಲ್ಲಿ ಮಾತು ಹೊರಡುತ್ತಿದ್ದರೂ ರಾಜರ್ಷಿ ಟಂಡನ್‌ಗೆ ಹೃದಯದಲ್ಲಿ ಹಿಡಿಸಲಾರದ ಸಂಕೋಚ. ಕಡೆಗೆ ಅಂದೂ ಬಿಟ್ಟರು. 'ಅವರನ್ನು ಇಲ್ಲಿ ಕೂಡಿಸಿ ನಾವು ಈ ಮಾತೆಲ್ಲ ಆಡುವುದು ಸರಿಯಲ್ಲ. ಅವರು ಮೊದಲಿಟ್ಟ ಕೆಲಸ ಯುಗವನ್ನು ಮೊದಲಿಡುವಂಥದು. ಕ್ರಾಂತಿಕಾರಿ. ಹೊಸಬಗೆಯ ಭಿಕ್ಷಾರ್ಥಿ ಬಂದಿದಾರೆ. ಅದರಿಂದ ಒಂದು ಹೊಸ ಭಾವನೆ ನಾಲ್ಕೂ ದಿಕ್ಕಿಗೆ ಹರಡಿದೆ'

ತಮ್ಮ ಭಾಷಣದಲ್ಲಿ ವಿನೋಬಾ ಹೇಳಿದರು : ಶಿವೋ ಭೂತ್ವಾ ಶಿವಂ ಭಜತೇ - ಬಡವರ ಸೇವೆಯನ್ನು ಪರಿಪೂರ್ಣವಾಗಿ ಮಾಡಲು ಬಡವನೇ ಆಗಬೇಕು. ಗೊಬ್ಬಳಿ ಗಿಡ ನೆಟ್ಟು ಮಾವಿನ ಹಣ್ಣು ಬಿಟ್ಟೀತೆಂದು ಕಾದು ಕುಳಿತವರುಂಟೆ? ಜನ ನನಗೆ ರಷ್ಯಾದ ಮಾತು ಹೇಳುತ್ತಾರೆ. ಅದರ ಬಗ್ಗೆ ಈಗಾಗಲೇ ಆಡುವುದು ಸರಿಯಲ್ಲ. ನಾನು ಹಿಡಿದ ದಾರಿಯ ಅನುಭವ ಜನರಿಗೆ ಮಾಡಿಕೊಡುವುದು ನನ್ನ ಕೆಲಸ. ನನ್ನ ದಾರಿ ಜೇನು ಹುಳದ ರೀತಿ. ಯಾರಿಗೂ ತೊಂದರೆಯಾಗದೆ ಭೂದಾನ ಗಳಿಸಬೇಕು. ಒಬ್ಬನ ಸುಖ ಇನ್ನೊಬ್ಬನ ಸುಖಕ್ಕೆ ವಿರುದ್ಧವಲ್ಲ. ಅದೇ ನಿಜಸುಖದ ಲಕ್ಷಣ. ಆರಯ್ದು ನೋಡಿದರೆ ಒಬ್ಬನ ಹಿತದಿಂದ ಇನ್ನೊಬ್ಬನ ಹಿತ ಆಗಬೇಕು. ಹೆಚ್ಚು ಹೆಚ್ಚು ಜನ ಈ ಕೆಲಸದಲ್ಲಿ ತೊಡಗಲಿ ಎಂದು ನನ್ನ ಬಯಕೆ, ಇದಕ್ಕೆ ಲಕ್ಷಾಂತರ ಜನರ ಸೇವೆ ಬೇಕು. ಇದರಿಂದ ದೇಶಕ್ಕೆ ಮತ್ತೆ ಹೊಸ ಶಕ್ತಿ ಬಂದೀತು. ಇದು ಆರ್ಥಿಕ ಕ್ರಾಂತಿಯ ಕೆಲಸ. ಇದರಿಂದ ನಮ್ಮ ಜನರ ಶಕ್ತಿ ಬೆಳೆದೀತು. ಆ ಶಕ್ತಿಗೆ ಅನುಸಾರ ದೇಶದ ರೂಪೂ ಬದಲಿಸೀತು. ಅಂತೇ ಇದು ಉತ್ತಮ ರಾಜಕೀಯ ಎನ್ನುತ್ತೇನೆ.'

ಮುಂಬರಿದು 'ಬರೀ ಹೊಲ ಗಳಿಸುವುದಲ್ಲ ನಮ್ಮ ಕೆಲಸ ಅಷ್ಟು ಹೃದಯ ಗಳಿಸಬೇಕು. ಹೊಲಕ್ಕಿಂತ ದೊಡ್ಡದು ಹೊಲ

ನೀಡುವವರ ಹೃದಯ. ಪ್ರೀತಿಯಿಂದ ನೀಡಿದವನು ಹೊಲವನ್ನಂತೂ ಸರಿ, ಹೃದಯವನ್ನೂ ಹಂಚುತ್ತಾನೆ. ಸಹಕಾರಿಯಾಗುತ್ತಾನೆ. ಈ ಕೆಲಸ ಮುಗಿಯದೆ ಬಿಡುವು—ತೆರವು ನನಗೆ ಅಲ್ಲ ಎಂದು ನಿರ್ಧರಿಸಿದೇನೆ. ಅರ್ಥಂ ವಾ ಸಾಧಯೇತ್, ದೇಹಂ ವಾ ಪಾತಯೇತ್.'

ಜಿಲ್ಲೆಯಲ್ಲಿ ಇದೇ ಮೊದಲನೆ ಭಾಷಣ. ಎಲ್ಲಾ ಕೆಲಸಗಾರರೂ ಇದ್ದರು ಎಲ್ಲರ ಕಿವಿಯೊಳಗೂ ಆ ವಾಣಿ ಝೇಂಕಾರ ಮಾಡಿತು. ಎಷ್ಟೋ ಹೃದಯಕ್ಕೆ ತಾಕಿತು. ಕೇಳಿದವರಿಗೂ ಕೇಳದವರಿಗೂ. ಗಾಳಿಯಲ್ಲೇ ಬೆರೆತದ್ದು ಎಲ್ಲರನ್ನೂ ತಾಕದೆ ಏನು ಮಾಡೀತು?

ಪ್ರಯಾಗದ ಐತಿಹಾಸಿಕ ತಪೋಭೂಮಿ, ಪುಣ್ಯಭೂಮಿಗೆ ಬಂದೆವು. ಸಿಂಧದ ಮಹಾಕವಿ ದುಖಾಯಲ್ ಕೆಲವು ದಿನದಿಂದ ನಮ್ಮ ಜತೆಗೇ ಇದಾರೆ. ಅವರು ಖಂಜರಿ ಬಾರಿಸುತ್ತ ತಾವೂ ಹಾಡಿ ಉಳಿದವರನ್ನೂ ಹಾಡಲು ಹಚ್ಚಿದರು. ಗಾಳಿ ದುಮುದುಮಿಸಿ ಹೋಯಿತು. ಪ್ರಯಾಗ ಹತ್ತಿರ ಬಂದಂತೆ ಹೆಜ್ಜೆ ಹೆಜ್ಜೆಗೂ ಪವಿತ್ರ ಚರಣ ಚಿಹ್ನೆಯ ನೆನಪಾಗುತ್ತಿತ್ತು—ಹನುಮಂತನಂಥ ಆದರ್ಶ ಸೇವಕನ ಹಿರಿಯ ನಿಧಿಯಾದವನ, ತುಲಸೀದಾಸನಂಥ ಲೋಕ ಹಿತಕಾರಿ ಭಕ್ತನ ಕೀರ್ತಿಗೆ ಆಧಾರನಾದವನ, ಯಾರ ಚರಣ ನಿಷ್ಠೆಯಿಂದ ಪ್ರಹ್ಲಾದನ ಬಾಳು ಸತ್ಯಾಗ್ರಹ ನಿಷ್ಠವಾಯಿತೋ, ಅನಂತ ಕಾಲದಿಂದ ಯಾರು ಕೋಟ್ಯಂತರ ಜನರ ಪಾಲಿನ ಭರವಸೆಯೋ, ಬಾಪೂನ ಅಂತ್ಯೋದ್ಧಾರದಿಂದ ಯಾರ ಹೆಸರು ಭಾರತಕ್ಕೂ ಲೋಕಕ್ಕೂ ದಿವ್ಯಸಂದೇಶವಾಯಿತೋ, ಅವನ ಪವಿತ್ರ ಚರಣ! ಅದೇ ಪಾದಸ್ಮರಣೆಯಿಂದಲೇ ೧೫ ತಿಂಗಳ ಕೆಳಗೆ ತೆಲಂಗಾಣದ ಯಾತ್ರೆ ಮೊದಲಾದುದು ಅದೇ ಭೂದಾನ ಯಜ್ಞಕ್ಕೆ

ಅಧಿಷ್ಠಾನವಾದುದು. ಜನಮನದಲ್ಲಿ ರಮಿಸುತ್ತಿರುವ ಆ ರಾಮನ ಹೆಸರನ್ನು ನೆನೆದೇ ಈ ಯುಗಪುರುಷ ಹೆಜ್ಜೆ ಹಾಕುತ್ತಿದ್ದರು. ಅವರ ಹಿಂದೆ ಹಿಂದೆ ಭಕ್ತಿಭಾವನಾಪೂರ್ಣ ವಿರಾಟ್ ಜನ ಸಮುದಾಯ.

ಬಂದಿದ್ದ ಜನಕ್ಕೆ ಟಂಡನ್‌ಬಾಬು ಹೇಳಿದರು–ಸಂಜೆಗೆ ಮಳೆ ಸುರಿದೀತು. ಮಳೆ ಬರಲಿ. ಬೇಕು. ಎಷ್ಟೇ ಸುರಿಯಲಿ ಸಭೆಗೆ ಬನ್ನಿ. ಜನರು ಮನೆಗೆ ತಲಪುವ ಹೊತ್ತಿಗೆ ಮಳೆ ಬಲವಾಗಿ ಬಂತು. ಸಂಜೆಯ ಹೊತ್ತಿಗೆ ಮಳೆ ತೆರಪುಕೊಟ್ಟಿತು. ಪುರುಷೋತ್ತಮ–ದಾಸ ಪಾರ್ಕಿನಲ್ಲಿ ಸಭೆ. ಮಳೆ ಬಂದು ನೆಲ ಹಸಿಯಾಗಿದ್ದರೂ ಜನರು ಮೂರು ಗಂಟೆಯ ಹೊತ್ತು ನಿಂತಿದ್ದರು. ಭೂದಾನ ನೀಡಿದವರ ಹೆಸರಿನ ಪಟ್ಟಿ ಬಹಳ ದೊಡ್ಡದಾಗಿ ಕಡೆಕಡೆಗೆ ಬರೀ ತಾಲೂಕಿನ ಮೊತ್ತವನ್ನು ಹೇಳಬೇಕಾಯಿತು. ಪ್ರಯಾಗದ ಪಾಲು ೧೫ ಸಾವಿರ. ಅದನ್ನು ಬಹಳ ಕಷ್ಟಪಟ್ಟು ಕೆಲಸಗಾರರು ಗಳಿಸಿದ್ದರು ವಿನೋಬಾಗೆ ಅಷ್ಟರಿಂದ ತೃಪ್ತಿಯೆ? 'ಈ ಹದಿನೈದು ಸಾವಿರಕ್ಕಾಗಿ ನೀವು ಟಂಡನ್‌ಜೀಗೆ ತೊಂದರೆ ಕೊಟ್ಟಿರಾ? ಒಂದು ಲಕ್ಷವಾದರೂ ಮಾಡ ಬೇಕು' ಎಂದರು.

ಟಂಡನ್ ಬಹಳ ಚಿಕ್ಕ ಭಾಷಣ ಮಾಡಿದರು. 'ಭೂಮಿ ಹೀನರ ನಾಲಗೆಯಾಗಿ ಅವರು ಬಂದಿದಾರೆ. ಜನ ಚೀನಾ - ರಷ್ಯಾದ ಮಾತಾಡುತ್ತಾರೆ ಈಗ. ನಮಗೆ ಯಾರೂ ನಕಲೂ ಬೇಡ. ಅವಸ್ಥಾ ಭೇದದಿಂದ ಧರ್ಮಭೇದವೂ ಆಗುತ್ತದೆ. ಬಲವಂತವಾಗಿ ಹೊಲ-ಆಸ್ತಿ ಕಿತ್ತುಕೊಳ್ಳುವ ಮಾತನ್ನು ವಿನೋಬಾ ಆಡರು. ಚೀನಾ - ರಷ್ಯಾಗಳಂತೆ ಕಲಹ - ಕೊಲೆ ಆಗಬೇಕೆಂದು ಅವರ ಬಯಕೆಯಲ್ಲ. ನಮ್ಮ ಸ್ಥಿತಿಗೆ ಅನುಕೂಲವಾಗಿ ನಮ್ಮದೇ ರೀತಿಯಲ್ಲಿ ಕೆಲಸ ಮಾಡೋಣ. ನಮಗೆಲ್ಲ ಗಾಂಧೀಜಿಯ ಕಲ್ಪನೆ ಗೊತ್ತಿದೆ. ಅದಕ್ಕೆ ಬಣ್ಣ ಕಟ್ಟಿದಾರೆ ವಿನೋಬಾ.'

ವಿನೋಬಾಜೀ ತಮ್ಮ ಭಾಷಣದಲ್ಲಿ ನೀತಿಯ ತಳಹದಿಯ ಮೇಲೆ ಕಟ್ಟಿದ ಅರ್ಥಶಾಸ್ತ್ರ - ಸಮಾಜ ಶಾಸ್ತ್ರಗಳ ವಿವೇಚನೆಯನ್ನು ದೀರ್ಘವಾಗಿ ಮಾಡಿದರು. ಭೂದಾನ ಯಜ್ಞದ ತರುವಾಯ ಸಾಮ್ಯ ಯೋಗದ ಸ್ಥಾಪನೆಯ ಪೂರ್ಣ ಕಾರ್ಯಕ್ರಮವನ್ನು ತಿಳಿಸಿದರು. ಮುಂದಿನ ಕಾರ್ಯಕ್ರಮವನ್ನು ಜನತೆಗೆ ಇನ್ನು ತಿಳಿಸುವ ಕಾಲ ಬಂತು ಅನಿಸಿತೋ ಏನೋ!

ಪ್ರಯಾಗದ ಕೆಲಸ ಮುಗಿಸಿ ಬೆಳಿಗ್ಗೆ ಟಂಡನರ ಆಶ್ರಮದ ದಾರಿಯಲ್ಲಿ ಮುಂದೆ ಹೋಗಬೇಕಾಗಿತ್ತು. ಆಶ್ರಮ ಗಂಗೆಯ ಅತ್ತಣ ದಡದಲ್ಲಿ. ಇತ್ತ ದೋಣಿ ಸಿದ್ಧವಾಗಿತ್ತು. ನಾವು ಆಶ್ರಮಕ್ಕೆ ಹೋಗುವ ಮೊದಲೇ ಟಂಡನರೇ ಬಂದು ಕಾದಿದ್ದರು. ದೋಣಿ ದಡವನ್ನು ಬಿಟ್ಟೊಡನೆ ನದಿ ನೀರು ಸಿಂಪಡಿಸಿತು. ಎಷ್ಟು ತಣ್ಪು ಆ ಮಾತೃಸ್ಪರ್ಶ! ದೋಣಿ ಸಾಗಿದಂತೆ ಅಲೆ ಮೇಲೆ ಮೇಲೆ ಹಾರಿ ಬರುತ್ತಿದ್ದುವು ಉಕ್ಕಿ ಬರುತ್ತಿದ್ದುವು, ತಾಯಿಯ ಎದೆಯ ವಾತ್ಸಲ್ಯ ಉಕ್ಕಿ ಬಂದಂತೆ. ಯಾತ್ರಿಕರ ಮನಸ್ಸು ಕರಗದಿದ್ದೀತೆ? ಅಲೆಗಳು ಶ್ರುತಿಗೊಟ್ಟುವೋ ಇಲ್ಲವೋ ನಮ್ಮ ಜತೆ ಕೆಲಸಗಾರರ ಕಂಠ ತಾನೇ ಮೊಳಗಿತು - ಸುಂದರ ಭಜನೆಗಳಿಂದ. ವಿನೋಬಾಜೀ ಮುಗ್ಧರಾಗಿ ಕೇಳುತ್ತಿದ್ದರು.

ಆಶ್ರಮದಲ್ಲಿ ಎಲ್ಲರನ್ನೂ ವಿನೋಬಾಜಿಗೆ ಪರಿಚಯ ಮಾಡಿಸಿದರು. ನಾನಾ ಕಡೆಗಳಿಂದ ವಿದ್ಯಾರ್ಥಿಗಳು ಇಲ್ಲಿಗೆ ರಾಷ್ಟ್ರ ಭಾಷೆ ಕಲಿಯಲು ಬರುತ್ತಾರೆ. ಬಹಳ ಪರಿಶ್ರಮದಿಂದ ಅವರು ಹಿಂದೀ ಕಲಿಯುತ್ತಾರೆ. ಉತ್ತರ ದೇಶದವರು ದಕ್ಷಿಣದ ಒಂದು ಭಾಷೆಯನ್ನು ಕಲಿಯಬೇಕು. ಅದರಿಂದ ಸೌಹಾರ್ದ ಬೆಳೆಯುತ್ತದೆ. ಇಂಥ ಅನುಕೂಲ ಕಲ್ಪಿಸಿಕೊಳ್ಳಬೇಕು. ದಕ್ಷಿಣ ಭಾರತದವರಿಗೂ ಒಂದು ಮಾತು ಹೇಳಿದರು. ತಮ್ಮ ವ್ಯವಹಾರವನ್ನು ಅವರು

ನಾಗರಿಯಲ್ಲಿ ಮಾಡಿದರೆ ಒಳಿತು. ಭಾಷೆ ಅದೇ ಇರಲಿ. ಲಿಪಿ ಮಾತ್ರ ನಾಗರಿಯಾಗಿರಲಿ. ಇದರಿಂದ ಏಕ ರಾಷ್ಟ್ರಲಿಪಿಯ ಪರಿಣಾಮ ಕಂಡುಬಂದೀತು. ಇವರು ಬೇರೆ ಬೇರೆ ಪ್ರಾಂತಗಳಲ್ಲಿ ಕೆಲಸ ಮಾಡುವಾಗ ಏಕಲಿಪಿಗೆ ಅನುಕೂಲವಾದ ಗಾಳಿಯನ್ನ ಹರಡಲಿ. ಎಂದಾದರೊಂದು ದಿನ ದೇಶದಲ್ಲಿ ಏಕಲಿಪಿ ಆಗಲೇಬೇಕು.

ಮೂರು ದಿನದ ಸತ್ಸಂಗದ ತರುವಾಯ ಟಂಡನ್‌ರನ್ನು ಬೀಳ್ಕೊಳ್ಳಬೇಕಾಯಿತು. ಸ್ವಲ್ಪ ದೂರ ಜತೆಗೆ ಬರಲು ರಾಜರ್ಷಿಯ ಹೆಜ್ಜೆ ಹುರುಪುಗೊಂಡಿತ್ತು. ಆದರೆ ವಿನೋಬಾ ಅವರನ್ನು ತಡೆದರು. ಹಿಂದಿರುಗಿ ಎಂದು ಒತ್ತಾಯ ಮಾಡಿದರು. ಇಬ್ಬರೂ ವಿನಯ, ಲೋಕಕಲ್ಯಾಣ ಭಾವನೆಗಳ ಮೂರ್ತಿಗಳು. ಸುತ್ತಲೂ ಸೊಬಗಿನ ಭಾವನೆ ಮೂಡಿಹೋಯಿತು.

ಬೆಳಿಗ್ಗೆ ೯ ರಿಂದ ೧೦ ರವರೆಗೆ ಕೆಲಸಗಾರರೊಡನೆ ಚರ್ಚೆಯಾಯಿತು. ಪ್ರಾಸ್ತಾವಿಕ ಭಾಷಣದಲ್ಲಿ ವಿನೋಬಾ ತಿಳಿಸಿದರು : ' ಕೆಲಸಗಾರರು ನನಗೆ ಬಹಳ ಸಹಕಾರ ನೀಡಿದೀರಿ. ಆದರೆ ಹಳ್ಳಿಗಳಲ್ಲಿ ಜನರ ಸಂಪರ್ಕವಿಟ್ಟು ಕೆಲಸಮಾಡುವ ಕೆಲಸಗಾರರು ಕಡಿಮೆ. ಇಲ್ಲವೇ ಇಲ್ಲವೆಂದರೂ ಸರಿ. ಇದಕ್ಕೆ ಮುಖ್ಯ ಕಾರಣ, ಕಾಂಗ್ರೆಸ್ಸಿನಲ್ಲಿ ಜನ – ಸಂಪರ್ಕದ ಕಾರ್ಯಕ್ರಮ ಇಲ್ಲದಿರುವುದು. ಐದು ವರ್ಷದ' ಯೋಜನೆ ಅಣಿಯಾದಮೇಲಾದರೂ ಬರುತ್ತದೆಯೋ? ಎಂದರೆ ಅಲ್ಲಿಯವರೆಗೆ ಕೆಲಸಗಾರರು ಅನಾಶ್ರಮಿಗಳು. ಆಶ್ರಮದ ಅಭಾವವನ್ನು ಒಂದು ಗಳಿಗೆಯೂ ಸಹಿಸಲಾಗದೆಂದು ನಮ್ಮ ಶಾಸ್ತ್ರಕಾರರು ಹೇಳಿದಾರೆ. ಆದ್ದರಿಂದ ದಿನವೂ ಜನ - ಸಂಪರ್ಕ ಬೆಳೆವ ಕೆಲಸ ಮಾಡಬೇಕು. ಪಾನನಿರೋಧ, ಅಸ್ಪೃಶ್ಯತಾ ನಿವಾರಣೆಗಳ ಬಗ್ಗೆ ಅನುಕೂಲವಾದ ಶಾಸನವಾದರೂ ಕೆಲಸಗಾರರು ಸರಕಾರಿ ಅಧಿಕಾರಿಗಳ ಭರವಸೆಯಿಂದ ತಾವು ಉದಾಸೀನರಾದರು. ಇದು ತಪ್ಪು.

ನೈತಿಕ ಕಾರ್ಯಕ್ರಮವೆಂದು ತಿಳಿದುದನ್ನು ಅಸಡ್ಡೆ ಮಾಡಿದರೆ? ಕೆಲಸಗಾರರು ಹೆಣದಂತೆ ಆಗಿದ್ದಾರೆ ಎಂದೆ. ಈ ಮಾತನ್ನು ಆಡಿದುದಕ್ಕೆ ನನಗೆ ಪಶ್ಚಾತ್ತಾಪವಿಲ್ಲ. ಕಾಂಗ್ರೆಸ್ಸಿನಲ್ಲಿ ಶಕ್ತಿ ಸಂಪನ್ನ ಕೆಲಸಗಾರರಿದ್ದಾರೆ. ಕಾಂಗ್ರೆಸ್ಸಿನವರು ಕೆಲವರು ಸರಕಾರಕ್ಕೆ ಹೋದರು. ಸರಿಯೆ - ಇಲ್ಲವಾದರೆ ಸ್ವರಾಜ್ಯ ತೆಗೆದುಕೊಂಡದ್ದೇಕೆ? ಆದರೆ ಉಳಿದವರಿಗಾಗಿ ಕಾಂಗ್ರೆಸ್ಸು ಏನು ಕಾರ್ಯಕ್ರಮ ಕೊಟ್ಟಿದೆ? ಈಗ ಭೂದಾನ ಯಜ್ಞ ಚಳುವಳಿಯನ್ನು ಕಾಂಗ್ರೆಸ್ ಹಿಡಿದರೆ ಅದರ ಶುದ್ಧಿಯಾದೀತು, ಶಕ್ತಿ ಹೆಚ್ಚೀತು. ಲಕ್ಷಗಟ್ಟಲೆ ಸದಸ್ಯರನ್ನು ಮಾಡಿ ಬಂದದ್ದೇನು? ತ್ಯಾಗದ ಕಾರ್ಯಕ್ರಮವಿದ್ದರೆ ಸಂಸ್ಥೆ ಗಟ್ಟಿಯಾಗುತ್ತದೆ. ನೀವು ಹೆಚ್ಚು ಜನ ಕಾಂಗ್ರೆಸಿನವರು ಎಂದು ಆ ಮಾತು ಆಡಿದೆ. ಎಲ್ಲರೂ ಮಾಡಬೇಕಾದ ಕೆಲಸ ಇದು.'

ಪ್ರಶ್ನೆ: ತಮಗೆ ಹೊಲ ಕೊಡುವ ಜನ ಯಾರು? ಶಾಸನ ಮಾಡಿದರೆ ದೊಡ್ಡ ಭೂಸ್ವಾಮಿಗಳಿಂದ ಸುಲಭವಾಗಿ ಹೊಲ ಸಿಗಬಹುದಲ್ಲ?

ಉತ್ತರ: ನಾನು ಭಿಕಾರಿ. ಎಲ್ಲರನ್ನೂ ಬೇಡುತ್ತೇನೆ. ಎಲ್ಲರೂ ಕೊಡಲಿ. ಕೊಡದವರನ್ನು ಬಲಾತ್ಕರಿಸುವುದು ನನಗೆ ಇಷ್ಟವಿಲ್ಲ. ನನಗೆ ಯಾವ ಅಧಿಕಾರವೂ ಇಲ್ಲ. ಅದೇ ನನ್ನ ದೊಡ್ಡ ಶಕ್ತಿ. ಭಗವಾನ್ ಬುದ್ಧನ ಬಳಿ ಅಧಿಕಾರವಿತ್ತು. ಆದರೆ ಇದು ಕೆಲಸ ಮಾಡಿಸುವುದಲ್ಲ, ಕೆಡಿಸುವಂಥದು ಎಂದು ಆತ ಅರಿತ. ಹೊಲಗಳಿಸುವುದೇ ನನಗೆ ಮುಖ್ಯವಲ್ಲ ಲೋಕಸಂಗ್ರಹವೇ ಮುಖ್ಯ. ನನಗೆ ಹೊಲ ನೀಡಿದವರೇ ನನ್ನ ಪ್ರಚಾರಕರಾಗುತ್ತಾರೆ. ಇವೊತ್ತು ಮೋಹಕ್ಕೆ ಬಿದ್ದು ಕೊಡದವರು ನಾಳೆ ಶಾಸನ ಬಂದಾಗ ಕೊಟ್ಟಾರು, ಇವೊತ್ತು ಈ ವಿಚಾರವನ್ನು ಒಪ್ಪಿದರೆ ನಾಳೆ ಶಾಸನ ಬಂದಾಗ ಅದಕ್ಕೆ ಸಮ್ಮತಿ ಕೊಟ್ಟಾನು. ನನ್ನ ಮಾತು ಕೇಳಿ ಜನ ಹೊಲ ಕೊಟ್ಟರೆ

ನಾವು ಎಲ್ಲಾ ಪಡೆದಂತೆ. ಶ್ರದ್ಧೆಯಿಂದ, ಕುರುಹಾಗಿ ಸ್ವಲ್ಪವನ್ನೆ ಕೊಟ್ಟರೆ ಉಳಿದುದನ್ನು ಆಮೇಲೆ ಕೊಟ್ಟಾನು. ಅಂತೇ ಎಲ್ಲರ ಸಹಾನುಭೂತಿಯೂ ನನಗೆ ಬೇಕು.

ಪ್ರಶ್ನೆ ಭೂದಾನ ಯಜ್ಞ ಎನ್ನುವ ಬದಲು ಭೂಮಿ ವಿತರಣ ಯಜ್ಞ ಎನ್ನಬಾರದೆ? ದಾನ ಎಂಬುದು ಹೀನತೆಯ ಗುರುತು.

ಉತ್ತರ : ಒಳ್ಳೇ ಶಬ್ದವೂ ಕೆಟ್ಟ ಬಾಯಲ್ಲಿ ಕೆಟ್ಟುಹೋಗುತ್ತವೆ. ಸಾಮಾನ್ಯ ಶಬ್ದವೂ ಸಜ್ಜನರ ಕೈಯಲ್ಲಿ ಉಜ್ವಲವಾಗುತ್ತವೆ. ಯಜ್ಞ, ದಾನ, ತಪ–ನಮ್ಮ ಹಳೆಯ ಶಬ್ದ ಗೀತೆಯಿಂದ ನಮಗೆ ಬಂದಿವೆ. ದಾನವನ್ನು ಹೀನವೆಂದರ, ವೈರಾಗ್ಯವನ್ನು ಹೀನವೆಂದರೆ, ಸಂನ್ಯಾಸ ವನ್ನು ನಿಂದಿಸಿದರೆ, ನಮಗೆ ಅಷ್ಟು ಒಳ್ಳೇ ಶಬ್ದ ನಷ್ಟವಾಗುತ್ತವೆ. ಬೇರೆ ಶಬ್ದ ಹುಡುಕಬೇಕಾದೀತು. ಎಲ್ಲಿ ಸಿಗುತ್ತವೆ ಹೊಸ ಶಬ್ದ? ಹೀಗೆ ನಮ್ಮ ಶಸ್ತ್ರಾಸ್ತ್ರಗಳನ್ನು ಕಳೆದುಕೊಳ್ಳಬಾರದು. ಅವನು ಸಾಣೆ ಹಿಡಿದಿಡಬೇಕು.

ದಾನಶಬ್ದವನ್ನು ಶಾಸ್ತ್ರೀಯ ಅರ್ಥದಲ್ಲೆ ನಾನು ಬಳಸಿದೇನ್ನೆ 'ದಾನಂ ಸಮವಿಭಾಗಃ' ಎಂದು ಶಂಕರಾಚಾರ್ಯರು ಹೇಳಿದಾರೆ. ಎಂದರೆ ಸಮ್ಯಕ್ ವಿಭಜನೆ. ದೇಶದಲ್ಲಿ ಕಡಮೆಯಾಗಿ, ಆ ಪದಾರ್ಥ ನಮ್ಮಲ್ಲಿ ಹೆಚ್ಚಾಗಿ ಇದ್ದರೆ ಅದನ್ನು ನೀಡುವುದು ನಮ್ಮ ಕರ್ತವ್ಯ. ಕನ್ಯಾದಾನ ಮಾಡುವವನು ತನಗೆ ಉಪಕಾರವಾಯಿತು ಎಂದು ಮಗಳನ್ನು ಕೊಡುತ್ತಾನೆ. ಭೂದಾನವನ್ನೂ ಹಾಗೇ ಕೊಡಬೇಕು. ಅಷ್ಟೇ ಅಲ್ಲ. ನಮ್ಮಲ್ಲಿ ನೀಡಲು ಯೋಗ್ಯವಾದುದೇನಿದ್ದರೂ ಅದನ್ನು ಇದೇ ಭಾವನೆಯಿಂದ ಕೊಡಬೇಕು. ಹಣವಾಗಲಿ ಮತ್ತೊಂ ದಾಗಲಿ ಮೂಲೆಯಲ್ಲಿ ಹಾಕಿದರೆ ಕೊಳೆತು ಹೋಗುತ್ತದೆ. ಅದು ಶಾಪವಾಗುತ್ತದೆ. ನಮ್ಮಲ್ಲಿ ಹಳಸಿಬೀಳುವ ವಸ್ತುವಿದ್ದರೆ 'ಬೇಗ ತೆಗೆದುಕೊಂಡು ಹೋಗಿ, ನನಗೆ ಉಪಕಾರವಾದೀತು' ಎನ್ನಬೇಕು.

ಹೀಗೆ ದಾನ ಶಬ್ದದ ಅರ್ಥವನ್ನು ಹಿಗ್ಗಿಸಬೇಕು. ಸಮಾಜದಲ್ಲಿ ಕೆಲವರು ಅದನ್ನು ಕೆಡಿಸಿದ್ದರೆ ನಾವು ಅದನ್ನು ಕೊಡಲು ಬಿಡಬೇಕೆ? ಕೆಡಲು ಬಿಟ್ಟರು ನಾವು ಸೋತಂತೆ. ನಾವು ಸೋಲುವುದಿಲ್ಲ. ನಮ್ಮ ಶಸ್ತ್ರವನ್ನು ತೇಜೋವಂತವಾಗಿಸಿಯೇವು.

ಪ್ರಶ್ನೆ ಹೊಲವನ್ನೆಲ್ಲಾ ನಿಮಗೆ ಕೊಟ್ಟರೆ ಗೋಮಾಳಕ್ಕೇನೂ ಉಳಿಯುವುದಿಲ್ಲವಲ್ಲ?

ಉತ್ತರ. ಸರಿಯಾದ ಪ್ರಶ್ನೆ ನೀವು ಸ್ವಲ್ಪ ಹೊಲ ಕೊಡುತ್ತೀರೇಕೆ? ಮಂಗರೋಠದಂತೆ ಹಳ್ಳಿಯ ಇಡೀ ಹೊಲವನ್ನೇಕೆ ಕೊಡಬಾರದು? ಕೊಟ್ಟು ನೋಡಿ, ನಾನು ಏನು ಯೋಜನೆ ಮಾಡುತ್ತೇನೋ! ಮಂಗರೋಠದ ಜನರೆಲ್ಲ ಊರು ಬಿಟ್ಟು ಹೋಗಬೇಕಾಯಿತೇನು? ಅಲ್ಲಿ ಗೋಮಾಳವಿಲ್ಲವೆ? ಇಡೀ ಹಳ್ಳಿಯ ಹೊಲವನ್ನೆ ಭೂದಾನ ಯಜ್ಞದಲ್ಲಿ ನೀಡುವ ಪ್ರಯತ್ನ ಮಾಡಬೇಕು.

ನೀವು ಗೋಮಾಳದ ಬಗ್ಗೆ ಕೇಳಿದಿರಿ. ಈಗ ಯಾವ ಹಳ್ಳಿಯಲ್ಲಾದರೂ ಗೋಮಾಳವನ್ನು ಕೊಟ್ಟರೆ, ಅದು ಗೋಮಾಳಕ್ಕಾಗಿ ಬೇಕು ಎಂದು ಹಳ್ಳಿಯವರೆಲ್ಲ ಬಯಸಿದರೆ ಅದನ್ನು ಅದೇ ಕೆಲಸಕ್ಕೇ ಕಾದಿಡಲೂ ಬಹುದು- ಸದ್ಯಕ್ಕೆ. ಆದರೆ ನನ್ನ ಯೋಜನೆಯಲ್ಲಿ ಗೋಮಾಳದ ಏರ್ಪಾಟೇ ಇಲ್ಲ. ಹೊಲವೆಲ್ಲಾ ಬೇಸಾಯವಾಗಬೇಕು. ದನಕರುಗಳ ಮೇವಿಗಾಗಿ ಹೊಲದಲ್ಲೆ ಯೋಜನೆ ಮಾಡಿಕೊಂಡು ಹಸಿರು ಮೇವನ್ನು ಒದಗಿಸಬೇಕು. ಈಗ ಗೋಮಾಳ ಇದೆ ಎಂಬುದು ಬರೀ ಹಿಗ್ಗು. ಅದರಲ್ಲಿ ಒಂದೆರಡು ತಿಂಗಳಿಗೆ ಹೆಚ್ಚಾಗಿ ದನಕ್ಕೆ ಹುಲ್ಲು ಇಲ್ಲ. ಆದ್ದರಿಂದ ಮನುಷ್ಯನ ಅನ್ನಕ್ಕೆ ವ್ಯವಸ್ಥೆ ಮಾಡುವಂತೆಯೇ ದನದ ಮೇವಿಗೂ ವ್ಯವಸ್ಥೆ ಮಾಡಬೇಕು.

ಪ್ರಶ್ನೆ : ಬಡವರಿಂದ ನೀವು ಹೊಲ ಪಡೆಯುತ್ತೀರಿ. ಅದರಿಂದ ಅವರು ಇನ್ನೂ ಬಡವರಾಗರೆ ?

ಉತ್ತರ. ಬಡವರು ಬಡವರಿಗಾಗಿ ತ್ಯಾಗಮಾಡಿದಾಗ ಹುಟ್ಟುವ ಶಕ್ತಿ ಭಾಗ್ಯವಂತರನ್ನು ಎಚ್ಚರಗೊಳಿಸದೆ ಬಿಡದು. ಆಗ ಭಾಗ್ಯವಂತರು ಹೆಚ್ಚು ಹೊಲ ಇಟ್ಟುಕೊಳ್ಳುವುದು ಸಾಧ್ಯವಾಗ ಲಿಕ್ಕಿಲ್ಲ.

ಪ್ರಶ್ನೆ ಜನಸಂಖ್ಯೆ ಹೀಗೆ ಬೆಳೆಯುತ್ತಿದ್ದರೆ ಕುಟುಂಬಕ್ಕೆ ಐದೆಕರೆ ಸಿಕ್ಕೀತೆ ? ಈ ಭೂದಾನ ಯಜ್ಞ ಎಲ್ಲಿಯವರೆಗೆ ನಡೆದೀತು ?

ಉತ್ತರ. ಸದಾಕಾಲವೂ ಜನಸಂಖ್ಯೆ ಬೆಳೆಯುತ್ತಲೇ ಇದ್ದರೆ ಜನರು ತಮ್ಮ ಮಕ್ಕಳನ್ನೇ ಕೊಂದು ತಿಂದಾರು ಅಚ್ಚರಿಯೇನಿಲ್ಲ. ಆಗ ನನ್ನ ಅಗತ್ಯವಿಲ್ಲ. ದೇವರೇ ಅಗತ್ಯ. ಯಜ್ಞವಂತೂ ನಿರಂತರವೂ ಅಗತ್ಯ. ಈಗ ಭೂದಾನ ಯಜ್ಞ, ನಾಳೆ ಉದ್ಯೋಗ - ದಾನ - ಯಜ್ಞ. ನಿಮ್ಮ ಮನಸ್ಸಿನಲ್ಲಿ ಪ್ರಜೆ ಹೀಗೆ ಬೆಳೆಯುತ್ತಲೇ ಇರುತ್ತದೆಂಬ ಭಾವನೆಯಿದೆ. ಹಾಗಿದ್ದರೆ ಪ್ರಳಯವೇ ಗತಿ, ಬೇರೆಯಿಲ್ಲ. ಆದರೆ ಮನುಷ್ಯ ಚಿಂತನಶೀಲ ಪ್ರಾಣಿ. ಅನುಭವದಿಂದ ಕಲಿಯುತ್ತಾನೆ. ಆದ್ದರಿಂದ ಸಕಾಲದಲ್ಲಿ ಅವನು ಕಲಿತಾನು, ಉಳಿದುಕೊಂಡಾನು. ಹಿಂದುಸ್ಥಾನದಲ್ಲಿ ಜನಸಂಖ್ಯೆ ಹೆಚ್ಚಿದೆಯೆಂದು ನಾನು ಒಪ್ಪೆ. ಜಾವಾ, ಸುಮಾತ್ರಾ ಇತ್ಯಾದಿಗಳಲ್ಲಿ ಇನ್ನೂ ಹೆಚ್ಚು ಇದೆ ಪ್ರಜೆ. ಆದರೂ ದೂರದೃಷ್ಟಿಯಿಂದ ಈ ಪ್ರಶ್ನೆಯನ್ನು ಬಿಡಿಸಬೇಕು. ಯೋಗ್ಯ ಶಿಕ್ಷಣದಿಂದ ಅದನ್ನು ನಿವಾರಿಸಬೇಕು. ಪುರುಷಾರ್ಥಿ ಪ್ರಜೆ ನಿರ್ಮಾಣವಾಗಬೇಕಾದರೆ ಪ್ರಜಾಸಂಖ್ಯೆ ಕಡಮೆಯಾಗುವುದು ಅಗತ್ಯ.

ಪ್ರಶ್ನೆ : ಕಾನೂನಿನ ಮೂಲಕ ಹೊಲದ ಹಂಚಿಕೆ ಮಾಡಲು ನೀವೇಕೆ ಒಪ್ಪುವುದಿಲ್ಲ ?

ಉತ್ತರ: ನೀವು ಶಾಸನ ಸಭೆಗಳಿಗೆ ಆರಿಸಿದೀರಲ್ಲ. ಅವರನ್ನು ಕೇಳಿ ಈ ಮಾತು. ನಾನು ಚುನಾವಣೆಗೆ ನಿಲ್ಲಲೂ ಇಲ್ಲ, ನೀವು ನನ್ನನ್ನು ಆರಿಸಲೂ ಇಲ್ಲ. ನೀವು ಆರಿಸಿ ಕಳಿಸಿದ ಜನ ಕಾನೂನು ಮಾಡಿ ಹೊಲವನ್ನು ಹಂಚಿದರೆ ನನಗೆ ಆಕ್ಷೇಪಣೆಯಿಲ್ಲ. ಜನತೆ ಒಪ್ಪಿದ ಶಾಸನ ಅಹಿಂಸೆಯ ಮಿತಿಯಲ್ಲಿಯೆ ಬರುತ್ತದೆ. ಅದು ಲೋಕಾಭಿಪ್ರಾಯಕ್ಕೆ ಅನುಸಾರ. ಲೋಕಾಭಿಪ್ರಾಯ ಬರೀ ಬಡವರ ಅಭಿಪ್ರಾಯವೇ ಅಲ್ಲ. ಹೊಲ ಇರುವವರೂ ಅದಕ್ಕೆ ಅನುಕೂಲ ವಾಗಬೇಕು. ಇಬ್ಬರೂ ಅನುಕೂಲವಾದರೆ ಆ ಸರಕಾರ ಭದ್ರ. ನನಗೆ ಶಾಸನದ ಮೂಲಕ ಈ ಹಂಚಿಕೆ ಬೇಕಾಗಿಲ್ಲ. ಆ ದಾರಿಯಲ್ಲಿ ಜನಶಕ್ತಿ ನಿರ್ಮಾಣವಾಗದು. ನಾನು ಜನಶಕ್ತಿಯ ಉಪಾಸಕ. ಸರಕಾರ ಶೂನ್ಯವೆನ್ನುತ್ತೇನೆ. ಶೂನ್ಯಕ್ಕೆ ಬೆಲೆಯಿಲ್ಲವೆಂದಲ್ಲ. ಐದು ಇಟ್ಟು ಪಕ್ಕಕ್ಕೆ ಸೊನ್ನೆಯಿಟ್ಟರೆ ಐವತ್ತಾಯಿತು. ಜನತೆಯ ಶಕ್ತಿಯ ಹಿಂದೆ ಸರಕಾರದ ಶಕ್ತಿ ಬೆಳೆದೀತು. ಶಾಸನ ಯಾವಾಗಲೂ ನಿಧಾನ. ಜನಶಕ್ತಿ ಹಾಗಲ್ಲ. ಅದು ಅಸೀಮ, ಅಪಾರ.

ಪ್ರಶ್ನೆ: ಸರಕಾರದ ಮೇಲೆ ನಿಮ್ಮ ಪ್ರಭಾವವಿದೆ. ನೀವು ಹೇಳಿದರೆ ಅವರು ಶಾಸನ ಮಾಡುತ್ತಾರೆ.

ಉತ್ತರ: ನೀವು ಪದೇಪದೇ ಕಾನೂನಿನ ಮಾತೇ ಆಡುತ್ತೀರಿ. ನಾನು ಜನತೆಯ ಮನುಷ್ಯ. ಜನಶಕ್ತಿಯನ್ನು ಚಿಮ್ಮಿಸುವ ಪ್ರಯತ್ನ ನನ್ನದು. ಇರಲಿ, ನಾನು ಹೇಳಿದರೆ ಸರಕಾರ ಏಕೆ ಕೇಳೀತು? ನಾನು ಮಾಡಿದ ಅಲ್ಪಸ್ವಲ್ಪ ಕೆಲಸದಿಂದ ಈ ಮನುಷ್ಯನ ಮಾತು ಕೇಳಬೇಕು ಎನಿಸುತ್ತದೇನು ಅವರಿಗೆ? ಇನ್ನೂ ಹೆಚ್ಚು ಕೆಲಸ ಮಾಡಿದರೆ ಇನ್ನೂ ಹೆಚ್ಚು ಕೇಳೀತು. ಸರಕಾರಕ್ಕೂ ಒಂದು ಮಿತಿ ಯಿಲ್ಲವೆ? ನಾನೀಗ ತೆಗೆದುಕೊಳ್ಳುವ ಹೊಲವೆಲ್ಲ ಏನೂ ಪರಿಹಾರದ ಹಣ ಕೊಡದೆ ತೆಗೆದುಕೊಳ್ಳುತ್ತಿದೇನೆ. ಜನರಲ್ಲಿರುವ ಸದ್ಭಾವನೆ

ಯಿಂದ ಇದು ಸಾಧ್ಯವಾಗಿದೆ. ಸರಕಾರ ಹೀಗೆ ಪುಕ್ಕಟೆ ಪಡೆಯಲಾರದು. ಅದಕ್ಕೆ ರಾಜ್ಯಾಂಗದ ತಡೆಯಿದೆ. ಹಣಕೊಡದೆ ಹೊಲ ಪಡೆಯಲು ನನ್ನ ದಾರಿಯೇ ಸರಿ. ಚೀನೀ ಪ್ರೊಫೆಸರು ತನ್‌ಯಾನ್ ಶಾನ್ ಹೇಳಿದ್ದು ಸರಿ. ಅತ್ಯಂತ ಅಲ್ಪಕಾಲದಲ್ಲಿ ಉತ್ತಮೋತ್ತಮ ರೀತಿಯಲ್ಲಿ ಭೂಮಿಯನ್ನು ಹಂಚುವುದು ಇದೇ.

ಮುಖ್ಯ ಕೆಲಸ ಜನರ ಭಾವನೆಯನ್ನು ಎಚ್ಚರಿಸುವುದು. ಲೋಹ ಚುಂಬಕದಲ್ಲಿ ಲೋಹಕಣವನ್ನು ಸೆಳೆವ ಶಕ್ತಿಯಿದೆ. ಹಾಗೇ ಜನರ ಸದ್ಭಾವನೆಗಳನ್ನು ಹೊರಸೆಳೆವ ಬಲ ನಮಗಿರಬೇಕು. ಈ ಕೆಲಸದಲ್ಲಿ ಹೊರಹೊಮ್ಮಿದ ನೈತಿಕಶಕ್ತಿ ಎಲ್ಲಾ ಕಡೆಯಲ್ಲೂ ಕೆಲಸಕ್ಕೆ ಬಂದೀತು. ವಾಮನನಂತೆ ಮೂರು ಹೆಜ್ಜೆ ಕೇಳಲು ಬಂದಿದೇನೆ ಎಂದು ಜಮೀನುದಾರರಿಗೆ ಹೇಳುತ್ತೇನೆ. ಭೂದಾನ ಮೊದಲ ಹೆಜ್ಜೆ. ಬಡವರ ಸೇವೆ ಮಾಡಿ ಎಂಬುದು ಎರಡನೆ ಹೆಜ್ಜೆ. ಬಡವರೇ ಆಗಿ ಎಂಬುದು ಮೂರನೆ ಹೆಜ್ಜೆ ಬಲಿಚಕ್ರವರ್ತಿ ವಾಮನನಿದಿರು ತನ್ನ ತಲೆಯನ್ನೆ ಬಾಗಿದ ಹಾಗೆ ಬಡವರ ಇದಿರು ಸರ್ವ ಸಮರ್ಪಣೆ ಮಾಡಿ ಎನ್ನುತ್ತೇನೆ.

ಪ್ರಶ್ನೆ : ನಮ್ಮ ಸುತ್ತಲೂ ಕಮ್ಯೂನಿಸಂ ಹರಡಿದೆ. ಅಂಥದರಲ್ಲಿ ನಮ್ಮ ಸಮಾಜ ರಚನೆ ದೃಢವಾಗಿದ್ದೀತೆ? ನಮಗೆ ಅನುಮಾನ. ತಾವು ಬರೀ ಭೂದಾನದಲ್ಲೇನೋ, ಬೇರೆ ಕಾರ್ಯಕ್ರಮ ಕೊಟ್ಟು ಭಾರತೀಯ ಸಮಾಜ ಹಾಳಾಗದಂತೆ ನಿಲ್ಲಿಸುತ್ತೀರೋ ?

ಉತ್ತರ : ಭೂದಾನ ಯಜ್ಞ ನಿಮಿತ್ತ ಮಾತ್ರ. ಇದು ಯುಗಧರ್ಮ ಎಂದು ಪ್ರಕಟವಾದಾಗಲೇ ಜನ ಸತ್ಯವನ್ನು ಹಿಡಿಯುತ್ತಾರೆ. ಶರಣರು ತಮ್ಮ ಬಾಳಿನಲ್ಲಿ ಅಹಿಂಸೆಯ ಪಾಠ ಕಲಿಸಿದರು. ಎಷ್ಟು ಜನ ಅದನ್ನು ಕಲಿತರು ? ಅದೇ, ಗಾಂಧೀಜೀ ಸ್ವರಾಜ್ಯವನ್ನು ಜೋಡಿಸಿದುದರಿಂದ ಎಷ್ಟೋ ಜನ ಅದನ್ನು ಪಾಲಿಸಿದರು. ಇಲ್ಲದಿದ್ದರೆ

ಸ್ವರಾಜ್ಯ ಬರುವಂತಿಲ್ಲ. ಹಾಗೇ ಈ ಭೂಸಮಸ್ಯೆಯ ಮೂಲಕ ನಮ್ಮ ಶಕ್ತಿ ಹೊಳೆತರೆ ಅದರ ಪ್ರಭಾವ ಒಳಿತಾದೀತು. ಸಮಾಜ ವ್ಯವಸ್ಥೆ, ಅರ್ಥವ್ಯವಸ್ಥೆ, ರಾಜಕೀಯ ರಚನೆ - ಎಲ್ಲದರಲ್ಲೂ ಅದರಿಂದ ಪರಿವರ್ತನೆಯಾದೀತು. ಬರೀ ಗುಣವಿಕಾಸದ ಮಾತು ಬುದ್ಧನ ಕಾಲದಿಂದಲೂ ಬಂದಿದೆ. ಬಾಳಿನ ಪ್ರಶ್ನೆ ಒಂದಕ್ಕೆ ಅದನ್ನು ಹೋಳಯಿಸದಿದ್ದರೆ ಸಮಷ್ಟಿ - ಸಾಧನೆ ಆಗುವುದಿಲ್ಲ.

ಪ್ರಶ್ನೆ ; ಹೊಲ ಕೊಟ್ಟರೇನಾಯಿತು? ಎತ್ತು ಬೇಕು, ಉಳಿದ ಸಲಕರಣೆ ಬೇಕು. ಅದಕ್ಕೇನು ಮಾಡುತ್ತೀರಿ?

ಉತ್ತರ : ಹೊಲ ಕೊಟ್ಟವರು ಎತ್ತೂ ಕೊಟ್ಟಾರು. ಇದಕ್ಕೆ ಸ್ಫೂರ್ತಿ ಕೊಟ್ಟ ಸದ್ಭಾವನೆ ಅದಕ್ಕೂ ಕೊಟ್ಟೀತು. ಕಾನಪುರದಲ್ಲಿ ೧೦ ಸಾವಿರ ಎಕರೆ ನಾನು ಊರಲ್ಲಿ ಕಾಲಿಡುವ ಹೊತ್ತಿಗೇ ಸಂಗ್ರಹಿಸಿದ್ದರು. ಅದನ್ನು ೨ ಸಾವಿರ ಜನಕ್ಕೆ ಹಂಚುವಾಗ ೨ ಸಾವಿರ ಎತ್ತಿನ ಜೊತೆ ಬೇಕು ಎಂದೆ. ಅವರು ಅದಕ್ಕೆ ಒಪ್ಪಿದರು. ಬೀಜ ಮುಂತಾದ್ದಕ್ಕೆ ಸರಕಾರ ಸಹಾಯಮಾಡೀತು.

ಪ್ರಶ್ನೆ: ಮನುಷ್ಯನಿಗೆ ನೀಡುವ ಆಸೆಯೇನೋ ಇದೆ. ಆದರೆ ಈಚೆಗೆ ನೀಡುವ ಮನೋಧರ್ಮ ಹೋಗಿದೆ.

ಉತ್ತರ . ಮೊದಲು ಇತ್ತೇನು ?

ಬುದ್ಧನ ಕಾಲದಲ್ಲಿ ನೆಲದ ತುಂಬಾ ಮೊಹರು ಹಾಸಿ ಬುದ್ಧನಿಗಾಗಿ ನೆಲವನ್ನು ಕೊಳ್ಳಬೇಕಾಗಿತ್ತು ಒಬ್ಬ ಭಕ್ತ. ಅದೇ ಶ್ರಾವಸ್ತಿಯಲ್ಲಿ ವಿನೋಬಾಜಿಗೆ ೧೨೫ ಎಕರೆ ದಾನ ಸಿಕ್ಕಿತು. ಈ ಕಥೆಯನ್ನು ಹೇಳಿದರು. 'ಮನುಷ್ಯನಿಗೆ ನೀಡುವ ಪ್ರವೃತ್ತಿಯಿಲ್ಲ ಎಂಬುದು ತಪ್ಪು. ಮನುಷ್ಯನಿಗೆ ನೀಡುವ ವೃತ್ತಿಯೂ ಉಂಟು. ಪಡೆವ ವೃತ್ತಿಯೂ ಉಂಟು. ದೇವತೆಗಳಿಗ ಕೊಡುವುದೊಂದೇ ಗೊತ್ತು. ಪಶುಗಳಿಗೆ ತೆಗೆದುಕೊಳ್ಳುವುದೊಂದೇ ರೂಢಿ. ಅದಕ್ಕೆ ನೀಡುವುದು

ತಿಳಿಯದು. ಮನುಷ್ಯನಿಗೆ ಕೊಡುವ ಬುದ್ಧಿಯೇ ಇಲ್ಲ ಎಂದರೆ ನಿಮ್ಮ ಹುಡುಗಿಯರನ್ನು ಏಕೆ ಇತರರಿಗೆ ಕೊಡುತ್ತೀರಿ? ಕೊಡುವುದ ಕ್ಕಾಗಿ ದೇಶವೆಲ್ಲ ಅಲೆದಾಡುತ್ತೀರಿ. ಮಗಳನ್ನು ಗ್ರಹಿಸುವ ಯೋಗ್ಯ ವರ ಸಿಕ್ಕರೆ ಅವನದು ಉಪಕಾರ ಎನ್ನುತ್ತೀರಿ. ಇದ್ದದ್ದನ್ನು ಕೊಟ್ಟರೆ ಲಾಭವುಂಟು ಎಂದು ತಿಳಿದರೆ ಜನ ಜಿಗಿದಾಡಿ ಕೊಟ್ಟಾರು. ನಮ್ಮಲ್ಲಿ ಒಂದು ವಸ್ತು ಇದೆ. ಅದು ನಮಗೆ ಈಗ ಉಪಯೋಗವಿಲ್ಲ. ಆದ್ದರಿಂದ ಈಗ ಯಾರಿಗೆ ಅಗತ್ಯವೋ ಅವನೇ ಅದರ ಅಧಿಕಾರಿ. ಅವನಿಗೆ ಅದು ಒಡನೆಯೇ ಸಿಗಬೇಕು. ಮನುಷ್ಯ ಕೊಡಬಲ್ಲ, ಖಂಡಿತ ಕೊಡಬಲ್ಲ. ನನಗೆ ಇದು ಅನುಭವ. ಕೊಟ್ಟರೆ ಕಲ್ಯಾಣ ಎಂದು ಅವನಿಗೆ ತಿಳಿಸಿದರೆ ಸಾಕು. ಎಲ್ಲಕ್ಕಿಂತ ಸುರಕ್ಷಿತವಾದ ಬ್ಯಾಂಕು ಸಮಾಜ ಎಂಬುದು ತಿಳಿಯಬೇಕು. ತನ್ನ ಬಳಿಯಿಡುವ ಬದಲು ಸಮಾಜಕ್ಕೇ ಕೊಟ್ಟರಾಯಿತು. ಮಾಡಿ ನೋಡಿದರೆ ಇದರ ಸ್ವಾರಸ್ಯ ತಿಳಿದೀತು. ಇದರಲ್ಲಿ ಎಷ್ಟು ಸುಖ, ಲಾಭ, ಎಷ್ಟು ನಿಶ್ಚಿಂತೆ? ಆಗ ಸಮಾಜಕ್ಕೆ ನಮ್ಮ ಚಿಂತೆ. ಅಷ್ಟೇ ಅಲ್ಲ. ತನ್ನ ವಸ್ತುವನ್ನು ಕೊಡಬಲ್ಲ, ಸಮರ್ಥ ಪಡೆಯಲೂ ಬಲ್ಲ. ಅಂತೇ ನಿರಾಶರಾಗಬೇಕಿಲ್ಲ.'

## ೨೪. ಸಾಹಿತಿಗಳ ನಡುವೆ

ಮಧ್ಯಾಹ್ನ ಸಾಹಿತಿಗಳ ಗೋಷ್ಠಿ. ಅವರು ವಿನೋಬಾಜಿಗೆ ಒಂದು ಶ್ರದ್ಧಾಂಜಲಿ ಪತ್ರವನ್ನು ಅರ್ಪಿಸಿದರು. ಆಮೇಲೆ ಗೋಷ್ಠಿ. ಸಾಹಿತ್ಯದಲ್ಲಿ ಶೃಂಗಾರದ ಮಿತಿ ಏನು ಎಂಬುದರ ಬಗ್ಗೆ ಗೆಳೆಯರು ತಮ್ಮ ಅಭಿಪ್ರಾಯ ಹೇಳಿದರು. ವಾಲ್ಮೀಕಿಯಂಥ ಮಹಾಕವಿ ಊರ್ಮಿಳೆಯನ್ನು ಇಷ್ಟು ಮರೆತದ್ದು ಸರಿಯೆ ಎಂಬ ಮಾತು ಬಂತು. ವಿನೋಬಾಜೀ ಹೇಳಿದರು :

' ಈ ಚರ್ಚೆ ಬಹುಶಃ ಬಂಗಾಳದಲ್ಲಿ ಮೊದಲಾಯಿತೇನೋ. ' ಮರೆತು ಹೋದ ಊರ್ಮಿಳೆ ' ಎಂದು ಗುರುದೇವ ರವೀಂದ್ರರು ಒಂದು ಲೇಖನ ಬರೆದರು. ಲಕ್ಷ್ಮಣ ತಾಯಿಯ ಬಳಿ ಹೋದ, ಊರ್ಮಿಳೆಯನ್ನು ನೋಡಲಿಲ್ಲ. ಅವನು ಸಂಯಮಿ ; ಸರಿ. ಆದರೆ ಊರ್ಮಿಳೆಯನ್ನು ಮರೆತೇ ಬಿಡುವುದೇ? ಹೀಗೆ ಇತ್ತು ಆ ಲೇಖನ. ಆಮೇಲೆ ಕೆಲವರು ಆ ಪ್ರಸಂಗವನ್ನು ವರ್ಣಿಸಿದರು. ಅದರಲ್ಲಿ ಅಶ್ಲೀಲತೆಯಿರದಿದ್ದರೆ, ನಾನು ಅದರಲ್ಲಿ ದೋಷವನ್ನು ಎಣಿಸೆ. ಯಾರಿಗೆ ಸಮನಾದ ಕವಿ ಇನ್ನೂ ಯಾರೂ ಇಲ್ಲವೋ ಅಂಥ ವಾಲ್ಮೀಕಿ ಈ ಪ್ರಸಂಗವನ್ನು ಸೂಚಿಸಿ ಕೂಡ ಇಲ್ಲವಲ್ಲ. ಇದು ನಡೆಯಿತೋ ಇಲ್ಲವೋ? ನಡೆದಿರಬೇಕು. ಲಕ್ಷ್ಮಣ ಊರ್ಮಿಳೆ ಯನ್ನು ನೋಡಿರಬೇಕು. ಆದರೆ ಕವಿಗೆ ಊರ್ಮಿಳೆ-ಲಕ್ಷ್ಮಣರ ಭೇಟಿಗಿಂತ ಅವನ ಅನಾಸಕ್ತಿ, ಭಕ್ತಿ, ನಿಷ್ಠೆಗಳಿಗೇ ಹೆಚ್ಚು ಮಹತ್ವ ಕೊಡಬೇಕು ಎನಿಸಿತು. ಲಕ್ಷ್ಮಣನ ವೈರಾಗ್ಯವನ್ನು ಬಣ್ಣಿಸಲೆಂದೇ ಊರ್ಮಿಳಾ ದರ್ಶನದ ಮಾತನ್ನೆತ್ತಲಿಲ್ಲ. ತಾಯಿಯ ಬಳಿಗೆ

ಹೋದರೂ ಅವನು ಬಿಟ್ಟು ಬಂದ. ತಾಯಿ ತಡೆದಿದ್ದರೂ ಅವನು ನಿಲ್ಲುತ್ತಿರಲಿಲ್ಲ. ಅವನು ರಾಮನ ಭಕ್ತ. ಆದರೂ ಮಾತೃಪ್ರೇಮದ ಅದ್ಭುತತೆಯನ್ನು ತಿಳಿಸಲು ಕಪಿ ಅದನ್ನು ವರ್ಣಿಸಿದಾನೆ. ಊರ್ಮಿಳೆ-ಲಕ್ಷ್ಮಣರ ಭೇಟಿಯ ವರ್ಣನೆ ಮಾಡದೆಯೆ ಮಾಡಿದಾನೆ ವಾಲ್ಮೀಕಿ. ಈ ಅಭಾವದಲ್ಲಿಯೂ ವಾಲ್ಮೀಕಿಯ ಕಲೆ ಪ್ರಕಟವಾಗಿದೆ.'

ಈ ಚರ್ಚೆಯಲ್ಲಿ ಇನ್ನೊಂದು ಮೂಲ ಪ್ರಶ್ನೆ ಬಂತು. 'ಸಾಧಾರಣವಾಗಿ ಉತ್ಥಾನ ವರ್ಣನೆಯನ್ನು ಮಾತ್ರ ಜನರು ಅಶ್ಲೀಲ ಎನ್ನುತ್ತಾರೆ. ಅದು ಅಶ್ಲೀಲವೇ. ಆದರೆ ಸಾಮಾನ್ಯ ಸೂಚನೆಯೂ ಅಶ್ಲೀಲವೇ ಎನ್ನುತ್ತೇನೆ ನಾನು. ಪತಿಪತ್ನಿಯರ ಸಂಬಂಧದ ಇತಿ ಮಿತಿಯುಳ್ಳ ಸೂಚನಾತ್ಮಕ ವರ್ಣನೆಯೂ ಲಾಭಕರವಲ್ಲ. ಸಂತತಿ ನಿರ್ಮಾಣ ಒಂದು ವೈಜ್ಞಾನಿಕ ವಿಷಯ. ಪತಿಪತ್ನೀ ಸಂಬಂಧ ಒಂದು ಪವಿತ್ರ ಸಂಬಂಧ. ಸಂತಾನೋತ್ಪತ್ತಿ ಧಾರ್ಮಿಕ ಭಾವನೆಯಿಂದಲೇ ಆಗಬೇಕು. ಬೇರೆ ಕಲ್ಪನೆಯನ್ನೇ ನಾನು ಮಾಡಲಾರೆ. ಭೂದಾನ ಯಜ್ಞಕ್ಕಾಗಿ ದಿನವೂ ದೇವರನ್ನು ನೆನೆದು ನಾವು ಯಾತ್ರೆ ಮೊದಲಿಡುವಂತೆ, ಪತಿಪತ್ನೀ ಸಂಬಂಧವೂ ಅಂಥ ಭಾವನೆಯಿಂದ ಪ್ರೇರಿತವಾಗಬೇಕು. ಒಂದು ಸಮಾಗಮ ವಿಫಲವಾದರೆ ಇಬ್ಬರಿಗೂ ದುಃಖವಾಗಬೇಕು. ರೈತ ಎರಡನೆ ಸಾರಿ ಬಿತ್ತುವುದಿಲ್ಲ. ಮೊದಲನೆ ಬಿತ್ತನೆ ವ್ಯರ್ಥವಾದಾಗ ಇನ್ನೊಮ್ಮೆ ಕರ್ತವ್ಯ ಎಂದು ತಿಳಿದು ಬಿತ್ತಿಯಾನು. ಆಗಲೂ ಮೊದಲನೆ ಬಿತ್ತನೆ ಕೆಟ್ಟು ಹೋದುದರ ದುಃಖ ಇದ್ದೇ ಇದೆ. ಸಂತಾನೋತ್ಪತ್ತಿಗಾಗಿ ಎರಡನೆಯ ಸಲ ಸ್ತ್ರೀ ಸಂಬಂಧ ಮಾಡಬೇಕಾಗಿ ಬಂದರೆ ಗಂಡಸಿಗೆ ದುಃಖವಾಗಬೇಕು. ಕೇವಲ ಕರ್ತವ್ಯ ಭಾವನೆಯಿಂದ ತುಂಬಿರಬೇಕು. ಈ ಬಗೆಯ ಭಾವನೆಯನ್ನು ತುಂಬಬೇಕಾದ್ದು ಸಾಹಿತಿಗಳ ಕೆಲಸ. ಆದರೆ ಸಾಹಿತಿಗಳ ಜೀವನದಲ್ಲಿಯೇ ಈ ಗುಣ ಇಳಿದುಬಾರದೆ ಸಾಹಿತ್ಯದಲ್ಲಿ

ಅದು ಬಂದೀತೆ?'

ಸಾಹಿತ್ಯ-ಸಮಾಜಗಳ ಈ ಮೌಲಿಕ ಚರ್ಚೆ ಆದ ಮೇಲೆ ಸಾಹಿತಿಗಳು ಭೂದಾನದಲ್ಲಿ ತಮ್ಮ ಕರ್ತವ್ಯದ ಬಗ್ಗೆ ಪ್ರಶ್ನೆ ಕೇಳಿದರು.

ಪ್ರಶ್ನೆ: ಈ ಕೆಲಸದಲ್ಲಿ ಸಾಹಿತಿಗಳಿಂದ ತಾವು ಏನು ಬಯಸುತ್ತೀರಿ?

ಉತ್ತರ. ಭೂದಾನ ಯಜ್ಞದ ವಿಚಾರವನ್ನು ಹರಡಲು ನೀವು ಬಹಳ ನೆರವಾಗಬಲ್ಲಿರಿ. ಈ ಕೆಲಸ ಬಹಳ ಸ್ಫೂರ್ತಿದಾಯಿ. ಅದರಲ್ಲೇ ಒಂದು ರಾಮಾಯಣ ಹುಟ್ಟಬಹುದು.

ಪ್ರಶ್ನೆ: ರಚನಾತ್ಮಕ ಕೆಲಸದಲ್ಲಿ ಸ್ತ್ರೀ ಲೇಖಿಕೆಯರು ಭಾಗ ವಹಿಸಬಹುದೆ?

ಉತ್ತರ: ಏಕೆ ವಹಿಸಬಾರದು? ಅವರು ರಚನಾತ್ಮಕ ಕೆಲಸಕ್ಕೆ ಬಂದರೆ ಎಷ್ಟು ಒಳ್ಳೆಯದಾದೀತು? ಅದರರ್ಥ ಹೀಗೆ- ಅವರು ವಾಲ್ಮೀಕಿಯೂ ಆದರು. ರಾಮನ ಸೇವೆಯಲ್ಲೂ ಸೇರಿದರು. ಪಟ್ಟಣಗಳಲ್ಲಿ ಎಷ್ಟು ಜನ ಹೆಂಗಸರು ದುಃಖಿನಿಯರಾಗಿದಾರೆ? ರೋಗಿ, ನಿರುದ್ಯೋಗಿಗಳು ಎಷ್ಟು ಜನ? ಅವರೆಲ್ಲರ ಬಳಿಗೂ ನಾರಬೇಕು. ಅವರ ಸೇವೆ ಮಾಡಬೇಕು. ನಮ್ಮ ತಾಯಿಯ ನೆನಪಿದೆ ನನಗೆ. ಯಾರ ಮನೆಯಲ್ಲಾದರೂ ಅಡಿಗೆಗೆ ತೊಂದರೆಯಾದರೆ ತಾನು ಹೋಗಿ ಅವರ ಮನೆಯಲ್ಲಿ ಅಡಿಗೆ ಮಾಡಿ ಬರುತ್ತಿದ್ದಳು ಆಕೆ. ಮೊದಲು ನಮ್ಮ ಮನೆಯ ಅಡಿಗೆ ಮಾಡಿಡುತ್ತಿದ್ದಳು. ನಾನು ಕೇಳಿದೆ–' ಈ ಸ್ವಾರ್ಥವೇಕೆ? ಮೊದಲು ನಮ್ಮ ಅಡಿಗೆ, ಆಮೇಲೆ ಅವರ ಅಡಿಗೆ?' 'ಇದು ಸ್ವಾರ್ಥವಲ್ಲ, ಪರಮಾರ್ಥ. ಮೊದಲೇ ಅವರ ಮನೆ ಅಡಿಗೆ ಮಾಡಿಟ್ಟು ಬಂದು ಆಮೇಲೆ ನಮ್ಮ ಮನೆ ಅಡಿಗೆ ಮಾಡಿದರೆ ನಿಮಗೇನೋ ಬಿಸಿ ಬಿಸಿ ಊಟ ಸಿಕ್ಕೀತು, ಆದರೆ ಅವರಿಗೆ ಊಟ

ತಣ್ಣಗಾದೀತು' ಎಂದು ತಾಯಿ ತಿಳಿಸಿ ಹೇಳಿದಳು. ಇದೊಂದು ದೃಷ್ಟಾಂತ ಮಾತ್ರ. ಹೆಂಗಸರಿಗೆ ಕೊಂಚ ಬಿಡುವು ಕೊಟ್ಟರೆ ಎಷ್ಟು ಕೆಲಸ ಮಾಡಿಯಾರೋ ನೋಡಿ. ಇನ್ನೂ ಒಂದು ಕೆಲಸ ಆದೀತು. ಒಬ್ಬ ಹರಿಜನ ಹುಡುಗನನ್ನು ಮಗನಂತೆ ಸಾಕಿದರೆ ಹರಿಜನ ಛಾತ್ರಾಲಯ ನಡಸಿದ್ದಕ್ಕಿಂತ ಹೆಚ್ಚು ಪುಣ್ಯ. ಒಂದು ಕ್ರಾಂತಿಕಾರಿ ಕೆಲಸ. ರಾಟೆ, ಬೀಸುವ ಕಲ್ಲಿನ ಮೂಲಕ ಮನೆಯಲ್ಲಿ ಗ್ರಾಮೋದ್ಯೋಗದ, ಶ್ರಮನಿಷ್ಠೆಯ ಗಾಳಿ ಹರಡಿದರೆ ಎಷ್ಟು ಕೆಲಸವಾಯಿತು. ಅದರಲ್ಲಿ ಆಕೆಯ ಪ್ರತಿಭೆ ಅರಳಲು ನಾಕಷ್ಟು ಅವಕಾಶವಾದೀತು.'

ಆಮೇಲೆ ಗಂಡಸರನ್ನು ಕುರಿತು 'ಹೆಂಗಸರು ಸಾರ್ವಜನಿಕ ಜೀವನದಲ್ಲಿ ಭಾಗವಹಿಸಬೇಕೆಂದರೆ ಗಂಡಸರು ನೆರವಾಗಬೇಕು. ಈಗ ಗಂಡಸರು ಹೆಂಗಸರನ್ನು ಬರೀ ತೊತ್ತುಗಳಾಗಿ ಮಾಡಿಟ್ಟಿದ್ದಾರೆ- ಉತ್ತರ ಪ್ರದೇಶದಲ್ಲಿ ಹಾಗೆನಿಸುತ್ತದೆ' ಎಂದರು.

ಸಾಹಿತ್ಯದ ಮೂಲಕ ಹೊಟ್ಟೆಪಾಡು ನಡಸುವುದು ಸರಿಯೆ ಎಂಬ ಪ್ರಶ್ನೆ ಬಂತು. 'ನಾವು ಸೀಜರನದನ್ನು ಸೀಜರ್‌ಗೆ ಕೊಡಬೇಕು. ಪರಮೇಶ್ವರದನ್ನು ಪರಮೇಶ್ವರನಿಗೆ. ಶರೀರಕ್ಕೆ ಅನ್ನ ಅಗತ್ಯ. ಆತ್ಮಕ್ಕೂ ಅನ್ನ ಬೇಕು ಎಲ್ಲವನ್ನೂ ಸಮಾಜಕ್ಕೆ ಕೊಟ್ಟು ಸಮಾಜದಿಂದ ಸಹಜವಾಗಿ ದೊರೆತುದನ್ನು ಪಡೆದು ಸಮಾಧಾನಗೊಂಡರೆ ಬಹಳ ಒಳಿತು. ಆದರೆ ಸಾಹಿತ್ಯದ ಮೂಲಕ ತನ್ನ ಉದರ ನಿರ್ವಾಹವನ್ನು ಒಬ್ಬನು ಒಂದು ಮಿತಿಯೊಳಗೆ ನಡಸಿದರೆ ಅದು ದೋಷವಿಲ್ಲ.'

ಮುಂದಿನ ಮಜಲಿನಲ್ಲಿ ಕೆಲಸಗಾರರೊಡನೆ ಬಹಳ ಗಂಭೀರ ಚರ್ಚೆ ನಡೆಯಿತು. ಸರಕಾರದ ಭರವಸೆ ಮಾಡಬೇಡಿ ಎಂದರು. ಸರಕಾರಕ್ಕೆ ಸೇರಿದವರೇ ನಾಯಕರು, ಇನ್ನೂ ಯಾರೂ ಇಲ್ಲ ಎಂದೀರಿ. 'ಎಲ್ಲ ನಾಯಕರೂ ಮಂತ್ರಿಗಳಾದರೆ? ಹಾಗಾದರೆ

ದೇಶಕ್ಕೆ ಪ್ರಳಯ ಬಂದಂತೆ. ಹಾಗಿಲ್ಲ. ಜನಮನದ ನಾಯಕರು, ಸಜ್ಜನರು, ಸಮಾಜದಲ್ಲಿ ಯಾವಾಗಲೂ ಇರುತ್ತಾರೆ. ಇಲ್ಲದಿದ್ದರೆ ಲೋಕ ಮುಂದೆ ಸಾಗಲಾರದು. ಟ್ರೂಮನ್, ಸ್ಟಾಲಿನ್ ಬಿಟ್ಟರೆ ಬೇರೆ ಯಾರೂ ಇಲ್ಲ ಎಂದರೆ ಅಮೆರಿಕಾ, ರಷ್ಯಾಗಳಿಗೆ ನಾಶ ಖಂಡಿತ. ರಾಜ ಎಂದೂ ಗುರುವಾಗಲಾರ ಹಿಂದೆಂದೂ ಅವನು ಗುರುವಾಗಿಲ್ಲ. ಅಕಬರನ ಕಾಲದಲ್ಲಿ ತುಲಸೀದಾಸರಿದ್ದರು. ತುಲಸೀದಾಸರ ರಾಜ್ಯ ಜನಮಾನಸದಲ್ಲಿ ಇನ್ನೂ ಇದೆ ಅಕಬರ್ ಎಂದೋ ಮಣ್ಣಾಗಿ ಹೋದ. ಗುರುಗಳ ರಾಜ್ಯವೇ ಶಾಶ್ವತ. ಹಿಂದೆಯೂ ಅಷ್ಟೆ, ಮುಂದೆಯೂ ಅಷ್ಟೆ. ಗುರುಗಳು ಬೈರಾಗಿಗಳು, ಸನ್ಯಾಸಿಗಳು. ಅವರೇ ದೇಶದ ನಾಯಕರು.

‘ ನಾಯಕರು ಎಲ್ಲಿಂದ ಬರುತ್ತಾರೆ ಎನ್ನುತ್ತೀರಾ ? ಬೈರಾಗಿ, ಬಡವರೊಳಗಿನಿಂದ ಹುಟ್ಟಿ ಬಂದಾರು. ಬಡವರೊಳಗೆ ಬೆರೆತು ಬೇಸಾಯ ಮಾಡಿಯಾರು. ನಿಮ್ಮ ಸೇವೆ ಮಾಡಿಯಾರು. ಮಂತ್ರಿಗಳು ಮೋಟಾರಿನಲ್ಲಿ ಓಡಾಡುತ್ತಾರೆ. ಬಂಗಲೆಗಳಲ್ಲಿ ಇರುತ್ತಾರೆ. ಸುಖಭೋಜನ ಮಾಡುತ್ತಾರೆ ಎಂದು ದೂರುತ್ತೀರಿ. ನನಗೆ ಆಶ್ಚರ್ಯವಾಗುತ್ತದೆ. ಅವರೇನು ನನ್ನ ಹಾಗೆ ಕಾಲ್ನಡಿಗೆ ಯಾತ್ರೆ ಮಾಡಬೇಕೆ? ಹಾಗೆ ಮಾಡಿದರೆ ನೀವೇ ನಿಂದಿಸೀರಿ ನಿಮ್ಮ ಕೆಲಸ ನಡೆಯಬೇಡವೆ ? ನಿಮ್ಮ ಕೆಲಸಕ್ಕಾಗಿ ದಿನವೂ ನೂರಾರು ಮೈಲಿ ಸುತ್ತಬೇಕು. ಮೋಟಾರು ಇಲ್ಲದಿದ್ದರೆ ಹೇಗೆ? ಅವರ ಕೆಲಸದ ಹೊರಗೆ ಒಳ್ಳೆಯ ಊಟವಿಲ್ಲದಿದ್ದರೆ ಆರೋಗ್ಯ ಕೆಟ್ಟು ನಿಮ್ಮ ಕೆಲಸ ನಿಂತೀತು. ಇದಕ್ಕೆಲ್ಲ ದೋಷ ಕೊಟ್ಟವರುಂಟೆ ? ’

ಪ್ರಯಾಗನನ್ನು ನೆನೆಯುತ್ತ ಮುಂದೆ ಮಿರ್ಜಾಪುರದ ಹಾದಿ ಹಿಡಿದೆವು.

---

# ಪುಸ್ತಕ ಪ್ರಪಂಚ

ಅಉ ಪುಟಗಳ ಸುಂದರ ಸಚಿತ್ರ ಮಾಸಪತ್ರಿಕೆ

ಆಗಸ್ಟ್ ತಿಂಗಳಿಂದ ಹೊಸ ಸಂಪುಟ ಪ್ರಾರಂಭವಾಗುತ್ತದೆ

## ಇಂದೇ ಚಂದಾದಾರರಾಗಿ

ವಾರ್ಷಿಕ ಚಂದಾ : ಸಂಸ್ಥೆಗೆ ೬ ರೂ ; ವ್ಯಕ್ತಿಗೆ ೫ ರೂ.

ಬಿಡಿ ಪ್ರತಿ ಕೇವಲ ಎಂಟಾಣೆ

ಕನ್ನಡದಲ್ಲಿ ಇಂಥ ಮಾಸಪತ್ರಿಕೆ ಇದೊಂದೇ

ಚಂದಾ ಹಣವನ್ನು ಈ ವಿಳಾಸಕ್ಕೆ ಕಳಿಸಿ:—

ಚೀಫ್ ಎಕ್ಸಿಕ್ಯುಟಿವ್ ಆಫೀಸರ್
ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ, ಮೈಸೂರು.

# ಪುಸ್ತಕ ಭಂಡಾರ ಮಾಲೆಯ ಪ್ರಕಟನೆಗಳು

---

ಹಿಂದೂ ಧರ್ಮ
ವ್ಯವಹಾರ ಧರ್ಮ
ಗಾಂಧೀಜಿ
ನಳಚರಿತ್ರೆಯ ಸಂಗ್ರಹ
ಕಾಮಧೇನು
ಮಕ್ಕಳ ವರ್ತನೆ
ಬಾಳಿಗೊಂದು ನಂಬಿಕೆ
ಬಸವೇಶ್ವರ ವಚನ ಸಂಗ್ರಹ
ವಿದ್ಯಾಪೀಠಗಳು
ಹರಿಶ್ಚಂದ್ರ ಸಾಂಗತ್ಯ
ರೇಷ್ಮೆ ಕೈಗಾರಿಕೆ
ಭೂದಾನ ಯಜ್ಞ ಯಾತ್ರೆ

ಪ್ರತಿಗಳಿಗೆ :
ಚೀಫ್ ಎಕ್ಸಿಕ್ಯುಟಿವ್ ಆಫೀಸರ್
**ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ**
ಕೃಷ್ಣಮೂರ್ತಿಪುರಂ, ಮೈಸೂರು